ಪ್ರವಾದಿ ಮುಹಮ್ಮದ್‌ರ(ಸ)

ವಚನ ರತ್ನಗಳು

ಲೇಖಕರು

ಮೌಲಾನಾ ಶಮ್ಸ್ ಪೀರ್‌ಝಾದ

ಅನುವಾದ

ಅಬ್ದುಸ್ಸಲಾಮ್ ಪುತ್ತಿಗೆ

ಪರಮ ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

ಸೂಚನೆ

1. ಪ್ರವಾದಿ ಮುಹಮ್ಮದ್ ಅವರ ಪ್ರಸ್ತಾಪ ಬಂದಾಗಲೆಲ್ಲಾ ಹೆಸರಿನ ಜೊತೆಗೆ '(ಸ)' ು ಆವರಣಗಳಲ್ಲಿ ಕೊಡಲಾಗಿದೆ. ಇದು 'ಸಲ್ಲಲ್ಲಾಹು ಅಲೈಹಿವಸಲ್ಲಮ್' ಎಂಬುದರ ್ತ ಸಂಕೇತ. ಇದರರ್ಥ 'ಅಲ್ಲಾಹನ ಅನುಗ್ರಹಗಳೂ ಶಾಂತಿಯೂ ಅವರ ಮೇಲಿರಲಿ' ಾಗಿದೆ. ಪವಿತ್ರ ಕುರ್‌ಆನಿನ ಒಂದು ವಾಕ್ಯದಲ್ಲಿ ಪ್ರವಾದಿ ಮುಹಮ್ಮದ್(ಸ) ಅವರ ೆ ಸ್ವಸ್ತಿ ವಚನ ಹೇಳಲು ಮುಸ್ಲಿಮರಿಗೆ ಆದೇಶಿಸಲಾಗಿದೆ. ಪ್ರವಾದಿವರ್ಯರೂ(ಸ) ತಮ್ಮ ್ತಲಾದಾಗಲೆಲ್ಲಾ ತಮಗಾಗಿ ಅಲ್ಲಾಹನ ಅನುಗ್ರಹಕ್ಕೆ ಪ್ರಾರ್ಥಿಸಬೇಕೆಂದು ಮುಸ್ಲಿಮರಿಗೆ ಶಿಸಿದ್ದಾರೆ. 'ಸಲ್ಲಲ್ಲಾಹು ಅಲೈಹಿವಸಲ್ಲಮ್' ಎಂಬುದು ಅತ್ಯಂತ ಸಂಕ್ಷಿಪ್ತವಾದ ಸ್ವಸ್ತಿ ೆ. ಅದನ್ನು ವಾಚಕರಿಗೆ ಜ್ಞಾಪಿಸುವ ಸಲುವಾಗಿಯೇ '(ಸ)' ಎಂಬ ಸಂಕೇತಾಕ್ಷರವನ್ನು ೆ ಹೆಸರು ಬಂದಾಗಲೆಲ್ಲಾ ಬಳಸಲಾಗಿದೆ.

2. ಪ್ರವಾದಿಯ ಸಂಗಾತಿಗಳ ಹೆಸರಿನ ಪ್ರಸ್ತಾಪ ಬಂದಲ್ಲೆಲ್ಲಾ '(ರ)' ಎಂಬ ಸಂಕೇತಾಕ್ಷರವನ್ನು ಲಾಗಿದೆ. ಇದು 'ರದಿಯಲ್ಲಾಹು ಅನ್‌ಹು' ಎಂಬ ಅರಬಿ ನುಡಿಯ ಸಂಕೇತ. ಇದರರ್ಥ ಲ್ಲಾಹನು ಅವರಿಂದ ಸಂಪ್ರೀತನಾದನು'. ಎಂದಾಗಿದೆ. ಪ್ರವಾದಿವರ್ಯರ(ಸ) ಸಂಗಾತಿಗಳ ು ಈ ನುಡಿಯು ಪವಿತ್ರ ಕುರ್‌ಆನಿನಲ್ಲಿ ಬಂದಿದೆ. ಸತ್ಯ ಧರ್ಮಕ್ಕಾಗಿ ಅವರು ಮಾಡಿದ ಗಳಿಗಾಗಿ ಇದು ಅಲ್ಲಾಹನು ಅವರಿಗೆ ಕೊಟ್ಟ ಮೆಚ್ಚುಗೆಯ ಬಿರುದು. ಮುಸ್ಲಿಮರು ಅವರ ್ತಿದಾಗಲೆಲ್ಲಾ ಈ ನುಡಿಯನ್ನು ಪಠಿಸುತ್ತಾರೆ. ಇಸ್ಲಾಮಿಗೆ ಅವರು ಮಾಡಿದ ಸೇವೆಗಳಿಗಾಗಿ ಅವರಿಗೆ ತೋರುವ ಗೌರವವಾಗಿದೆ. ಇದು ಪ್ರವಾದಿವರ್ಯರ(ಸ) ಸಂಗಾತಿಗಳಿಗೇ ತವಾದ ಒಂದು ಪ್ರಾರ್ಥನೆ.

3. ಪ್ರವಾದಿವರ್ಯರ(ಸ) ಮತ್ತು ಅವರ ಸಂಗಾತಿಗಳ ಹೆಸರಿನ ಆರಂಭದಲ್ಲಿ 'ಹ' ಎಂಬ ವನ್ನು ಕೊಡಲಾಗಿದೆ. ಇದು ಅವರಿಗೆ ಗೌರವ ಸೂಚಕವಾಗಿ ಬಳಸಲ್ಪಡುವ 'ಹಝ್ರತ್' ು ಪದದ ಸಂಕೇತ. 'ಸನ್ಮಾನ್ಯರು' ಎಂಬರ್ಥದಲ್ಲಿ ಈ ಪದವನ್ನು ಎಲ್ಲ ಮಹಾನ್ ವ್ಯಕ್ತಿಗಳ ನ ಆರಂಭದಲ್ಲಿ ಬಳಸುವುದು ರೂಢಿ.

4. ಈ ಗ್ರಂಥದಲ್ಲಿ ಕೊಡಲಾಗಿರುವ ಪ್ರವಾದಿ ವಚನಗಳಲ್ಲಿ ಅವುಗಳನ್ನು ವರದಿ ಿದವರ ಹೆಸರನ್ನು ಮತ್ತು ಅದು ಬಂದ ಅಧಿಕೃತ ಹದೀಸ್ ಗ್ರಂಥದ ಹೆಸರನ್ನು ಆಯಾ ನದ ಕೊನೆಯಲ್ಲಿ ಅನುಕ್ರಮವಾಗಿ ಕೊಡಲಾಗಿದೆ.

ಶಾಂತಿ ಪ್ರಕಾಶನ

ಅನುಕ್ರಮಣಿಕೆ

ವಿಷಯ

ಮುನ್ನುಡಿ

'ಹದೀಸ್' ಎಂಬುದು ದೇವ ಸಂದೇಶವಾಹಕರಾದ ಪ್ರವಾದಿ ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಅವರ ವಚನಗಳು ಮತ್ತು ಅವರ ಕ್ರಿಯೆಗಳ ಕುರಿತಾದ ವರದಿಗಳಿಗೆ ಇರುವ ಹೆಸರು. ಅಹಾದೀಸ್ ಎಂಬುದು ಇದರ ಬಹುವಚನ ರೂಪ. ವಾಸ್ತವದಲ್ಲಿ ಹದೀಸ್‌ಗಳು ಪವಿತ್ರ ಕುರ್‌ಆನಿನ ವಾಕ್ಯಗಳ ಹಾಗೂ ಆದೇಶಗಳ ವ್ಯಾಖ್ಯಾನಗಳಾಗಿವೆ. ಈ ಹದೀಸ್‌ಗಳನ್ನು ಪ್ರವಾದಿವರ್ಯರ(ಸ) ನಿಷ್ಠಾವಂತ ಸಂಗಡಿಗರು ಅತ್ಯಂತ ಜವಾಬ್ದಾರಿಯುತವಾಗಿ, ವಿಶ್ವಸನೀಯ ಹದೀಸ್ ಸಂಗ್ರಹಕಾರರಿಗೆ ತಲುಪಿಸಿದರು. ತರುವಾಯ ಅವು ಬುಖಾರಿ, ಮುಸ್ಲಿಮ್, ತಿರ್ಮಿದಿ, ಅಬೂದಾವೂದ್, ನಸಾಈ, ಇಬ್ನು ಮಾಜಃ, ಅಹ್ಮದ್ ಮುಂತಾದ ಹದೀಸ್ ಸಂಗ್ರಹ ಗ್ರಂಥಗಳಲ್ಲಿ ದಾಖಲಿಸಲ್ಪಟ್ಟವು. ಈ ಪೈಕಿ 'ಸಹೀಹುಲ್ ಬುಖಾರಿ' ಮತ್ತು 'ಸಹೀಹುಲ್ ಮುಸ್ಲಿಮ್' ಎಂಬ ಗ್ರಂಥಗಳು ತಮ್ಮ ಮೂಲಗಳ ವಿಶ್ವಾಸಾರ್ಹತೆಯ ದೃಷ್ಟಿಯಿಂದ ಅತಿ ಹೆಚ್ಚು ಅವಲಂಬನೀಯವೆಂದು ಪರಿಗಣಿಸಲ್ಪಟ್ಟಿವೆ.

ನಾವಿಲ್ಲಿ ಹದೀಸ್‌ಗಳ ಈ ಅನಂತ ಖಜಾನೆಯಿಂದ, ಮಾನವಕುಲದ ಶಿಕ್ಷಣ ಮತ್ತು ಮಾರ್ಗದರ್ಶನಕ್ಕೆ ಉಪಯುಕ್ತವಾದ ಹಾಗೂ ಮಾನವತೆಯ ವಿಚಾರ ಆಚಾರಗಳ ಸಂಸ್ಕರಣೆಗೆ ಸಹಾಯಕವಾಗಬಲ್ಲ ಕೆಲವು ಅಮೂಲ್ಯ ರತ್ನಗಳನ್ನು ಆರಿಸಿ ಪ್ರಕಟಿಸುತ್ತಿದ್ದೇವೆ. ಶುದ್ಧ ಮನಸ್ಸಿನಿಂದ ಇವುಗಳ ಅಧ್ಯಯನ ನಡೆಸುವ ಯಾವ ವ್ಯಕ್ತಿಯೂ ಈ ವಿಚಾರಗಳನ್ನು ಮುಂದಿಟ್ಟವರು ನಿಜಕ್ಕೂ ಒಬ್ಬ ಮಹಾನ್ ವ್ಯಕ್ತಿಯಾಗಿದ್ದರೆಂಬುನ್ನೂ ಮತ್ತು ಇಂತಹ ಉದಾತ್ತ ವಿಚಾರಗಳ ಆಧಾರದಲ್ಲಿ ನಿರ್ಮಿತವಾಗಿರುವ ಧರ್ಮವು ಸಂಪೂರ್ಣ ಮಾನವಕುಲದ ಪಾಲಿಗೆ ಆಶ್ರಯವಾಗಲು ಅರ್ಹವಾದ ಶಾಂತಿಧಾಮವಾಗಿದೆ ಎಂಬುದನ್ನೂ ಒಪ್ಪದೆ ಇರಲಾರನು.

'ಆದರ್ಶ ಜೀವನದ ಕೆಲವು ದೃಷ್ಟಾಂತಗಳು' ಎಂಬ ಅಧ್ಯಾಯದಲ್ಲಿ ಪ್ರವಾದಿ ಮುಹಮ್ಮದ್‌ರ(ಸ) ಮಹಾನ್ ವ್ಯಕ್ತಿತ್ವ, ಅವರ ನಿಷ್ಕಳಂಕ ಚಾರಿತ್ರ್ಯ ಮತ್ತು ಆದರ್ಶ ಗುಣಗಳನ್ನು ಪ್ರತಿಬಿಂಬಿಸುವಂತಹ ಹದೀಸ್‌ಗಳನ್ನು ಪ್ರಕಟಿಸಲಾಗಿದೆ. ಮನುಷ್ಯನ ಚಾರಿತ್ರ್ಯವನ್ನು ಸುಧಾರಿಸಿ, ಮನುಷ್ಯತ್ವಕ್ಕೆ ಭೂಷಣವಾದ ಉತ್ಕೃಷ್ಟ ಗುಣಗಳನ್ನು ಬೆಳೆಸಿಕೊಳ್ಳಲು ಸಹಾಯಕವಾಗುವ ಮತ್ತು ಸಚ್ಚಾರಿತ್ರ್ಯಕ್ಕೆ ಮಾರಕವಾದಂತಹ ದುರ್ಗುಣಗಳನ್ನು ವರ್ಜಿಸಲು ನೆರವಾಗುವ ವಚನಗಳು 'ಚಾರಿತ್ರ್ಯ ನಿರ್ಮಾಣ' ಹಾಗೂ 'ವಿನಾಶಕಾರೀ ಗುಣಗಳು' ಎಂಬ ಅಧ್ಯಾಯಗಳಲ್ಲಿವೆ. 'ಅಧಿಕಾರ ಮತ್ತು ಆಡಳಿತ' ಎಂಬ ಅಧ್ಯಾಯದಲ್ಲಿರುವ ಹದೀಸ್‌ಗಳು ಇಸ್ಲಾಮ್ ಧರ್ಮ ಕೇವಲ ವ್ಯಕ್ತಿಗತ ಜೀವನದ ಬಗ್ಗೆ ಆಸಕ್ತವಾಗಿರುವ ಸೀಮಿತ ಧರ್ಮವಾಗಿರದೆ, ಮನುಷ್ಯನ ಸಾಮಾಜಿಕ ಜೀವನದ ವಿವಿಧ ಕ್ಷೇತ್ರಗಳನ್ನು ವ್ಯವಸ್ಥಿತಗೊಳಿಸುವ ಹಾಗೂ ರಾಜಕೀಯ ಮತ್ತು ಆಡಳಿತದ ವಿಷಯದಲ್ಲೂ ಮನುಷ್ಯನಿಗೆ ಸೂಕ್ತ ಮಾರ್ಗದರ್ಶನ ನೀಡುವಂತಹ ಧರ್ಮವಾಗಿದೆ ಎಂಬುದನ್ನು ಸ್ಪಷ್ಟಪಡಿಸುತ್ತವೆ. 'ಇಹಲೋಕದ ವಾಸ್ತವಿಕತೆ' ಎಂಬ ಅಧ್ಯಾಯದಲ್ಲಿ ಪ್ರವಾದಿ ವಚನಗಳ ಆಧಾರದಲ್ಲಿ ಇಹಲೋಕದ

ಇಸ್ಲಾಮಿನ ದೃಷ್ಟಿಕೋನವನ್ನು ಮುಂದಿಡಲು ಪ್ರಯತ್ನಿಸಲಾಗಿದೆ. ಇಹಲೋಕದ ಮೇಲಿನ :ಹವನ್ನು ಕಡಿಮೆಗೊಳಿಸಿ ಪರಲೋಕ ವಿಜಯವನ್ನು ಮನುಷ್ಯನು ತನ್ನ ಜೀವನೋದ್ದೇಶವಾಗಿ ಡಿಕೊಳ್ಳಬೇಕೆಂಬುದು ಈ ಅಧ್ಯಾಯದಲ್ಲಿರುವ ವಚನಗಳ ಆಶಯವಾಗಿದೆ. 'ಶಿರ್ಕ್ ಮತ್ತು 'ಅತ್' ಎಂಬ ಅಧ್ಯಾಯದಲ್ಲಿ ಶಿರ್ಕ್ ಅರ್ಥಾತ್ ಬಹುದೇವಾರಾಧನೆಯನ್ನು ಖಂಡಿಸುವುದರ ಶೆಗೆ ಗೋರಿ ಪೂಜೆಯಂತಹ 'ಬಿದ್‌ಅತ್' ಅರ್ಥಾತ್ ನವೀನಾಚರಣೆಗಳ ವಾಸ್ತವಿಕತೆಯನ್ನು ುಪಡಿಸುವಂತಹ ವಚನಗಳನ್ನು ನೀಡಲಾಗಿದೆ. 'ದರ್ಗಾ'ಗಳಲ್ಲಿ ಕಂಡು ಬರುವ ಧರ್ಮವು ವಾದ ಇಸ್ಲಾಮ್ ಧರ್ಮವಲ್ಲವೆಂದೂ ಏಕದೇವತ್ವ ಮತ್ತು ಪ್ರವಾದಿಯ ಆದರ್ಶದಲ್ಲಿ ಷ್ಠಿತವಾಗಿರುವ ಧರ್ಮವೇ ನೈಜ ಇಸ್ಲಾಮ್ ಎಂದೂ ಮುಸ್ಲಿಮೇತರ ಓದುಗರಿಗೆ ಮನವರಿಕೆ ಡಿಸಲು ಈ ವಚನಗಳು ಸಹಾಯಕವಾಗಿವೆ. 'ಏಕದೇವತ್ವ' ಎಂಬ ಅಧ್ಯಾಯದಲ್ಲಿ ದೇವನ ಶ್ವದ ಬಗ್ಗೆ ಸಕಾರಾತ್ಮಕವಾಗಿ ಬೆಳಕು ಚೆಲ್ಲಲಾಗಿದೆ. ಪ್ರಕೃತಿ ಧರ್ಮವನ್ನೂ ಇಸ್ಲಾಮಿನ ಆಧಾರ ಭಗಳಾಗಿರುವ ವಿಶ್ವಾಸಗಳನ್ನೂ ಹದೀಸ್‌ಗಳ ಮೂಲಕ ಪರಿಚಯಿಸಲಾಗಿದೆ. 'ಪ್ರವಾದಿತ್ವ' ಎಂಬ ್ಯಾಯವು ಪ್ರವಾದಿ ಮುಹಮ್ಮದ್(ಸ) ಅವರು ಸಕಲ ವಿಶ್ವಕ್ಕೆ ಮಾರ್ಗದರ್ಶಿ ಹಾಗೂ ಸಂಪೂರ್ಣ ನವಕುಲದ ವಿಮೋಚಕರಾಗಿದ್ದಾರೆಂಬುದನ್ನು ತಿಳಿಸುತ್ತದೆ. ಈ ಅಧ್ಯಾಯದಲ್ಲಿ ಅವರ ುಪಮ ವಿಶೇಷತೆಗಳನ್ನು ಸೂಚಿಸುವಂತಹ ಕೆಲವು ವಚನಗಳನ್ನೂ ನೀಡಲಾಗಿದೆ. 'ದೇವಗ್ರಂಥ' ಬ ಅಧ್ಯಾಯವು ಪವಿತ್ರ ಕುರ್‌ಆನಿನ ಅವತೀರ್ಣಕ್ಕೆ ಸಂಬಂಧಿಸಿದ ವಿಷಯಗಳನ್ನು ದೀಕರಿಸುವ ಜೊತೆಗೆ, ಈ ಪವಿತ್ರ ಗ್ರಂಥವು ಮಾನವಕುಲಕ್ಕೆ ಮಾರ್ಗದರ್ಶಿಯಾಗಿದ್ದು ಮನುಷ್ಯ ಾಂಗಗಳ ಉತ್ಥಾನ-ಪತನವು ಈ ಗ್ರಂಥದೊಂದಿಗೆ ಅವುಗಳು ಇಟ್ಟುಕೊಳ್ಳುವ ಸಂಬಂಧವನ್ನು ವಲಂಬಿಸಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಮರಣಾನಂತರ ಜೀವನ, ಬರ್ಝಖ್, ಪುನರುತ್ಥಾನ ಮತ್ತು ಪರಲೋಕದ ಆಗುಹೋಗುಗಳಿಗೆ ಸಂಬಂಧಿಸಿದ ವಿಷಯಗಳನ್ನು ತಿಳಿಸುವ ವಚನಗಳು ರಣೋತ್ತರ ಜೀವನ' ಎಂಬ ಅಧ್ಯಾಯದಲ್ಲಿವೆ. ಈ ವಚನಗಳ ವ್ಯಾಖ್ಯಾನವನ್ನು ನಮ್ಮ ಶಬಾಂಧವರ ಮನೋಸ್ಥಿತಿಯನ್ನು ಮುಂದಿಟ್ಟುಕೊಂಡು ಮಾಡಲಾಗಿದೆ. ಕೊನೆಯಲ್ಲಿ 'ಧರ್ಮ ಕಾರ' ಎಂಬ ಅಧ್ಯಾಯದಲ್ಲಿ ಇಸ್ಲಾಮ್ ಸ್ವೀಕಾರದ ಬಗ್ಗೆ ಕೆಲವು ಅಂಶಗಳನ್ನು ಪ್ರಸ್ತಾಪಿಸಲಾಗಿದ್ದು, ಚಕರು ಈ ಬಗ್ಗೆ ಗಮನಹರಿಸುವಂತೆ ಆಹ್ವಾನಿಸಲಾಗಿದೆ. ಹದೀಸ್‌ಗಳ ಆಯ್ಕೆಯ ವೇಳೆ ಬಹಳ ಧಿಕೃತ ಹಾಗೂ ಅತ್ಯಂತ ವಿಶ್ವಾಸಾರ್ಹವಾದ ಹದೀಸ್‌ಗಳು ಮಾತ್ರ ಒಳಗೊಳ್ಳುವಂತೆ ವಿಶೇಷ ಮನ ನೀಡಲಾಗಿದೆ. ಆದ್ದರಿಂದಲೇ ಹೆಚ್ಚಿನ ವಚನಗಳನ್ನು 'ಸಹೀಹುಲ್ ಬುಖಾರಿ' ಮತ್ತು ಹೀಹುಲ್ ಮುಸ್ಲಿಮ್'ಗಳಿಂದಲೇ ಆರಿಸಲಾಗಿದೆ. ಇತರ ಗ್ರಂಥಗಳಿಂದ ಅಧಿಕೃತತೆಯ ಬಗ್ಗೆ ತ್ಯಂತ ನಂಬಲರ್ಹ ಪುರಾವೆಗಳು ಪ್ರಾಪ್ತವಿರುವಂತಹ ವಚನಗಳನ್ನು ಮಾತ್ರ ಆರಿಸಲಾಗಿದೆ. ಯ್ಕೆಯ ವಿಷಯದಲ್ಲಿ ಅತ್ಯುನ್ನತ ಗುಣಮಟ್ಟವನ್ನು ಕಾಯ್ದುಕೊಳ್ಳಲಾಗಿದ್ದು, ಯಾವುದೇ ರ್ಬಲ ವರದಿಯು ಸೇರಿಕೊಳ್ಳದಂತೆ ಎಚ್ಚರಿಕೆ ವಹಿಸಲಾಗಿದೆ.

ಅಲ್ಲಾಹನು ಈ ಪುಸ್ತಕದ ರಚನೆಯ ಹಿಂದಿರುವ ಉದ್ದೇಶವನ್ನು ಈಡೇರಿಸಲಿ ಹಾಗೂ ದನ್ನು ಸುಧಾರಣೆ ಮತ್ತು ಮಾರ್ಗದರ್ಶನದ ಸಾಧನವಾಗಿ ಮಾಡಲಿ ಎಂದು ಪ್ರಾರ್ಥಿಸುತ್ತೇವೆ.

ಶಮ್ಸ್ ಪೀರ್‌ಝಾದ

ಆದರ್ಶ ಜೀವನದ ಕೆಲವು ದೃಷ್ಟಾಂತಗಳು

ಪ್ರವಾದಿವರ್ಯರ(ಸ) ಅನುಪಮ ರೂಪ

، الْحَسَنِ بْنِ عَلِيٍّ (رض) قَالَ سَأَلْتُ خَالِيْ هِنْدَ بن أبى هَالَةَ وَكَانَ
ّافًا عَنْ حُلْيَةِ رَسُولِ اللّهِ ﷺ وَأَنَا أَشْتَهِيْ أنْ يَصِفَ اِلَيَّ
ئًا اَتَعَلَّقُ بِهِ فَقَالَ كَانَ رَسُولُ اللّهِ ﷺ فَخْمًا مُفَخَّمًا يَتَلأْلَأُ
جْهُهُ تَلأْلُؤَ القَمَرِ لَيْلَةَ البَدْرِ، أَطْوَلَ مِنَ المَرْبُوْعِ وَأَقْصَرَ مِنَ
مُشَذَّبِ ، عَظِيْمَ الْهَامَةِ ، رَجِلَ الشَّعْرِ اِنْ انْفَرَقَتْ عَقِيقَتُهُ
قَ وَاِلَّا فَلاَ يُجَاوِزُ شَعْرُهُ شَحْمَةَ أُذُنَيْهِ اِذَا هُوَ وَفَّرَهُ أَزْهَرَ
لَّوْنِ وَاسِعَ الْجَبِيْنِ أَزَجَّ الْحَوَاجِبِ سَوَابِغَ مِنْ غَيْرِ قَرَنٍ
نَهُمَا عِرْقٌ يُدِرُّهُ الغَضَبُ ،أَقْنَى العِرْنَيْنِ ، لَهُ نُوْرٌ يَعْلُوْهُ
حْسَبُهُ مَنْ لَمْ يَتَأَمَّلْهُ اَشَمَّ، كَثَّ اللِّحْيَةِ ، سَهْلَ الْخَدَّيْنِ ،
لِيْعَ الْفَمِ ، مُفَلَّجُ الأَسْنَانِ ، دَقِيقَ الْمَسْرُبَةِ ، كَأَنَّ عُنُقَهُ جِيدُ
مْيَةٍ فِى صَفَاءِ الْفِضَّةِ ، مُعْتَدِلَ الْخَلْقِ، بَادِنًا مُتَمَاسِكًا سَوَاءَ
بَطْنِ وَالصَّدْرِ ،عَرِيضَ الصَّدْرِ بَعِيْدُ مَا بَيْنَ مَنْكَبَيْنِ ، ضَخْمُ
كَرَادِيسِ ،اَنْوَرَ الْمُتَجَرِّدِ ، مَوْصُوْلَ مَا بَيْنَ اللَّبَّةِ وَالسُّرَّةِ بِشَعْرٍ
جْرِى كَالْخَطِّ عَارِى الثَّدْيَيْنِ وَالبَطْنِ مِمَّا سِوَاى ذَلِكَ ،أَشْعَرَ

الذِرَاعَيْنِ وَالْمَنكَبَيْنِ وَأَعَالِي الصَّدْرِ ، طَوِيْلَ الزَّنْدَيْنِ ، رَحْ
الرَّاحَةِ شَثْنَ الْكَفَّيْنِ وَالْقَدَمَيْنِ ، سَائِلَ الاَطْرَافِ أَوْ قَالَ شَا
الأَطْرَافِ ، خُمْصَانِ الأَخْمَصَيْنِ ، مَسِيْحَ الْقَدَمَيْنِ يَنْبُوْ عَنْ
الْمَاءُ ، أَذَا زَالَ زَالَ قَلْعًا يَخْطُوْ تَكَفِّيًا وَيَمْشِي هَوْنًا ، ذَرِ
الْمِشْيَةِ أَذَا مَشَى كَأَنَّما يَنْحَطُّ مِنْ صَبَبٍ وَأَذَا الْتَفَتَ جَمِ
فَاخِضَ الطَّرْفِ نَظَرُهُ أَلَى الأَرْضِ أَكْثَرُ مِنْ نَظَرِهِ أَلَى السَّمَاءِ
نَظَرِهِ الْمُلاَحَظَةُ ، يَسُوْقُ أَصْحَابَهُ وَيَبْدَءُ مَنْ لَقِيَ بِالسَّلاَ

(شَمَائِلِ التِرمذی

ನಾನು ನನ್ನ ಮಾವ ಹಿಂದ್ ಬಿನ್ ಅಬೀ ಹಾಲ ಅವರೊಡನೆ ಪ್ರವಾದಿ ಮುಹಮ್ಮದ್‌ರ(ಸ)
ಪದ ಕುರಿತು ವಿಚಾರಿಸಿದೆ. ಅವರು ಪ್ರವಾದಿವರ್ಯರ(ಸ) ರೂಪವನ್ನು ಬಹಳ
ರ್ಪಕವಾಗಿ ವಿವರಿಸುತ್ತಿದ್ದರು. ಅವರಿಂದ ಕೇಳಿ ಅದನ್ನು ನೆನಪಿಟ್ಟುಕೊಳ್ಳಬೇಕೆಂದು ನಾನು
ಬಸಿದ್ದೆ. ಅವರು ಪ್ರವಾದಿವರ್ಯರ(ಸ) ರೂಪವನ್ನು ಈ ರೀತಿ ವಿವರಿಸಿದರು.

ಪ್ರವಾದಿ(ಸ) ಬಹಳ ಸುಂದರಾಂಗರೂ ಘನಸ್ಥ ವ್ಯಕ್ತಿತ್ವವುಳ್ಳವರೂ ಆಗಿದ್ದರು.
ಖಾರವಿಂದವು ಹುಣ್ಣಿಮೆ ಚಂದ್ರನೋ ಎಂಬಂತೆ ತೇಜೋಮಯವಾಗಿತ್ತು. ಕಾಯ
ವಾಗಿತ್ತು. ಆದರೆ ಬಹಳ ಹೆಚ್ಚಲ್ಲ. ಶಿರವು ಹಿರಿದಾಗಿತ್ತು. ಕೇಶವು ತುಸು ಗುಂಗುರಾಗಿತ್ತು.
ಾಗಿ ಬೈತಲೆ ಮೂಡಿದರೆ ಅದನ್ನು ಇರಗೊಡುತ್ತಿದ್ದರು. ಅನ್ಯಥಾ ಇಲ್ಲ. ಕೇಶವನ್ನು
ಯಗೊಟ್ಟರೆ ಕಿವಿಯಂಚಿನ ಕೆಳಭಾಗದ ವರೆಗೂ ಬರುತ್ತಿತ್ತು. ವರ್ಣವು ಶುಭ್ರ ಹಾಗೂ
ಶಮಾನವಾಗಿತ್ತು. ಹಣೆ ವಿಶಾಲವಾಗಿತ್ತು. ಹುಬ್ಬುಗಳು ಬಾಗಿದ್ದು, ದಟ್ಟವಾಗಿಯೂ
ಸ್ಪರ ಬೇರ್ಪಟ್ಟುಕೊಂಡೂ ಇದ್ದುವು. ಅವುಗಳ ಮಧ್ಯೆ ಇದ್ದ ನರವು ಕೋಪದ ಸ್ಥಿತಿಯಲ್ಲಿ
ಿಂದ ತುಂಬಿಕೊಳ್ಳುತ್ತಿತ್ತು. ಮೂಗು ಎತ್ತರವಾಗಿದ್ದು ಅದರಲ್ಲಿ ತೇಜಸ್ಸು ವ್ಯಕ್ತವಾಗಿತ್ತು.
ಮ ನೋಟಕ್ಕೆ ಉನ್ನತ ಮನುಷ್ಯನೆಂದು ತಿಳಿಯುವಂತಿತ್ತು. ತುಂಬುಗಡ್ಡ, ಮಾಂಸಭರಿತ
, ಅಗಲವಾದ ಬಾಯಿ. ತುಸು ಅಂತರದಲ್ಲಿದ್ದ ಹಲ್ಲುಗಳು. ಎದೆಯ ಮೇಲೆ ವಿರಳವಾದ
ಮಗಳು, ಸಪೂರ ಮತ್ತು ಉದ್ದವಾದ ಸುಂದರವಾಗಿ ಕೆತ್ತಿದ ಮೂರ್ತಿಯಂತಿದ್ದ ಕೊರಳು.
ಯಂತೆ ಬೆಳ್ಳಗೆ ಮತ್ತು ಶುಭ್ರವರ್ಣ, ಸಂತುಲಿತ ಅವಯವಗಳು, ಮಾಂಸ ತುಂಬಿಕೊಂಡ

ಬಿಗುವಾದ ಶರೀರ, ಎದೆ ಮತ್ತು ಉದರಗಳು ಸಮತಟ್ಟಾಗಿದ್ದುವು. ಎದೆ ವಿಶಾಲವಾ
ಭುಜಗಳ ಮಧ್ಯೆ ಗಣನೀಯ ಅಂತರವಿತ್ತು. ಎಲುಬಿನ ಸಂದುಗಳು ಹಿರಿದಾಗಿದ್ದುವು. ಶರೀ
ತೆರೆದ ಭಾಗಗಳು ಪ್ರಕಾಶಮಾನವಾಗಿದ್ದವು. ಎದೆಯಿಂದ ನಾಭಿಯ ತನಕ ಒಂದು
ರೇಖೆ. ಈ ರೇಖೆಯೊಂದನ್ನು ಬಿಟ್ಟರೆ ಎದೆಯ ಇಕ್ಕೆಲಗಳಲ್ಲಾಗಲಿ, ಉದರದ ಮೇಲಾ
ರೋಮಗಳಿರಲಿಲ್ಲ, ಕೈ, ಭುಜ ಮತ್ತು ಎದೆಯ ಮೇಲ್ಭಾಗದಲ್ಲಿ ರೋಮಗಳು, ನೀಳ
ಕೈಗಳು. ಅಗಲವಾದ ಹಸ್ತ, ಎರಡೂ ಹಸ್ತಗಳು ಮತ್ತು ಪಾದಗಳು ಮಾಂಸಭರಿತವಾಗಿದ
ಬೆರಳುಗಳು ದೀರ್ಘವಾಗಿದ್ದುವು. ಪಾದತಳಗಳು ಆಳವಾಗಿದ್ದುವು. ನೀರು ನಿಲ್ಲದಂತೆ ಪಾದ
ಸಮತಟ್ಟಾಗಿದ್ದುವು. ನಡೆಯುವಾಗ ದೃಢವಾಗಿ ಹೆಜ್ಜೆಗಳನ್ನಿಡುತ್ತಿದ್ದರು. ತುಸು ಬಾಗಿ
ಇಡುತ್ತಿದ್ದರು. ನಮ್ರತೆಯೊಂದಿಗೆ ನಡೆಯುತ್ತಿದ್ದರು. ವೇಗ ಎಷ್ಟಿರುತ್ತಿತ್ತೆಂದರೆ, ಇಳಿಜಾರಿ
ನಡೆಯುತ್ತಿರುವರೋ ಎಂಬಂತೆ ಭಾಸವಾಗುತ್ತಿತ್ತು. ಯಾರೆಡೆಗಾದರೂ ಗಮನಹರಿಸು
ಪೂರ್ಣವಾಗಿ ಗಮನ ಹರಿಸುತ್ತಿದ್ದರು. ದೃಷ್ಟಿಯನ್ನು ತಗ್ಗಿಸಿಡುತ್ತಿದ್ದರು. ದೃಷ್ಟಿಯು ಆಕಾಶ
ಹೆಚ್ಚಾಗಿ ಭೂಮಿಯೆಡೆಗೆ ಇರುತ್ತಿತ್ತು. ಕಣ್ಣಿನ ತುದಿಯಿಂದ ನೋಡುತ್ತಿದ್ದರು. ಸಂಗಡಿಗ
ತಮ್ಮ ಮುಂದೆ ಇಟ್ಟುಕೊಳ್ಳುತ್ತಿದ್ದರು. ಯಾರಾದರೂ ಸಿಕ್ಕರೆ ತಾವೇ ಮುಂದಾಗಿ ಸಲಾ
ಹೇಳುತ್ತಿದ್ದರು. [ಹಝ್ರತ್ ಹಸನ್ ಬಿನ್ ಅಲೀ(ರ) – ತಿರ್ಮಿ

ಪ್ರವಾದಿ ಮುಹಮ್ಮದ್‌ರ(ಸ) ಚಿತ್ರ ಲೋಕದಲ್ಲಿಲ್ಲ, ಆದರೂ ಪದಗಳನ್ನು ಬಳಸಿ, ಅ
ರೂಪವನ್ನು ಚಿತ್ರಿಸುವ ಪ್ರಯತ್ನ ಮಾಡಲಾಗಿದ್ದು, ಅದರಿಂದ ಒಂದು ಮಹಾನ್ ವ್ಯಕ್ತಿ
ಚಿತ್ರಣ ಮೂಡಿ ಬರುತ್ತದೆ. ಗುಣದ ಸೌಂದರ್ಯದೊಂದಿಗೆ ಅವರ ರೂಪದಲ್ಲಿದ್ದ ಸೌಂದ
ಮತ್ತು ಅಂತರಂಗದ ಶ್ರೇಷ್ಠತೆಯೊಂದಿಗೆ ಅವರ ಬಾಹ್ಯದಲ್ಲಿದ್ದ ಈ ಶ್ರೇಷ್ಠತೆ ಅವರ ವ್ಯಕ್ತಿತ್ವ
ನಿಜಾರ್ಥದಲ್ಲಿ ಅನುಪಮಗೊಳಿಸುತ್ತದೆ.

ಪ್ರವಾದಿವರ್ಯರ(ಸ) ಮಹಾನತೆ ಮತ್ತು ಅವರ ಪ್ರವಾದಿತ್ವ ಸ್ಥಾನದ ಮಹ
ಹಿನ್ನೆಲೆಯಲ್ಲಿ ಅವರ ನಿಷ್ಠ ಅನುಯಾಯಿಗಳು ಅವರ ಮಾತು ಮತ್ತು ಕೃತಿಗಳನ್ನು ನೆನಪಿ
ದಾಖಲಿಸುವುದರ ಜೊತೆಗೇ ಅವರ ವ್ಯಕ್ತಿತ್ವದ ಪ್ರತಿಯೊಂದು ವೈಶಿಷ್ಟ್ಯವನ್ನೂ ನೆನಪಿ
ಅದನ್ನು ಮುಂದಿನ ಪೀಳಿಗೆಯವರಿಗೆ ನಿವೇದಿಸಿದ್ದರು. ''ತಲಪಿಸುವ ಹೊಣೆಗಾರಿಕೆಯ
ಪೂರ್ಣವಾಗಿ ಈಡೇರುವಂತಾಗಲು, ಅವರು ಜನರಿಗೆ ಪ್ರವಾದಿವರ್ಯರ(ಸ) ಸಂದೇಶವ
ಮಾತ್ರವಲ್ಲ, ಅವರ ವ್ಯಕ್ತಿತ್ವದ ವಿವರಗಳನ್ನೂ ಜಗತ್ತಿಗೆ ಪೂರ್ಣರೂಪದಲ್ಲಿ ಪರಿಚಯಿಸಿದರು

ಪ್ರವಾದಿ ಮುಹಮ್ಮದ್‌ರನ್ನು(ಸ) ಅಲ್ಲಾಹನು ಮಾನವಕುಲದ ಪಾಲಿಗೆ ಸರ್ವೋ
ಮಾದರಿಯಾಗಿ ಮಾಡಿದ್ದನು. ಅವನು ತನ್ನ ಈ ಪರಮಭಕ್ತ ಮತ್ತು ಪರಿಪೂ
ಮಾನವರಾಗಿದ್ದ ಆಪ್ತ ದಾಸನಿಗೆ ತನ್ನ ಅಪಾರ ಅನುಗ್ರಹದಿಂದ ಎಂತೆಂತಹ ವೈಶಿಷ್ಟ್ಯಗಳ
ದಯಪಾಲಿಸಿದ್ದನೆಂದರೆ ಅವರ ಚಾರಿತ್ರ್ಯವು ಜಗತ್ತಿನ ಪಾಲಿಗೆ ಶಾಶ್ವತ ಮಾದರಿಯಾಗಿ
ಅಲ್ಲಾಹನು ಅವರ ಪರಿಪೂರ್ಣ ವ್ಯಕ್ತಿತ್ವವನ್ನು ಇತಿಹಾಸದ ಹಾಳೆಯಲ್ಲಿ ಎಷ್ಟು ಭದ್ರವ

ಅಚ್ಛೊತ್ತಿರುವನೆಂದರೆ, 14 ಶತಮಾನಗಳು ಕಳೆದು ಹೋಗಿದ್ದರೂ ಇಂದು ಕೂಡಾ ಅವರ ಜ್ಯೋತಿರ್ಮಯ ವ್ಯಕ್ತಿತ್ವವು ಮಾನವತೆಯ ಮೇಲೆ ತನ್ನ ಪ್ರಖರ ಕಿರಣಗಳನ್ನು ಬೀರುತ್ತಿದೆ. ಆದರೆ ಈ ಬೆಳಕಿನಲ್ಲಿ ಸನ್ಮಾರ್ಗವನ್ನು ಕಂಡು ನಡೆಯುವ ಸೌಭಾಗ್ಯ ಪ್ರಾಪ್ತವಾಗುವುದು ಕಣ್ತೆರೆದು ನಡೆಯುವವರಿಗೆ ಮಾತ್ರ.

ದೊರೆಯ ಮನಸೂರೆಗೊಂಡ ಚಾರಿತ್ರ್ಯ

عَنْ ابْنِ عَبَّاسٍ (رض) اَنَّ أَبَا سُفْيَانَ بْنِ حَرْبٍ أَخْبَرَهُ أَنَّ هِرْقَلَ أَرْسَلَ أَلَيْهِ...ثُمَّ كَانَ اَوَّلَ مَا سَأَلَنِىْ عَنْهُ أَنْ قَالَ كَيْفَ نَسَبُهُ فِيكُمْ قُلْتُ هُوَ فِينَا ذُونَسَبٍ قَالَ فَهَلْ قَالَ هَذَا الْقَوْلَ مِنْكُمْ أَحَدٌ قَطُّ قَبْلَهُ قُلْتُ لاَ قَالَ فَهَلْ كَانَ مِنْ آبَائِهِ مِنْ مَلِكٍ قُلْتُ لاَ قَالَ فَأَشْرَافُ النَّاسِ يَتَّبِعُونَهُ أَمْ ضُعَفَاؤُهُمْ قُلْتُ بَلْ ضُعَفَاؤُهُمْ قَالَ أَيَزِيدُونَ أَمْ يَنْقُصُونَ قُلْتُ بَلْ يَزِيدُونَ قَالَ فَهَلْ يَرْتَدُّ أَحَدٌ مِّنْهُمْ سَخْطَةً لِدِينِهِ بَعْدَ اَنْ يَدْخُلَ فِيهِ قُلْتُ لاَ قَالَ فَهَلْ كُنْتُمْ تَتَّهِمُونَهُ بِالْكَذِبِ قَبْلَ اَنْ يَّقُولَ مَا قَالَ قُلْتُ لاَ قَالَ فَهَلْ يَغْدِرُ قُلْتُ لاَ وَنَحْنُ مِنْهُ فِي مُدَّةٍ وَلاَ نَدْرِى مَاهُوَ فَاعِلٌ فِيهَا قَالَ وَلَمْ تُمَكِّنِّى كَلِمَةٌ اُدْخِلُ فِيهَا شَيْئًا غَيْرُ هَذِهِ الْكَلِمَةِ قَالَ فَهَلْ قَاتَلْتُمُوهُ قُلْتُ نَعَمْ قَالَ فَكَيْفَ كَانَ قِتَالُكُمْ أَيَّاهُ قُلْتُ يَقُولُ اعْبُدُ اللَّهَ وَحْدَهُ وَلاَ تُشْرِكُوْا بِهِ شَيْئًا وَتْرُكُوْا مَا يَقُولُ آبَائُكُمْ وَيَأْمُرُنَا بِالصَّلاةِ وَالصِّدْقِ وَالعَفَافِ وَالصِّلَةِ فَقَالَ لِلتَّرْجُمَانِ قُلْ لَهُ سَأَلْتُكَ عَنْ نَسَبِهِ فَذَكَرْتَ اَنَّهُ فِيكُمْ

ذُو نَسَبٍ فَكَذَالِكَ الرُّسُلُ تُبْعَثُ فِي نَسَبِ قَوْمِهَا وَسَأَلْتُكَ هَلْ قَالَ أَحَدٌ مِّنْكُمْ هَذَا الْقَوْلَ فَذَكَرْتَ أَنْ لَّا فَقُلْتُ لَوْ كَانَ اَحَدٌ قَالَ هَذَا الْقَوْلَ قَبْلَهُ لَقُلْتُ رَجُلٌ يَّا تَسِي بِقَوْلٍ قِيلَ قَبْلَهُ وَسَأَلْتُكَ هَلْ كَانَ مِنْ آبَائِهِ مِنْ مَلِكٍ فَذَكَرْتَ اَنْ لَّا قُلْتُ فَلَوْ كَانَ مِنْ آبَائِهِ مِنَ مَّلِكٍ قُلْتُ رَجُلٌ يَّطْلُبُ مُلْكَ أَبِيهِ وَسَأَلْتُكَ هَلْ كُنْتُمْ تَتَّهِمُونَهُ بِالْكِذْبِ قَبْلَ أَنْ يَقُولَ مَا قَالَ فَذَكَرْتَ أَنْ لَّا فَقَدْ أَعْرِفُ أَنَّهُ لَمْ يَكُنْ لِيَذَرَ الكَذِبَ عَلَى النَّاسِ وَيَكْذِبَ عَلَى اللَّهِ وَسَأَلْتُكَ أَشْرَافُ النَّاسِ اتَّبَعُهُ أَمْ ضُعَفَاعُهُمْ فَذَكَرْتَ أَنْ ضُعَفَاءَهُمْ اتَّبَعُوهُ وَهُمْ اَتْبَاعُ الرُّسُلِ وَسَأَلْتُكَ أَيَزِيدُونَ اَمْ يَنْقُصُونَ فَذَكَرْتَ أَنَّهُمْ يَزِيدُونَ وَ كَذَالِكَ أَمْرُ الأَيمَانِ حَتَّى يَتِمَّ وَسَأَلْتُكَ أَيَرْتَدُّ اَحَدٌ سَخْطَةً لِدَيْنِهِ بَعْدَ اَنْ يَدْخُلَ فِيهِ فَذَكَرْتَ أَنْ لَّا وَكَذَالِكَ الأَيْمَانُ حِينَ تُخَالِطُ بَشَاشَتُهُ الْقُلُوبَ وَسَأَلْتُكَ هَلْ يَغْدِرُ فَذَكَرْتَ أَنْ لَّا وَكَذَلِكَ الرُّسُولُ لاَ تَغْدِرُ وَسَأَلْتُكَ بِمَا يَأْمُرُكُمْ فَذَكَرْتَ أَنَّهُ يَأْمُرُكُمْ أَنْ تَعْبُدُوْا اللَّهَ وَلاَ تُشْرِكُوْا بِهِ شَيْئًا وَيَنْهَاكُمْ عَنْ عِبَادَةِ الْاوثَانِ وَيَأْمُرُكُمْ بِالصَّلاةِ وَالصِّدْقِ وَالْعَفَافِ فَأِنْ كَانَ مَا تَقُولُ حَقًّا فَسَيَمْلِكُ مَوْضِعَ

قَدَمِيَّ هَاتَيْنِ وَقَدْ كُنْتُ أَعْلَمُ أَنَّهُ خَارِجٌ لَمْ أَكُنْ اَظُنُّ أَنَّهُ مِنْكُمْ فَلَوْ أَنِّي أَعْلَمُ أَنِّي أَخْلِصُ اِلَيْهِ لَتَجَشَّمْتُ لِقَاءَهُ وَلَوْ كُنْتُ عِنْدَهُ لَغَسَلْتُ عَنْ قَدَمِهِ ثُمَّ دَعَا بِكِتَابِ رَسُولِ اللّٰهِ ﷺ الَّذِي بَعَثَ بِهِ دِحْيَةُ اِلَى عَظِيْمِ بُصْرَى فَدَفَعَهُ أَلَى هِرْقَلَ فَأَقْرَأَهُ فَأَذَا فِيهِ

((بِسْمِ اللّٰهِ الرَّحْمٰنِ الرَّحِيمِ)) مِنْ مُحَمَّدٍ عَبْدِ اللّٰهِ وَرَسُولِهِ أَلَى هِرْقَلَ عَظِيمِ الرُّوْمِ سَلاَمٌ عَلَى مَنِ اتَّبَعَ الْهُدَى أَمَّا بَعْدُ فَانِّي أَدْعُوكَ بِدِعَايَةِ الْأَسْلاَمِ أَسْلِمْ تَسْلَمْ يُؤْتِكَ اللّٰهُ أَجْرَكَ مَرَّتَيْنِ فَأَنْ تَوَلَّيْتَ فَأَنَّ عَلَيْكَ أثْمَ الْأَرِيسِيِّيْنَ وَيَا أَهْلَ الْكِتَابِ تَعَالَوْا أَلَى كَلِمَةٍ سَوَاءٍ بَيْنَنَا وَبَيْنَكُمْ أَنْ لَّا نَعْبُدُ اَلَّا اللّٰهُ وَلاَ نُشْرِكَ بِهِ شَيْئًا وَلَا يَتَّخِذُ بَعْضُنَا بَعْضًا أَرْبَابًا مِنْ دُونِ اللّٰهِ فَانْ تَوَلَّوا فَقُولُوا اشْهَدُوا بِأَنَّا مُسْلِمُونَ))

قَالَ اَبُو سُوفْيَانَ فَلَمَّ قَالَ مَا قَالَ وَفَرَغَ مِنْ قِرَاءَةِ الْكِتَابِ كَثُرَ عِنْدَهُ الصَّخْبُ وَالرْتُفَعَتِ الْأَصْوَاتُ وَاُخْرِجْنَا فَقُلْتُ لِأَصْحَابِي حِينَ اُخْرِجْنَا لَقَدْ اَمِرَ اَمْرُ اِبْنِ أَبِي كَبْشَةَ أَنَّهُ يَخَافُ مَلِكُ بَنِي الْأَصفَرِ فَمَازِلْتُ مُؤْقِنًا أَنَّهُ سَيَظْهَرُ حَتَّى اَدْخَلَ اللّٰهُ عَلَيَّ الْأَسلاَمَ (البخاري بدء الوحي)

ಅಬೂ ಸುಫ್ಯಾನ್ ನನ್ನೊಡನೆ ಹೀಗೆ ಹೇಳಿದರು. [ರೋಮ್‌ನ ದೊರೆ] ಹಿರಕ್ಕಲ (ಹರ್ಕ್ಯುಲಿಸ್) ನನ್ನನ್ನು ತನ್ನ ಆಸ್ಥಾನಕ್ಕೆ ಕರೆದು ಪ್ರವಾದಿ ಮುಹಮ್ಮದ್‌ರ(ಸ) ಕುರಿತ ವಿಚಾರಿಸಿದನು.] ಅವನ ಪ್ರಥಮ ಪ್ರಶ್ನೆಯು 'ಆ ವ್ಯಕ್ತಿಯ ವಂಶ ಎಂತಹದು?' ಎಂದಾಗಿತ್ತು 'ಆತ ಅತ್ಯಂತ ಗೌರವಾನ್ವಿತ ವಂಶಕ್ಕೆ ಸೇರಿದವನು' ಎಂದು ನಾನು ಹೇಳಿದೆ. 'ಈ ಹಿಂ ನಿಮ್ಮ ಪೈಕಿ ಯಾರಾದರೂ ತಾನು ಪ್ರವಾದಿಯೆಂದು ವಾದಿಸಿದ್ದುಂಟೇ?' ಎಂದು ಅವನ ಕೇಳಿದನು. 'ಇಲ್ಲ' ಎಂದು ನಾನು ಉತ್ತರಿಸಿದೆ. 'ಅವನ ತಂದೆ ತಾತಂದಿರ ಪೈಕಿ ಯಾರಾದರೂ ದೊರೆಗಳಾಗಿದ್ದರೇ?' ಎಂದು ಅವನು ಕೇಳಿದನು. 'ಇಲ್ಲ' ಎಂದು ನಾನು ಹೇಳಿದೆ. 'ಆತನನ ಅನುಸರಿಸುವ ಅನುಯಾಯಿಗಳು ಪ್ರಭಾವಶಾಲಿ ವ್ಯಕ್ತಿಗಳೇ ದುರ್ಬಲರೇ?' ಎಂದು ಅವನ ಪ್ರಶ್ನಿಸಿದನು. 'ದುರ್ಬಲರು' ಎಂದು ನಾನು ಹೇಳಿದೆ. 'ಆತನ ಅನುಯಾಯಿಗಳ ಸಂಖ್ಯೆ ಹೆಚ್ಚುತ್ತಿದೆಯೇ ಕಡಿಮೆಯಾಗುತ್ತಿದೆಯೇ?' ಎಂದು ಅವನು ವಿಚಾರಿಸಿದನು. 'ಅವರ ಸಂಖ್ಯೆ ವೃದ್ಧಿಸುತ್ತಲೇ ಇದೆ' ಎಂದು ನಾನು ತಿಳಿಸಿದೆ. 'ಆತನ ಅನುಯಾಯಿಗಳ ಪೈಕಿ ಯಾರಾದರೂ ಬೇಸತ್ತು ಧರ್ಮ ತ್ಯಾಗ ಮಾಡಿದ್ದುಂಟೇ?' ಎಂದು ಅವನು ಕೇಳಿದನು. 'ಇಲ್ಲ' ಎಂದು ನಾನು ಉತ್ತರಿಸಿದೆ. 'ಆತನು ಪ್ರವಾದಿತ್ವವನ್ನು ವಾದಿಸುವುದಕ್ಕೆ ಮುಂಚೆ ನೀವೆಂದಾದರೂ ಅವನನ್ನು ಸುಳ್ಳುಗಾರನೆಂದು ಆರೋಪಿಸಿದ್ದುಂಟೇ?' ಎಂದು ಅವನು ಪ್ರಶ್ನಿಸಿದನು. 'ಇಲ್ಲ' ಎಂದು ನಾನು ತಿಳಿಸಿದೆ. 'ಅವನು ವಚನ ಭಂಗ ಮಾಡುತ್ತಾನೆಯೇ?' ಎಂದು ಅವನು ವಿಚಾರಿಸಿದನು. 'ಇಲ್ಲ, ಆದರೆ ಇದೀಗ ನಮ್ಮ ಮತ್ತು ಅವನ ಮಧ್ಯೆ ನಡೆದಿರುವ ಒಪ್ಪಂದವನ್ನು ಆತನು ಪಾಲಿಸುತ್ತಾನೋ ಎಂದು ಕಾದು ನೋಡಬೇಕಾಗಿದೆ' ಎಂದು ನಾನು ಉತ್ತರಿಸಿದೆ.

ಆ ಒಂದು ಮಾತಿನ ಹೊರತು ಪ್ರವಾದಿವರ್ಯರ(ಸ) ಕುರಿತು ನನ್ನ ಪರವಾಗಿ ಯಾವುದೇ ಮಾತನ್ನು ಸೇರಿಸಲು ನನಗೆ ಸಾಧ್ಯವಾಗಲಿಲ್ಲ.

ಆ ಬಳಿಕ ಹಿರಕ್ಕಲ್ ಮುಂದುವರಿದು, 'ನೀವೆಂದಾದರೂ ಆತನ ವಿರುದ್ಧ ಯುದ್ಧ ಮಾಡಿದ್ದುಂಟೇ?' ಎಂದು ಕೇಳಿದನು. 'ಹೌದು' ಎಂದು ನಾನು ಉತ್ತರಿಸಿದೆ. 'ಯುದ್ಧದ ಫಲಿತಾಂಶವೇನಾಯಿತು' ಎಂದು ಆತನು ವಿಚಾರಿಸಿದನು. 'ಯುದ್ಧಗಳಲ್ಲಿ ಕೆಲವೊಮ್ಮೆ ನಾವು ಗೆದ್ದರೆ ಕೆಲವೊಮ್ಮೆ ಆತ ಗೆಲ್ಲುತ್ತಾನೆ' ಎಂದು ನಾನು ತಿಳಿಸಿದೆ. 'ಆತನು ನಿಮಗೆ ಏನನ್ನು ಆದೇಶಿಸುತ್ತಾನೆ' ಎಂದವನು ಕೇಳಿದನು. 'ಒಬ್ಬ ಅಲ್ಲಾಹನನ್ನು ಮಾತ್ರ ಆರಾಧಿಸಬೇಕು, ಅವನ ಜತೆ ಇನ್ನಾರನ್ನೂ ಪಾಲುಗೊಳಿಸಬಾರದು, ತಂದೆ ತಾತಂದಿರ (ಅಜ್ಞಾನದ) ಸಂಪ್ರದಾಯಗಳನ್ನೆಲ್ಲ ತ್ಯಜಿಸಬೇಕು, ನಮಾಝ್ ನಿರ್ವಹಿಸಬೇಕು, ಸತ್ಯ ನುಡಿಯಬೇಕು, ಸಚ್ಚಾರಿತ್ರ್ಯವನ್ನು ಬೆಳೆಸಿಕೊಳ್ಳಬೇಕು, ಸಂಬಂಧಿಕರ ಹಕ್ಕು ಬಾಧ್ಯತೆಗಳನ್ನು ಪಾಲಿಸಬೇಕು ಎಂದು ಆತನು ನಮಗೆ ಆದೇಶಿಸುತ್ತಾನೆ' ಎಂದು ನಾನು ಹೇಳಿದೆ.

ಈ ಸಂಭಾಷಣೆಯ ಬಳಿಕ ಹಿರಕ್ಕಲ್ ತನ್ನ ಅನುವಾದಕನೊಡನೆ ಅಬೂ ಸುಫ್ಯಾನ್‌ರಿಗೆ ಹೀಗೆ ತಿಳಿಸಿರೆಂದು ಹೇಳತೊಡಗಿದನು: ''ನಾನು ನಿಮ್ಮೊಡನೆ ಆತನ ವಂಶದ ಕುರಿತು

ಳಿದೆ. ಆತ ಅತ್ಯಂತ ಗೌರವಾನ್ವಿತ ವಂಶದವನೆಂದು ನೀವು ಉತ್ತರಿಸಿದಿರಿ. ಪ್ರವಾದಿಗಳು ಯಾವಾಗಲೂ ಅತ್ಯಂತ ಗೌರವಾನ್ವಿತ ವಂಶಗಳಿಂದಲೇ ಆರಿಸಲ್ಪಡುತ್ತಾರೆ. ಈ ಹಿಂದೆ ನಿಮ್ಮ ಪೈಕಿ ಯಾರಾದರೂ ತನ್ನ ಪ್ರವಾದಿತ್ವದ ವಾದ ಮಂಡಿಸಿದ್ದುಂಟೇ ಎಂದು ನಾನು ಕೇಳಿದೆ. ಇಲ್ಲವೆಂದು ನೀವು ಉತ್ತರಿಸಿದಿರಿ. ಈ ಹಿಂದೆ ನಿಮ್ಮ ಪೈಕಿ ಯಾರಾದರೂ ಹಾಗೆ ವಾದಿಸಿರುತ್ತಿದ್ದರೆ ಇದೆಲ್ಲಾ ವಾದದ್ದೇ ಪರಿಣಾಮವೆಂದು ನಾನು ಭಾವಿಸುತ್ತಿದ್ದೆ. ಆತನ ಪೂರ್ವಜರಲ್ಲಿ ಯಾರಾದರೂ ದೊರೆಗಳಾಗಿದ್ದರೇ ಎಂದು ನಾನು ಕೇಳಿದಾಗ ಇಲ್ಲವೆಂದು ನೀವು ಹೇಳಿದಿರಿ. ಒಂದು ವೇಳೆ ಹಾಗಿರುತ್ತಿದ್ದರೆ ಆತ ತನ್ನ ಪೂರ್ವಜರ (ಕಳೆದು ಹೋದ) ಸಾಮ್ರಾಜ್ಯವನ್ನು ಮರಳಿ ಪಡೆಯುವ ಪ್ರಯತ್ನದಲ್ಲಿದ್ದಾನೆಂದು ನಾನು ಭಾವಿಸುತ್ತಿದ್ದೆ. ಆತನು ತಾನು ಪ್ರವಾದಿಯೆಂದು ವಾದಿಸುವುದಕ್ಕೆ ಮುಂಚೆ ನೀವೆಂದಾದರೂ ಆತನನ್ನು ಸುಳ್ಳುಗಾರನೆಂದು ಆರೋಪಿಸಿದ್ದುಂಟೇ ಎಂದು ನಾನು ಪ್ರಶ್ನಿಸಿದಾಗ ಇಲ್ಲವೆಂದು ನೀವು ಹೇಳಿದಿರಿ. ಜನರೊಂದಿಗೆ ಸುಳ್ಳು ಹೇಳದ ಒಬ್ಬ ಮನುಷ್ಯನು ದೇವನ ವಿಷಯದಲ್ಲಿ ಸುಳ್ಳು ಹೇಳಬಲ್ಲನೆಂದು ನಾನು ನಂಬುವುದಿಲ್ಲ. ಆತನ ಅನುಯಾಯಿಗಳು ಪ್ರಭಾವಶಾಲಿ ವ್ಯಕ್ತಿಗಳೇ ದುರ್ಬಲರೇ ಎಂದು ನಾನು ಕೇಳಿದೆ. ದುರ್ಬಲರು ಎಂದು ನೀವು ತಿಳಿಸಿದಿರಿ. ಯಾವಾಗಲೂ ಇಂಥವರೇ ಸಂದೇಶವಾಹಕರ ಅನುಯಾಯಿಗಳಾಗುತ್ತಾರೆ. ಅವನ ಅನುಯಾಯಿಗಳ ಸಂಖ್ಯೆ ಹೆಚ್ಚುತ್ತಿದೆಯೇ ಕಡಿಮೆಯಾಗುತ್ತಿದೆಯೇ ಎಂದು ನಾನು ನಿಮ್ಮನ್ನು ವಿಚಾರಿಸಿದೆ. ಹೆಚ್ಚುತ್ತಿದೆ ಎಂದು ನೀವು ಹೇಳಿದಿರಿ. ಸತ್ಯವಿಶ್ವಾಸದ ಅವಸ್ಥೆಯೇ ಹೀಗೆ, ಅದು ವೃದ್ಧಿಸುತ್ತಲೇ ಹೋಗುತ್ತದೆ. ಎಷ್ಟೆಂದರೆ ಕೊನೆಗೆ ಅದು ಪರಿಪೂರ್ಣತೆಯನ್ನು ತಲುಪುತ್ತದೆ. ಯಾರಾದರೂ ಅವನ ಧರ್ಮವನ್ನು ಸ್ವೀಕರಿಸಿದ ಬಳಿಕ ಬೇಸತ್ತು ಅದರಿಂದ ವಿಮುಖರಾದುದುಂಟೇ ಎಂದು ನಾನು ಕೇಳಿದೆ. ನೀವು ಇಲ್ಲವೆಂದಿರಿ. ಸತ್ಯವಿಶ್ವಾಸದ ಅವಸ್ಥೆ ಹೀಗೆಯೇ ಇರುತ್ತದೆ. ಅದು ಒಮ್ಮೆ ಮನಸ್ಸನ್ನು ಹೊಕ್ಕಿತೆಂದರೆ ಮತ್ತೆಂದೂ ಹೊರ ಬರುವುದಿಲ್ಲ. ಆತನೆಂದಾದರೂ ವಚನಭಂಗ ಮಾಡಿದ್ದುಂಟೇ ಎಂದು ನಾನು ಕೇಳಿದೆ. ಇಲ್ಲವೆಂದು ನೀವು ಉತ್ತರಿಸಿದಿರಿ. ಇದುವೇ ದೇವಸಂದೇಶವಾಹಕರ ಚಾರಿತ್ರ್ಯ. ಅವರೆಂದೂ ಕೊಟ್ಟ ಮಾತಿಗೆ ತಪ್ಪುವುದಿಲ್ಲ. ಆತ ಏನನ್ನು ಬೋಧಿಸುತ್ತಾನೆಂದು ನಾನು ಪ್ರಶ್ನಿಸಿದೆ. ಒಬ್ಬ ಅಲ್ಲಾಹನನ್ನು ಆರಾಧಿಸಬೇಕು ಮತ್ತು ಯಾರನ್ನೂ ಅವನ ಜೊತೆಗೆ ಪಾಲುಗೊಳಿಸಬಾರದೆಂದು ಅವನು ಬೋಧಿಸುತ್ತಾನೆ, ವಿಗ್ರಹಾರಾಧನೆಯನ್ನು ತೊರೆಯಬೇಕೆನ್ನುತ್ತಾನೆ. ನಮಾಝ್ ನಿರ್ವಹಿಸಬೇಕೆಂದೂ ಸತ್ಯ ನುಡಿಯಬೇಕೆಂದೂ ಸಚ್ಚರಿತರಾಗಿರಬೇಕೆಂದೂ ಆತನು ಆದೇಶಿಸುತ್ತಾನೆ ಎಂದು ನೀವು ತಿಳಿಸಿದಿರಿ. ಒಂದು ವೇಳೆ ನೀವು ಹೇಳಿದ್ದೆಲ್ಲಾ ಸತ್ಯ ಎಂದಾದರೆ ಆತನ ಆಡಳಿತವು ನನ್ನ ಕಾಲತಳದ ವರೆಗೂ ಹಬ್ಬಿ ಬಿಡುವ ದಿನವೊಂದು ಬರಲಿದೆ. ಒಬ್ಬ ಪ್ರವಾದಿ ಬರಲಿದ್ದಾನೆಂಬುದು ನನಗೂ ತಿಳಿದಿತ್ತು. ಆದರೆ ಆತ ನಿಮ್ಮಲ್ಲೊಬ್ಬನಾಗಿರುವನೆಂದು ನಾನು ನಿರೀಕ್ಷಿಸಿರಲಿಲ್ಲ. ಅವರ ಸನ್ನಿಧಿಯಲ್ಲಿ ಹಾಜರಾಗಲು ನನ್ನಿಂದ ಸಾಧ್ಯವಿರುತ್ತಿದ್ದರೆ ನಾನು ಕಷ್ಟಗಳ ಹೊರತಾಗಿಯೂ ಹೋಗಿ ಅವರನ್ನು ಭೇಟಿಯಾಗುತ್ತಿದ್ದೆ. ಅವರ ಪವಿತ್ರ ಪಾದಗಳನ್ನು ತೊಳೆಯುವ ಸೌಭಾಗ್ಯ ಪಡೆಯುತ್ತಿದ್ದೆ''.

ಈ ಸಂಭಾಷಣೆ ಮುಗಿದ ತರುವಾಯ ಹಿರಕ್ಕಲ್, ಹರ್‍ಬ್ರುತ್ ದಿಹ್ಯಃ(ರ) ಅವರು ಬಸ್ರಾದ ರಾಜ್ಯಪಾಲರ ಮುಖಾಂತರ ರವಾನಿಸಿದ್ದ ಪ್ರವಾದಿ ಮುಹಮ್ಮದ್‌ರ(ಸ) ಪತ್ರವನ್ನು ತರಿಸಿ ಓದಿಸಿದನು. ಅದರಲ್ಲಿ ಹೀಗೆ ಬರೆಯಲಾಗಿತ್ತು:

''ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್(ಪರಮ ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ) ಅಲ್ಲಾಹನ ದಾಸನೂ ಸಂದೇಶವಾಹಕನೂ ಆಗಿರುವ ಮುಹಮ್ಮದ್‌ನ ಕಡೆಯಿಂದ, ರೋಮ್‌ನ ನಾಯಕ ಹಿರಕ್ಕಲ್‌ನಿಗೆ ಈ ಪತ್ರ. ಸನ್ಮಾರ್ಗವನ್ನು ಅನುಸರಿಸುವವನಿಗೆ ಶಾಂತಿ. ನಾನು ನಿಮ್ಮನ್ನು ಇಸ್ಲಾಮಿಗೆ ಆಮಂತ್ರಿಸುತ್ತೇನೆ. ಇಸ್ಲಾಮ್ ಸ್ವೀಕರಿಸಿದರೆ ನೀವು ಸುರಕ್ಷಿತರಾಗಿರುವಿರಿ ಮತ್ತು ಅಲ್ಲಾಹನು ನಿಮಗೆ ಇಮ್ಮಡಿ ಪ್ರತಿಫಲವನ್ನು ದಯಪಾಲಿಸುವನು. ನೀವು ಧಿಕ್ಕರಿಸಿದರೆ ದೇಶವಾಸಿಗಳ ಪಾಪಬಾಧೆಯೂ ನಿಮ್ಮ ತಲೆಯ ಮೇಲಿರುವುದು. ಗ್ರಂಥದವರೇ! ನಮ್ಮ ಮತ್ತು ನಿಮ್ಮ ಮಧ್ಯೆ ಸಮಾನವಾಗಿರುವ ಒಂದು ವಿಷಯದೆಡೆಗೆ ಬನ್ನಿರಿ. ಅದೇನೆಂದರೆ, ನಾವು ಅಲ್ಲಾಹನ ಹೊರತು ಇನ್ನಾರನ್ನೂ ಆರಾಧಿಸದಿರುವುದು, ಯಾರನ್ನೂ ಅವನ ಜತೆ ಪಾಲುಗೊಳಿಸದಿರುವುದು ಮತ್ತು ನಮ್ಮ ಪೈಕಿ ಯಾರೂ ಅಲ್ಲಾಹನನ್ನು ಬಿಟ್ಟು ಮತ್ತಾರನ್ನೂ ದೇವರಾಗಿ ಪರಿಗಣಿಸದಿರುವುದು. ಅವರು ಈ ಮಾತು ಕೇಳದಿದ್ದರೆ ಅವರೊಡನೆ ಸ್ಪಷ್ಟವಾಗಿ ಹೇಳಿರಿ; ನೀವು ಸಾಕ್ಷಿಗಳಾಗಿರಿ. ನಾವು ಮುಸ್ಲಿಮರು''.

ಹಿರಕ್ಕಲ್ ತನ್ನ ಮಾತು ಮುಗಿಸಿ, ಪತ್ರವು ಪೂರ್ಣ ಓದಿ ಮುಗಿಸಲ್ಪಟ್ಟಾಗ ಆಸ್ಥಾನದಲ್ಲಿ ಭಾರೀ ಗದ್ದಲ ಮತ್ತು ಕೋಲಾಹಲ ಉಂಟಾಯಿತು. ನಮ್ಮನ್ನು ಅಲ್ಲಿಂದ ಹೊರ ಹಾಕಲಾಯಿತು. ಹೊರಬಂದ ಬಳಿಕ ನಾನು ನನ್ನ ಸಂಗಡಿಗರೊಡನೆ, ಇಬ್ನು ಅಬೀ ಕಬ್‌ಶಃನ [ಪ್ರವಾದಿವರ್ಯರ(ಸ)] ಪ್ರಕರಣವು ದಿನೇ ದಿನೇ ಮುಂದುವರಿಯುತ್ತಲೇ ಇದೆ. ಎಷ್ಟೆಂದರೆ ಈಗ ರೋಮ್‌ನ ದೊರೆ ಕೂಡಾ ಆತನಿಗೆ ಅಂಜಲಾರಂಭಿಸಿದ್ದಾನೆ ಎಂದು ಹೇಳಿದೆ. ಈ ಘಟನೆಯ ಬಳಿಕ ನನಗೆ ಪ್ರವಾದಿವರ್ಯರು(ಸ) ಶೀಘ್ರವೇ ವಿಜಯ ಸಾಧಿಸಲಿದ್ದಾರೆಂದು ಖಚಿತವಾಯಿತು. ಕೊನೆಗೆ ಅಲ್ಲಾಹನು ನನಗೂ ಇಸ್ಲಾಮ್ ಸ್ವೀಕರಿಸುವ ಸೌಭಾಗ್ಯ ನೀಡಿದನು.''

[ಹ. ಇಬ್ನು ಅಬ್ಬಾಸ್(ರ) -ಬುಖಾರಿ]

ಇದು ಪ್ರವಾದಿ ಮುಹಮ್ಮದ್‌ರ(ಸ) ನಿಷ್ಕಳಂಕ ಚಾರಿತ್ರ್ಯ ಮತ್ತು ಪ್ರವಾದಿಯೆಂಬ ನೆಲೆಯಲ್ಲಿ ಅವರ ಅನುಪಮ ವೈಶಿಷ್ಟ್ಯಗಳ ಕುರಿತು ಅವರ ಒಬ್ಬ ಕಟ್ಟಾ ವಿರೋಧಿ ಹಾಗೂ ಕುರೈಶ್ ನಾಯಕ ಅಬೂ ಸುಫ್ಯಾನ್ ರೋಮ್‌ನ ದೊರೆಯ ಆಸ್ಥಾನದಲ್ಲಿ ನೀಡಿದ ಸಾಕ್ಷ್ಯ. ಪ್ರವಾದಿಯವರ ವಿರುದ್ಧ ಸಾಕಷ್ಟು ದ್ವೇಷ ಇದ್ದರೂ ಅವರ ಪವಿತ್ರ ಚಾರಿತ್ರ್ಯದ ಔನ್ನತ್ಯವನ್ನು ಅಂಗೀಕರಿಸಲು ಅಬೂ ಸುಫ್ಯಾನ್ ನಿರ್ಬಂಧಿತರಾದರು. ಪ್ರವಾದಿಯವರ(ಸ) ನೈತಿಕತೆಯ ಬಗ್ಗೆ ಯಾವುದೇ ಒಂದು ಆಕ್ಷೇಪಾರ್ಹ ಅಂಶವನ್ನು ಸೂಚಿಸಲಿಕ್ಕೂ ಅವರಿಗೆ ಸಾಧ್ಯವಾಗಲಿಲ್ಲ.

ರೋಮ್‌ನ ದೊರೆ ಹಿರಕ್ಕಲ್ ಕ್ರೈಸ್ತನಾಗಿದ್ದನು. ಬೈಬಲ್‌ನಲ್ಲಿ ಇದ್ದ ಕೆಲವು ಭವಿಷ್ಯವಾಣಿ ಮತ್ತು ಸುವಾರ್ತೆಗಳಲ್ಲಿ ನೀಡಲಾಗಿದ್ದ ಸೂಚನೆಗಳ ಪ್ರಕಾರ ಆತನು ಒಬ್ಬ ಹೊಸ ಪ್ರವಾದಿಯ

ಂನವನ್ನು ನಿರೀಕ್ಷಿಸುತ್ತಿದ್ದನು. ಮಕ್ಕಾದಲ್ಲಿ ಪ್ರವಾದಿ ಮುಹಮ್ಮದ್(ಸ) ಅವರು ತಮ್ಮ ವಿತ್ವವನ್ನು ಘೋಷಿಸಿದ್ದಾರೆಂದು ಸುದ್ದಿ ಸಿಕ್ಕಿದಾಗ ಅವನು ಒಬ್ಬ ಪ್ರವಾದಿಯಲ್ಲಿರಬೇಕಾದ ಲಕ್ಷಣಗಳೆಲ್ಲಾ ಅವರಲ್ಲಿ ಇದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕೆಂದು ಕ್ಸಿದನು. ನಿಜಕ್ಕೂ ಆ ಎಲ್ಲಾ ಅಪೇಕ್ಷಿತ ಗುಣಲಕ್ಷಣಗಳು ಅವರಲ್ಲಿ ಪೂರ್ಣ ಪ್ರಮಾಣದಲ್ಲಿ ವೆಂಬುದನ್ನು ಅರಿತಾಗ ಅವರು ಅಲ್ಲಾಹನ ಸಂದೇಶವಾಹಕರು ಹೌದೆಂಬುದನ್ನು ಆತನು ದೆ ಅಂಗೀಕರಿಸಿದನು.

ಆದರೆ ಈ ಅಂಗೀಕಾರದ ಹೊರತಾಗಿಯೂ ಅವನು ಇಸ್ಲಾಮ್ ಧರ್ಮ ಸ್ವೀಕರಿಸಲಿಲ್ಲ. ದಿಯಲ್ಲಿ ಅವನ ಸಾಮ್ರಾಜ್ಯ ಮತ್ತು ಅಧಿಕಾರವು ತಡೆಯಾಯಿತು. ಈ ರೀತಿ ಲೋಕದಲ್ಲಿ ಟ್ಟೋ ಮಂದಿ ತಮಗೆ ಸತ್ಯವು ಮನವರಿಕೆಯಾದ ಬಳಿಕವೂ ತಮ್ಮ ಲೌಕಿಕ ಹಿತಾಸಕ್ತಿಗಳನ್ನು ಯಲ್ಲಿಟ್ಟುಕೊಂಡು ಅಥವಾ ಸತ್ಯ ಸ್ವೀಕಾರದ ಪರಿಣಾಮವಾಗಿ ಇಹಲೋಕದಲ್ಲಿ ರಾಗಬಹುದಾದ ಕಷ್ಟಕಾರ್ಪಣ್ಯಗಳಿಗೆ ಅಂಜಿಕೊಂಡು ತಮ್ಮ ತಾತ ಮುತ್ತಾತಂದಿರ ನಂಬಿಕೆಗಳಿಗೆ ಅಂಟಿಕೊಂಡು ಮುಂದುವರಿಯಲು ತೀರ್ಮಾನಿಸುವುದುಂಟು. ಇದರ ಣಾಮವಾಗಿ ಅವರು ಸನ್ಮಾರ್ಗದಿಂದ ಮಾತ್ರವಲ್ಲ, ಪರಲೋಕದ ಶಾಶ್ವತ ಸುಖದಿಂದಲೂ ತರಾಗುತ್ತಾರೆ.

ಇಸ್ಲಾಮ್ ದೇವದತ್ತ ಜೀವನ ಸಂಹಿತೆಯಾಗಿದ್ದು, ಮಾನವಕುಲಕ್ಕೆ ಸನ್ಮಾರ್ಗವನ್ನು ರಲು ಈ ಧರ್ಮವನ್ನು ಕಳುಹಿಸಲಾಗಿದೆ. ಆದ್ದರಿಂದ ಬಡವ ಬಲ್ಲಿದ, ರಾಜಪ್ರಜೆ ಎಂಬ ್ಯಾಸವಿಲ್ಲದೆ ಈ ಧರ್ಮ ಎಲ್ಲರನ್ನೂ ಸಮಾನವಾಗಿ ಅಭಿಸಂಬೋಧಿಸುತ್ತದೆ. ಆದ್ದರಿಂದಲೇ ದಿ ಮುಹಮ್ಮದ್(ಸ) ಕ್ರಿ.ಶ. 628ರಲ್ಲಿ ಅಂದರೆ ಹಿಜರಿ ಶಕೆ 6ರಲ್ಲಿ ರೋಮ್, ಇರಾನ್ ತಾದ ಮಹಾ ಸಾಮ್ರಾಜ್ಯಗಳ ಹಾಗೂ ಇತರ ದೇಶಗಳ ದೊರೆಗಳಿಗೆಲ್ಲಾ ಪತ್ರಗಳನ್ನು ಕಳುಹಿಸಿ ಮ್ ಧರ್ಮ ಸ್ವೀಕರಿಸುವಂತೆ ಕರೆ ನೀಡಿದರು. ರೋಮ್‌ನ ದೊರೆ (ಆತನನ್ನು ಸೀಝರ್) ಬಿರುದಿನಿಂದ ಕರೆಯಲಾಗುತ್ತಿತ್ತು) ಏಲಿಯಾದಲ್ಲಿದ್ದನು. ಸಿರಿಯಾ ದೇಶವು ಅವನ ರಲ್ಲಿತ್ತು. ಬಸ್ರಾ ನಗರವು ಸಿರಿಯಾದ ರಾಜಧಾನಿಯಾಗಿತ್ತು. ಪ್ರವಾದಿ ಮುಹಮ್ಮದ್(ಸ) ರ ಅನುಯಾಯಿ ಹರ್‍ರುತ್ ದಿಹ್ಯಃ(ರ) ಅವರು ಪ್ರವಾದಿವರ್ಯರ(ಸ) ಪತ್ರವನ್ನು ಬಸ್ರಾದ ್ಯಪಾಲನಿಗೆ ತಲುಪಿಸಿದರು. ಆ ರಾಜ್ಯಪಾಲನು ಹಿರಕ್ಲ್‌ನಿಗೆ ಬರೆಯಲಾಗಿದ್ದ ಪತ್ರವನ್ನು ಗೆ ಮುಟ್ಟಿಸಿದನು. ಅದೇ ಸಂದರ್ಭದಲ್ಲಿ ಮಕ್ಕಾದಲ್ಲಿ ಪ್ರವಾದಿವರ್ಯರ(ಸ) ವಿರೋಧಿಗಳ ಯಕರಲ್ಲೊಬ್ಬರಾಗಿದ್ದ ಅಬೂ ಸುಫ್ಯಾನ್‌ರನ್ನು ತನ್ನ ದರಬಾರಿಗೆ ಕರೆಸಿ ಪ್ರವಾದಿವರ್ಯರ(ಸ) ತು ಅನೇಕ ಪ್ರಶ್ನೆಗಳನ್ನು ಕೇಳಿದನು. ಈ ವೃತ್ತಾಂತವನ್ನೇ ಅಬೂ ಸುಫ್ಯಾನ್, ತಾವು ಇಸ್ಲಾಮ್ ರ್ಮ ಸ್ವೀಕರಿಸಿದ ಬಳಿಕ ಇತರರಿಗೆ ವಿವರಿಸಿದರು.

ಪ್ರವಾದಿತ್ವ ಪೂರ್ವದ ಚಾರಿತ್ರ್ಯ

، عَائِشَةَ أُمِّ الْمُؤْمِنِينَ أَنَّهَا قَالَتْ .... فَرَجَعَ بِهَا
وْلُ اللّٰهِ ﷺ يَرْجُفُ فُؤَادُهُ فَدَخَلَ عَلٰى خَدِيْجَةَ فَقَالَ
لُونِي زَمِّلُونِي فَزَمَّلُوهُ حَتَّى ذَهَبَ عَنْهُ الرَّوْعُ فَقَالَ
دِيجَةَ وَأَخْبَرَهَا الْخَبَرَ لَقَدْ خَشِيتُ عَلَى نَفْسِي فَقَالَتْ
يجَةُ كَلَّا وَاللّٰهِ لَا يُخْزِيكَ اللّٰهُ اَبَدًا اِنَّكَ لَتَصِلُ الرَّحِمَ
حْمِلُ الْكَلَّ وَتَكْسِبُ الْمَعْدُومَ وَتَكْرِي الضَّيْفَ وَتُعِينُ
ى نَوَائِبِ الْحَقِّ (البخاری بدء الوحی)

''.........ತರುವಾಯ ಅಲ್ಲಾಹನ ಸಂದೇಶವಾಹಕರು(ಸ) (ಹಿರಾ ಗುಹೆಯಿ ಹ.ಖದೀಜಾರ(ರ) ಮನೆಗೆ ಮರಳಿದರು. ,ಅವರು ನಡುಗುತ್ತಿದ್ದರು ಮತ್ತು 'ನನಗೆ ಹೊದಿ ನನಗೆ ಹೊದಿಸಿರಿ' ಎಂದು ಹೇಳುತ್ತಿದ್ದರು. ಅಂತೆಯೇ ಅವರಿಗೆ ಹೊದಿಸಲಾಯಿತು. ಭಂ ನಿವಾರಣೆಯಾದಾಗ ಅವರು ನಡೆದ ವೃತ್ತಾಂತವನ್ನೆಲ್ಲಾ ಹಝ್ರತ್ ಖದೀಜಾರಿಗೆ(ರ) ತಿಳಿಸಿ ಜೀವವು ಅಪಾಯದಲ್ಲಿರುವಂತೆ ತೋರುತ್ತದೆಂದು ಹೇಳಿದರು. ಆಗ ಖದೀಜಾ, 'ಖ ಹಾಗಾಗದು. ಅಲ್ಲಾಹನಾಣೆ! ಅಲ್ಲಾಹನೆಂದೂ ನಿಮ್ಮನ್ನು ಅಪಮಾನಿತ ಗೊಳಿಸಲಾರನು. ಬಂಧುಗಳ ಬಾಧ್ಯತೆ ತೀರಿಸುತ್ತೀರಿ. ಇತರರ ಹೊರೆ ಹೊರುತ್ತೀರಿ, ಅಪೇಕ್ಷಿತರಿಗೆ ನೆರವಾಗು ಅತಿಥಿಗಳನ್ನು ಆದರಿಸುತ್ತೀರಿ ಮತ್ತು ಸತ್ಯಮಾರ್ಗದಲ್ಲಿ ಸಂಕಷ್ಟಗಳು ಬಂದಾಗ ಸಹ ಮಾಡುತ್ತೀರಿ.'' [ಉಮ್ಮುಲ್ ಮುಅ್‌ಮಿನೀನ್ ಹಝ್ರತ್ ಆಯಿಶಾ(ರ) -ಬುಖ

ಪ್ರವಾದಿವರ್ಯರಿಗೆ(ಸ) ಮೊದಲನೇ ಬಾರಿ ವಹ್ಯ್(ದೇವವಾಣಿ) ಅವತೀರ್ಣಗೊಂ ಅದು ಅವರಿಗೆ ತೀರಾ ಹೊಸ ಅನುಭವವಾಗಿತ್ತು. ಅವರು ತಮ್ಮ ಜೀವನದಲ್ಲಿ ಜಿಬ್ರೀಲ್(ಅ) ದೇವಚರರನ್ನು ನೋಡಿದ್ದು ಅದೇ ಪ್ರಥಮವಾಗಿತ್ತು. ಆದ್ದರಿಂದ ಸಹಜವಾಗಿಯೇ ಭೀತ ಬಿಟ್ಟಿದ್ದರು. ಮನೆಗೆ ತಲಪಿದೊಡನೆ ಹಝ್ರತ್ ಖದೀಜಾರಿಗೆ(ರ) ತಮಗಾದ ಅನುಭವವ ತಿಳಿಸಿದರು. ಪ್ರವಾದಿ ಪತ್ನಿಯಾಗಿದ್ದ ಖದೀಜಾರಿಗೆ(ರ) ಪ್ರವಾದಿವರ್ಯರ(ಸ) ಸದ್ಗುಣ ಚೆನ್ನಾಗಿ ತಿಳಿದಿದ್ದುವು. ಆದ್ದರಿಂದಲೇ ಅವರು, ಅತ್ಯುನ್ನತ ಚಾರಿತ್ರ್ಯವುಳ್ಳ, ಸೌಜನ್ಯದ ಸ ಮೂರ್ತಿಯಂತಿರುವ ಒಬ್ಬ ಮನುಷ್ಯನ ಮೇಲೆ ಶೈತಾನನ ಪ್ರಭಾವವುಂಟಾಗಲು ಸಾಧ್ಯ ಆದ್ದರಿಂದ ದೇವಚರನೇ ಎದುರಾಗಿರಬೇಕು ಮತ್ತು ಅವರ ಮೂಲಕ ಸಿಕ್ಕ ಸಂದೇಶವು ಸಂದೇಶವೇ ಆಗಿರಬೇಕು ಎಂದು ಪ್ರವಾದಿವರ್ಯರಿಗೆ(ಸ) ಸಾಂತ್ವನ ನೀಡಿದರು.

ಹಝ್ರತ್ ಖದೀಜಾರ(ರ) ಪ್ರಸ್ತುತ ಮಾತುಗಳು ಪ್ರವಾದಿ ಮುಹಮ್ಮದ್(ಸ) ಅವರು ಸಂದೇಶವಾಹಕರಾಗಿ ನಿಯುಕ್ತರಾಗುವುದಕ್ಕೆ ಮುಂಚೆಯೂ ಅತ್ಯಂತ ಪಾವನ ತ್ರ್ಯವುಳ್ಳವರಾಗಿದ್ದರು ಮತ್ತು ಅವರ ನೈತಿಕ ಮಟ್ಟವು ಅತ್ಯುನ್ನತವಾಗಿತ್ತು ಎಂಬುದಕ್ಕೆ ಯಾಗಿದೆ.

ಅತ್ಯುನ್ನತ ಚಾರಿತ್ರ್ಯ

عَنْ أَنَسِ بْنِ مَالِكٍ (رض) قَالَ كَانَ رَسُولُ اللّٰهِ ﷺ أَحْ
النَّاسِ خُلُقًا (مُسلم, كتاب الفَضائل)

ಪ್ರವಾದಿ ಮುಹಮ್ಮದ್(ಸ) ಚಾರಿತ್ರ್ಯದ ದೃಷ್ಟಿಯಿಂದ ಎಲ್ಲರಿಗಿಂತಲೂ ಮರಾಗಿದ್ದರು. [ಹಝ್ರತ್ ಅನಸ್ ಬಿನ್ ಮಾಲಿಕ್(ರ) - ಮುಸ್ಲಿಮ್]

ಚಾರಿತ್ರ್ಯದ ದೃಷ್ಟಿಯಿಂದ ಓರ್ವ ದೇವ ಸಂದೇಶವಾಹಕರ ವ್ಯಕ್ತಿತ್ವವು ಬಹಳ ಸ್ತವಾಗಿರುತ್ತದೆ. ಅವರ ಚಾರಿತ್ರ್ಯವೇ ಅವರು ಸತ್ಯ ಪ್ರವಾದಿ ಎಂಬುದಕ್ಕೆ ಅತಿ ದೊಡ್ಡ ಾವೆಯಾಗಿರುತ್ತದೆ. ಅವರ ಚಾರಿತ್ರ್ಯವು ಅವರನ್ನು ಇತರರಿಂದ ಪ್ರತ್ಯೇಕಿಸಿ ಗುರುತಿಸಲು ಭವಾಗಿರುವಷ್ಟು ಶ್ರೇಷ್ಠವಾಗಿರುತ್ತದೆ.

ಅಂತ್ಯ ಪ್ರವಾದಿ ಮುಹಮ್ಮದ್‌ರ(ಸ) ಚಾರಿತ್ರ್ಯದ ಬಗೆಗಂತೂ ಸ್ವತಃ ಪವಿತ್ರ ಕುರ್‌ಆನ್ ಹೇಳಿದೆ: ''ನೀವು ಚಾರಿತ್ರ್ಯದ ಅತ್ಯುನ್ನತ ಸ್ತರದಲ್ಲಿರುವಿರಿ'' (ಅಲ್ ಕಲಮ್4)

ಹದೀಸ್ ಗ್ರಂಥಗಳಲ್ಲಂತೂ ಪ್ರವಾದಿವರ್ಯರ(ಸ) ಸದ್ಗುಣ ಮತ್ತು ಸಚ್ಚಾರಿತ್ರ್ಯದ ಕುರಿತು ಾಳ ವಿಷಯಗಳು ಲಭ್ಯವಿದ್ದು ಅವುಗಳನ್ನು ಅಭ್ಯಸಿಸಿದರೆ, ಪ್ರವಾದಿವರ್ಯರು(ಸ) ರಿತ್ರ್ಯದ ವಿಷಯದಲ್ಲಿ ಮಾನವ ಇತಿಹಾಸದ ಬೇರಾವುದೇ ವ್ಯಕ್ತಿಗಿಂತ ಉನ್ನತರಾಗಿದ್ದರೆಂಬುದು ಸ್ಟವಾಗುತ್ತದೆ. ನಿಷ್ಪಕ್ಷ ಮನೋಭಾವದೊಂದಿಗೆ ಪ್ರವಾದಿವರ್ಯರ(ಸ) ಜೀವನ ಚರಿತ್ರೆ ನ್ನು ಅಭ್ಯಸಿಸಿದ ಯಾವನೇ ವ್ಯಕ್ತಿಯು, ಚಾರಿತ್ರ್ಯದ ವಿಷಯದಲ್ಲಿ ಮುಹಮ್ಮದ್‌ರಿಗೆ(ಸ) ಸಾಟಿಯಾಗಬಲ್ಲ ಬೇರಾರೂ ಇತಿಹಾಸದಲ್ಲಿಲ್ಲ ಎಂಬುದನ್ನು ಒಪ್ಪದೆ ಇರಲಾರ.

ವಿರೋಧಿಗಳ ಜೊತೆ ಸದ್ವರ್ತನೆ

عَنْ أَبِى هُرَيْرَةَ (رض) قَالَ قَالَ رَسُولُ اللّٰهِ ﷺ : مَنْ دَخَلَ دَ
أَبِى سُفْيَانَ فَهُوَ آمِنٌ وَمَنْ أَلْقَى السَّلَاحَ فَهُوَ آمِنٌ وَمَ
أَغْلَقَ بَابَهُ فَهُوَ آمِنٌ (مسلم كتاب الجهاد)

ಮಕ್ಕಾ ವಿಜಯದ ದಿನ ಪ್ರವಾದಿ ಮುಹಮ್ಮದ್(ಸ) ಈ ರೀತಿ ಘೋಷಿಸಿ
''ಅಬೂ ಸುಫ್ಯಾನ್‌ರ ಮನೆಯನ್ನು ಪ್ರವೇಶಿಸುವವರಿಗೆಲ್ಲಾ ಅಭಯ ಸಿಗುವುದು.
ಕೆಳಗಿರಿಸಿದವರಿಗೂ ಅಭಯ ಸಿಗುವುದು. ತಮ್ಮ ಮನೆ ಬಾಗಿಲುಗಳನ್ನು ಮುಚ್ಚಿಕೊಳ್ಳುವವ
ಅಭಯ ಸಿಗುವುದು.'' [ಹಝ್ರತ್ ಅಬೂ ಹುರೈರಾ(ರ) -ಮುಸ್ಲಿ

ಪ್ರವಾದಿವರ್ಯರು(ಸ) ಈ ಘೋಷಣೆ ಮಾಡಿದ್ದು ಮಕ್ಕಾ ವಿಜಯದ ದಿನ. ಪ್ರವಾದಿ(ಸ) ತಮ್ಮನ್ನು ಈ ಹಿಂದೆ ತಿರಸ್ಕರಿಸಿದ್ದ ಮಕ್ಕಾ ಪಟ್ಟಣಕ್ಕೆ ವಿಜಯಿಯಾಗಿ ಮ ದಿನವಾಗಿತ್ತು. ಅಬೂ ಸುಫ್ಯಾನ್ ಆ ವರೆಗೂ ಪ್ರವಾದಿವರ್ಯರ(ಸ) ಕಡುವೈರಿಯಾಗಿ ಅವರು ಕುರೈಶ್ ಜನಾಂಗದ ಸರದಾರರೂ ಸತ್ಯ ಧಿಕ್ಕಾರಿ ಸೇನೆಯ ದಂಡನಾಯಕರೂ ಆಗಿ ಉಹುದ್ ಯುದ್ಧದ ಸಂದರ್ಭದಲ್ಲಿ ಅವರು ಹೇಗಾದರೂ ಪ್ರವಾದಿವರ್ಯರನ ಮುಗಿಸಿಯೇ ಬಿಡಬೇಕೆಂದು ಸಂಚು ಹೂಡಿದ್ದರು. ಕೊನೆಗೆ ಅವರ ಸಂಚುಗ ವಿಫಲವಾಗಿ ಪ್ರವಾದಿ(ಸ) ಎಲ್ಲ ಕ್ಷೇತ್ರಗಳಲ್ಲೂ ವಿಜಯಿಯಾಗಿ, ಮಕ್ಕಾ ಪಟ್ಟಣವು ಅ ಶರಣಾದಾಗ ಅವರ ಕಣ್ಣು ತೆರೆಯಿತು. ಅವರು ಇಸ್ಲಾಮ್ ಧರ್ಮ ಸ್ವೀಕರಿಸಿದರು. ಪ್ರವಾದಿವರ್ಯರು(ಸ) ಅವರನ್ನು ಉದಾರವಾಗಿ ಕ್ಷಮಿಸಿ ಬಿಟ್ಟರು. ಮಾತ್ರವಲ್ಲದೆ ಯಾ ಅಬೂಸುಫ್ಯಾನ್‌ರ ಮನೆಯನ್ನು ಪ್ರವೇಶಿಸುವರೋ ಅವರಿಗೆಲ್ಲಾ ಅಭಯವಿದೆ ಎ ಘೋಷಿಸುವ ಮೂಲಕ ಅವರನ್ನು ಗೌರವಿಸಿದರು. ಅದೇ ರೀತಿ ಮಕ್ಕಾದಲ್ಲಿ ಇನ್ನೂ ಅ ಶತ್ರುಗಳಿದ್ದರು. ಪ್ರವಾದಿ(ಸ) ಮತ್ತವರ ಅನುಯಾಯಿಗಳನ್ನು ಹಿಂಸಿಸಿದ್ದ, ಅವಮಾ ಹಾಗೂ ಅವರೊಡನೆ ಯುದ್ಧ ಸಾರಿದ್ದ ಜನರಿದ್ದರು. ಪ್ರವಾದಿವರ್ಯರು(ಸ) ಅವರಿ ಸಾರ್ವತ್ರಿಕ ಕ್ಷಮೆಯನ್ನು ಘೋಷಿಸುತ್ತಾ ಹೀಗೆ ಹೇಳಿದರು: ''ಇಂದು ನಿಮ್ಮ ಮೇಲೆ ಯಾ ಆರೋಪವಿಲ್ಲ. ಹೋಗಿ, ನೀವೆಲ್ಲರೂ ಸ್ವತಂತ್ರರು.''

ಕೆಡುಕಿಗೆ ಒಳಿತಿನ ಉತ್ತರ

أَبِي هُرَيْرَةَ (رض) قَالَ: كُنْتُ أَدْعُو أُمِّي اِلَى الاِسْلَامِ وَهِيَ
شرِكَةٌ فَدَعَوْتُهَا يَوْمًا فَاَسْمَعَتْنِي فِي رَسُولِ اللّٰهِ ﷺ
اَكْرَهُ فَاَتَيْتُ رَسُولَ اللّٰهِ ﷺ وَأَنَا أَبْكِي قُلْتُ: يَا
سُولَ اللّٰهِ اِنِّي كُنْتُ أَدْعُو أُمِّي اِلَى الاِسْلَامِ فَتَابَى عَلَيَّ
عَوْتُهَا الْيَوْمَ فَاَسْمَعَتْنِي فِيكَ مَا أَكْرَهُ. فَادْعُ اللّٰهَ اَنْ
دِيَ اُمَّ اَبِي هُرَيْرَةَ فَقَالَ رَسُولُ اللّٰهِ ﷺ "اَللّٰهُمَّ!

اهْدِ أُمَّ أَبِى هُرَيْرَةَ " فَخَرَجْتُ مُسْتَبْشِرًا بِدَعْوَتِ النَّبِىِّ ا
صلى الله عليه وسلم فَلَمَّا جِئتُ فَصِرْتُ اِلَى البَابِ فَاِذَا هُوَ مُجَافٌ. فَسَمِعَ
أُمِّى خَشْفَ قَدَمَىَّ - فَقَالَتْ : مَكَانَكَ ! يَا أَبَا هُرَيْرَةَ ! وَسَمِعْ
خَضْخَضَةَ الْمَاءِ قَالَ فَاغْتَسَلَتْ وَلَبِسَتْ دِرْعَهَا وَعَجِلَتْ
حِمَارِهَا فَتَحَتِ البَابَ ثُمَّ قَالَتْ : يَا أَبَا هُرَيْرَةَ : أَشْهَدُ
لاَ اِلٰهَ اِلَّا اللّٰهُ وَأَشْهَدُ أَنَّ مُحَمَّدًا عَبْدُهُ وَرَسُولُهُ. قَالَ فَرَجَعْ
اِلَى رَسُولِ اللّٰهِ صلى الله عليه وسلم فَاتَيْتُهُ وَأَنَا أَبْكِى مِنَ الْفَرَحِ قَالَ قُلْتُ
يَا رَسُولَ اللّٰهِ ! اَبْشِرْ قَدِ اسْتَجَابَ اللّٰهُ دَعْوَتَكَ وَهَدَ
أُمَّ أَبِى هُرَيْرَةَ فَحَمِدَ اللّٰهَ وَأَثْنَى عَلَيْهِ وَقَالَ خَيْرًا
(مسلم كتاب فضائل الصحابة

ನನ್ನ ತಾಯಿ ಬಹುದೇವಾರಾಧಕಳಾಗಿದ್ದರು. ನಾನು ಅವರನ್ನು ಇಸ್ಲಾಮ್ ಧರ್ಮದೆಡೆಗೆ ಂತ್ರಿಸುತ್ತಲಿದ್ದೆನು. ಒಮ್ಮೆ ನಾನು ಈ ರೀತಿ ಅವರ ಮುಂದೆ ಇಸ್ಲಾಮಿನ ಸಂದೇಶವನ್ನಿಟ್ಟಾಗ ರು ಪ್ರವಾದಿವರ್ಯರ(ಸ) ಕುರಿತು ಕೆಲವು ಮಾತುಗಳನ್ನಾಡಿದರು. ಆ ಮಾತುಗಳನ್ನು ವುದು ನನ್ನ ಪಾಲಿಗೆ ತೀರಾ ಅಸಹನೀಯವಾಗಿತ್ತು. ನಾನು ಅಳುತ್ತಾ ಪ್ರವಾದಿವರ್ಯರ(ಸ) ೆ ಹೋಗಿ ''ಅಲ್ಲಾಹನ ಸಂದೇಶವಾಹಕರೇ! ನಾನು ನನ್ನ ತಾಯಿಯನ್ನು ಇಸ್ಲಾಮಿನೆಡೆಗೆ ಂತ್ರಿಸುತ್ತೇನೆ. ಅವರು ತಿರಸ್ಕರಿಸುತ್ತಾರೆ. ಇಂದು ನಾನು ಅವರ ಮುಂದೆ ಇಸ್ಲಾಮಿನ ೇಶವನ್ನಿಟ್ಟಾಗ ಅವರು ತಮ್ಮ ಕುರಿತು ನಾನೆಂದೂ ಕೇಳಲು ಇಷ್ಟಪಡದಂತಹ ಮಾತುಗಳನ್ನು ದರು. ಅಲ್ಲಾಹನು ಅಬೂ ಹುರೈರಾನ(ರ) ತಾಯಿಗೆ ಸನ್ಮಾರ್ಗದರ್ಶನ ನೀಡಬೇಕೆಂದು ಪ್ರಾರ್ಥಿಸಬೇಕು'' ಎಂದು ಕೇಳಿಕೊಂಡೆನು. ಆಗ ಪ್ರವಾದಿವರ್ಯರು(ಸ) ''ನನ್ನೊಡೆಯಾ! ೂ ಹುರೈರಾರ(ರ) ಮಾತೆಗೆ ಸನ್ಮಾರ್ಗದರ್ಶನವನ್ನು ದಯಪಾಲಿಸು'' ಎಂದು ರ್ಥಿಸಿದರು. ಅಲ್ಲಾಹನ ಸಂದೇಶವಾಹಕರ ಈ ಪ್ರಾರ್ಥನೆಯಿಂದ ಸಂತುಷ್ಟನಾದ ನಾನು ಂದ ಹೊರಟು ಮನೆಗೆ ತಲಪಿದೆ. ಬಾಗಿಲು ಮುಚ್ಚಿತ್ತು. ನನ್ನ ತಾಯಿ ನನ್ನ ಕಾಲ ಸಪ್ಪಳ ಕೇಳಿ

''ಅಬೂ ಹುರೈರಾ(ರ) ನಿಲ್ಲು!'' ಎಂದರು. ನನಗೆ ನೀರಿನ ಸದ್ದು ಕೇಳಿಸುತ್ತಿತ್ತು. ಅವರು ಮಾಡಿ ಬಟ್ಟೆತೊಟ್ಟುಕೊಂಡರು. ಆತುರದಲ್ಲಿ ಅವರಿಗೆ ಚಾದರವೂ ಸಿಕ್ಕಿರಲಿಲ್ಲ. ಬಾಗಿಲು ತೆ ''ಅಬೂ ಹುರೈರಾ! ಅಲ್ಲಾಹನ ಹೊರತು ಬೇರೆ ಆರಾಧ್ಯರಿಲ್ಲವೆಂದೂ ಮುಹಮ್ಮದ್ ಅಲ ಸಂದೇಶವಾಹಕರೆಂದೂ ನಾನು ಸಾಕ್ಷ್ಯ ವಹಿಸುತ್ತೇನೆ'' ಎಂದು ಘೋಷಿಸಿದರು. ಇ ಕೇಳಿ ನಾನು ಮತ್ತೆ ಪ್ರವಾದಿವರ್ಯರ(ಸ) ಬಳಿಗೆ ಧಾವಿಸಿದೆ. ನನ್ನ ಕಣ್ಣುಗಳಿಂದ ಆನಂದಬಾ ಉಕ್ಕಿ ಹರಿಯುತ್ತಿತ್ತು. ''ಅಲ್ಲಾಹನ ಸಂದೇಶವಾಹಕರೇ! ಸಂತುಷ್ಟರಾಗಿರಿ. ಅಲ್ಲಾಹನು ಪ್ರಾರ್ಥನೆಯನ್ನು ಸ್ವೀಕರಿಸಿದ್ದಾನೆ. ಅಬೂ ಹುರೈರಾನ ಮಾತೆಗೆ ಸನ್ಮಾರ್ಗದರ್ಶನ ನೀಡಿದ ಎಂದು ನಾನು ಅವರಿಗೆ ತಿಳಿಸಿದೆ. ಇದನ್ನು ಕೇಳಿ ಪ್ರವಾದಿವರ್ಯರು(ಸ) ಅಲ್ಲಾ ಕೃತಜ್ಞತೆ ಸಲ್ಲಿಸಿದರು. ಆತನ ಗುಣಗಾನ ಮಾಡಿದರು ಮತ್ತು ಶುಭಕರವಾದ ಮಾತುಗಳನ್ನಾಡಿದರು. [ಹಝ್ರತ್ ಅಬೂ ಹುರೈರಾ(ರ) -ಮುಸ್ಲಿ

ಈ ಘಟನೆಯಲ್ಲಿ ಅನೇಕ ಪಾಠಗಳಿದ್ದು, ಪ್ರವಾದಿವರ್ಯರ(ಸ) ಚಾರಿತ್ರ್ಯದ ಒ ಗಮನಾರ್ಹ ವೈಶಿಷ್ಟ್ಯದ ಮೇಲೆ ಇದು ಬೆಳಕು ಚೆಲ್ಲುತ್ತದೆ. ಓರ್ವ ಮಹಿಳೆಯು ತ ಅವಾಚ್ಯ ಪದಗಳಿಂದ ನಿಂದಿಸಿದಳೆಂದು ತಿಳಿದ ಬಳಿಕವೂ ಅವರು ಸ್ವಲ್ಪವೂ ಕೆರಳದೆ ಅ ಸನ್ಮಾರ್ಗದರ್ಶನವಾಗಲೆಂದು ಪ್ರಾರ್ಥಿಸುತ್ತಾರೆ. ಪ್ರವಾದಿವರ್ಯರ(ಸ) ಚಾರಿತ್ರ್ಯದ ವೈಶಿಷ್ಟ್ಯವೇ ಅನೇಕ ಮಾನವರನ್ನು ಅವರ ಅಭಿಮಾನಿಗಳಾಗಿ ಮಾರ್ಪಡಿಸಿತ್ತು. ಬೈಗುಳ ಕೇಳಿಯೂ ಹರಸಲು ಕೈಯೆತ್ತುವ ಅವರ ಔನ್ನತ್ಯವನ್ನು ಅರಿತವರೆಲ್ಲರೂ ಅವರನ್ನು ಪ್ರಶಂಸಿ ನಿರ್ಬಂಧಿತರಾಗುತ್ತಾರೆ. ಕೆಲವು ಅಜ್ಞಾನಿಗಳು, ಇಸ್ಲಾಮ್ ಧರ್ಮವು ಖಡ್ಗದ ಬಲ ಹರಡಿತೆಂದು ನಂಬುತ್ತಾರೆ. ವಾಸ್ತವದಲ್ಲಿ ಇಸ್ಲಾಮ್ ಧರ್ಮವು ವ್ಯಾಪಕವಾಗಿ ಹರಡಲು ಮ ಕಾರಣ ಪ್ರವಾದಿವರ್ಯರ(ಸ) ವಾತ್ಸಲ್ಯಮಯ ವ್ಯಕ್ತಿತ್ವ, ಅವರ ಪಾವನ ಚಾರಿತ್ರ್ಯ ಮತ್ತು ಸಂದೇಶದಲ್ಲಿರುವ ಸತ್ಯವೇ ಆಗಿದೆ.

ಪ್ರವಾದಿವರ್ಯರು(ಸ) ಪ್ರಾರ್ಥನೆ ಮಾಡಿದ ಮರುಕ್ಷಣವೇ ಓರ್ವ ಕಟ್ಟಾ ಶ ಅವರ ಅನುಯಾಯಿಯಾಗಿ ಮಾರ್ಪಟ್ಟುದು, ಪ್ರವಾದಿವರ್ಯರ(ಸ) ಪ್ರಾರ್ಥನೆಗಳು ಪರಿಣಾಮಕಾರಿಯಾಗಿದ್ದುವು ಎಂಬುದನ್ನು ಸೂಚಿಸುತ್ತದೆ.

ಸತ್ಯ ಸ್ವೀಕಾರ ಮಾಡಿದ ಒಬ್ಬ ಮಗ ಯಾವ ರೀತಿ ತನ್ನ ಹೆತ್ತ ಮಾತೆಯನ್ನು ಸತ್ಯ ತರಲು ಹೆಣಗಾಡುತ್ತಿರುತ್ತಾನೆ ಮತ್ತು ಯಾವ ರೀತಿ ನಿರಂತರವಾಗಿ ಆಕೆಗೆ ಸತ್ಯ ಪರಿಚಯಿಸಲು ಪ್ರಯತ್ನಿಸುತ್ತಾನೆ ಎಂಬುದಕ್ಕೂ ಈ ಘಟನೆ ಒಂದು ಉದಾಹರಣೆಯಾಗಿ

ಒಬ್ಬ ಸತ್ಯ ಪ್ರಚಾರಕನಿಗೆ ತನ್ನ ಶ್ರಮದಲ್ಲಿ ಯಶಸ್ಸು ಪ್ರಾಪ್ತವಾದಾಗ ಅವನ ಪ್ರತಿಕ್ರಿಯೆ ವಿನಯಪೂರ್ವಕವಾದ ಆನಂದ ಬಾಷ್ಪ ಮತ್ತು ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸುವ ರೂಪ ವ್ಯಕ್ತವಾಗುತ್ತದೆ ಎಂಬ ಗಮನಾರ್ಹ ಅಂಶವೂ ಈ ಘಟನೆಯಲ್ಲಿದೆ.

ಕೈದಿಯೊಂದಿಗೆ ವರ್ತನೆ

عَنْ أَبِي هُرَيْرَةَ (رَض) قَالَ بَعَثَ النَّبِيُّ ﷺ خَيْلاً قَبْلَ نَ
فَجَاءَ ت بِرَجُلٍ مِنْ بَنِي حَنِيفَةَ يُقَالُ لَهُ ثَمَامَةَ بْنُ أُثَالٍ، فَرَبَطُ
بِسَارِيَةٍ مِّنْ سَوَارِي الْمَسْجِدِ فَخَرَجَ أَلَيْهِ النَّبِيُّ ﷺ فَقَ
مَا عِنْدَكَ يَا ثُمَامَةُ ؟ فَقَالَ عِنْدِي خَيْرٌ , يَا مُحَمَّدُ إِنْ تَقْتُل
تَقْتُلْ ذَادَمٍ , وَإِنْ تُنْعِمْ تُنْعِمْ عَلَى شَاكِرٍ وَأَنْ كُنْتَ تُرِ
الْمَالَ فَسْئَلْ مِنْهُ مَا شِئْتَ فَتَرَكَ حَتَّى كَانَ الْغَدُ ثُمَّ قَ
لَهُ مَا عِنْدَكَ يَا ثُمَامَةُ ؟ قَالَ مَا قُلْتُ لَكَ أَنْ تُنْعِمْ تُنْعِمْ عَ
شَاكِرٍ فَتَرَكَهُ حَتَّى كَانَ بَعْدَ الْغَدِ فَقَالَ مَا عِنْدَكَ يَا ثُمَامَ
فَقَالَ عِنْدِي مَا قُلْتُ لَكَ فَقَالَ أَطْلِقُوا ثُمَامَةَ فَأَنْطَلَقَ أ
نَخْلٍ قَرِيبٍ مِّنَ الْمَسْجِدِ فَاغْتَسَلَ ثُمَّ دَخَلَ الْمَسْجِدَ فَقَ
أَشْهَدُ ان لا اله أَلَّا اللّٰهُ وَأَشْهَدُ أَنَّ مُحَمَّدًا رَّسُولُ اللّٰ
وَللّٰهِ مَا كَانَ عَلَى الْأَرْضِ وَجْهٌ أَبْغَضَ إِلَيَّ مِنْ وَجْهِكَ فَ
اَصْبَحَ وَجْهُكَ أَحَبَّ الْوُجُوهِ أَلَيَّ وَاللَّهِ مَا كَانَ مِنْ دِ
أَبْغَضُ أَلَيَّ مِنْ دِيْنِكَ فَأَصْبَحَ دِينِكَ أَحَبَّ الدِّينِ أ
وَاللَّهِ مَا كَانَ مِنْ بَلَدٍ أَبْغَضُ أُلَيَّ مِنْ بَلَدِكَ فَأَصْبَحَ بَلَدُكَ
أَحَبَّ الْبِلَادِ أَلَيَّ (البخاري، كتاب المغازي

ಒಮ್ಮೆ ಪ್ರವಾದಿವರ್ಯರು(ಸ) ಕೆಲವು ಸವಾರರನ್ನು ಒಳಗೊಂಡ ಒಂದು ತಂಡವ ನಜ್ದ್ ಪ್ರದೇಶಕ್ಕೆ ರವಾನಿಸಿದರು. ಅವರು ಬನೀ ಹನೀಫಾ ಗೋತ್ರದ ಸುಮಾಮ ಬಿ ಉಸಾಲ್ ಎಂಬ ವ್ಯಕ್ತಿಯನ್ನು ಬಂಧಿಸಿ ತಂದು ಮಸೀದಿಯ ಸ್ತಂಭವೊಂದಕ್ಕೆ ಕಟ್ಟಿ ಹಾಕಿದ ಪ್ರವಾದಿವರ್ಯರು(ಸ) ಆತನ ಬಳಿಗೆ ಬಂದು 'ಸುಮಾಮ! ನೀನು ಏನನ್ನು ನಿರೀಕ್ಷಿಸುತ್ತಿರುವೆ ಎಂದು ಪ್ರಶ್ನಿಸಿದರು. ಆತನು ''ನಾನು ಒಳ್ಳೆಯದನ್ನು ನಿರೀಕ್ಷಿಸುತ್ತಿದ್ದೇನೆ. ಮುಹಮ್ಮದ ನೀವು ನನ್ನನ್ನು ಕೊಂದರೆ ಕೊಲೆಗೆ ಅರ್ಹನಾದ ಒಬ್ಬನನ್ನು ಕೊಂದಂತಾಗುವುದು. ನೀವು ವಿಷಯದಲ್ಲಿ ಉದಾರಿಗಳಾದರೆ ಒಬ್ಬ ಕೃತಜ್ಞ ವ್ಯಕ್ತಿಗೆ ಔದಾರ್ಯ ತೋರಿದಂತಾಗುವು ಇನ್ನು ನಿಮಗೆ ಪರಿಹಾರ ಹಣ ಬೇಕಿದ್ದರೆ ನಿಮಗೆ ಬೇಕಾದಷ್ಟನ್ನು ಕೇಳಿರಿ'' ಎಂದು ಹೇಳಿದ ಆದರೆ ಪ್ರವಾದಿವರ್ಯರು(ಸ) ಆತನನ್ನು ಹಾಗೆಯೇ ಬಿಟ್ಟು ಅಲ್ಲಿಂದ ಹೊರಟರು. ಮರು ಮತ್ತೆ ಬಂದು 'ಸುಮಾಮ! ನೀನು ಏನನ್ನು ನಿರೀಕ್ಷಿಸುತ್ತಿರುವೆ?' ಎಂದು ಪ್ರಶ್ನಿಸಿದ ಆತನು 'ನಾನು ಈಗಾಗಲೇ ಹೇಳಿರುವಂತೆ ನೀವು ನನ್ನ ಮೇಲೆ ಉಪಕಾರ ಮಾಡಿದರೆ ಒ ಕೃತಜ್ಞನಿಗೆ ಉಪಕಾರ ಮಾಡಿದಂತಾಗುವುದು ''ಎಂದನು. ಅಂದು ಕೂಡಾ ಪ್ರವಾದಿ ಅವನನ್ನು ಹಾಗೆಯೇ ಇರಗೊಟ್ಟರು. ಮೂರನೇ ದಿನ ಪ್ರವಾದಿವರ್ಯರು(ಸ) ಪುನಃ ಬಂ 'ಸುಮಾಮ! ನೀನು ಏನನ್ನು ನಿರೀಕ್ಷಿ ಸುತ್ತಿರುವೆ?' ಎಂದು ಪ್ರಶ್ನಿಸಿದರು. 'ನಾನು ಈಗಾಗ ಹೇಳಿರುವುದನ್ನು' ಎಂದು ಆತನು ಉತ್ತರಿಸಿದನು. ಆಗ ಪ್ರವಾದಿವರ್ಯರು(ಸ) ಆತನನ್ನು ಬಿ ಬಿಡುವಂತೆ ಆದೇಶಿಸಿದರು. ಸುಮಾಮ, ತಾನು ಸ್ವತಂತ್ರನಾದೊಡನೆ ಮಸೀದಿಯ ಹತ್ತಿರದ ಇದ್ದ ಖರ್ಜೂರದ ತೋಟವೊಂದರ ಬಳಿ ಹೋಗಿ ಸ್ನಾನ ಮಾಡಿದನು. ಸ್ನಾನ ಮುಗಿದ ಬ ಮಸೀದಿಗೆ ಬಂದು ಪವಿತ್ರ ವಚನವನ್ನು ಪಠಿಸಿದನು. ''ಅಲ್ಲಾಹನ ಹೊರತು ಬೇರಾ ಆರಾಧ್ಯನಿಲ್ಲ. ಮುಹಮ್ಮದ್ ಅಲ್ಲಾಹನ ಸಂದೇಶವಾಹಕರಾಗಿದ್ದಾರೆ'' ಎಂದು ಘೋಷಿ ಬಳಿಕ ಅವನು ಹೀಗೆ ಹೇಳಿದನು:

''ಮುಹಮ್ಮದರೇ(ಸ)! ದೇವನಾಣೆ, ನನ್ನ ದೃಷ್ಟಿಯಲ್ಲಿ ಭೂಮಿಯ ಮೇಲೆ ತ ಮುಖದಷ್ಟು ದ್ವೇಷಕ್ಕೆ ಅರ್ಹವಾದ ಮುಖ ಬೇರೆ ಯಾರದೂ ಇರಲಿಲ್ಲ, ಆದರೆ ಈಗ ತ ಮುಖವೇ ನನ್ನ ಪಾಲಿಗೆ ಅತ್ಯಂತ ಪ್ರೀತಿಗರ್ಹ ಮುಖವಾಗಿದೆ. ದೇವನಾಣೆ, ಯಾವ ಧರ್ಮ ನನ್ನ ದೃಷ್ಟಿಯಲ್ಲಿ ತಮ್ಮ ಧರ್ಮದಷ್ಟು ದ್ವೇಷಕ್ಕೆ ಅರ್ಹವಾಗಿರಲಿಲ್ಲ, ಆದರೆ ಈಗ ನನಗೆ ತ ಧರ್ಮವೇ ಎಲ್ಲಕ್ಕಿಂತ ಹೆಚ್ಚು ಪ್ರಿಯವಾಗಿದೆ. ಅಲ್ಲಾಹನಾಣೆ, ಯಾವ ನಗರವೂ ನನ್ನ ದೃಷ್ಟಿಯ ತಮ್ಮ ಈ ನಗರದಷ್ಟು ದ್ವೇಷಾರ್ಹವಾಗಿರಲಿಲ್ಲ, ಆದರೆ ಇಂದು ತಮ್ಮ ನಗರವೇ ನನಗೆ ಬೇ ನಗರಗಳಿಗಿಂತ ಪ್ರಿಯವಾಗಿದೆ.'' [ಹಝ್ರತ್ ಅಬೂ ಹುರೈರಾ(ರ) -ಬುಖಾ

ಬನೀ ಹನೀಫಾ ಎಂಬುದು ಯಮನ್‌ನ ಸಮೀಪದ ಯಮಾಮ ಎಂಬಲ್ಲಿದ್ದ ಒಂ ಬಲಾಢ್ಯ ಗೋತ್ರವಾಗಿತ್ತು. ಸುಮಾಮ ಆ ಗೋತ್ರದ ಸರದಾರನಾಗಿದ್ದನು. ಆತನನ್ನು ಬಂ ತಂದು ಮದೀನಾದ ಮಸ್ಜಿದುನ್ನಬವಿಯ ಸ್ತಂಭಕ್ಕೆ ಕಟ್ಟಿ ಹಾಕಲಾಯಿತು. ಮಸೀದಿಯ ಪ

ರಿಸರದಲ್ಲಿ ಇಸ್ಲಾಮಿನ ಆರಾಧನಾ ಕ್ರಮ ಮತ್ತು ಮುಸ್ಲಿಮ್ ಸಮಾಜದ ಆದರ್ಶ ಜೀವನ ಮವನ್ನು ಹತ್ತಿರದಿಂದ ಕಾಣುವ ಅವಕಾಶ ಆತನಿಗೆ ಸಿಕ್ಕಿತು. ಪ್ರವಾದಿವರ್ಯರ(ಸ) ಉತ್ತಮ ರ್ಶನೆಯಿಂದಲೂ ಅವನು ಬಹಳಷ್ಟು ಪ್ರಭಾವಿತನಾಗಿದ್ದನು. ಆದ್ದರಿಂದ ಬಿಡುಗಡೆ ೂಂದಿದೊಡನೆ ಪ್ರವಾದಿವರ್ಯರ(ಸ) ಅನುಯಾಯಿಯಾಗಿ ಮಾರ್ಪಟ್ಟನು. ಕೆಲವೇ ನಗಳ ಅವಧಿಯಲ್ಲಿ ಅವನ ದೃಷ್ಟಿಕೋನವೇ ಬದಲಾಗಿ ಬಿಟ್ಟಿತು. ಆತನ ಭಾವನೆಗಳ ಜಗತ್ತಿನಲ್ಲಿ ಂದು ಕ್ರಾಂತಿಯೇ ಉಂಟಾಗಿತ್ತು. ಕೆಲವು ದಿನಗಳ ಹಿಂದೆ ಅವನು ಯಾರನ್ನು ತೀವ್ರವಾಗಿ ್ವೇಷಿಸುತ್ತಿದ್ದನೋ ಆ ವ್ಯಕ್ತಿಯನ್ನು ಅವನು ಗಾಢವಾಗಿ ಪ್ರೀತಿಸಲಾರಂಭಿಸಿದ್ದನು. ಯಾವ ರ್ಮದ ವಿರುದ್ಧ ಅವನು ತೀವ್ರ ಪೂರ್ವಗ್ರಹಪೀಡಿತನಾಗಿದ್ದನೋ ಅದು ಅವನ ಅತ್ಯಂತ ಚ್ಚಿನ ಧರ್ಮವಾಗಿ ಮಾರ್ಪಟ್ಟಿತು.

ಸುಮಾಮನಿಗೆ ಆತನ ಬಂಧನವೇ ಸನ್ಮಾರ್ಗದರ್ಶನಕ್ಕೆ ಹೇತುವಾಯಿತು. ಮನುಷ್ಯನ ತ್ಮಸಾಕ್ಷಿಯು ಜಾಗೃತವಾಗಿದ್ದರೆ, ಜೀವನದಲ್ಲಿ ಅವನಿಗೆದುರಾಗುವ ಕೆಲವು ಸಂಕಟಗಳು ೂಡಾ ಅವನೊಳಗಿನ ಚೇತನವನ್ನು ಜಾಗೃತಗೊಳಿಸಲು ಕಾರಣವಾಗುತ್ತದೆ.

ಅತಿಥಿ ಸತ್ಕಾರ

عَنْ أَبِى هُرَيْرَةَ (رض) أَنَّ رَسُولَ اللّٰهِ صلى الله عليه وسلم ضَافَهُ ضَيْفٌ كَافِرٌ فَأَمَرَ لَهُ رَسُولُ اللّٰهِ صلى الله عليه وسلم بِشَاةٍ فَحُلِبَتْ فَشَرِبَ ثُمَّ أُخْرَى فَشَرِبَ ثُمَّ أُخْرَى فَشَرِبَهُ ثُمَّ أُخْرَى حَتَّى شَرِبَ حِلَابَ سَبْعِ شِيَاهٍ ثُمَّ أَصْبَحَ مِنَ الْغَدِ فَأَسْلَمَ فَأَمَرَ لَهُ رَسُولُ اللّٰهِ صلى الله عليه وسلم بِشَاةٍ فَحُلِبَتْ فَشَرِبَ حِلَابَهَا ثُمَّ أَمَرَ لَهُ بِأُخْرَى فَلَمْ يَسْتَتِمَّهَا فَقَالَ رَسُولُ اللّٰهِ صلى الله عليه وسلم: الْمُؤْمِنُ يَشْرَبُ فِى مِعًى وَاحِدٍ وَالْكَافِرُ يَشْرَبُ فِى سَبْعَةِ أَمْعَاءٍ (تِرمِذى - ابواب الاطعمة)

ಒಂದು ದಿನ ಒಬ್ಬ ಸತ್ಯಧಿಕ್ಕಾರಿಯು ಅತಿಥಿಯಾಗಿ ಪ್ರವಾದಿ ಮುಹಮ್ಮದ್‌ರ(ಸ) ಬಳಿಗೆ ಬಂದನು. ಆಡಿನ ಹಾಲು ಕೊಟ್ಟು ಆತನನ್ನು ಸತ್ಕರಿಸುವಂತೆ ಪ್ರವಾದಿವರ್ಯರು(ಸ) ಹೇಳಿದರು. ಹಾಗೆಯೇ ಒಂದು ಆಡನ್ನು ಕರೆದು ಅದರ ಹಾಲನ್ನು ಆತನ ಮುಂದಿಡಲಾಯಿತು. ಆತನು ಅದನ್ನು ಪೂರ್ಣವಾಗಿ ಕುಡಿದು ಮುಗಿಸಿದನು. ಆಗ ಇನ್ನೊಂದು ಆಡಿನ ಹಾಲು ಕರೆದು ಆತನಿಗೆ ನೀಡಲಾಯಿತು. ಅವನು ಅದನ್ನೂ ಪೂರ್ಣವಾಗಿ ಕುಡಿದನು. ತರುವಾಯ ಮೂರನೆಯ

ಆಡನ್ನು ಕರೆದು ಅದರ ಹಾಲನ್ನು ಆತನಿಗೆ ನೀಡಲಾಯಿತು. ಅವನು ಅದನ್ನೂ ಕುಡಿದ ಮುಗಿಸಿದನು. ಹೀಗೆ ಅವನು ಒಟ್ಟು ಏಳು ಆಡುಗಳ ಹಾಲನ್ನು ಕುಡಿದನು. ಬೆಳಗಾದಾಗ ೬ ವ್ಯಕ್ತಿ ತಾನು ಇಸ್ಲಾಮ್ ಸ್ವೀಕರಿಸುವುದಾಗಿ ಘೋಷಿಸಿದನು. ಆತನಿಗೆ ಆಡಿನ ಹಾಲು ತಂದ ಕೊಡುವಂತೆ ಪ್ರವಾದಿವರ್ಯರು(ಸ) ಆದೇಶಿಸಿದರು. ಹಾಗೆಯೇ ಹಾಲು ಕರೆದು ಅವ ಮುಂದಿಡಲಾಯಿತು. ಅವನು ಅದನ್ನು ಕುಡಿದು ಮುಗಿಸಿದನು. ಪ್ರವಾದಿವರ್ಯರು(ಸ) ಇನ್ನೊಂದು ಆಡಿನ ಹಾಲನ್ನು ಆತನಿಗೆ ಕೊಡುವಂತೆ ಹೇಳಿದರು. ಆದರೆ ಅದನ್ನು ಅವನ ಪೂರ್ಣವಾಗಿ ಕುಡಿಯಲಿಲ್ಲ. (ಇದನ್ನು ಕಂಡು) ಪ್ರವಾದಿವರ್ಯರು(ಸ) ಹೀಗೆ ಹೇಳಿದರು ''ಸತ್ಯವಿಶ್ವಾಸಿಯು ಒಂದು ಕರುಳಿಗೆ ಕುಡಿಯುತ್ತಾನೆ. ಆದರೆ ಸತ್ಯಧಿಕ್ಕಾರಿ ಏಳು ಕರುಳುಗಳಿ ಕುಡಿಯುತ್ತಾನೆ.'' [ಹಝ್ರತ್ ಅಬೂ ಹುರೈರಾ(ರ) -ತಿರ್ಮಿದಿ

ಪ್ರವಾದಿವರ್ಯರು(ಸ) ತಮ್ಮ ಧರ್ಮಾನುಯಾಯಿಯಲ್ಲದ ಒಬ್ಬ ಅತಿಥಿಯನ ಸತ್ಕರಿಸಿದ ರೀತಿ ಕಂಡು ಆ ವ್ಯಕ್ತಿ ಎಷ್ಟು ಪ್ರಭಾವಿತನಾದನೆಂದರೆ ರಾತ್ರಿ ಸತ್ಯಧಿಕ್ಕಾರಿಯಾಗಿದ್ದವನ ಬೆಳಗಾಗುವುದರೊಳಗೆ ಸತ್ಯಸ್ವೀಕಾರ ಮಾಡಿದನು.

ಇಲ್ಲಿ ಕಾಫಿರ್ ಅಥವಾ ಸತ್ಯಧಿಕ್ಕಾರಿಯು ಏಳು ಕರುಳುಗಳಿಗೆ ಕುಡಿಯುತ್ತಾನೆ ಎಂಬುದ ಅರ್ಥವೇನೆಂದರೆ ತನ್ನ ದುರಾಶೆ ಹಾಗೂ ಲೋಭದ ಸ್ವಭಾವದಿಂದಾಗಿ ಸತ್ಯಧಿಕ್ಕಾರಿಯ ತಿನ್ನುವ, ಕುಡಿಯುವ ವಿಷಯದಲ್ಲೂ ಆಶೆ ಬುರುಕನಾಗಿರುತ್ತಾನೆ. ಆದರೆ ಸತ್ಯವಿಶ್ವಾಸಿಯ ಇತರೆಲ್ಲ ವಿಷಯಗಳಂತೆ ಆಹಾರ ಪಾನೀಯದ ವಿಷಯಗಳಲ್ಲೂ ಮಧ್ಯಮ ಧೋರಣೆಯನ್ನ ಪಾಲಿಸುತ್ತಾನೆ.

عَنْ اَسْمَاءِ اِبْنَةِ أَبِي بَكْرٍ رَضِيَ اللّٰهُ عَنْهُمَا قَالَتْ أَتَيْتَنِي أُمِّي رَاغِبَةً فِي عَهْدِ النَّبِيِّ ﷺ فَسَأَلْتُ النَّبِيَّ ﷺ أَأَصِلُهَا ؟ قَالَ نَعَمْ ، قَالَ بْنُ عُيَيْنَةَ فَانْزَلَ اللّٰهُ تَعَلَى فِيهَا : لَا يَنْهَاكُمُ اللّٰهُ عَنِ الَّذِينَ لَمْ يُقَاتِلُوكُمْ فِي الدِّيْنِ

(بخاری،کتاب الادب)

ಪ್ರವಾದಿವರ್ಯರ(ಸ) ಕಾಲದಲ್ಲಿ (ಬಹುದೇವಾರಾಧಕಿಯಾಗಿದ್ದ) ನನ್ನ ಮಾತೆ ಸದ್ವರ್ತನೆಯನ್ನು ನಿರೀಕ್ಷಿಸುತ್ತಾ ನನ್ನ ಬಳಿಗೆ(ಮದೀನಾಕ್ಕೆ) ಬಂದರು. ನಾನು, ನನ್ನ ತಾಯಿಯೊಂದಿಗೆ ಸದ್ವರ್ತನೆ ತೋರಬೇಕೆ?' ಎಂದು ಪ್ರವಾದಿವರ್ಯರೊಡನೆ(ಸ) ಕೇಳಿದೆ. ''ಹೌದು, ಅವರೊಂದಿಗೆ ಸದ್ವರ್ತನೆ ತೋರಬೇಕು'' ಎಂದು ಪ್ರವಾದಿವರ್ಯರು(ಸ) ಉತ್ತರಿಸಿದರು. ಉಲ್ಲೇಖಕಾರ ಇಬ್ನು ಉಯೈನಾ ಹೇಳುತ್ತಾರೆ: ಅಲ್ಲಾಹನು ಈ ಕುರಿತು (ಸೂರ: ಮುಮ್ತಹಿನದ)

''ಧರ್ಮದ ವಿಷಯದಲ್ಲಿ ನಿಮ್ಮೊಂದಿಗೆ ಯುದ್ಧ ಮಾಡಿಲ್ಲದ......ಜನರೊಂದಿಗೆ ಸದ್ವರ್ತನೆ ತೋರುವುದರಿಂದ.........ಅಲ್ಲಾಹನು ನಿಮ್ಮನ್ನು ತಡೆಯುವುದಿಲ್ಲ'' ಎಂಬ ವಾಕ್ಯವನ್ನು ಅವತೀರ್ಣಗೊಳಿಸಿದನು. [ಹಝ್ರತ್ ಅಸ್ಮಾ ಬಿನ್ತಿ ಅಬೂಬಕರ್(ರ) -ಬುಖಾರಿ]

ತನ್ನ ತಾಯಿ ಇನ್ನೂ ಬಹುದೇವಾರಾಧಕಿಯೇ ಆಗಿದ್ದುದರಿಂದ ಆಕೆಯ ಜೊತೆ ತಾನು ಸದ್ವರ್ತನೆ ತೋರಬಹುದೇ ಎಂದು ಹಝ್ರತ್ ಅಸ್ಮಾರಿಗೆ(ರ) ಸಂದೇಹವಾಗಿತ್ತು. ಆದರೆ ಪ್ರವಾದಿವರ್ಯರು(ಸ) ಹಾಗೆ ಮಾಡಲು ಅವರಿಗೆ ಅನುಮತಿ ನೀಡಿದರು. ಇತರ ವರದಿಗಳಲ್ಲಿ ಪ್ರಸ್ತಾಪಿಸಿರುವಂತೆ, ಈ ಘಟನೆಯು ಹುದೈಬಿಯಾ ಸಂಧಿಯ ಕಾಲದಲ್ಲಿ ಸಂಭವಿಸಿತ್ತು.

ಇಲ್ಲಿ ಬಹುದೇವಾರಾಧಕರ ಜೊತೆ ಸದ್ವರ್ತನೆ ತೋರುವುದಕ್ಕೆ ಸಮರ್ಥನೆಯಾಗಿ ಉದ್ಧರಿಸಲಾಗಿರುವ ಸೂರಃ ಮುಮ್ತಹಿನದ 8ನೇ ವಾಕ್ಯದ ಪೂರ್ಣ ಅನುವಾದ ಹೀಗಿದೆ:

''ಧರ್ಮದ ವಿಷಯದಲ್ಲಿ ನಿಮ್ಮೊಂದಿಗೆ ಯುದ್ಧ ಮಾಡದ ಹಾಗೂ ನಿಮ್ಮನ್ನು ಮನೆಗಳಿಂದ ಹೊರಹಾಕದ ಜನರೊಂದಿಗೆ ಸದ್ವರ್ತನೆ ತೋರುವುದನ್ನು ಹಾಗೂ ಅವರ ವಿಷಯದಲ್ಲಿ ನ್ಯಾಯಪಾಲಿಸುವುದನ್ನು ಅಲ್ಲಾಹನು ತಡೆಯುವುದಿಲ್ಲ. ಅಲ್ಲಾಹನು ನ್ಯಾಯ ಪಾಲಿಸುವವರನ್ನು ಮೆಚ್ಚುತ್ತಾನೆ.''

ಇದರಿಂದ ಸ್ಪಷ್ಟವಾಗುವಂತೆ, ಇಸ್ಲಾಮ್ ಧರ್ಮವು ಮಾನವೀಯ ನೆಲೆಯಲ್ಲಿ ಬಹು ದೇವಾರಾಧಕರೊಂದಿಗೆ ಉತ್ತಮವಾಗಿ ವರ್ತಿಸುವುದನ್ನು ತಡೆಯುವುದಿಲ್ಲ. ಆದ್ದರಿಂದ, ಯುದ್ಧ ನಿರತ ಬಹುದೇವಾರಾಧಕರ ವಿಷಯದಲ್ಲಿ ನೀಡಲಾಗಿರುವ ನಿಯಮಗಳನ್ನು ಸಾಮಾನ್ಯ ಬಹು ದೇವಾರಾಧಕರಿಗೆ ಹಾಗೂ ಇತರ ಮುಸ್ಲಿಮೇತರರಿಗೆ ಅನ್ವಯಗೊಳಿಸುವುದು ಸರಿಯಲ್ಲ.

ಪ್ರವಾದಿಯ ಸರಳತೆ

عَنْ أَنَسْ بِنْ مَالِكٍ (رض) قَالَ كَانَ رَسُولُ اللهِ ﷺ يَعُودُ الْمَرِيضَ وَيَشْهَدُ الجَنَازَةَ وَيَرْكَبُ الحِمَارَ وَيُجِبُ دَعْوَةَ الْعَبْدِ

(شَمَائِلِ الترمذى)

ಪ್ರವಾದಿ ಮುಹಮ್ಮದ್(ಸ) ರೋಗಿಗಳ ಸಂದರ್ಶನಕ್ಕೆ ಹೋಗುತ್ತಿದ್ದರು. ಶವ ಸಂಸ್ಕಾರದಲ್ಲಿ ಪಾಲ್ಗೊಳ್ಳುತ್ತಿದ್ದರು. ಕತ್ತೆಯ ಮೇಲೆ ಸವಾರಿ ಮಾಡುತ್ತಿದ್ದರು. ಗುಲಾಮನ ಆಮಂತ್ರಣವನ್ನು ಸ್ವೀಕರಿಸುತ್ತಿದ್ದರು. [ಹಝ್ರತ್ ಅನಸ್ ಬಿನ್ ಮಾಲಿಕ್(ರ) -ತಿರ್ಮಿದಿ]

ಪ್ರವಾದಿವರ್ಯರು(ಸ) ಜಗತ್ತಿನ ಅತ್ಯಂತ ಶ್ರೇಷ್ಠ ವ್ಯಕ್ತಿಯಾಗಿದ್ದರೂ ಓರ್ವ ಸಾಮಾನ್ಯ ಮನುಷ್ಯನಂತೆ ಬದುಕು ಸಾಗಿಸುತ್ತಿದ್ದರು. ಅಹಂಕಾರವಾಗಲಿ, ದೊಡ್ಡಸ್ತಿಕೆಯಾಗಲಿ ಅವರ ಹತ್ತಿರವೂ ಸುಳಿದಿರಲಿಲ್ಲ. ಯಾರಾದರೂ ಅಸ್ವಸ್ಥರಾಗಿರುವುದು ತಿಳಿದರೆ ಅವರನ್ನು ನೋಡಲು ಹೋಗುತ್ತಿದ್ದರು. ಯಾರಾದರೂ ನಿಧನರಾದರೆ ಅವರ ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಳ್ಳುತ್ತಿದ್ದರು.

ಆ ಕಾಲದಲ್ಲಿ ಜನ ಸಾಮಾನ್ಯರು ಕತ್ತೆಗಳ ಮೇಲೆ ಸವಾರಿ ಮಾಡುತ್ತಿದ್ದುದರಿಂದ ಪ್ರವಾದಿವರ್ಯರು(ಸ) ಕೂಡಾ ಕತ್ತೆಗಳ ಮೇಲೆ ಸವಾರಿ ಮಾಡುತ್ತಿದ್ದರು. ಒಬ್ಬ ಗುಲಾಮ ಕೂಡಾ ಅವರನ್ನು ತನ್ನ ಮನೆಗೆ ಆಮಂತ್ರಿಸಿದರೆ ಪ್ರವಾದಿವರ್ಯರು(ಸ) ಆತನ ಆಮಂತ್ರಣವನ್ನು ಸ್ವೀಕರಿಸುತ್ತಿದ್ದರು.

ವ್ಯಕ್ತಿ ಪೂಜೆಯ ವಿರೋಧಿ

عَنْ أَنَسٍ(رض) قَالَ لَمْ يَكُنْ شَخْصٌ أَحَبَّ أَلَيْهِمْ مِنْ رَسُولِ اللّٰهِ ﷺ قَالَ وَكَانُوا أذَا رَاَوْهُ لَمْ يَقُومُوا لِمَا يَعْلَمُونَ مِنْ كَرَاهِيَّتِهِ لِذَالِكَ (شَمَائِلِ الترمذی)

ಪ್ರವಾದಿವರ್ಯರ(ಸ) ಸಂಗಾತಿಗಳ ದೃಷ್ಟಿಯಲ್ಲಿ ಪ್ರವಾದಿವರ್ಯರೇ(ಸ) ಜಗತ್ತಿನ ಅತ್ಯಂತ ಹೆಚ್ಚು ಪ್ರೀತಿಪಾತ್ರ ವ್ಯಕ್ತಿಯಾಗಿದ್ದರು. ಆದರೂ ಅವರು ಪ್ರವಾದಿವರ್ಯರನ್ನು(ಸ) ಕಂಡಾಗ ಎದ್ದು ನಿಲ್ಲುತ್ತಿರಲಿಲ್ಲ, ಏಕೆಂದರೆ ಅಂತಹ ಕ್ರಮವನ್ನು ಪ್ರವಾದಿವರ್ಯರು(ಸ) ಮೆಚ್ಚುವುದಿಲ್ಲ ಎಂಬುದು ಅವರಿಗೆ ತಿಳಿದಿತ್ತು. [ಹಝ್ರತ್ ಅನಸ್(ರ) ತಿರ್ಮಿದಿ]

ತಮ್ಮನ್ನು ಗೌರವಿಸಲು ಜನರು ಎದ್ದು ನಿಲ್ಲುವುದನ್ನು ಪ್ರವಾದಿ ಮುಹಮ್ಮದ್‌ರು(ಸ) ಮೆಚ್ಚುತ್ತಿರಲಿಲ್ಲ ಎಂಬುದು ಪ್ರವಾದಿವರ್ಯರ(ಸ) ಮಹಾನತೆಯನ್ನು ಸೂಚಿಸುತ್ತದೆ. ನಮ್ಮ ಪರಿಸರದಲ್ಲೇ ಅದೆಷ್ಟೋ ಸಣ್ಣಪುಟ್ಟ ಮಂದಿ, ತಮ್ಮ ಗೌರವಾರ್ಥ ಜನರು ಎದ್ದು ನಿಲ್ಲಬೇಕೆಂದು ಅಪೇಕ್ಷಿ ಸುವುದುಂಟು.

ಲಜ್ಜೆ

عَنْ أَبِی سَعِيدِ الخدرِی(رض) قَالَ : كَانَ النَّبِیُّ ﷺ أَشَدَّ حَيَاءً مِنَ العَذْرَاءِ فِیْ خِدْرِهَا (بخارِی کتاب احادیث الانبیاء)

ಪ್ರವಾದಿ(ಸ) ಓರ್ವ ಪರ್ದಾಧಾರಿ ಕನ್ಯೆಗಿಂತಲೂ ಹೆಚ್ಚು ಲಜ್ಜೆಯುಳ್ಳವರಾಗಿದ್ದರು. [ಅಬೂ ಸಈದ್ ಖುದ್ರೀ(ರ) -ಬುಖಾರಿ]

ಲಜ್ಜೆ ಅಥವಾ ನಾಚಿಕೆಯು ಒಂದು ಶ್ರೇಷ್ಠ ನೈತಿಕ ಗುಣವಾಗಿದೆ. ಒಬ್ಬ ವ್ಯಕ್ತಿಯಲ್ಲಿ ಈ ಗುಣ ಇದ್ದರೆ ಅವನು ದುಷ್ಕೃತ್ಯಗಳನ್ನು ಮಾಡಲು ಅಸಹ್ಯ ಪಡುವನು. ಅವನು ದುಷ್ಕೃತ್ಯಗಳನ್ನು ನೋಡಲು ಕೂಡಾ ಇಷ್ಟ ಪಡಲಾರನು. ಆದ್ದರಿಂದ ಅವನ ಈ ಗುಣವು ಅವನ ವ್ಯಕ್ತಿತ್ವ ಮತ್ತು ಚಾರಿತ್ರ್ಯವನ್ನು ಸುರಕ್ಷಿತವಾಗಿಡುವ ಸಾಧನವಾಗುತ್ತದೆ. ಮಹಿಳೆಯರ

ಾಲಿಗೆ ಈ ಗುಣವೇ ಅವರ ಶೃಂಗಾರವಾಗಿದೆ. ಪ್ರವಾದಿ ಮುಹಮ್ಮದ್‌ರಲ್ಲಿ(ಸ) ಈ ಗುಣವು ಿಷ್ಠ ಪ್ರಮಾಣದಲ್ಲಿತ್ತು. ಅವರು ಲಜ್ಜೆ ಮತ್ತು ಸಂಕೋಚದ ಸಾಕಾರ ಮೂರ್ತಿಯಂತಿದ್ದರು. ಯಾವುದಾದರೂ ವಸ್ತು ಅವರಿಗೆ ಅಪ್ರಿಯವೆನಿಸಿದರೆ ಅದರ ಪ್ರಭಾವವು ತಕ್ಷಣವೇ ಅವರ ಮುಖಭಾವದಲ್ಲಿ ವ್ಯಕ್ತವಾಗುತ್ತಿತ್ತು. ಅವರು ಇತರರ ಮುಂದೆಯಾಗಲಿ ಸಭೆಯಲ್ಲಾಗಲಿ ಯಾರಿಗೂ ಅರೋಚಕವಾಗುವಂತಹ ಮಾತುಗಳನ್ನು ಆಡುತ್ತಿರಲಿಲ್ಲ.

ಸೇವಕನ ಸಾಕ್ಷ್ಯ

عَنْ اَنَسٍ (رض) قَالَ خَدَمْتُ رَسُولُ اللهِ ﷺ عَشْرَ سِنِينَ فَمَا قَالَ لِي أُفٍّ قَطُّ وَمَا قَالَ لِشَيْءٍ صَنَعْتُهُ لِمَ صَنَعْتَهُ ؟ وَلَا لِشَيْءٍ تَرَكْتُهُ لِمَ تَرَكْتَهُ (ترمذی ابواب الصلة)

ನಾನು ಹತ್ತು ವರ್ಷ ಪ್ರವಾದಿ ಮುಹಮ್ಮದ್‌ರ(ಸ) ಸೇವಕನಾಗಿದ್ದೆ. ಅವರೆಂದೂ ನನಗೆ 'ಉಫ್' ಎಂದು ಹೇಳಿದ್ದಿಲ್ಲ. ಯಾವುದೇ ಕಾರ್ಯದ ಕುರಿತು ಅದನ್ನೇಕೆ ಮಾಡಿದೆ ಎಂದಾಗಲಿ, ಮಾಡದಿದ್ದರೆ ಅದನ್ನೇಕೆ ಮಾಡಿಲ್ಲ ಎಂದಾಗಲಿ ಅವರು ಕೇಳಿದ್ದಿಲ್ಲ.

[ಹಝ್ರತ್ ಅನಸ್(ರ) -ತಿರ್ಮಿದಿ]

ಇದು ಪ್ರವಾದಿವರ್ಯರ(ಸ) ಉನ್ನತ ಚಾರಿತ್ರ್ಯದ ಕುರಿತು, ಹತ್ತು ವರ್ಷ ಅವರ ಸೇವೆಯಲ್ಲಿದ್ದ ಓರ್ವ ತರುಣನ ಸಾಕ್ಷ್ಯ. ಪ್ರವಾದಿವರ್ಯರು(ಸ) ತಮ್ಮ ವೈಯಕ್ತಿಕ ವಿಷಯಗಳಲ್ಲಿ ಅತ್ಯಂತ ಗಂಭೀರರೂ ಸೌಜನ್ಯಶೀಲರೂ ಆಗಿದ್ದರು. ಸಣ್ಣ ಪುಟ್ಟ ವಿಷಯಗಳ ಕುರಿತು ಅವರೆಂದೂ ವಿಚಾರಿಸುತ್ತಿರಲಿಲ್ಲ ಎಂದು ಇದರಿಂದ ಸ್ಪಷ್ಟವಾಗುತ್ತದೆ.

ಹೃದಯ ವೈಶಾಲ್ಯ

عَنْ جَابِرٍ (رض) قَالَ مَا سُئِلَ النَّبِيُّ ﷺ عَن شَيْءٍ قَطُّ فَقَالَ لَا (بخاری کتاب الادب)

ಪ್ರವಾದಿ ಮುಹಮ್ಮದ್‌ರೊಡನೆ(ಸ) ಯಾವುದೇ ವಸ್ತುವನ್ನು ಕೇಳಲಾದಾಗ ಅವರು ಎಂದೂ ಕೊಡಲು ನಿರಾಕರಿಸಿದ್ದಿಲ್ಲ. [ಹ. ಜಾಬಿರ್(ರ) -ಬುಖಾರಿ]

ಇದು, ಪ್ರವಾದಿವರ್ಯರು(ಸ) ಎಷ್ಟು ವಿಶಾಲ ಹೃದಯಿ, ಕೊಡುಗೈ ದಾನಿ ಮತ್ತು ಉನ್ನತ ಚಾರಿತ್ರ್ಯದವರಾಗಿದ್ದರು ಎಂಬುದನ್ನು ಸೂಚಿಸುತ್ತದೆ. ಎಂದೂ ಯಾರಿಗೂ 'ಇಲ್ಲ' ಎಂದು ಹೇಳದೆ ಇರಲು ಅಸಾಮಾನ್ಯ ಔನ್ನತ್ಯವಿರುವ ಅತ್ಯಂತ ಶ್ರೇಷ್ಠ ವ್ಯಕ್ತಿಗೆ ಮಾತ್ರ ಸಾಧ್ಯ.

عَنْ أَبِي هُرَيْرَةَ (رض) قال قال رسول الله ﷺ لَوْ كَانَ لِيْ مِثْلِ أُحُدٍ ذَهَبًا مَا يُسُرُّنِيْ أَنْ لاَ يَمُرَّ عَلَيَّ ثَلاثٌ وَعِنْدِي مِنْهُ شَيْءٌ اِلَّا شَيْءٌ أُرْصِدُهُ لِدَيْنٍ (بخارى كتاب الستقراض)

ಪ್ರವಾದಿವರ್ಯರು(ಸ) ಹೀಗೆ ಹೇಳಿರುವರು: ''ನನ್ನ ಬಳಿ ಉಹುದ್ ಬೆಟ್ಟದಷ್ಟು ಚಿನ್ನ ಇದ್ದಿದ್ದರೂ, ನನ್ನ ಸಾಲ ತೀರಿಸಲು ಬೇಕಾಗುವಷ್ಟನ್ನು ಬಿಟ್ಟು ಅದರಲ್ಲಿನ ಸ್ವಲ್ಪ ಭಾಗ ಕೂಡಾ ನನ್ನ ಬಳಿ ಇರುವ ಸ್ಥಿತಿಯಲ್ಲಿ ಮೂರು ಇರುಳುಗಳನ್ನು ಕಳೆಯುವುದನ್ನು ನಾನು ಖಂಡಿತ ಇಷ್ಟಪಡುತ್ತಿರಲಿಲ್ಲ.'' [ಹ. ಅಬೂ ಹುರೈರಾ(ರ) -ಬುಖಾರಿ]

ಔದಾರ್ಯ

عَنْ ابْنِ عَبَّاسٍ (رض) قَالَ كَانَ رَسُولُ اللّه ﷺ أَجْوَدَ النَّاسِ وَكَانَ أَجْوَدُ مَا يَكُونُ فِي رَمَضَانَ حِينَ يَلْقَاهُ جِبْرِيلُ وَكَانَ يَلْقَاهُ فِيْ كُلِّ لَيْلَةٍ مِنْ رَمَضَانَ فَيُدَارِسُهُ الْقُرْآنَ فَلَرَسُولُ اللّهِ ﷺ أَجْوَدُ بِالْخَيْرِ مِنَ الرِّيحِ الْمُرْسَلَةِ

(بخارى بدء الوحى)

ಅಲ್ಲಾಹನ ಸಂದೇಶವಾಹಕರು(ಸ) ಎಲ್ಲರಿಗಿಂತ ಅಧಿಕ ದಾನಶೀಲರಾಗಿದ್ದರು. ಅವರನ್ನು ಜಿಬ್ರೀಲ್‌ರು(ಅ) ಭೇಟಿ ಮಾಡುತ್ತಿದ್ದ ರಮಝಾನ್ ತಿಂಗಳಲ್ಲಿ ಅವರ ದಾನಶೀಲತೆಯು ಇನ್ನಷ್ಟು ವೃದ್ಧಿಸುತ್ತಿತ್ತು. ರಮಝಾನ್ ತಿಂಗಳಲ್ಲಿ ಜಿಬ್ರೀಲ್‌ರು(ಅ) ಪ್ರತಿ ರಾತ್ರಿ ಅವರನ್ನು ಭೇಟಿಯಾಗುತ್ತಿದ್ದರು ಮತ್ತು ಅವರು ಜತೆಗೂಡಿ ಕುರ್‌ಆನ್ ಓದುತ್ತಿದ್ದರು. ಆ ದಿನಗಳಲ್ಲಿ ಅಲ್ಲಾಹನ ಸಂದೇಶವಾಹಕರ ದಾನಶೀಲತೆಯು ಬಿರುಗಾಳಿಗಿಂತ ತೀವ್ರವಾಗಿ ವೃದ್ಧಿಸುತ್ತಿತ್ತು.

[ಹಝ್ರತ್ ಅಬ್ದುಲ್ಲಾ ಬಿನ್ ಅಬ್ಬಾಸ್(ರ) -ಬುಖಾರಿ]

ಔದಾರ್ಯ ಮತ್ತು ದಾನಶೀಲತೆಯಂತೂ ಪ್ರವಾದಿ ಮುಹಮ್ಮದ್‌ರ(ಸ) ಸ್ವಭಾವದಲ್ಲೇ ಸೇರಿತ್ತು. ರಮಝಾನ್ ತಿಂಗಳಲ್ಲಿ ಈ ಗುಣವು ತನ್ನ ಪರಿಪೂರ್ಣತೆಯನ್ನು ಮುಟ್ಟುತ್ತಿತ್ತು. ಪವಿತ್ರ ಕುರ್‌ಆನ್ ಪಠಣದ ನೇರ ಪ್ರಭಾವವನ್ನು ಇಲ್ಲಿ ಕಾಣಬಹುದು. ರಮಝಾನ್ ತಿಂಗಳಲ್ಲಿ ಪ್ರವಾದಿವರ್ಯರು(ಸ) ಪ್ರತಿ ರಾತ್ರಿ ಹ.ಜಿಬ್ರೀಲ್‌ರ(ಅ) ಜೊತೆ ಕುರ್‌ಆನ್ ಪಠಿಸುವುದರಲ್ಲಿ

ರತರಾಗುತ್ತಿದ್ದರು. ಇದು ಸ್ವಾಭಾವಿಕವಾಗಿಯೇ ದಯೆ ಮತ್ತು ಅನುಕಂಪದ ಭಾವನೆಗಳನ್ನು ಹಾಗೂ ಸತ್ಕಾರ್ಯದ ಉತ್ಸಾಹವನ್ನು ಉಕ್ಕೇರಿಸುವಂತಹ ಚಟುವಟಿಕೆಯಾಗಿದೆ.

عَنْ عَائِشَةَ رَضِيَ اللّٰهُ عَنْهَا أَنَّهُمْ ذَبَحُوْا شَاةً فَقَالَ النَّبِيُّ ﷺ مَا بَقِيَ مِنهَا ؟قَالَت مَا بَقِيَ مِنْهَا اِلَّا كَتِفِهَا ، قَالَ بَقِيَ كُلُّهَا غَيْرَ كَتِفُهَا (تِرْمِذِى)

ಒಮ್ಮೆ ಜನರು ಒಂದು ಆಡನ್ನು ದಿಬ್ಬ ಮಾಡಿದರು. ಪ್ರವಾದಿವರ್ಯರು(ಸ) "ಅದರಲ್ಲಿ ಏನೆಲ್ಲಾ ಉಳಿದಿದೆ?" ಎಂದು ಕೇಳಿದರು. "ಕೈಯ ಹೊರತು ಬೇರೇನೂ ಉಳಿದಿಲ್ಲ" ಎಂದು ನಾನು ಉತ್ತರಿಸಿದೆ. ಆಗ ಪ್ರವಾದಿವರ್ಯರು(ಸ) ಹೇಳಿದರು: "ಕೈಯ ಹೊರತು ಬೇರೆಲ್ಲವೂ ಉಳಿಯಿತು." [ಹಝ್ರತ್ ಆಯಿಶಾ(ರ) -ತಿರ್ಮಿದಿ]

ಆಡನ್ನು ದಿಬ್ಬ ಮಾಡಿದ ಬಳಿಕ ಮಾಂಸವನ್ನೆಲ್ಲಾ ದಾನ ಮಾಡಲಾಗಿತ್ತು. ಕೇವಲ ಅದರ ಕೈ ಅಥವಾ ಮುಂದಿನ ಕಾಲೊಂದರ ಮಾಂಸವನ್ನು ಮಾತ್ರ ದಾನ ಮಾಡಿರಲಿಲ್ಲ. ಈ ಸಂದರ್ಭದಲ್ಲಿ ಪ್ರವಾದಿವರ್ಯರು(ಸ) ಅಲ್ಲಾಹನ ಮಾರ್ಗದಲ್ಲಿ, ಅವನ ಮೆಚ್ಚುಗೆಗಾಗಿ ದಾನ ಮಾಡಲಾದ ಸಂಪತ್ತೇ ನಿಜವಾದ ಉಳಿತಾಯವೆಂದು ಹೇಳುತ್ತಾರೆ. ಏಕೆಂದರೆ ಅದು ಪರಲೋಕವೆಂಬ ಬ್ಯಾಂಕಿನಲ್ಲಿ ಸಂಗ್ರಹವಾಗುತ್ತದೆ. ಇಲ್ಲಿ ದಾನ ಮಾಡಿದ ವ್ಯಕ್ತಿಗೆ ಅಲ್ಲಿ ಅದರ ಪೂರ್ಣ ಪ್ರತಿಫಲ ದೊರೆಯುತ್ತದೆ. ಇನ್ನು ಮನುಷ್ಯನು ಈ ಲೋಕದಲ್ಲಿ ತಿಂದುಂಡು ಮುಗಿಸಿದ ಸಂಪತ್ತು ನಿಜಕ್ಕೂ ಮುಗಿದು ಹೋಯಿತು. ಆದ್ದರಿಂದ ಈ ಲೋಕದಲ್ಲಿ ಧನವನ್ನು ಸಂಗ್ರಹಿಸಿಡುವವರು ನಿಜವಾಗಿ ಅದನ್ನು ಉಳಿತಾಯ ಮಾಡಿದಂತಾಗುವುದಿಲ್ಲ, ಅವರು ಅದನ್ನು ಕಳಕೊಂಡಂತಾಗು ತ್ತದೆ. ಅತ್ತ ಅಲ್ಲಾಹನ ಮಾರ್ಗದಲ್ಲಿ ಸಂಪತ್ತನ್ನು ದಾನ ಮಾಡಿದವರು ಅದನ್ನು ಕಳಕೊಂಡಂತಾಗ ಲಿಲ್ಲ, ನಿಜವಾಗಿ ಅವರ ಪಾಲಿಗೆ ಅದು ಉಳಿತಾಯವಾಗಿದೆ. ಪರಲೋಕದಲ್ಲಿ ಅವರು ತಮ್ಮ ಈ ಉಳಿತಾಯದ ಫಲ ಪಡೆಯಲಿದ್ದಾರೆ ಎಂಬ ವಾಸ್ತವಿಕತೆಯನ್ನು ತಿಳಿಸಿದರು.

عَنْ أَبِي هُرَيْرَةَ (رض) أَنَّ رَسُولَ اللّٰهِ ﷺ قَالَ : مَا نَقَصَتْ صَدَقَةٌ مِنْ مَالٍ , وَمَا زَادَ اللّٰهُ عَبْدًا بِعَفْوٍ اِلَّا عِزًّا وَمَا تَوَاضَعَ أَحَدٌ لِلّٰهِ اِلَّا رَفَعَهُ اللّٰهُ عَزَّ وَجَلَّ (مسلم)

ಪ್ರವಾದಿವರ್ಯರು(ಸ) ಹೀಗೆ ಹೇಳಿರುವರು:

"ದಾನವು ಸಂಪತ್ತನ್ನು ಕಡಿಮೆಗೊಳಿಸುವುದಿಲ್ಲ, ಕ್ಷಮಿಸುವ ನೀತಿಯನ್ನು ಅನುಸರಿಸುವ

ದಾಸನ ಗೌರವವನ್ನು ಅಲ್ಲಾಹನು ವೃದ್ಧಿಸುತ್ತಾನೆ ಮತ್ತು ಅಲ್ಲಾಹನಿಗಾಗಿ ವಿನಯ ಶೀಲತೆಯ ಅನುಸರಿಸುವ ವ್ಯಕ್ತಿಗೆ ಅಲ್ಲಾಹನು ಔನ್ನತ್ಯವನ್ನು ದಯಪಾಲಿಸುತ್ತಾನೆ.''

[ಹಝ್ರತ್ ಅಬೂ ಹುರೈರಾ(ರ) -ಮುಸ್ಲಿಮ

ದೇವಾರಾಧನೆ

ن الْمُغِيرَةِ بِنْ شُعْبَةَ (رض) أَنَّ النَّبِيَّ صلى الله عليه وسلم صَلَّى حَتَّى اِنْتَفَخَتْ
دَمَاهُ فَقِيلَ لَهُ أَتَكَلَّفُ هَذا وَقَدْ غَفَرَ اللّٰهُ لَكَ مَا تَقَدَّمَ مِنْ
نُبِكَ وَمَا تَأَخَّرَ فَقَالَ أَفَلاَ أَكُونَ عَبْدًا شَكُورًا
(مسلم،كتاب صفة القيامة)

ಪ್ರವಾದಿವರ್ಯರು(ಸ) ಅತ್ಯಧಿಕವಾಗಿ ನಮಾಝ್ ನಿರ್ವಹಿಸುತ್ತಿದ್ದರು. ಎಷ್ಟೆಂದರೆ ಅವ ಕಾಲುಗಳು ಬಾತು ಕೊಂಡುವು. ''ತಮ್ಮ ಹಿಂದಿನ ಎಲ್ಲ ಪಾಪಗಳು ಕ್ಷಮಿಸಲ್ಪಟ್ಟಿದ್ದರೂ ತಾ ಇಷ್ಟು ಕಷ್ಟಪಡುತ್ತಿರುವಿರೇಕೆ!'' ಎಂದು ವಿಚಾರಿಸಿದಾಗ ಪ್ರವಾದಿವರ್ಯರು(ಸ) ಹೇಳಿದರ ''ನಾನು ಕೃತಜ್ಞ ದಾಸನಾಗಬೇಡವೇ?'' [ಹ. ಮುಗೀರಾ ಬಿನ್ ಶುಅ್‌ಬಃ -ಮುಸ್ಲಿಮ

ಈ ವಚನದಿಂದ ತಿಳಿಯುವಂತೆ, ಪ್ರವಾದಿ ಮುಹಮ್ಮದ್(ಸ) ದೇವಾರಾಧನೆಯ ಬ ಅಸಾಮಾನ್ಯ ಉತ್ಸಾಹ ಹೊಂದಿದ್ದರು. ಅವರು ಎಷ್ಟು ಹೆಚ್ಚು ನಫಿಲ್ ನಮಾಝ್‌ಗಳ ನಿರ್ವಹಿಸುತ್ತಿದ್ದರೆಂದರೆ, ಅದರಿಂದ ಅವರ ಕಾಲುಗಳು ಬಾತುಕೊಳ್ಳುತ್ತಿದ್ದವು. ರಾತ್ರಿಯ ಹೆಚ್ಚಿ ಸಮಯವನ್ನು ಆರಾಧನೆಗಳಲ್ಲಿ ಕಳೆಯುವುದು ಅವರ ನಿತ್ಯದ ರೂಢಿಯಾಗಿತ್ತು. ದೇವನೆದು ಅವರಿಗಿದ್ದ ದಾಸ್ಯ ಪ್ರಜ್ಞೆ ಮತ್ತು ಕೃತಜ್ಞತಾಭಾವವೇ ಇದಕ್ಕೆಲ್ಲಾ ಪ್ರೇರಕವಾಗಿತ್ತು. ಈ ಪ್ರ ಮತ್ತು ಮನೋಭಾವವು ಒಬ್ಬ ವ್ಯಕ್ತಿಯಲ್ಲಿ ಎಷ್ಟು ಹೆಚ್ಚಾಗಿರುವುದೋ ಅಷ್ಟೇ ಹೆಚ್ಚು ಅಲ್ಲಾಹ ಸಾಮಿಪ್ಯವನ್ನು ಅವನು ಸಂಪಾದಿಸುವನು.

ಸವಿನುಡಿ

ن أَبِي عَبْدُ اللّٰهِ الْجَدْلِيْ (رض) قَالَ سَأَلْتُ عَائِشَةَ عَنْ خُلُقِ
سُولِ اللّٰهِ صلى الله عليه وسلم فَقَالَتْ لَمْ يَكُنْ فَاحِشًا وَلَا مُتَفَحِّشًا
لاَ صَخَّابًا فِي الأَسْوَاقِ وَلاَ يَجْزِي بِالسَّيِّئَةَ وَلَكِنْ يَعْفُو
يَصْفَحُ (ترمذى ابواب الصلة)

ನಾನು ಹ.ಆಯಿಶಾ(ರ) ಅವರೊಡನೆ ಅಲ್ಲಾಹನ ಸಂದೇಶವಾಹಕರ(ಸ) ಚಾರಿತ್ರ್ಯದ ಗ್ಗೆ ವಿಚಾರಿಸಿದಾಗ ಅವರು ಹೀಗೆಂದರು: ''ಪ್ರವಾದಿವರ್ಯರು(ಸ) ಅಶ್ಲೀಲ ಮಾತುಗಳ ಡುವವರಾಗಿರಲಿಲ್ಲ, ಅವರು ಬಯ್ಯುವವರಾಗಿರಲಿಲ್ಲ, ಅವರು ಪೇಟೆಯಲ್ಲಿ ಅರಚಾಟ ಕಿಸುತ್ತಿರಲಿಲ್ಲ ಮತ್ತು ಅವರೆಂದೂ ಕೆಡುಕಿಗೆ ಕೆಡುಕಿನಿಂದ ಉತ್ತರಿಸುತ್ತಿರಲಿಲ್ಲ, ಬದಲಾಗಿ ರರು ಕ್ಷಮಿಸುತ್ತಿದ್ದರು ಮತ್ತು (ಇತರರ ತಪ್ಪುಗಳನ್ನು) ನಿರ್ಲಕ್ಷಿಸುತ್ತಿದ್ದರು.

[ಅಬೂ ಅಬ್ದುಲ್ಲಾ ಜದ್ಲೀ -ತಿರ್ಮಿದಿ]

ಅಶ್ಲೀಲ ಮಾತುಗಳನ್ನಾಡುವುದು ಮತ್ತು ಬಯ್ಯುವುದು ಇವು ಧರ್ಮ ಮತ್ತು ಿಕತೆ ಎರಡಕ್ಕೂ ವಿರುದ್ಧವಾಗಿದೆ. ಅವು ಪರಿಸರದ ಮೇಲೆ ದುಷ್ಪರಿಣಾಮ ಬೀರುತ್ತದೆ. ವಾದಿವರ್ಯರು(ಸ) ಲಜ್ಜೆ ಮತ್ತು ಶಿಷ್ಟತೆಯ ಸಾಕಾರಮೂರ್ತಿಯಾಗಿದ್ದರು. ಅವರ ಯಿಯಿಂದ ಉತ್ತಮ ಸವಿನುಡಿಗಳು ಮಾತ್ರ ಹೊರಡುತ್ತಿದ್ದುವು. ಯಾವ ಸ್ಥಿತಿಯಲ್ಲೂ ವರು ಕೆಟ್ಟ ಮಾತುಗಳನ್ನು ಆಡುತ್ತಿರಲಿಲ್ಲ, ಪೇಟೆಗಳಲ್ಲೂ ಅವರು ಸೌಮ್ಯವಾಗಿಯೇ ಾತನಾಡುತ್ತಿದ್ದರು. ಘನತೆ ಗಾಂಭೀರ್ಯಗಳನ್ನು ಎಂದೂ ಕೈ ಬಿಡುತ್ತಿರಲಿಲ್ಲ.

عَنْ أَنَسٍ (رض) قَالَ لَمْ يَكُنْ النَّبِىُّ صَلَّى اللهُ عَلَيْهِ وَسَلَّمَ سَبَّابًا وَلَا فَحَّاشًا وَ
لَعَّانًا كَانَ يَقُوْلُ عِنْدَ الْمَعْتَبَةِ مَالَهُ تَرِبَ جَبِينُهُ

(بخارى كتاب الادب

ಪ್ರವಾದಿವರ್ಯರ(ಸ) ಮಾತು ಬಯ್ಗುಳ, ಅಶ್ಲೀಲತೆ, ದೂಷಣೆ ಮುಂತಾದುವು ಳಿಂದೆಲ್ಲಾ ಪೂರ್ಣ ಮುಕ್ತವಾಗಿತ್ತು. ಯಾರ ಮೇಲಾದರೂ ಬಹಳ ಕೋಪ ಬಂದರೆ ತನಿಗೇನಾಗಿದೆ, ಆತನ ಹಣೆ ಮಣ್ಣಾಗಲಿ ಎನ್ನುತ್ತಿದ್ದರು. [ಹಝ್ರತ್ ಅನಸ್(ರ) -ಬುಖಾರಿ]

ಅಲ್ಲಾಹನ ಮೇಲೆ ಭರವಸೆ

عَنْ جَابِرِبْنِ عَبْدُ اللّٰهِ (رض) أَنَّهُ غَزَا مَعَ رَسُولِ اللَّهِ صَلَّى اللهُ عَلَيْهِ وَسَلَّمَ قِبَلَ
نَجْدِ فَلَمَّا قَفَلَ رَسُولِ صَلَّى اللهُ عَلَيْهِ وَسَلَّمَ قَفَلَ مَعَهُ فَاَدْرَكَتْهُمْ القَائِلَ
فِىْ وَادٍ كَثِيرِ الْوُضَاةِ فَنَزَلَ رَسُولُ اللّٰهِ صَلَّى اللهُ عَلَيْهِ وَسَلَّمَ وَتَفرَّقَ النَّاسُ
فِى الْعِضَاةِ يَتَظَلَّلُونَ بِا الشَّجَرِ ' وَنَزَلَ رَسُولُ اللّٰهِ صَلَّى اللهُ عَلَيْهِ وَسَلَّمَ
تَحْتَ السَمُرَةِ فَعَلَّقَ بِهَا سَيْفَهُ فَنِمْنَا نَوْمَةً ثُمَّ اِذَا رَسُولَ

ـهِ ﷺ يَدْعُونَ فَجِئْنَاهُ فَإِذَا عِنْدَهُ أَعْرَابِيٌّ جَالِسٌ فَقَالَ
ـُولُ اللهِ ﷺ أَنَّ هَذَا اخْتَرَطَ سَيْفِي وَأَنَا نَائِمٌ فَاسْتَيْقَظْتُ
ـهُوَ فِي يَدِهِ صَلْتًا فَقَالَ لِي مَنْ يَمْنَعُكَ مِنِّي قُلْتُ : اللهُ
ـا هُوَ ذَا جَالِسٌ ثُمَّ لَمْ يُعَاقِبْهُ رَسُولُ اللهِ ﷺ
(بخاری کتاب المغازی)

ಪ್ರವಾದಿವರ್ಯರು(ಸ) ಜಿಹಾದ್‌ಗಾಗಿ ನಜ್ದ್‌ನೆಡೆಗೆ ಪ್ರಯಾಣಿಸಿದಾಗ ನಾನೂ ಅ ಜೊತೆಗಿದ್ದೆ. ಅವರು ಅಲ್ಲಿಂದ ಮರಳುವಾಗಲೂ ನಾನು ಅವರ ಜತೆಗಿದ್ದೆ. ಪ್ರಯಾ ಮಧ್ಯೆ ನೆರಳೀಯುವ ಹಲವು ಮರಗಳು ಇದ್ದಂತಹ ಒಂದು ಬಯಲಿನಲ್ಲಿ ಅವ ವಿಶ್ರಾಂತಿಗಾಗಿ ತಂಗಿದರು. ಸಂಗಡಿಗರು ವಿವಿಧ ಮರಗಳ ನೆರಳನ್ನು ಅರಸುತ್ತಾ ಹೊರಟ ಪ್ರವಾದಿವರ್ಯರು(ಸ) ಒಂದು ಜಾಲಿ ಮರದಡಿಯಲ್ಲಿ ವಿಶ್ರಮಿಸತೊಡಗಿದರು. ಅವ ತಮ್ಮ ಒರೆಯಲ್ಲಿದ್ದ ಖಡ್ಗವನ್ನು ಮರದ ರೆಂಬೆಗೆ ನೇತುಹಾಕಿದ್ದರು. ನಾವು ಅವರಿಂದ ತು ದೂರ ಹೋಗಿ ನಿದ್ದೆ ಮಾಡಿದೆವು. ಸ್ವಲ್ಪ ಹೊತ್ತಿನ ಬಳಿಕ, ಪ್ರವಾದಿವರ್ಯರು(ಸ) ನಮ್ಮ ಕರೆಯುತ್ತಿರುವ ಧ್ವನಿ ಕೇಳಿ ನಾವು ಎಚ್ಚೆತ್ತು ಅವರ ಬಳಿಗೆ ಹೋದೆವು. ಅಲ್ಲಿ ಒಬ್ಬ ಹಳ್ಳಿಗ ಅವರೆದುರು ಕುಳಿತಿರುವುದನ್ನು ಕಂಡೆವು. ಪ್ರವಾದಿವರ್ಯರು(ಸ) ಹೇಳಿದರು: ''ನಾ ನಿದ್ದೆಯಲ್ಲಿದ್ದಾಗ ಈ ವ್ಯಕ್ತಿ ನನ್ನ ಖಡ್ಗವನ್ನು ಎಳೆದುಕೊಂಡನು. ನನಗೆ ತಕ್ಷಣ ಎಚ್ಚರವಾಯಿತ ನೋಡಿದಾಗ ಇವನ ಕೈಯಲ್ಲಿ ನನ್ನ ನಗ್ನ ಖಡ್ಗವಿತ್ತು.'' ನನ್ನಿಂದ ನಿಮ್ಮನ್ನು ಯಾ ರಕ್ಷಿಸಬಲ್ಲರು?' ಎಂದು ಕೇಳುತ್ತಿದ್ದನು. ನಾನು 'ಅಲ್ಲಾಹ್' ಎಂದು ಉತ್ತರಿಸಿದೆ. ಈಗ ಇವ ನನ್ನ ಮುಂದೆ ಕುಳಿತಿದ್ದಾನೆ. ಆ ಬಳಿಕ ಪ್ರವಾದಿವರ್ಯರು(ಸ) ಆ ವ್ಯಕ್ತಿಯ ವಿರುದ್ಧ ಪ್ರತೀಕಾ ತೀರಿಸಲಿಲ್ಲ. [ಹ. ಜಾಬಿರ್ ಬಿನ್ ಅಬ್ದುಲ್ಲಾ(ರ) -ಬುಖಾ

ಭರವಸೆ ಮತ್ತು ಸ್ಥೈರ್ಯದ ಅತ್ಯುನ್ನತ ಮಾದರಿಯಿದು. ಆ ಅಪಾಯಕಾರಿ ಸ್ಥಿತಿಯಲ ಪ್ರವಾದಿವರ್ಯರು(ಸ) ಕಿಂಚಿತ್ತೂ ಅಳುಕದೆ ಸಂಪೂರ್ಣ ವಿಶ್ವಾಸದಿಂದ ಅಲ್ಲಾಹನೇ ನನ್ನ ರಕ್ಷಿಸುವನು ಎಂದು ಉತ್ತರಿಸಿದರು. ನಿಜವಾಗಿಯೂ ಅಲ್ಲಾಹನು ಅವರನ್ನು ರಕ್ಷಿಸಿದನು. ಈ ಸಂದರ್ಭದಲ್ಲಿ ಪ್ರವಾದಿಯವರ(ಸ) ಚಾರಿತ್ರ್ಯದ ಇನ್ನೊಂದು ಅಂಶವೂ ಪ್ರತ್ಯಕ್ಷವಾಯಿತು ತಮ್ಮನ್ನು ಕೊಲ್ಲಲು ಬಂದ ವ್ಯಕ್ತಿಯ ಮೇಲೆ ಪೂರ್ಣ ನಿಯಂತ್ರಣ ಸಾಧಿಸಿದ ಬಳಿಕವ ಪ್ರವಾದಿವರ್ಯರು(ಸ) ಆತನ ವಿರುದ್ಧ ಯಾವುದೇ ಪ್ರತೀಕಾರ ಕ್ರಮವನ್ನು ಕೈಗೊಳ್ಳಲಿಲ್ಲ. ಅವ ಚಾರಿತ್ರ್ಯದ ಈ ಶ್ರೇಷ್ಠತೆಯೇ ಸಹಸ್ರಾರು ಚಾರಿತ್ರ್ಯವಂತರು ಜನ್ಮ ತಾಳುವುದಕ್ಕೆ ಕಾರಣವಾಯಿತು

ಪ್ರವಾದಿವರ್ಯರ(ಸ) ಸರಳ ಬದುಕು

عَنْ مَالِكِ بِنِ دِينَارٍ (رض) :مَا شَبَعَ رَسُولُ اللّٰهِ ﷺ خُبْزٍ قَطُّ وَلاَ لَحْمٍ اَلَّا عَلَى ضَفَفٍ

(شمائل الترمذ

ಪ್ರವಾದಿವರ್ಯರು(ಸ) ರೊಟ್ಟಿಯನ್ನಾಗಲೀ ಮಾಂಸವನ್ನಾಗಲೀ ಹೊಟ್ಟೆ ತುಂಬುವಷ್ಟು ...ತ್ತಿರಲಿಲ್ಲ; ಅವರು ಜನರ ಜೊತೆ ಭೋಜನ ಮಾಡುತ್ತಿದ್ದ ಸಂದರ್ಭಗಳ ಹೊರತು.

[ಹ. ಮಾಲಿಕ್ ಬಿನ್ ದೀನಾರ್(ರ) -ತಿರ್ಮಿದಿ]

عَنْ ابْنِ عَبَّاسٍ (رض) قَالَ كَانَ رَسُولُ اللّٰهِ ﷺ بَيْتُ الَّيَا الْمُتَتَابِعَةَ طَاوِيًا هُوَ وَاَهْلُهُ لا يَجِدُونَ عَشَاءً وَكَانَ اَكْ خُبْزِ هِمْ خُبْزَ الشَّعِيْرِ (شمائل الترمذى)

ಪ್ರವಾದಿ ಮುಹಮ್ಮದ್(ಸ) ನಿರಂತರ ಹಲವು ಇರುಳುಗಳನ್ನು ಹಸಿವಿನ ಸ್ಥಿತಿಯಲ್ಲೇ ...ಯುತ್ತಿದ್ದರು. ಅವರು ಸಾಮಾನ್ಯವಾಗಿ ಜೋಳದ ರೊಟ್ಟಿ ತಿನ್ನುತ್ತಿದ್ದರು. ಆದರೂ ಪ್ರವಾದಿ(ಸ) ...ವರ ಮನೆಯವರಿಗೆ ರಾತ್ರಿಯ ಭೋಜನ ಲಭ್ಯವಾಗುತ್ತಿರಲಿಲ್ಲ.

[ಹ. ಇಬ್ನು ಅಬ್ಬಾಸ್(ರ) -ತಿರ್ಮಿದಿ]

عَنْ اَبِى موسَى الأشْعَرِى (رض) قَالَ : أَخْرَجَتْ لَنَا عَائِشَةُ (رض كِسَاءً وَأَزَارًا غَلِيْظًا . قَالَتْ قُبِضَ رَسُولُ اللّٰهِ ﷺ فِ هَذَيْنِ (بخارى)

ಹಝ್ರತ್ ಆಯಿಶಾ(ರ) ಅವರು ನಮಗೆ ಒಂದು ಹೊದಿಕೆ ಮತ್ತು ಒಂದು ದೊರಗಾದ ...ಂಗಿಯನ್ನು ತೋರಿಸಿ "ಪ್ರವಾದಿವರ್ಯರು(ಸ) ಈ ಎರಡು ವಸ್ತ್ರಗಳಲ್ಲಿ ಕೊನೆಯುಸಿರೆಳೆ...ರು" ಎಂದು ಹೇಳಿದರು. [ಹ. ಅಬೂ ಮೂಸಾ ಅಶ್‌ಅರಿ(ರ) -ಬುಖಾರಿ]

عَنْ عَائِشَةَ (رض) قَالَتْ اَنَّمَا كَانَ فِرَاشُ رَسُولِ ال

ﷺالَّذِىْ يَنَامُ عَلَيْهِ مِنْ اَدَمٍ حَشْوُهُ لِيْفٌ
(شمائل الترمذی , بخاری)

ಪ್ರವಾದಿ(ಸ) ಮಲಗಲು ಚರ್ಮದ ಹಾಸಿಗೆಯನ್ನೂ ಬಳಸುತ್ತಿದ್ದರು. ಅದರೊ ಖರ್ಜೂರದ ಎಲೆಗಳನ್ನು ತುಂಬಲಾಗಿತ್ತು. [ಹ. ಆಯಿಶಾ(ರ) -ತಿರ್ಮಿದಿ, ಬುಖ

ರಾಜನಂತೆ ಬದುಕುವ ಎಲ್ಲ ಅವಕಾಶಗಳಿದ್ದರೂ ಒಬ್ಬ ಫಕೀರನಂತೆ ಬದುಕಿದ ಇತಿಹಾ ಅತ್ಯಂತ ಮಹಾನ್ ವ್ಯಕ್ತಿಯ ಬದುಕಿನ ಒಂದು ಪುಟ್ಟ ದೃಶ್ಯವಿದು. ಆಹಾರ, ವಸ್ತ್ರ ವ ಹೀಗೆ ಎಲ್ಲ ವಿಷಯಗಳಲ್ಲೂ ಪ್ರವಾದಿವರ್ಯರು(ಸ) ಸರಳತೆ ಮತ್ತು ಅನೌಪಚಾರಿಕತೆಯ ಇಷ್ಟಪಡುತ್ತಿದ್ದರು. ತಮಗೆ ಸಿಕ್ಕಿದುದರಲ್ಲೇ ತೃಪ್ತಿಪಡುತ್ತಿದ್ದರು. ಸಿಕ್ಕಿದುದರಲ್ಲೂ ಬಹಳಷ್ಟ ಉದಾರವಾಗಿ ಇತರರಿಗೆ ಕೊಟ್ಟು ಬಿಡುತ್ತಿದ್ದರು. ಆದ್ದರಿಂದಲೇ ಅವರ ಬಳಿ ಎಂದೂ ಸಂಪ ಸಂಗ್ರಹವಾಗಲಿಲ್ಲ. ಅವರ ನಿತ್ಯದ ಆಹಾರದಲ್ಲಿ ಜೋಳದ ರೊಟ್ಟಿ ಮತ್ತು ಖರ್ಜೂರದಂ ತೀರಾ ಸಾಮಾನ್ಯ ವಸ್ತುಗಳು ಮಾತ್ರ ಇರುತ್ತಿದ್ದುವು. ಆದರೆ ಕೆಲವೊಮ್ಮೆ ಇವು ಕೂ ಲಭ್ಯವಾಗುತ್ತಿರಲಿಲ್ಲ. ರಾತ್ರಿ ಹಸಿದ ಹೊಟ್ಟೆಯಲ್ಲೇ ಮಲಗಬೇಕಾಗುತ್ತಿತ್ತು. ಅವರ ಉಡ ತೊಡುಗೆಗಳು ಕೂಡಾ ತೀರಾ ಸರಳವಾಗಿದ್ದುವು. ಆ ಕಾಲದ ಪದ್ಧತಿಯಂತೆ ಸಾಮಾನ್ಯವ ಒಂದು ಲುಂಗಿ ಮತ್ತು ಒಂದು ಹೊದಿಕೆಯನ್ನು ಮಾತ್ರ ಧರಿಸುತ್ತಿದ್ದರು. ಹಾಗೆಯೇ ಅ ಹಾಸಿಗೆ ಕೂಡಾ ಖರ್ಜೂರದ ಎಲೆಗಳಿಂದ ನಿರ್ಮಿತವಾಗಿತ್ತು. ಪ್ರವಾದಿವರ್ಯರು(ಸ) ಲೋಕದಿಂದ ತೆರಳುವಾಗ ಯಾವುದೇ ಧನವನ್ನು ಸಂಗ್ರಹಿಸಿ ಬಿಟ್ಟು ಹೋಗಲಿಲ್ಲ. ಅವರ ರ ಕವಚ ಕೂಡಾ ಒಬ್ಬ ಯಹೂದಿಯ ಬಳಿ ಒತ್ತೆ ಇಡಲ್ಪಟ್ಟಿತ್ತು. ಈ ಲೋಕದಲ್ಲಿದ್ದು ಪರಲೋ ಪ್ರಾಶಸ್ತ್ಯ ಕೊಡುವ ವಿಷಯದಲ್ಲಿ ಪ್ರವಾದಿವರ್ಯರು(ಸ) ಅತಿ ಶ್ರೇಷ್ಠ ಮಾದರಿಯಾಗಿದ್ದ ಸರಳತೆ, ಅನೌಪಚಾರಿಕತೆ ಮತ್ತು ನಿರಪೇಕ್ಷತೆಗೆ ಎಷ್ಟೊಂದು ಉತ್ತಮ ಆದರ್ಶವಾಗಿದ್ದರವರು

ಮಿತಾಹಾರ

نْ عائشَةَ قَالَتْ (رض) لَقَدْ مَاتَ رَسُولَ اللّٰهِ ﷺ وَمَا شَبِعَ مِنْ
ـبْزٍ وَزَيْتٍ فِى يَوْمٍ وَاحِدٍ مَرَّتَيْنِ (مسلم-کتاب الزهد)

ಪ್ರವಾದಿವರ್ಯರು(ಸ) ಎಂತಹ ಸ್ಥಿತಿಯಲ್ಲಿ ಈ ಲೋಕದಿಂದ ತೆರಳಿದರೆಂದ ಅವರೆಂದೂ ಒಂದು ದಿನದಲ್ಲಿ ಎರಡು ಬಾರಿ ಹೊಟ್ಟೆ ತುಂಬುವಷ್ಟು ರೊಟ್ಟಿಯನ್ನಾಗಲೀ ಕೊಬ್ಬಿ ಆಹಾರ ಪದಾರ್ಥಗಳನ್ನಾಗಲೀ ತಿಂದಿರಲಿಲ್ಲ. [ಹಝ್ರತ್ ಆಯಿಶಾ(ರ) -ಮುಸ್ಲಿಮ

عَنْ عائشَةَ (رض) قَالَت أَنْ كُنَّا آلِ محَمَّدٍ ﷺ لَنَمْكُثُ شَهْ
مَا نَسْتَوْقِدُ بِنَارٍ . أَنْ هُوَ اِلَّا التَّمْرُ وَالْمَاءُ
(مسلم كتاب الزهد

ಪ್ರವಾದಿ ಮುಹಮ್ಮದ್‌ರ(ಸ) ಮನೆಯವರಾದ ನಾವು ಕೆಲವೊಮ್ಮೆ ತಿಂಗಳುಗಟ್ಟಲೆ ಂನೆಯಲ್ಲಿ ಒಲೆ ಉರಿಯದಂತಹ ಸ್ಥಿತಿಯಲ್ಲಿ ಕಳೆಯಬೇಕಾಗುತ್ತಿತ್ತು. ನಾವು ಕೇವಲ ಖರ್ಜೂರ ುತ್ತು ನೀರನ್ನು ಸೇವಿಸಿ ಬದುಕುತ್ತಿದ್ದೆವು. [ಹಝ್ರತ್ ಆಯಿಶಾ(ರ) -ಮುಸ್ಲಿಮ್]

ಹುಳುಕು ಹುಡುಕುವುದು

عَنْ أَبِى هُرَيْرَةَ (رض) قَالَ مَا عَابَ النَّبِيُّ ﷺ طَعَامًا قَطُّ اِ
اشْتَهَاهُ أَكَلَهُ وَاِلَّا تَرَكَهُ (بخارِى كتاب احادث الانبياء

ಪ್ರವಾದಿವರ್ಯರು(ಸ) ಎಂದೂ ಆಹಾರದಲ್ಲಿ ಹುಳುಕು ಹುಡುಕುತ್ತಿರಲಿಲ್ಲ. ಇಷ್ಟವಿದ್ದರೆ ೀವಿಸುತ್ತಿದ್ದರು. ಇಲ್ಲದಿದ್ದರೆ ಹಾಗೆಯೇ ಬಿಡುತ್ತಿದ್ದರು. ಹ. ಅಬೂ ಹುರೈರಾ(ರ) ಬುಖಾರಿ

ಆಹಾರದಲ್ಲಿ ದೋಷ ಹುಡುಕುವುದರಿಂದ ದೇವಾನುಗ್ರಹಕ್ಕೆ ಕೃತಘ್ನತೆ ೋರಿದಂತಾಗುತ್ತದೆ. ಆಹಾರವನ್ನು ನೀಡಿದ ಮನೆಯವರಿಗೂ ಇದು ಅಪ್ರಿಯವೆನಿಸುತ್ತದೆ. ಿದ್ದರಿಂದ ಒಂದು ವಸ್ತು ಇಷ್ಟವಾಗದಿದ್ದರೆ ಅದರ ದೋಷಗಳನ್ನು ವರ್ಣಿಸುವ ಬದಲು ಅದನ್ನು ಾಗೆಯೇ ಬಿಟ್ಟು ಬಿಡಬೇಕೆಂಬುದು ಆಹಾರ ಸೇವನೆಯ ಶಿಷ್ಟಾಚಾರಗಳಲ್ಲೊಂದಾಗಿದೆ. ್ರವಾದಿವರ್ಯರು(ಸ) ಇಸ್ಲಾಮೀ ಕ್ರಮದಂತೆ ಸಂಪೂರ್ಣ ಜೀವನವನ್ನು ಯಾವ ರೀತಿ ಳೆಯಬೇಕೆಂಬುದನ್ನು ಪ್ರಾಯೋಗಿಕವಾಗಿ ಕಲಿಸಿಕೊಟ್ಟಿರುವರು. ಎಷ್ಟೆಂದರೆ, ಆಹಾರ ೀವನೆಯ ಶಿಷ್ಟಾಚಾರಗಳನ್ನು ಅವರು ವಿವರವಾಗಿ ಕಲಿಸಿರುವರು.

ಇಹಲೋಕದ ವಾಸ್ತವಿಕತೆ

عَنْ عَبْدُ اللّٰهِ بن مَسْعُودٍ (رض) قَالَ نَامَ رَسُولُ اللّٰهِ ﷺ عَلَى حَصِيرٍ
فَقَامَ وَ قَدْ أَثَّرَ فِي جَنْبِهِ , فَقُلْنَا يَا رَسُولَ اللّٰهِ لَوِ اتَّخَذْنَا لَكَ
وِطَاءً فَقَالَ مَالِيَ وَلِلدُّنْيَا, مَا أَنَا فِيْ الدُّنْيَا اِلَّا كَرَاكِبٍ اِسْتَظَلَّ

ـحْتَ شَجَرَةٍ , ثُمَّ رَاحَ وَتَرَكَهَا (ترمذی ابواب الزهد)

ಒಮ್ಮೆ ಪ್ರವಾದಿ ಮುಹಮ್ಮದ್(ಸ) ಒಂದು ಚಾಪೆಯಲ್ಲಿ ಮಲಗಿದ್ದರು. ಎದ್ದಾ ಅವರ ಶರೀರದಲ್ಲಿ ಚಾಪೆಯ ಗುರುತುಗಳಿದ್ದುವು. ಇದನ್ನು ಕಂಡ ನಾವು, 'ಅಲ್ಲಾಹ ಸಂದೇಶವಾಹಕರೇ, ನಾವು ತಮಗಾಗಿ ಮೃದುವಾದ ಹಾಸಿಗೆಯನ್ನು ತಂದೊದಗಿಸಿದರೆ ಹೇಗೆ? ಎಂದು ಕೇಳಿದೆವು. ಆಗ ಅವರು ಹೇಳಿದರು: ''ಈ ಲೋಕದೊಂದಿಗೆ ನನಗೇನು ಸಂಬಂಧ? ನನಗೆ ಲೋಕದ ಜೊತೆಗೆ ಇರುವುದನ್ನು ಸಂಬಂಧ ಒಬ್ಬ ಪ್ರಯಾಣಿಕನು ಯಾವುದಾದರೂ ಮರದ ನೆರಳಲ್ಲಿ (ಸ್ವಲ್ಪ ಹೊತ್ತು) ತಂಗಿ ಆ ಬಳಿಕ ಅದನ್ನು ಬಿಟ್ಟು ಹೊರಟು ಹೋಗುವಷ್ಟು ಮಾತ್ರ'' [ಹ. ಅಬ್ದುಲ್ಲಾ ಬಿನ್ ಮಸ್‌ಊದ್(ರ) -ತಿರ್ಮಿದಿ]

ಮನುಷ್ಯನು ಆರಾಮಪ್ರಿಯನಾಗಿ ಬಿಟ್ಟಾಗ ಲೋಕವು ಅವನ ಮೇಲೆ ಸವಾರಿ ಮಾಡತೊಡಗುತ್ತದೆ. ಆ ಬಳಿಕ ಅವನು ತನ್ನ ಹೊಣೆಗಾರಿಕೆಗಳನ್ನು ನಿರ್ವಹಿಸುವ ವಿಷಯದಲ್ಲಿ ಕರ್ತವ್ಯ ಪ್ರಜ್ಞೆಯನ್ನು ತೋರಿಸುವ ಬದಲು ಸೋಮಾರಿತನವನ್ನು ಪ್ರದರ್ಶಿಸಲಾರಂಭಿಸುತ್ತಾನೆ. ಪ್ರವಾದಿ ಮುಹಮ್ಮದ್(ಸ) ಸ್ವಾಭಾವಿಕವಾಗಿಯೇ ಶ್ರಮಜೀವಿಯಾಗಿದ್ದರು. ಕಠಿಣ ದುಡಿಮೆಯನ್ನು ಇಷ್ಟಪಡುವವರಾಗಿದ್ದರು. ಅವರ ಜೀವನ ಒಬ್ಬ ಯೋಧನ ಜೀವನವಾಗಿತ್ತು. ಬದುಕಿನ ಸೌಲಭ್ಯಗಳ ವಿಷಯದಲ್ಲಿ ಅವರು, ಸಿಕ್ಕಿದುದರಲ್ಲಿ ತೃಪ್ತಿಪಡುವ ನಿಲುವಿನವರಾಗಿದ್ದರು. ಯಾವುದೇ ಬಗೆಯ ಔಪಚಾರಿಕತೆಯನ್ನು ಅವರು ಮೆಚ್ಚುತ್ತಿರಲಿಲ್ಲ. ಈ ಲೋಕದಲ್ಲಿ ಮನುಷ್ಯನ ಜೀವನ ಹೇಗಿರಬೇಕೆಂಬ ಬಗ್ಗೆ ಅವರು ನೀಡಿರುವ ಉದಾಹರಣೆಯು ಒಂದು ದೊಡ್ಡ ವಾಸ್ತವಿಕತೆಯನ್ನು ವಿವರಿಸುತ್ತದೆ. ಈ ವಾಸ್ತವಿಕತೆಯು ಒಬ್ಬ ಮನುಷ್ಯನಿಗೆ ಸರಿಯಾಗಿ ಮನವರಿಕೆಯಾಗಿ ಬಿಟ್ಟರೆ ಅವನೆಂದೂ ಈ ಲೋಕದ ಸುಖಭೋಗ ಮತ್ತು ಸೌಲಭ್ಯಗಳ ಹಿಂದೆ ಅಲೆಯಲಾರನು. ಸಿಕ್ಕಿದುದರಲ್ಲಿ ಸಂತೃಪ್ತನಾಗಿ, ತನ್ನ ಕರ್ತವ್ಯಗಳಿಗೆ ನಿಷ್ಠನಾಗಿ ಬಾಳುವನು.

ಮನೆಯವರ ಸೇವೆ

عَنِ الْأَسْوَدِ (رض) قَالَ سَأَلْتُ عَائِشَةَ مَاكَانَ النَّبِيُّ ﷺ يَصْنَعُ فِي أَهْلِهِ ؟ قَالَتْ كَانَ فِي مِهْنَةِ أَهْلِهِ فَاذَا حَضَرَتِ الصَّلٰوةُ قَامَ اِلَى الصَّلٰوةِ (بخاری-کتاب الادب)

ನಾನು ಹ. ಆಯಿಶಾರೊಡನೆ(ರ) ''ಪ್ರವಾದಿವರ್ಯರು(ಸ) ಮನೆಯಲ್ಲಿರುವಾಗ ಏನು ಮಾಡುತ್ತಿದ್ದರು?'' ಎಂದು ಪ್ರಶ್ನಿಸಿದೆ. ಅವರು ಹೇಳಿದರು: ''ಅವರು ಮನೆಯವರ ಸೇವೆಯಲ್ಲಿ ನಿರತರಾಗಿರುತ್ತಿದ್ದರು ಮತ್ತು ನಮಾಝ್‌ನ ಸಮಯವಾದಾಗ ನಮಾಝ್‌ಗಾಗಿ ಎದ್ದು ಹೋಗುತ್ತಿದ್ದರು.'' [ಹ. ಅಸ್ವದ್ -ಬುಖಾರಿ]

ಲೋಕದಲ್ಲಿ ಪ್ರವಾದಿ ಮುಹಮ್ಮದ್‌ರಿಗಿಂತ(ಸ) ಉನ್ನತ ಸ್ಥಾನಮಾನದ ವ್ಯಕ್ತಿ ಬೇರೆ ಯಾರಿದ್ದಾರೆ? ಇಂತಹ ಉನ್ನತ ಸ್ಥಾನದಲ್ಲಿರುವ ವ್ಯಕ್ತಿ ಕೂಡಾ ತಮ್ಮ ಮನೆಯವರ ಕೆಲಸ ಕಾರ್ಯಗಳಲ್ಲಿ ನೆರವಾಗುವುದನ್ನು ಮತ್ತು ತಮ್ಮ ಮನೆಯವರಿಗೆ ಸೇವೆ ಸಲ್ಲಿಸುವುದನ್ನು ಕೀಳಾದ ಕೆಲಸವೆಂದು ಪರಿಗಣಿಸಿರಲಿಲ್ಲ. ನಿಜವಾಗಿ ಸೇವೆಯು ಮನುಷ್ಯನ ಸ್ಥಾನಮಾನವನ್ನು ಹೆಚ್ಚಿಸುತ್ತದೆಯೇ ಹೊರತು ಕಡಿಮೆಗೊಳಿಸುವುದಿಲ್ಲ. ಅಹಂಕಾರಿಗಳು ಮಾತ್ರ ಸೇವೆಯನ್ನು ತಮಗೆ ಕುಂದೆಂದು ಪರಿಗಣಿಸುತ್ತಾರೆ. ವಿನಯಶೀಲ ಮನುಷ್ಯನು ತನ್ನ ಜೊತೆಗಾರರಿಗೆ ಸೇವೆ ಸಲ್ಲಿಸುವ ಮೂಲಕ ಅವರ ಮನಸ್ಸನ್ನು ಗೆಲ್ಲುತ್ತಾನೆ. ಅವರ ಪ್ರೀತಿ ಗೌರವಗಳಿಗೆ ಪಾತ್ರನಾಗುತ್ತಾನೆ. ತಮ್ಮ ಮನೆಯವರಿಗೆ ನೆರವಾಗುವ ಮತ್ತು ಅವರ ಸೇವೆ ಮಾಡುವ ವಿಷಯದಲ್ಲಿ ಪ್ರವಾದಿ ಮುಹಮ್ಮದ್‌ರ(ಸ) ವರ್ತನೆಯು ಎಲ್ಲರ ಪಾಲಿಗೆ ಅತ್ಯುತ್ತಮ ಆದರ್ಶವಾಗಿದೆ. ಇಲ್ಲಿ ಇನ್ನೊಂದು ಗಮನಾರ್ಹ ಅಂಶವೇನೆಂದರೆ, ಮನೆಯ ಕೆಲಸ ಕಾರ್ಯಗಳು ಪ್ರವಾದಿವರ್ಯರಿಗೆ(ಸ) ನಮಾಝ್‌ನ ಹಾದಿಯಲ್ಲಿ ಅಡ್ಡ ಬರುತ್ತಿರಲಿಲ್ಲ. ಅವರು ಕೆಲಸ ಕಾರ್ಯಗಳಲ್ಲಿ ನಿರತವಾಗಿರುವಾಗಲೇ ನಮಾಝ್‌ನ ಸಮಯ ಆಗಿ ಬಿಟ್ಟರೆ ನಮಾಝ್‌ಗೆ ಹೊರಟು ಬಿಡುತ್ತಿದ್ದರು. ಏಕೆಂದರೆ ದೇವಾರಾಧನೆಯು ಉಳಿದೆಲ್ಲ ಸೇವಾ ಕಾರ್ಯಗಳಿಗಿಂತ ಮಹತ್ವವುಳ್ಳ ಸತ್ಕಾರ್ಯವಾಗಿದೆ.

ಜವಾಬ್ದಾರಿಕೆಯ ಪ್ರಜ್ಞೆ

عَنْ عَبْدُ اللّٰهِ ابْنِ مَسْعُوْدٍ (رض) قَالَ قَالَ لِی رَسُوْلُ اللّٰهِ ﷺ اقْرَ
عَلَیَّ فَقُلْتُ یَارَسُوْلَ اللّٰهِ أَقْرَأُ عَلَیْکَ وَعَلَیْکَ اُنْزِلَ قَا
انِّی أُحِبُّ أَنْ أَسْمَعَهُ مِنْ غَیْرِیْ فَقَرَأْتُ السُّورَةَ النِّسَا
حَتّٰی بَلَغْتُ وَجِئْنَا بِکَ عَلٰی هٰؤُلَاءِ شَهِیْدًا قَالَ فَرَأَیْتُ
عَیْنَیِ النَّبِیِّ ﷺ تَهْمِلَانِ (شمائل الترمذی)

ಪ್ರವಾದಿವರ್ಯರು(ಸ) ನನ್ನೊಡನೆ 'ನನಗೆ ಕುರ್‌ಆನ್ ಓದಿ ಕೇಳಿಸಿರಿ'' ಎಂದು ಹೇಳಿದರು. ''ಅಲ್ಲಾಹನ ಸಂದೇಶವಾಹಕರೇ(ಸ)! ಕುರ್‌ಆನ್ ಸ್ವತಃ ತಮ್ಮ ಮೇಲೆಯೇ ಅವತೀರ್ಣಗೊಂಡಿರುವಾಗ ಅದನ್ನು ತಮಗೆ ನಾನು ಕೇಳಿಸಬೇಕೆ?'' ಎಂದು ನಾನು ಪ್ರಶ್ನಿಸಿದೆ. ಅದಕ್ಕವರು ''ನನಗೆ ಇತರರಿಂದ ಕುರ್‌ಆನನ್ನು ಕೇಳುವುದು ಇಷ್ಟವಾಗುತ್ತದೆ'' ಎಂದುತ್ತರಿಸಿದರು. ಇದನ್ನು ಕೇಳಿ ನಾನು ಸೂರಃ ಅನ್ನಿಸಾವನ್ನು ಪಠಿಸಲಾರಂಭಿಸಿದೆ.

''(ಸಂದೇಶವಾಹಕರೇ) ಇವರ ಮೇಲೆ ನಾವು ನಿಮ್ಮನ್ನು ಸಾಕ್ಷಿಯ ನಿಲ್ಲಿಸುವಾಗ..........'' (ಸೂಕ್ತ 40) ಎಂಬ ವಾಕ್ಯವನ್ನು ಓದುವಾಗ ಪ್ರವಾದಿವರ್ಯರ ಮುಖ ನೋಡಿದೆ. ಅವರ ಕಣ್ಣುಗಳಿಂದ ಅಶ್ರುಧಾರೆ ಹರಿಯುತ್ತಿತ್ತು.

[ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್(ರ) -ತಿರ್ಮಿ

ಹ. ಅಬ್ದುಲ್ಲಾ ಬಿನ್ ಮಸ್‌ವೂದ್(ರ) ಪವಿತ್ರ ಕುರ್‌ಆನಿನ 4ನೇ ಅಧ್ಯಾಯವ ಓದಲಾರಂಭಿಸಿದರು. 'ನಾವು ಪ್ರತಿಯೊಂದು ಸಮುದಾಯದಿಂದ ಒಬ್ಬೊಬ್ಬ ಸಾಕ್ಷಿಯ ತರುವಾಗಲೂ ಇವರ ಮೇಲೆ ನಿಮ್ಮನ್ನು [ಮುಹಮ್ಮದ್‌ರನ್ನು(ಸ)] ಸಾಕ್ಷಿಯಾಗಿ ನಿಲ್ಲಿಸುವಾಗ ಇವರೇನು ಮಾಡುವರೆಂದು ಯೋಚಿಸಿರಿ' ಎಂಬ ವಾಕ್ಯವನ್ನೋದುವಾಗ ಪ್ರವಾದಿಯ ಮುಖ ನೋಡಿದರು.

ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್(ರ) ಕುರ್‌ಆನ್ ಪಠಿಸುತ್ತಾ ಈ ವಾಕ್ಯವ ತಲಪಿದಾಗ, ಅದರಿಂದ ತೀವ್ರವಾಗಿ ಪ್ರಭಾವಿತರಾಗಿದ್ದ ಪ್ರವಾದಿವರ್ಯರ(ಸ) ಕಣ್ಣುಗ ಅಶ್ರುತಪ್ತವಾದುವು. ಏಕೆಂದರೆ ಈ ವಾಕ್ಯದಲ್ಲಿ ಒಂದೆಡೆ ಪ್ರವಾದಿವರ್ಯರ(ಸ) ಶ್ರೇಷ್ಠ ಸ್ಥಾ ಸೂಚನೆಯಿದ್ದರೆ ಇನ್ನೊಂದೆಡೆ ಅವರ ಮೇಲಿರುವ ಒಂದು ಘನವಾದ ಜವಾಬ್ದಾರಿಕೆಯ ಅದು ನೆನಪಿಸುತ್ತದೆ. ಪುನರುತ್ಥಾನ ದಿನ ಅಲ್ಲಾಹನ ಪ್ರತಿಯೊಬ್ಬ ಸಂದೇಶವಾಹಕ ಅಲ್ಲಾಹನ ನ್ಯಾಯಾಲಯದಲ್ಲಿ ನಿಂತು ತಾವು ದೇವ ಸಂದೇಶವನ್ನು ಸ್ವಲ್ಪವೂ ಹೆಚ್ಚು ಕಡಿ ಮಾಡದೆ ತಮ್ಮನ್ನು ಕಳುಹಿಸಲ್ಪಟ್ಟಂತಹ ಜನ ಸಮುದಾಯಕ್ಕೆ ತಲುಪಿಸಿದ್ದೇವೆಂದು ಸಾ ಹೇಳಬೇಕಾಗುವುದು. ಈ ರೀತಿಯ ಸಾಕ್ಷ್ಯವನ್ನು ಸ್ವತಃ ಪ್ರವಾದಿವರ್ಯರು(ಸ) ಕೂ ನೀಡಬೇಕಾಗುವುದು. ಇನ್ನು ಪ್ರವಾದಿ ಮುಹಮ್ಮದ್‌ರಂತೂ(ಸ) ಯಾವುದಾದರೂ ಒಂದೆರ ಸಮುದಾಯಗಳಿಗೆ ಮಾತ್ರವಲ್ಲ ಸಂಪೂರ್ಣ ಮಾನವಕುಲಕ್ಕೆ ಅಲ್ಲಾಹನ ಸಂದೇಶವಾಹಕರ ಕಳುಹಿಸಲ್ಪಟ್ಟವರಾಗಿದ್ದಾರೆ. ಅಲ್ಲದೆ ಅವರು ದೇವನ ಅಂತಿಮ ಸಂದೇಶವಾಹಕ ಆಗಿದ್ದಾರೆ. ಆದ್ದರಿಂದ ಅಂತ್ಯಕಾಲದವರೆಗೆ ಹುಟ್ಟುವ ಎಲ್ಲ ಮಾನವರ ಪಾಲಿಗೂ ಅವ ಸಂದೇಶವಾಹಕರು.

ಪ್ರವಾದಿ(ಸ) ಬಿಟ್ಟ ಲೌಕಿಕ ಸಂಪತ್ತು

نْ عَائِشَةَ(رض) قَالَتْ تُوُفِّيَ النَّبِيُّ ﷺ وَدِرْعُهُ مَرْهُونَةٌ عِنْدَ
هُودِ بِثَلَاثِينَ يَعْنِي صَاعًا مِنْ شَعِيرٍ (بخارى كتاب المغازى)

ಪ್ರವಾದಿ ಮುಹಮ್ಮದ್(ಸ) ಅವರ ರಕ್ಷಾ ಕವಚವು 30 'ಸಾಅ್' (60 ಬೊಗಸೆ) ಜೋ ಕ್ಕಾಗಿ ಒಬ್ಬ ಯಹೂದಿಯ ಬಳಿ ಒತ್ತೆ ಇಡಲ್ಪಟ್ಟ ಸ್ಥಿತಿಯಲ್ಲಿ ಅವರು ನಿಧನರಾದರು.

[ಹಝ್ರತ್ ಆಯಿಶಾ(ರ) -ಬುಖಾ

عَنْ عَائِشَةَ(رض)قَالَتْ تُوُفِّيَ الرَّسُولُ اللّٰهُ ﷺ وَمَا فِي رَفِّي
شَيْءٍ يَأْكُلُهُ ذُو كَبِدٍ اَلَّا شَطْرُ شَعِيرٍ فِيْ رَفٍّ لِيْ فَأَكَلْ
مِنْهُ حَتَّى طَالَ عَلَيَّ فَكِلْتُهُ فَفَنِيَ (مسلم كتاب الزهد

ಪ್ರವಾದಿ ಮುಹಮ್ಮದ್‌ರವರು(ಸ) ನಿಧನರಾದಾಗ ನನ್ನ ಕಪಾಟಿನಲ್ಲಿ ತೆಗೆದಿರಿಸಿದ್ದ ಸ್ವಲ್ಪ ೀಳವನ್ನು ಬಿಟ್ಟರೆ ಜೀವಿಗಳು ತಿನ್ನಬಹುದಾದ ಯಾವ ವಸ್ತುವೂ ನಮ್ಮಲ್ಲಿರಲಿಲ್ಲ. ನಾನು ಳ ದಿನ ಆ ಜೋಳವನ್ನು ತಿನ್ನುತ್ತಿದ್ದೆ. ಕೊನೆಗೊಮ್ಮೆ ನಾನು ಅದನ್ನು ಅಳೆದೆ. ಆ ಬಳಿಕ ಅದೂ ಗಿದು ಹೋಯಿತು. [ಹಝ್ರತ್ ಆಯಿಶಾ(ರ) -ಮುಸ್ಲಿಮ್]

ಪ್ರವಾದಿವರ್ಯರು(ಸ) ನಿಧನರಾಗುವ ವೇಳೆಗೆ ಸಂಪೂರ್ಣ ಅರೇಬಿಯಾ ಇಸ್ಲಾಮೀ ಪತ್ಯಕ್ಕೆ ಅಧೀನವಾಗಿತ್ತು. ಪ್ರವಾದಿವರ್ಯರ(ಸ) ಅಸಂಖ್ಯಾತ ಸಂಗಡಿಗರು ಅವರಿಗಾಗಿ ತಮ್ಮ ರ್ವಸ್ವವನ್ನೂ ಸಮರ್ಪಿಸಿ ಬಿಡಲು ಉತ್ಸುಕರಾಗಿದ್ದರು. ಆದರೂ ಪ್ರವಾದಿ ಮುಹಮ್ಮದ್(ಸ) ಷ್ಟೊಂದು ಸ್ವಾಭಿಮಾನಿ, ಎಷ್ಟೊಂದು ಉದಾರಿ ಹಾಗೂ ಎಷ್ಟು ಸರಳರಾಗಿದ್ದರೆಂದರೆ ಅವರು ಮ್ಮ ವೈಯಕ್ತಿಕ ಬಳಕೆಗಾಗಿ ಚಿಕ್ಕಾಸನ್ನೂ ಸಂಗ್ರಹಿಸಿಡಲಿಲ್ಲ. ಅವರು ನಿಧನರಾದ ದಿನ ಅವರ ನೆಯಲ್ಲಿ ಸ್ವಲ್ಪ ಜೋಳದ ಹೊರತು ಬೇರೇನೂ ಇರಲಿಲ್ಲ. ಅವರ ರಕ್ಷಾ ಕವಚ ಕೂಡ ಬೇರೆ ಒತ್ತೆಯಿಡಲ್ಪಟ್ಟಿತ್ತು. ಹಝ್ರತ್ ಆಯಿಶಾರ(ರ) ಹೇಳಿಕೆಯಂತೆ ಆ ಸ್ವಲ್ಪ ಜೋಳದಲ್ಲಿ ಎಷ್ಟು ಸ್ವವೃದ್ಧಿಯಿತ್ತೆಂದರೆ ಅದು ಹಲವು ದಿನಗಳಿಗೆ ಸಾಕಾಯಿತು.

ಅಂತಿಮ ನುಡಿ

عَنْ عَائِشَةَ(رض)قَالَتْ فَكَانَتْ آخِرُ كَلِمَةٍ تَكَلَّمَ بِهَا اللّٰهُمَّ الرَّفِيْ
الْأَعْلَى (بخارى كتاب المغازى)

ಪ್ರವಾದಿವರ್ಯರ(ಸ) ಅಂತಿಮ ಮಾತು 'ಅಲ್ಲಾಹುಮ್ಮರ್ರಫೀಕಲ್ ಅಅ್‌ಲಾ' ನ್ನ ಪರಮೋನ್ನತ ಮಿತ್ರನಾದ ಅಲ್ಲಾಹನೇ!) ಎಂಬುದಾಗಿತ್ತು. ಬುಖಾರಿಯ ಇನ್ನೊಂದು ರದಿಯಲ್ಲಿ 'ಫಿರ್ರಫೀಕಿಲ್ ಅಅ್‌ಲಾ' (ಸರ್ವೋನ್ನತನಾದ ಮಿತ್ರನ ಬಳಿಗೆ) ಎಂಬ ಪದಗಳಿವೆ. [ಹ. ಆಯಿಶಾ(ರ) -ಬುಖಾರಿ]

ಪ್ರವಾದಿ ಮುಹಮ್ಮದ್(ಸ) ಈ ಲೋಕದಿಂದ ಅಗಲುತ್ತಿರುವಾಗ ಹೇಳಿದಂತಹ ಕೊನೆಯ ುಡಿಗಳಿವು. ಅವರು ತಮ್ಮ ಒಡೆಯನ ಸನ್ನಿಧಿಗೆ ಹೋಗಲು ಎಷ್ಟು ಕಾತರರಾಗಿದ್ದರೆಂಬುದನ್ನು ಈ ನುಡಿಗಳು ಸೂಚಿಸುತ್ತವೆ. ಅಲ್ಲಾಹನೇ ಮಾನವನ ಪಾಲಿಗೆ ಅತ್ಯುತ್ತಮ ಮತ್ತು ಅತ್ಯುನ್ನತ ುತ್ರನಾಗಿದ್ದು, ಅವನ ಸನ್ನಿಧಿಯನ್ನು ತಲಪಬೇಕೆಂಬ ಆಶೆಯೇ ಮನುಷ್ಯನ ಅಂತಿಮ ುರಿಯಾಗಿರಬೇಕು.

ಚಾರಿತ್ರ್ಯ ನಿರ್ಮಾಣ

ಚಾರಿತ್ರ್ಯದ ಸ್ಥಾನ

عَبْدِ اللّٰهِ بْنِ عُمَرٍو (رض) قَالَ قَالَ رَسُولُ اللّٰهِ ﷺ أَنَّ مِنْ
رِكُمْ أَحَاسِنَكُمْ أَخْلَاقًا (مسلم-كتاب الفضائل)

ಪ್ರವಾದಿವರ್ಯರು(ಸ) ಹೀಗೆ ಹೇಳಿರುವರು:

''ನಿಮ್ಮ ಪೈಕಿ ಯಾರ ಚಾರಿತ್ರ್ಯವು ಅತ್ಯುತ್ತಮವಾಗಿದೆಯೋ ಅವರೇ ನಿಮ್ಮ ಅತ್ಯುತ್ತಮರು.'' [ಹಝ್ರತ್ ಅಬ್ದುಲ್ಲಾ ಬಿನ್ ಅಮ್ರ್(ರ) - ಮುಸ್ಲಿ

ಇಸ್ಲಾಮ್ ಧರ್ಮವು ಸಚ್ಚಾರಿತ್ರ್ಯ ಮತ್ತು ಸಭ್ಯ ನಡವಳಿಕೆಗೆ ಎಷ್ಟು ಮಹತ್ವ ನೀ ಯೆಂಬುದನ್ನು ಊಹಿಸಲು ಪ್ರಾಯಶಃ ಈ ಒಂದು ಪ್ರವಾದಿ ವಚನವೇ ಸಾಕು. ವಾಸ್ತವ ಒಬ್ಬ ಮನುಷ್ಯನ ಸ್ಥಾನಮಾನವು ಅವನ ಚಾರಿತ್ರ್ಯದ ಆಧಾರದಲ್ಲೇ ನಿರ್ಧರಿಸಲ್ಪಡಬ ಮತ್ತು ಚಾರಿತ್ರ್ಯವೇ ಒಬ್ಬ ಮನುಷ್ಯನನ್ನು ಪರೀಕ್ಷಿಸುವ, ಅಳೆಯುವ ಮಾನದಂಡವಾ ಬೇಕು. ಭೌತಿಕವಾದವು ವ್ಯಾಪಕವಾಗಿರುವ ಈ ಯುಗದಲ್ಲಿ ನೈತಿಕ ಅಧಃಪತನ ವ್ಯಾಪಕವಾಗಿದೆ. ಈ ಸ್ಥಿತಿಯಲ್ಲಿ ಚಾರಿತ್ರ್ಯ ಮತ್ತು ನೈತಿಕತೆಗಳ ಬೆಲೆ ಅರಿತಿರುವ ಸಂಖ್ಯೆ ಕಡಿಮೆ. ಈ ಹಿನ್ನೆಲೆಯಲ್ಲಿ ಚಾರಿತ್ರ್ಯದ ಮಹತ್ವವು ಮತ್ತಷ್ಟು ಹೆಚ್ಚಿದೆ.

نْ ابِي هُرَيْرَةَ (رض) قَالَ قَالَ رَسُولُ اللّٰهِ ﷺ : اَكْمَلُ الْمُؤْمِنِيْنَ
مَانًا اَحْسَنُهُمْ خُلُقًا (ابو داؤد-كتاب السنة)

ಪ್ರವಾದಿವರ್ಯರು(ಸ) ಹೀಗೆ ಹೇಳಿರುವರು:

''ಸತ್ಯ ವಿಶ್ವಾಸಿಗಳಲ್ಲಿ ಯಾರ ಚಾರಿತ್ರ್ಯವು ಹೆಚ್ಚು ಉತ್ತಮವಾಗಿರುವುದೋ ಅವ ಪೂರ್ಣ ವಿಶ್ವಾಸಿಗಳು.'' [ಹ. ಅಬೂ ಹುರೈರಾ(ರ) - ಅಬೂ ದಾವೂ

ಸತ್ಯವಿಶ್ವಾಸ ಮತ್ತು ಸಚ್ಚಾರಿತ್ರ್ಯದ ನಡುವಣ ಸಂಬಂಧ ಎಷ್ಟು ನಿಕಟವಾದುದೆಂದು ಹದೀಸ್‌ನಿಂದ ತಿಳಿಯುತ್ತದೆ. ಒಬ್ಬ ವ್ಯಕ್ತಿಯ ವಿಶ್ವಾಸವು ಪೂರ್ಣ ಸ್ವರೂಪದ್ದಾಗಿದ್ದರೆ ಅ ಚಾರಿತ್ರ್ಯ ಕೂಡಾ ಖಂಡಿತ ಉತ್ತಮವಾಗಿರುವುದು. ಏಕೆಂದರೆ, ಸಚ್ಚಾರಿತ್ರ್ಯವು ಸತ್ಯವಿಶ್ವಾ ಸ್ವಾಭಾವಿಕ ಪರಿಣಾಮವಾಗಿದೆ. ಈ ರೀತಿ ಚಾರಿತ್ರ್ಯವು, ಒಬ್ಬ ವ್ಯಕ್ತಿಯ ವಿಶ್ವಾಸವು ಯಾ ಪ್ರಮಾಣದಲ್ಲಿದೆಯೆಂಬುದನ್ನು ಅಳೆಯುವ ಅಳತೆಗೋಲೂ ಆಗಿದೆ.

ಅಲ್ಲಾಹನ ಭಯ ಮತ್ತು ಸಚ್ಚಾರಿತ್ರ್ಯ

عَنْ اَبِى هُرَيْرَةَ (رض) قَالَ سُئِلَ رَسُولُ اللّٰهِ ﷺ عَنْ اَكْ
يُدْخِلُ النَّاسَ الْجَنَّةَ ؟ قَالَ تَقْوَى اللّٰهِ وَحُسْنَ الْـ
وَسُئِلَ عَنْ أَكْثَرِ مَا يُدْخِلُ النَّاسَ النَّارَ ؟ قَالَ ا
وَالْفَرْجُ (ترمذى-ابواب الصلة)

ಒಮ್ಮೆ ಒಬ್ಬರು ಪ್ರವಾದಿವರ್ಯರೊಡನೆ(ಸ), ಅತಿ ಹೆಚ್ಚಾಗಿ ಜನರನ್ನು ಸ್ವರ್ಗಕ್ಕೆ ಗೊಳಿಸುವ ವಸ್ತು ಯಾವುದು? ಎಂದು ಪ್ರಶ್ನಿಸಿದರು. ಆಗ ಪ್ರವಾದಿವರ್ಯರು(ಸ) ಲ್ಲಹನ ಭಯ ಮತ್ತು ಸಚ್ಚಾರಿತ್ರ್ಯ'' ಎಂದು ಉತ್ತರಿಸಿದರು. ಆಗ ಪ್ರಶ್ನಿಸುತ್ತಿದ್ದ ವ್ಯಕ್ತಿಯು, ಹೆಚ್ಚಾಗಿ ಜನರನ್ನು ನರಕಕ್ಕೆ ಅರ್ಹಗೊಳಿಸುವ ವಸ್ತು ಯಾವುದು?' ಎಂದು ಪ್ರಶ್ನಿಸಿದರು. ತ್ತರವಾಗಿ ಪ್ರವಾದಿವರ್ಯರು(ಸ) ''ಬಾಯಿ ಮತ್ತು ಗುಪ್ತಾಂಗ' ಎಂದುತ್ತರಿಸಿದರು.

[ಅಬೂ ಹುರೈರಾ(ರ) -ತಿರ್ಮಿದಿ]

ಈ ಹದೀಸ್‌ನಲ್ಲಿ ಮನುಷ್ಯನನ್ನು ಸ್ವರ್ಗ ಅಥವಾ ನರಕಕ್ಕೆ ಅರ್ಹಗೊಳಿಸುವ ಕರ್ಮಗಳು ಶ್ರವು ಎಂಬುದನ್ನು ಅತ್ಯಂತ ಸಂಕ್ಷಿಪ್ತ ಹಾಗೂ ಸಮಗ್ರವಾಗಿ ತಿಳಿಸಲಾಗಿದೆ. ದೇವಭಯದ ಷತೆಯೇನೆಂದರೆ ಅದು ಮನುಷ್ಯನನ್ನು ದೇವನು ಮೆಚ್ಚದಂತಹ ದುಷ್ಕೃತ್ಯಗಳಿಂದ ಬಿಡುತ್ತದೆ. ಮಾತ್ರವಲ್ಲ ಸದಾ ಒಳಿತಿನ ಮಾರ್ಗದಲ್ಲೇ ನಡೆಯುವಂತೆ ಅವನನ್ನು ಪಿಸುತ್ತದೆ. ಸಚ್ಚಾರಿತ್ರ್ಯವು ಮನುಷ್ಯನನ್ನು ತನ್ನ ಸಹಜೀವಿಗಳೊಂದಿಗೆ ಅತ್ಯುತ್ತಮವಾಗಿ ಸಲು ಹಾಗೂ ಅವರಿಗೆ ಸಂಬಂಧಿಸಿದ ತನ್ನ ಬಾಧ್ಯತೆಗಳನ್ನು ಈಡೇರಿಸಲು ಪಿಸುತ್ತದೆ. ಆದ್ದರಿಂದ ಒಬ್ಬ ವ್ಯಕ್ತಿಯಲ್ಲಿ ಈ ಎರಡು ಗುಣಗಳಿದ್ದರೆ ಅವನು ಜೀವನ ಂತ ತನ್ನನ್ನು ಸ್ವರ್ಗಕ್ಕೆ ಅರ್ಹನಾಗಿ ಮಾಡುವಂತಹ ಕರ್ಮಗಳನ್ನೇ ಮಾಡುವ ದು ಖಚಿತ. ಇತ್ತ ಒಬ್ಬ ವ್ಯಕ್ತಿ ತನ್ನ ಬಾಯಿ ಮತ್ತು ತನ್ನ ಗುಪ್ತಾಂಗವನ್ನು ಂತ್ರಣದಲ್ಲಿಡದಿದ್ದರೆ ಮತ್ತು ಅವುಗಳನ್ನು ಧರ್ಮಬಾಹಿರವಾದ ಕಾರ್ಯಗಳಿಗಾಗಿ ದರೆ ಈ ಅಂಗಗಳೇ ಅವನನ್ನು ನರಕಕ್ಕೆ ಕಳುಹಿಸಲು ಪರ್ಯಾಪ್ತವಾಗುತ್ತದೆ. ಒಬ್ಬ 'ಹರಾಮ್' ವಸ್ತುಗಳನ್ನು ತಿಂದರೆ ಅಥವಾ ಕೆಟ್ಟ ಮಾತುಗಳನ್ನು ಆಡಿದರೆ ಮತ್ತು ತನ್ನ ್ತಂಗದ ಮೇಲೆ ನಿಯಂತ್ರಣವಿಟ್ಟುಕೊಳ್ಳದಿದ್ದರೆ, ಅವನು ಚಾರಿತ್ರ್ಯಹೀನನಾಗಿ ಅನೈತಿಕ ವಟಿಕೆಗಳಲ್ಲಿ ನಿರತನಾಗಿ ಬಿಡುತ್ತಾನೆ.

ಆದ್ದರಿಂದ ತಮ್ಮ ಬಾಯಿ ಮತ್ತು ಗುಪ್ತಾಂಗಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳ ಸುವವರು ತಮ್ಮಲ್ಲಿ ದೇವ ಭಯ ಮತ್ತು ಸಚ್ಚಾರಿತ್ರ್ಯದ ಗುಣಗಳನ್ನು ಬೆಳೆಸಿಕೊಳ್ಳಬೇಕು.

ನೈಜ ಮಾನದಂಡ

ابِی هُرَيْرَةَ (رض) قَالَ قَالَ رَسُولُ اللّٰهِ ﷺ اِنَّ اللّٰهَ لا يَنْظُرُ صُوَرِكُمْ وَامْوَالِكُمْ وَلٰكِنْ يَنْظُرُ اِلٰى قُلُوْبِكُمْ وَاَعْمَالِكُمْ

(مسلم-كتاب البر)

ಪ್ರವಾದಿವರ್ಯರು(ಸ) ಹೀಗೆ ಹೇಳಿರುವರು:

''ಖಂಡಿತವಾಗಿಯೂ ಅಲ್ಲಾಹನು ನಿಮ್ಮ ರೂಪಗಳನ್ನೋ ಸಂಪತ್ತನ್ನೋ ನೋಡುವ ಅವನು ನಿಮ್ಮ ಮನಸ್ಸುಗಳನ್ನು ಮತ್ತು ನಿಮ್ಮ ಕರ್ಮಗಳನ್ನು ನೋಡುತ್ತಾನೆ.''

[ಹ. ಅಬೂ ಹುರೈರಾ(ರ) -ಮುಸ್ಲಿ

ಅರ್ಥಾತ್ ಒಬ್ಬ ವ್ಯಕ್ತಿ ಒಳ್ಳೆಯವನೋ ಕೆಟ್ಟವನೋ ಎಂಬುದು ಅವನು ನೋ ಎಷ್ಟು ಸುಂದರವಾಗಿದ್ದಾನೆ ಅಥವಾ ಅವನ ಬಳಿ ಸಂಪತ್ತು ಎಷ್ಟಿದೆ ಎಂಬು ಅವಲಂಬಿಸಿಲ್ಲ, ನಿಜವಾಗಿ ಇದು ಮನಸ್ಸಿನ ಸ್ಥಿತಿ ಮತ್ತು ಅವನ ಕರ್ಮಗಳ ಗುಣಮ ಆಧಾರದಲ್ಲಿ ಮಾತ್ರ ನಿರ್ಣಯಿಸಲ್ಪಡುತ್ತದೆ. ಯಾರಾದರೂ ತಮ್ಮ ವರ್ಣ, ಸೌಂದ ಅಥವಾ ಶ್ರೀಮಂತಿಕೆಯ ಬಗ್ಗೆ ಅಭಿಮಾನ ಪಡುತ್ತಾರೆಂದಾದರೆ ಅದೊಂದು ಅರ್ಥ ಅಭಿಮಾನವೆನಿಸುವುದು. ಏಕೆಂದರೆ, ಚಾರಿತ್ರ್ಯದ ಸೌಂದರ್ಯವೇ ನಿಜವಾದ ಸೌಂದರ್ಯ ಸದ್ಗುಣಗಳ ಶ್ರೀಮಂತಿಕೆಯೇ ನಿಜವಾದ ಶ್ರೀಮಂತಿಕೆಯೂ ಆಗಿದೆ. ಅಲ್ಲಾಹನ ದೃಷ್ಟಿ ಮನುಷ್ಯನ ಶ್ರೇಷ್ಠತೆಯು ಅವನ ಮನಃಸ್ಥಿತಿ ಹಾಗೂ ಕರ್ಮವನ್ನು ಅವಲಂಬಿಸಿದೆ. ನಿಷ್ ಮನಸ್ಸು ಹಾಗೂ ಸದ್ಗುಣ ಸಂಪನ್ನ ಚಾರಿತ್ರ್ಯ ಉಳ್ಳವನೇ ಅಲ್ಲಾಹನ ದೃಷ್ಟಿಯಲ್ಲಿ ಪುರ ಯೋಗ್ಯನಾಗಿರುತ್ತಾನೆ. ಈ ವೈಶಿಷ್ಟ್ಯಗಳಿಲ್ಲದ ಒಬ್ಬ ವ್ಯಕ್ತಿ ಎಷ್ಟೇ ಸುಂದರನಾಗಿದ್ದರೂ ಆರ್ಥಿಕ ಎಷ್ಟೇ ಶ್ರೀಮಂತನಾಗಿದ್ದರೂ ಅಲ್ಲಾಹನ ದೃಷ್ಟಿಯಲ್ಲಿ ಅವನಿಗೆ ಯಾವ ಬೆಲೆಯೂ ಇಲ್ಲ.

ಸತ್ಯ

عَبْدِ اللّٰهِ بن مَسْعُودٍ (رض) قَالَ قَالَ رَسُولُ اللّٰهِ ﷺ : عَلَيْكُمْ
صِّدْقِ فَاِنَّ الصِّدْقَ يَهْدِی اِلَى الْبِرِّ وَاِنَّ يَهْدِی اِلَى الْجَنَّةِ
ا يَزَالُ الرَّجُلُ يَصْدُقُ وَيَتَحَرَّى الصِّدْقَ حَتّٰى يُكْتَبُ عِنْدَ
ہِ صِدِّيقًا وَاَيَّاكُمْ وَالْكَذِبَ فَاَنَّ الْكَذِبَ يَهْدِی اَلَى

الْفُجُورِ وَأَنَّ الْفُجُورَ يَهْدِى أَلَى النَّارِ وَمَا يَزَالُ الرَّ

يَكْذِبُ وَيَتَحَرَّى الْكَذِبَ حَتَّى يُكْتَبَ عِنْدَ اللَّهِ كَا

(مسلم-كتاب ال

ಪ್ರವಾದಿವರ್ಯರು(ಸ) ಹೀಗೆ ಹೇಳಿರುವರು:

''ಸತ್ಯವನ್ನು ಅನುಸರಿಸಿರಿ. ಸತ್ಯವು ಒಳಿತಿನೆಡೆಗೆ ಒಯ್ಯುತ್ತದೆ. ಒಳಿತು ಸ್ವರ್ಗದೆಡೆಗೆ ್ಯುತ್ತದೆ. ಮನುಷ್ಯನು ಸತ್ಯವನ್ನೇ ಹೇಳುತ್ತಾ, ಸತ್ಯವನ್ನೇ ಅನುಸರಿಸುತ್ತಾ ಇದ್ದರೆ ಕೊನೆಗೊಮ್ಮೆ ಹನ ಬಳಿ ಅವನನ್ನು 'ಸಿದ್ದೀಕ್'(ಪರಮ ಸತ್ಯವಂತ) ಎಂದು ಬರೆದಿಡಲಾಗುತ್ತದೆ. ಂದ ದೂರವಿರಿ. ಸುಳ್ಳು ಕೆಡುಕಿನೆಡೆಗೆ ಕೊಂಡೊಯ್ಯುತ್ತದೆ ಮತ್ತು ಕೆಡುಕು ನರಕದೆಡೆಗೆ ತೊಯ್ಯುತ್ತದೆ. ಮನುಷ್ಯನು ಸುಳ್ಳನ್ನೇ ಹೇಳುತ್ತಲಿದ್ದರೆ ಮತ್ತು ಸುಳ್ಳನ್ನೇ ಅನುಸರಿಸುತ್ತಲಿದ್ದರೆ ಗೊಮ್ಮೆ ಅಲ್ಲಾಹನ ಬಳಿ ಅವನನ್ನು ಪರಮ ಸುಳ್ಳುಗಾರ ಎಂದು ಬರೆದಿಡಲಾಗುತ್ತದೆ''.

[ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್(ರ) -ಮುಸ್ಲಿಮ್]

ಇಸ್ಲಾಮೀ ನೀತಿಶಾಸ್ತ್ರದಲ್ಲಿ ಸತ್ಯ ಮತ್ತು ಪ್ರಾಮಾಣಿಕತೆಗೆ ಮೂಲಭೂತ ಮಹತ್ವವಿದೆ. ್ಯ ಸಚ್ಚಾರಿತ್ರ್ಯದ ತಳಹದಿಯಾಗಿದೆ. ಸದಾ ಸತ್ಯವನ್ನೇ ಹೇಳುವವನು ಮತ್ತು ಸತ್ಯವನ್ನು ೀಕರಿಸಲು ಸದಾ ಸಿದ್ಧನಾಗಿರುವವನು ಯಾವಾಗಲೂ ಸರಿಯಾದ ದಿಕ್ಕಿನಲ್ಲೇ ಇರುತ್ತಾನೆ. ರ ಪರಿಣಾಮವಾಗಿ ಅವನ ಚಾರಿತ್ರ್ಯವು ಸಂಪನ್ನವಾಗುತ್ತದೆ. ಇಂತಹ ವ್ಯಕ್ತಿ ಅಲ್ಲಾಹನ ಬಿಂದ ಬಂದ ಸತ್ಯವನ್ನು ತಾನೇ ಮುಂದಾಗಿ ಸ್ವೀಕರಿಸುತ್ತಾನೆ. ಸತ್ಯವನ್ನು ತನ್ನ ಗುಣವಾಗಿ ತಿಕೊಂಡವನು ಸತ್ಯದ ಹೊನಲಾಗಿರುವ ದಿವ್ಯ ಮಾರ್ಗದರ್ಶನದಿಂದ ಹೇಗೆ ತಾನೇ ರವಿರಬಲ್ಲನು?

ಸತ್ಯವಂತಿಕೆಯು ಮನುಷ್ಯನನ್ನು ಸನ್ಮಾರ್ಗದೆಡೆಗೆ ಒಯ್ಯುತ್ತದೆ. ಸನ್ಮಾರ್ಗವು ಅವನನ್ನು ್ಕೆ ಒಯ್ಯುತ್ತದೆ. ಜೀವನದಲ್ಲಿ ಮನುಷ್ಯನ ಸತ್ಯವಂತಿಕೆಯನ್ನು ಪರೀಕ್ಷೆಗೊಡ್ಡುವಂತಹ ಕ ಸಂಕೀರ್ಣ ಸಂದರ್ಭಗಳು ಎದುರಾಗುತ್ತವೆ. ಇಂತಹ ಸಂದರ್ಭಗಳಲ್ಲಿ ಅಲ್ಲಾಹನಿಗಾಗಿ ಬಗೆಯ ಕಷ್ಟ ನಷ್ಟಗಳನ್ನು ಅನುಭವಿಸಿಯೂ ಸತ್ಯದಲ್ಲೇ ಸ್ಥಿರವಾಗಿ ನಿಲ್ಲುವವನು ್ತ ಸತ್ಯನಿಷ್ಠನಾಗಿ ಉಳಿಯಲು ತ್ಯಾಗ ಬಲಿದಾನಗಳನ್ನು ನೀಡುವವನು ಸತ್ಯದ ಸಾಕಾರ ರ್ತಿ ಎನಿಸಿಕೊಳ್ಳುತ್ತಾನೆ. ಈ ಸ್ಥಾನವನ್ನೇ 'ಸಿದ್ದೀಕ್' ಎನ್ನುತ್ತಾರೆ. ಇದು ಒಬ್ಬ ವ್ಯಕ್ತಿಯು ಸಬಲ್ಲ ವಿಕಾಸದ ಪರಮೋಚ್ಚ ಗುರಿಯಾಗಿದೆ. ತದ್ವಿರುದ್ಧವಾಗಿ ಸುಳ್ಳು ಹೇಳುವುದನ್ನು ಸಿಸಿಕೊಳ್ಳುವ ವ್ಯಕ್ತಿ ತನ್ನನ್ನು ತಪ್ಪು ಹಾದಿಯಲ್ಲಿ ತೊಡಗಿಸಿಕೊಳ್ಳುತ್ತಾನೆ. ಅದರ ಪರಿಣಾಮ ಅವನಲ್ಲಿ ದುಷ್ಟ ಭಾವನೆಗಳು ಬೆಳೆದು, ಅವು ಅವನನ್ನು ಅತ್ಯಂತ ಹೀನ ಚಾರಿತ್ಯದವ ಮಾರ್ಪಡಿಸುತ್ತದೆ. ಇದು ಈ ಲೋಕದಲ್ಲಿ ಅವನ ಅವಸ್ಥೆಯಾದರೆ, ಪರಲೋಕದಲ್ಲಿ

ಅವನು ನರಕ ಶಿಕ್ಷೆಯನ್ನು ಅನುಭವಿಸುವನು. ಅಪರೂಪಕ್ಕೆ ಸುಳ್ಳು ಹೇಳತೊಡಗಿ ಕ್ರಮೇಣ ಸುಳ್ಳು ಹೇಳುವುದನ್ನು ಒಂದು ಅಭ್ಯಾಸವಾಗಿ ರೂಢಿಸಿಕೊಳ್ಳುತ್ತಾನೆ. ಕೊನ ದುರಭ್ಯಾಸ ಎಷ್ಟು ವ್ಯಾಪಕವಾಗಿ ಬೆಳೆಯುತ್ತದೆಂದರೆ ಅವನು ಪರಮ ಸುಳ್ಳುಗಾ ಅಪಮಾನಕರ ಬಿರುದಿಗೆ ಪಾತ್ರನಾಗುತ್ತಾನೆ.

ಸಾರ್ವತ್ರಿಕ ಕರುಣೆ

ابی هُرَيْرَةَ (رض) قَالَ قَالَ رَسُولُ اللّٰهِ ﷺ : مَنْ لاَ يَرْحَمْ
رْحَمْ (بخاری-کتاب الادب)

ಪ್ರವಾದಿ(ಸ) ಹೀಗೆ ಹೇಳಿರುವರು:

''ಕರುಣೆ ತೋರದವನ ಮೇಲೆ ಕರುಣೆ ತೋರಿಸಲಾಗುವುದಿಲ್ಲ.''

[ಹ. ಅಬೂ ಹುರೈರಾ(ರ) -ಬು

جَرِير بن عبد اللّٰه (رض) قَالَ قَالَ رَسُولُ اللّٰه ﷺ : لاَ يَرْحَمُ
مَنْ لاَ يُرْحَمُ النَّاسَ (بخاری-کتاب التوحید)

ಪ್ರವಾದಿವರ್ಯರು(ಸ) ಹೀಗೆ ಹೇಳಿರುವರು:

''ಮನುಷ್ಯರ ಮೇಲೆ ಕರುಣೆ ತೋರದ ವ್ಯಕ್ತಿಯ ಮೇಲೆ ಅಲ್ಲಾಹನು ಕ ತೋರಿಸುವುದಿಲ್ಲ.'' [ಹ. ಜರೀರ್ ಬಿನ್ ಅಬ್ದುಲ್ಲಾ(ರ) -ಬು

ಈ ಸಂಕ್ಷಿಪ್ತ ಹಾಗೂ ಪ್ರಭಾವಶಾಲಿ ವಚನಗಳಲ್ಲಿ ಜನರು, ತಮ್ಮ ಸಹಜೀವಿ ಮನ ಜೊತೆ ವಾತ್ಸಲ್ಯದೊಂದಿಗೆ ವರ್ತಿಸಬೇಕೆಂದು ಪ್ರೇರಣೆ ಕೊಡಲಾಗಿದೆ. ವಿಶ್ವಾನ ಎಂಬ ಬಿರುದಾಂಕಿತ ಪ್ರವಾದಿ(ಸ) ಅವರು ಮಾನವಕುಲಕ್ಕೆ ಸಾರ್ವತ್ರಿಕ ಕರು ಧೋರಣೆಯನ್ನು ಬೋಧಿಸಿದ್ದರು. ಅವರ ಬೋಧನೆಯಂತೆ ಒಬ್ಬ ಮನುಷ್ಯನು ಮತಧರ್ಮಕ್ಕೆ ಸೇರಿದವನಾಗಿದ್ದರೂ ಮನುಷ್ಯನೆಂಬ ನೆಲೆಯಲ್ಲಿ ಕರುಣೆ ಮತ್ತು ವಾ ಅರ್ಹನಾಗಿರುತ್ತಾನೆ. ದೇವನ ದಾಸರ ಪಾಲಿಗೆ ದಯಾಳುಗಳಾಗಿರುವವರು ಮಾತ್ರ ದೇ ಹಾಗೂ ಅನುಗ್ರಹಕ್ಕೆ ಪಾತ್ರರಾಗುವರು. ಜನರೊಂದಿಗೆ ಕ್ರೂರವಾಗಿ ವರ್ತಿಸುವ ಅ ಅನ್ಯಾಯ ಮಾಡುವ ವ್ಯಕ್ತಿಗಳು ಆ ಮೂಲಕ ತಾವು ದೇವನ ಕರುಣೆ ಮತ್ತು ಅನು ಪಾತ್ರರಾಗಲು ಅರ್ಹರಲ್ಲವೆಂದು ತೋರಿಸಿಕೊಟ್ಟಂತಾಗುವುದು.

عَبْدُ اللّٰهِ بْنُ عمرو (رض) قَالَ قَالَ رَسُولُ اللّٰهِ ﷺ الرَّاحِمُوْنَ

يَرْحَمُهُمُ الرَّحْمٰنُ اِرْحَمُوْا مَنْ فِى الْأَرْضِ يَرْحَمُكُمْ مَنْ
السَّمَاءِ الرَّحِمُ شِجْنَةٌ مِنَ الرَّحْمٰنِ فَمَنْ وَصَلَهَا وَ
اللّٰهُ وَمَنْ قَطَعَهَا قَطَعَهُ اللّٰهُ (ترمذى)

ಪ್ರವಾದಿವರ್ಯರು(ಸ) ಹೀಗೆ ಹೇಳಿರುವರು:

''ಕರುಣೆ ತೋರುವವರ ಮೇಲೆ ಪರಮ ಕರುಣಾಳುವಾಗಿರುವವನು ಕರುಣೆ ುವನು. ನೀವು ಭೂಮಿಯವರ ಮೇಲೆ ಕರುಣೆ ತೋರಿರಿ. ಆಕಾಶದವನು ನಿಮ್ಮ ಮೇಲೆ ೆತೋರುವನು. ರಹಮ್(ಕರುಣೆ) ಎಂಬ ಪದವು ರಹ್ಮಾನ್(ಪರಮ ಕರುಣಾಳು ಅರ್ಥಾತ್ ಹ್) ಎಂಬ ಪದದಿಂದ ಹೊರಟಿದೆ. ಆದ್ದರಿಂದ ಯಾರು ಅದನ್ನು ಬೆಸೆಯುವನೋ ಹನು ಅವನನ್ನು ಬೆಸೆಯುವನು ಮತ್ತು ಯಾರು ಅದನ್ನು ಮುರಿಯುವನೋ ಅವನನ್ನು ಹನು ಮುರಿಯುವನು.''

[ಹ. ಅಬ್ದುಲ್ಲಾ ಬಿನ್ ಅಮ್ರ್ (ರ) -ತಿರ್ಮಿದಿ]

ರಹ್ಮಾನ್ ಎಂಬುದು ರಹಮ್ ಪದದ ಮೂಲವಾಗಿದೆ. ಈ ಎರಡು ಪದಗಳ ್ಯವು ಮನುಷ್ಯನು ಸಹಜೀವಿಗಳ ಪಾಲಿಗೆ ಕರುಣಾಳುವಾಗಬೇಕೆಂದು ಬಯಸುತ್ತದೆ. ುಷ್ಯರೊಂದಿಗೆ ಮಾನವೀಯ ನೆಲೆಯಲ್ಲಿ ಕರುಣೆ ಮತ್ತು ಸೌಜನ್ಯದ ಸಂಬಂಧವಿಟ್ಟು ್ನವವರ ಜೊತೆಗೆ ಅಲ್ಲಾಹನೂ ಕರುಣೆ ಮತ್ತು ಅನುಗ್ರಹದ ಸಂಬಂಧವನ್ನು ಸ್ಥಾಪಿಸುತ್ತಾನೆ. ನವೀಯ ಸಂಬಂಧಗಳನ್ನು ಮುರಿದುಕೊಳ್ಳುವುದರಿಂದ ಅಲ್ಲಾಹನೂ ತನ್ನ ಕರುಣೆಯ ಂಧವನ್ನು ಮುರಿದುಕೊಳ್ಳುತ್ತಾನೆ. ಮನುಷ್ಯನ ಕರ್ಮ ಮತ್ತು ವರ್ತನೆ ಯಾವ ರೀತಿ ವುದೋ ಅದೇ ರೀತಿ ಫಲಿತಾಂಶವನ್ನು ಅವನು ಪಡೆಯುವನು.

عن ابى هريرة (رض) قَالَ سَمِعْتُ اَبَا الْقَاسِمِ ﷺ يَقُو
لَا تُنْزَعُ الرَّحْمَةُ اِلَّا مِنْ شَقِيٍّ (ترمذ

ಅಬುಲ್ ಕಾಸಿಮ್ [ಮುಹಮ್ಮದ್(ಸ)] ಅವರು ಹೀಗೆ ಹೇಳುವುದನ್ನು ನಾನು ಕೇಳಿದೆ: ಟನಿಂದ ಮಾತ್ರ ಕರುಣೆಯನ್ನು ಕಿತ್ತುಕೊಳ್ಳಲಾಗುತ್ತದೆ.''

[ಹಝ್ರತ್ ಅಬೂ ಹುರೈರಾ(ರ) -ತಿರ್ಮಿದಿ]

ಕರುಣೆಯಿಂದ ವಂಚಿತನಾಗಿರುವ ವ್ಯಕ್ತಿ ಒಳಿತಿನಿಂದಲೇ ವಂಚಿತನಾಗಿದ್ದಾನೆಂದು ೯. ಇಂತಹ ಕರುಣೆಯಿಲ್ಲದ ವ್ಯಕ್ತಿ ಮಾನವಕುಲದ ಪಾಲಿಗೆ ಹಾನಿಕಾರಕನಾಗುತ್ತಾನೆ. ಂದ ಪರಲೋಕದಲ್ಲಿ ಅವನು ಅತ್ಯಂತ ಕೆಟ್ಟ ಪರಿಣಾಮವನ್ನು ಎದುರಿಸಬೇಕಾಗುವುದು.

ಅನುಕಂಪ

ابى هُرَيْرَةَ(رض)قَالَ قَالَ رَسُولُ اللّٰهِ ﷺ اِنَّ اللّٰهَ عَزَّوَجَلَّ
ـلُ يَوْمَ الْقِيَامَةِ يَا ابنَ آدَمَ ! مَرِضْتُ فَلَمْ تَعُوْدْنِى قَالَ:
بِّ ! كَيْفَ اَعُودُكَ وَاَنْتَ رَبُّ الْعَالَمِينَ قَالَ : اَمَا عَلِمْتَ
عَبْدِى فُلاَنًا مَرِيضَ فَلَمْ تَعُدْهُ اَمَا عَلِمْتَ اَنَّكَ لَوْعُدْتَّهُ
جَدْتَنِى عِنْدَهُ يَا اِبْنَ آدَمَ اِسْتَطْعَمْتُكَ فَلَمْ تُطْعِمْنِى قَالَ يَارَبِّ
يْفَ اُطْعِمُكَ وَاَنْتَ رَبُّ الْعَلَمِينَ قَالَ اَمَا عَلِمْتَ اَنَّهُ اِسْتَطْعَمَكَ
دِى فُلاَنٌ فَلَمْ تُطْعِمْهُ اَمَا عَلِمْتَ اِنَّكَ لَوْ اَطْعَمْتَهُ لَوَجَدْتَ
كَ عِنْدِى يَا ابْنَ آدَمَ اِسْتَسْقَيْتُكَ فَلَمْ تَسْقِنِى قَالَ يَارَبِّ !
فَ اسْقِيكَ وَاَنْتَ رَبُّ الْعَالَمِيْنَ قَالَ : اِسْتَسْقَاكَ
دِى فُلاَنٌ فَلَمْ تُسْقِهِ اَمَا اَنَّكَ لَوْ سَقَيْتَهُ وَجَدْتَّ ذٰلِكَ
دِى (مسلم-كتاب البرّ)

ಪ್ರವಾದಿವರ್ಯರು(ಸ) ಹೇಳಿದ್ದಾರೆ:

''ಅಲ್ಲಾಹನು ಪುನರುತ್ಥಾನ ದಿನದಂದು, 'ಆದಮನ ಪುತ್ರನೇ! ನಾನು ರೋಗಿಯಾ ನೀನು ನನ್ನ ಸಂದರ್ಶನ ಮಾಡಲಿಲ್ಲ' ಎನ್ನುವನು. ಆಗ ಮನುಷ್ಯನು, 'ನನ್ನ ಪ್ರಭೂ! ನಾನದೆ ನಿನ್ನ ಸಂದರ್ಶನ ಮಾಡಬಲ್ಲೆ? ನೀನಾದರೋ ಸಕಲ ವಿಶ್ವದ ಒಡೆಯನಾಗಿರುವೆ' ಎ ಹೇಳುವನು. ಆಗ ಅಲ್ಲಾಹನು 'ನನ್ನ ಇಂತಿಂತಹ ದಾಸನು ರೋಗ ಪೀಡಿತನಾಗಿದ್ದನು. ಆ ನೀನು ಅವನ ಸಂದರ್ಶನ ಮಾಡಲಿಲ್ಲ, ನೀನು ಅವನ ಸಂದರ್ಶನಕ್ಕೆ ಹೋಗುತ್ತಿದ್ದರೆ ಅಲ್ಲಿನ ಕಾಣುತ್ತಿದ್ದೆ ಎಂಬುದು ನಿನಗೆ ತಿಳಿದಿರಲಿಲ್ಲವೇ? ಆದಮನ ಪುತ್ರನೇ! ನಾನು ನಿನ್ನಿಂದ ಆಹ ಬೇಡಿದ್ದೆ, ಆದರೆ ನೀನು ನನಗೆ ಉಣ ಬಡಿಸಲಿಲ್ಲ' ಎಂದು ಹೇಳುವನು. ಆಗ ಮನುಷ 'ನನ್ನ ಪ್ರಭೂ! ನಿನಗೆ ನಾನು ಹೇಗೆ ಉಣಿಸಲಿ. ನೀನಂತೂ ಸಕಲ ವಿಶ್ವದ ಒಡೆಯನಾಗಿರು ಎನ್ನುವನು. ಆಗ ಅಲ್ಲಾಹನು, 'ನಿನಗೆ ತಿಳಿದಿಲ್ಲವೇ, ನನ್ನ ಇಂತಿಂತಹ ದಾಸನು ನಿನ್ನಿಂದ ಆಹ

ದ್ದನು. ಆದರೆ ನೀನು ಅವನಿಗೆ ಆಹಾರ ನೀಡಲಿಲ್ಲ, ನೀನು ಅವನಿಗೆ ಉಣ ಬಡಿಸುತ್ತಿದ್ದರೆ ನ್ನು (ಅದರ ಫಲವನ್ನು) ಇಂದು ನನ್ನ ಬಳಿ ಕಾಣುತ್ತಿದ್ದೆ'. 'ಆದಮನ ಪುತ್ರನೇ! ನಾನು ಂದ ನೀರು ಕೇಳಿದ್ದೆ, ಆದರೆ ನೀನು ನನಗೆ ನೀರು ಕುಡಿಸಲಿಲ್ಲ' ಎಂದು ಹೇಳುವನು. ಆಗ ರುಷ್ಯನು 'ನನ್ನ ಪ್ರಭೂ, ನಾನು ಅದಾವ ರೀತಿಯಲ್ಲಿ ನಿನಗೆ ನೀರು ಕುಡಿಸಬಲ್ಲೆ? ನೀನಾದರೋ ಲ ವಿಶ್ವದ ಒಡೆಯನಾಗಿರುವೆ' ಎನ್ನುವನು. ಆಗ ಅಲ್ಲಾಹನು ಹೇಳುವನು 'ನನ್ನ ಇಂತಿಂತಹ ಕನು ನಿನ್ನಿಂದ ನೀರು ಕೇಳಿದ್ದನು. ಆದರೆ ನೀನು ಅವನಿಗೆ ನೀರು ಕುಡಿಸಲಿಲ್ಲ, ನೀನು ಅವನಿಗೆ ರು ಕುಡಿಸುತ್ತಿದ್ದರೆ ಇಂದು ಅದನ್ನು (ಅದರ ಫಲವನ್ನು) ನನ್ನ ಬಳಿ ಕಾಣುತ್ತಿದ್ದೆ.''

[ಹಝ್ರತ್ ಅಬೂ ಹುರೈರಾ(ರ) -ಮುಸ್ಲಿಮ್]

ಇದೊಂದು ಕುದ್ಸೀ ಹದೀಸ್(ದೇವ ವಚನವನ್ನು ತಿಳಿಸುವ ಪ್ರವಾದಿ ವಚನ) ಆಗಿದ್ದು ದರಲ್ಲಿ ಅಲ್ಲಾಹನು, ರೋಗಿಯ ಸಂದರ್ಶನ ನಡೆಸುವುದನ್ನು ಮತ್ತು ಬಡಬಗ್ಗರಿಗೆ ಉಣ್ಣಲು, ಡಿಯಲು ಒದಗಿಸುವುದನ್ನು ಬಹಳ ಮನಮೋಹಕ ಹಾಗೂ ಪರಿಣಾಮಕಾರೀ ವಿಧಾನ ದ ಪ್ರೋತ್ಸಾಹಿಸಿದ್ದಾನೆ. ರೋಗಿಯ ಸಂದರ್ಶನವು ತನ್ನ ಸಂದರ್ಶನವಾಗಿದೆಯೆಂದೂ ರ್ಬಲರಿಗೆ ನೀಡುವ ಸಹಾಯವು ತನಗೆ ನೀಡುವ ಸಹಾಯವಾಗಿದೆಯೆಂದೂ ಲ್ಲಾಹನು ಇಲ್ಲಿ ವರ್ಣಿಸಿರುವನು. ಮಾತನ್ನು ಹೆಚ್ಚು ಪರಿಣಾಮಕಾರಿಯಾಗಿ ಮನವರಿಕೆ ಾಡಿಸಬೇಕೆಂಬುದು ಮಾತ್ರ ಈ ವಿಶಿಷ್ಟ ಶೈಲಿಯನ್ನು ಬಳಸಿದ್ದರ ಉದ್ದೇಶವಾಗಿದೆ. ಅನ್ಯಥಾ ಲ್ಲಾಹನಂತೂ ಸಕಲ ಆಗತ್ಯಗಳಿಂದಲೂ ದೌರ್ಬಲ್ಯಗಳಿಂದಲೂ ಸಂಪೂರ್ಣ ಮುಕ್ತನಾಗಿದ್ದು ರಮ ಪಾವನನಾಗಿರುವನು. ರೋಗವಾಗಲಿ, ಹಸಿವಾಗಲಿ ಅವನನ್ನು ಬಾಧಿಸುವುದಿಲ್ಲ. ಲ್ಲಾಹನು ಇಂತಹ ಶೈಲಿಯನ್ನು ಬಳಸಿರುವುದನ್ನು ನಾವು ಕುರ್‌ಆನಿನಲ್ಲೂ ಕಾಣಬಹುದು.

ಉದಾ: 'ನೀವು ಅಲ್ಲಾಹನಿಗೆ ಸಹಾಯ ಮಾಡಿದರೆ ಅಲ್ಲಾಹನು ನಿಮಗೆ ಸಹಾಯ ೀಡುವನು'. (47:7) ಇಲ್ಲಿ ಅಲ್ಲಾಹನು ಸತ್ಯಧರ್ಮದ ಸಂಸ್ಥಾಪನೆಗಾಗಿ ಸಹಾಯ ೀಡುವುದನ್ನು ಸಾಕ್ಷಾತ್ ತನಗೆ ಮಾಡುವ ಸಹಾಯವೆಂದು ವರ್ಣಿಸಿರುವನು.

ಪ್ರಸ್ತುತ ಹದೀಸ್‌ನಲ್ಲಿ ಅಲ್ಲಾಹನು ಅನುಸರಿಸಿರುವ ವಿಶಿಷ್ಟ ಧಾಟಿಯು, ಇದರಲ್ಲಿ ಸ್ತಾಪಿಸಲಾಗಿರುವಂತಹ ಸತ್ಕಾರ್ಯಗಳಿಗೆ ಅವನ ದೃಷ್ಟಿಯಲ್ಲಿ ಎಷ್ಟು ಮಹತ್ವ ಇದೆ ಎಂಬುದನ್ನು ುಚಿಸುತ್ತದೆ. ರೋಗಿಯ ಸಂದರ್ಶನ, ಬಡವನಿಗೆ ಉಣಬಡಿಸುವುದು, ಬಾಯಾರಿದವನಿಗೆ ೀರು ಕುಡಿಸುವುದು ಇವೆಲ್ಲಾ ಅಲ್ಲಾಹನು ಮೆಚ್ಚುವ ಮತ್ತು ಗೌರವಿಸುವ ಸತ್ಕರ್ಮಗಳಾಗಿವೆ. ಸರಾದ ನಾವು ಕೂಡಾ ಈ ಕಾರ್ಯಗಳ ಮಹತ್ವವನ್ನು ಅರಿಯುವವರಾಗಬೇಕು ಮತ್ತು ವಲ ಅಲ್ಲಾಹನ ಸಂಪ್ರೀತಿಗಾಗಿ ಈ ಕಾರ್ಯಗಳನ್ನು ಮಾಡಬೇಕು. ಇವುಗಳ ಮೂಲಕ ನಾವು ವನ ಸಂಪ್ರೀತಿಯನ್ನೂ ಸಾಮೀಪ್ಯವನ್ನೂ ಗಳಿಸಬಹುದು.

ರೋಗಿಯ ಸಂದರ್ಶನ ಮತ್ತು ಆರೈಕೆಯು ಮಾನವೀಯ ಅನುಕಂಪದ ಕಾರ್ಯ ಾಗಿದೆ. ಹಾಗೆಯೇ ಹಸಿದವರಿಗೆ ಉಣಬಡಿಸುವುದು ಮತ್ತು ಬಾಯಾರಿದವನಿಗೆ ನೀರು

ಕುಡಿಸುವುದು ಮಾನವೀಯ ಹಾಗೂ ಸಮಾಜ ಸೇವೆಯ ಕಾರ್ಯಗಳಾಗಿವೆ. ಆದರೆ ಇವ ಆಡಂಬರಕ್ಕಾಗಿ, ಪ್ರಚಾರಕ್ಕಾಗಿ ಅಥವಾ ಔಪಚಾರಿಕವಾಗಿ ಮಾಡಬೇಕಾದ ಕೆಲಸಗಳಲ್ಲ. ಒಬ್ಬ ನಿಸ್ವಾರ್ಥವಾಗಿ, ಕೇವಲ ಅಲ್ಲಾಹನ ಮೆಚ್ಚುಗೆ ಮತ್ತು ಪರಲೋಕದ ಪ್ರತಿಫಲವನ್ನು ನಿರೀ ಈ ಕೆಲಸಗಳನ್ನು ಮಾಡಿದರೆ ಅವು ಶ್ರೇಷ್ಠ ಸತ್ಕಾರ್ಯಗಳೆಂದು ಪರಿಗಣಿಸಲ್ಪಡುವುದಲ್ ಆದರಿಂದ ಭಾರೀ ಪುಣ್ಯವು ಪ್ರಾಪ್ತವಾಗುವುದು.

ಅನಾಥರ ಪೋಷಣೆ

نْ سَهْلِ بْنِ سَعْدٍ (رض) عَنِ النَّبِيِّ ﷺ قَالَ : اَنَا وَكَافِلُ الْيَتِيْمِ
يْ الْجَنَّةِ هٰكَذَا وَقَالَ بِاِصْبَعَيْهِ السَّبَّابَةِ وَالْوُسْطٰى
(بخاری کتاب الادب)

ಪ್ರವಾದಿವರ್ಯರು(ಸ) ತಮ್ಮ ತೋರುಬೆರಳು ಮತ್ತು ನಡುಬೆರಳನ್ನು ಎ ತೋರಿಸುತ್ತಾ, ''ಅನಾಥರನ್ನು ಪೋಷಿಸುವವನು ಮತ್ತು ನಾನು ಸ್ವರ್ಗದಲ್ಲಿ ಈ ರೀತಿ ಇರುವೆವು ಎಂದು ಹೇಳಿದರು. [ಸಹ್ಲ್ ಬಿನ್ ಸಅದ್(ರ) -ಬುಖಾ

ಬಾಲ್ಯದಲ್ಲೇ ತನ್ನ ತಂದೆಯನ್ನು ಕಳಕೊಂಡವನಿಗೆ ಇಸ್ಲಾಮಿ ಪಾರಿಭಾಷಿಕದ ಯತೀಮ್(ಅನಾಥ) ಎನ್ನುತ್ತಾರೆ. ಇಂತಹ ಮಕ್ಕಳು ದುರ್ಬಲರಾಗಿದ್ದು ಸಾಮಾನ್ಯವಾ ಅವರಿಗೆ ಸಂರಕ್ಷಣೆಯ ತೀವ್ರ ಅಗತ್ಯವಿರುತ್ತದೆ. ವಾಸ್ತವದಲ್ಲಿ ಇಂತಹ ಅನಾಥರು ಯಾವುದ ಸಮಾಜದ ಅತ್ಯಂತ ದುರ್ಬಲ ವರ್ಗವಾಗಿರುತ್ತಾರೆ. ಅಂತೆಯೇ ಅವರ ರಕ್ಷಣೆ ಮತ ಪೋಷಣೆಯು ಬಹಳ ದೊಡ್ಡ ಪುಣ್ಯ ಕಾರ್ಯವಾಗಿದೆ. ಪವಿತ್ರ ಕುರ್‌ಆನಿನಲ್ಲಿ ಅಲ್ಲ ಅತ್ಯಂತ ಪರಿಣಾಮಕಾರೀ ಮಾತುಗಳಲ್ಲಿ ಅನಾಥರಿಗೆ ಅವರ ಹಕ್ಕುಗಳನ್ನು ನೀಡಬೇಕೆಂದ ಮತ್ತು ಅವರಿಗೆ ನೆರವಾಗಬೇಕೆಂದು ಬೋಧಿಸಲಾಗಿದೆ. ಸ್ವತಃ ಪ್ರವಾದಿ ಮುಹಮ್ಮದ್(ಸ ಅನಾಥರ ಬಗ್ಗೆ ಅಸಾಮಾನ್ಯ ಕಳಕಳಿ ಹೊಂದಿದ್ದರು. 'ಅನಾಥ ಸಂರಕ್ಷಕ' ಎಂಬುದು ಅವ ಗಿರುವ ಪ್ರಮುಖ ಬಿರುದುಗಳಲ್ಲಿ ಒಂದಾಗಿದೆ.

ಈ ಹದೀಸ್‌ನಲ್ಲಿ ಪ್ರವಾದಿವರ್ಯರು(ಸ) ಅನಾಥ ಸಂರಕ್ಷಕರಿಗೆ ಸ್ವರ್ಗದ ಸುವಾರ್ತೆ ನೀಡಿರುವರು. ತೋರುಬೆರಳು ಮತ್ತು ನಡುಬೆರಳುಗಳು ಪರಸ್ಪರ ಬಹಳ ನಿಕಟವಾಗಿರುವಂತೆ ತಾನು ಮತ್ತು ಅನಾಥ ಸಂರಕ್ಷಕರು ಸ್ವರ್ಗದಲ್ಲಿ ಪರಸ್ಪರ ಬಹಳ ನಿಕಟರಾಗಿರುವೆವೆಂದು ಅವರ ಹೇಳಿರುವರು.

ಅನಾಥರ ಸಂರಕ್ಷಣೆ ಎಷ್ಟು ಶ್ರೇಷ್ಠ ಕಾರ್ಯವಾಗಿದ್ದರೂ ಈ ಕಾರ್ಯವನ ಮಾಡುವವನು ಸತ್ಯವಿಶ್ವಾಸಿ ಮತ್ತು ಸತ್ಕರ್ಮಿಯಾಗಿದ್ದರೆ ಮಾತ್ರ ಅವನಿಗೆ ಇದರ ಪ್ರತಿಫ

ಗುವುದು ಎಂಬ ಅಂಶ ಇಲ್ಲಿ ಗಮನಾರ್ಹವಾಗಿದೆ. ಪವಿತ್ರ ಕುರ್‌ಆನ್ ಮತ್ತು ಹದೀಸ್‌ನ ಸ್ಪಷ್ಟ ಆದೇಶಗಳಿಂದ ತಿಳಿಯುವಂತೆ ಒಬ್ಬ ಸತ್ಯನಿಷೇಧಿ ಅಥವಾ ಕರ್ಮಭ್ರಷ್ಟ ವ್ಯಕ್ತಿಯು ವಲ ಅನಾಥರ ಸಂರಕ್ಷಣೆ ಮಾಡಿದನೆಂಬ ಒಂದೇ ಕಾರಣಕ್ಕಾಗಿ ಸ್ವರ್ಗ ಪ್ರವೇಶಕ್ಕೆ ಅರ್ಹನಾಗಿ ಡುವುದಿಲ್ಲ. ಇದು ಧರ್ಮದ ಎಷ್ಟೊಂದು ಪ್ರಾಮುಖ್ಯ ನಿಯಮವಾಗಿದೆಯೆಂದರೆ ಇದನ್ನು ತಿಯೊಂದು ಪ್ರವಾದಿ ವಚನದಲ್ಲೂ ಪ್ರತ್ಯೇಕವಾಗಿ ವಿವರಿಸುವ ಅಗತ್ಯವಿಲ್ಲ. ಇದು, ಸಾಮಾನ್ಯ ಬುದ್ಧಿಗೂ ಇರುವ ವ್ಯಕ್ತಿಗೆ ಸ್ವಯಂ ಅರ್ಥವಾಗುವಂತಹ ವಿಷಯವಾಗಿದೆ.

ದೇವಭಕ್ತಿ

عَنْ اَبِی ذَرٍّ (رض) قال قال لی رسول الله ﷺ : اِتَّقِ اللّٰهَ حَيْثُ مَا كُنْتَ , وَاتَّبِعِ السَّيِّئَةَ الحَسَنَةَ تَمْحُهَا , وخَالِقِ النَّاسَ بِخُلُقٍ حَسَنٍ (الترمذی ابواب البرّ)

ನನ್ನೊಡನೆ ಪ್ರವಾದಿ(ಸ) ಹೀಗೆ ಹೇಳಿದರು:

''ನೀವೆಲ್ಲಿದ್ದರೂ ಅಲ್ಲಾಹನನ್ನು ಭಯಪಡಿರಿ. ಕೆಡುಕಿನ ಬಳಿಕ ಒಳಿತನ್ನು ಮಾಡಿ ಆ ಮೂಲಕ ಕೆಡುಕನ್ನು ಅಳಿಸಿರಿ. ಜನರೊಂದಿಗೆ ಸೌಜನ್ಯದಿಂದ ವರ್ತಿಸಿರಿ.''

[ಹ. ಅಬೂದರ್(ರ) -ತಿರ್ಮಿದಿ]

ಇದು ಪ್ರವಾದಿವರ್ಯರ(ಸ) ಒಂದು ಪ್ರಮುಖ ಹಾಗೂ ಅತ್ಯಂತ ವಿಶಾಲಾರ್ಥವುಳ್ಳ ಬೋಧನೆಯಾಗಿದೆ. ನೀವೆಲ್ಲಿದ್ದರೂ ಅಲ್ಲಾಹನನ್ನು ಭಯಪಡಿರಿ ಎಂದರೆ, ನೀವು ಭೂಮಿಯ ಯಾವ ಭಾಗದಲ್ಲಿದ್ದರೂ ಆಕಾಶದಲ್ಲಿ ಹಾರಾಡುತ್ತಿರುವಾಗಲೂ ಜಲದಲ್ಲಿ ಪ್ರಯಾಣಿಸುತ್ತಿರು ವಾಗಲೂ, ಏಕಾಂತದಲ್ಲಿರುವಾಗಲೂ ಜನರ ಜೊತೆಗಿರುವಾಗಲೂ ಮನೆಯಲ್ಲೂ, ಪೇಟೆಯಲ್ಲೂ, ಮಸೀದಿಯಲ್ಲೂ, ಅಂಗಡಿಯಲ್ಲೂ ರಾಜಕೀಯ ಕ್ಷೇತ್ರದಲ್ಲೂ ಶ್ರೀಮಂತಿಕೆಯಲ್ಲಿರುವಾಗಲೂ, ದಾರಿದ್ರ್ಯದಲ್ಲಿರುವಾಗಲೂ ಯೌವನದಲ್ಲೂ ವೃದ್ಧಾಪ್ಯದಲ್ಲೂ ಎಲ್ಲೆಲ್ಲೂ ಅನುಕ್ಷಣವೂ ನಿಮ್ಮ ದೇವನನ್ನು ಅಂಜುತ್ತಿರಬೇಕು. ಅವನ ಕ್ರೋಧಕ್ಕೆ ಪಾತ್ರರಾಗುವ ಯಾವ ಪಾಪಕಾರ್ಯವನ್ನೂ ಮಾಡಬಾರದು.

ಈ ರೀತಿ ದೇವನಿಗೆ ಅಂಜುತ್ತಾ, ಅವನು ಮೆಚ್ಚದ ಕಾರ್ಯಗಳಿಂದೆಲ್ಲಾ ದೂರವಿರುತ್ತಾ ಎಚ್ಚರಿಕೆಯ, ದೇವಭಕ್ತಿಯ ಜೀವನ ಸಾಗಿಸುವಾಗಲೂ ಮನುಷ್ಯನಿಂದ ಏನಾದರೂ ತಪ್ಪುಗಳು ಸಂಭವಿಸಬಹುದಾದ ಸಾಧ್ಯತೆಗಳಿವೆ. ಒಂದು ವೇಳೆ ಅಂತಹ ತಪ್ಪೇನಾದರೂ ಸಂಭವಿಸಿ ಬಿಟ್ಟರೆ ಮನುಷ್ಯನು ಆ ತಪ್ಪಿನ ಪ್ರಭಾವವನ್ನು ಅಳಿಸಲಿಕ್ಕಾಗಿ ಅದರ ಬೆನ್ನಿಗೇ ಸತ್ಕರ್ಮಗಳನ್ನು ಮಾಡಬೇಕು. ''ವಾಸ್ತವದಲ್ಲಿ ಪುಣ್ಯ ಕಾರ್ಯಗಳು ಪಾಪ ಕಾರ್ಯಗಳನ್ನು ದೂರೀಕರಿಸುತ್ತವೆ'' ಎಂದು ಪವಿತ್ರ ಕುರ್‌ಆನಿನಲ್ಲೂ ಹೇಳಲಾಗಿದೆ. (11:114)

ಜನರೊಂದಿಗೆ ಸೌಜನ್ಯದಿಂದ ವರ್ತಿಸಿರಿ ಎಂಬ ಮಾತಿನಲ್ಲಿ ದೇವಭಕ್ತಿ ಮ ಧರ್ಮನಿಷ್ಠೆಯ ನೈಜ ಸ್ಫೂರ್ತಿಯು ಗೋಚರಿಸುತ್ತದೆ. ಎಲ್ಲಿ ನಿಜವಾದ ದೇವಭಕ್ತಿ ಇರುವುದೋ ಅಲ್ಲಿ ಸೌಜನ್ಯ ಮತ್ತು ಸಭ್ಯತೆಯೂ ಇರುವುದು. ಒಬ್ಬ ಮನುಷ್ಯನು ಅಲ್ಲಾಹನನ್ನು ಎಷ್ಟು ಹೆಚ್ಚಾ ಭಯಪಡುವನೋ ಅಷ್ಟೇ ಹೆಚ್ಚಾಗಿ ಅಲ್ಲಾಹನ ದಾಸರ ಪಾಲಿಗೆ ಉತ್ತಮನಾಗಿರುವನು.

ಜನಸೇವೆ

نْ ابِى هُرَيْرَةَ (رض) أَنَّ رَسُولَ اللهِ ﷺ قَالَ : بَيْنَمَا رَجُلٌ
مْشِى بِطَرِيقٍ ، وَجَدَ غُصْنَ شَوْكٍ عَلَى الطَّرِيقِ
فَاخَّرَهُ فَشَكَرَ اللّٰهُ لَهُ فَغَفَرَ لَهُ (مسلم كتاب البرّ)

ಪ್ರವಾದಿವರ್ಯರು(ಸ) ಹೀಗೆ ಹೇಳಿರುವರು:

''ಒಬ್ಬ ವ್ಯಕ್ತಿಯು ದಾರಿಯಲ್ಲಿ ನಡೆಯುತ್ತಿರುವಾಗ, ಮುಳ್ಳಿನ ಗೆಲ್ಲೊಂದು ದಾರಿಯ ಬಿದ್ದಿರುವುದನ್ನು ಕಂಡು ಅದನ್ನು ಅಲ್ಲಿಂದ ದೂರ ಸರಿಸಿದನೆಂದಾದರೆ ಅಲ್ಲಾಹನು ಅವನ ಕೃತ್ಯವನ್ನು ಗೌರವಿಸಿದನು ಮತ್ತು ಅವನನ್ನು ಕ್ಷಮಿಸಿಬಿಟ್ಟನು.''

[ಹ. ಅಬೂ ಹುರೈರಾ(ರ) -ಮುಸ್ಲಿಮ

ದಾರಿಯಲ್ಲಿರುವ ಮುಳ್ಳು ಆ ದಾರಿಯಲ್ಲಿ ನಡೆಯುವ ಯಾರಿಗಾದರೂ ಚು ಅವರಿಗೆ ನೋವಾಗುವ ಸಂಭವ ಇದೆ. ಇಂತಹ ಸಂಭವನೀಯ ಕಷ್ಟದಿಂದ ಜನರ ರಕ್ಷಿಸಬೇಕೆಂಬ ಉದ್ದೇಶದಿಂದ ಒಬ್ಬ ವ್ಯಕ್ತಿ ಆ ಮುಳ್ಳನ್ನು ಸರಿಸಿದರೆ ಅದೊಂದು ಗೌರವಾಹ ಪುಣ್ಯ ಕಾರ್ಯವೆನಿಸಿಕೊಳ್ಳುತ್ತದೆ. ಮಾತ್ರವಲ್ಲ, ಅದು ಒಬ್ಬ ವ್ಯಕ್ತಿಯ ಪಾರಲೌಕಿಕ ಮೋಕ್ಷಕ ಕಾರಣವಾಗಿ ಬಿಡುತ್ತದೆ. ಇದಕ್ಕೆ ಕಾರಣವೇನೆಂದರೆ ಮೇಲ್ನೋಟಕ್ಕೆ ಅದೊಂದು ತೀರಾ ಸ ಕಾರ್ಯವಾದರೂ ಅದನ್ನು ಮಾಡುವವನು ಆ ಮೂಲಕ ತನ್ನಲ್ಲಿರುವ ದೇವನಿಷ್ಠೆ ಮ ದೇವನ ದಾಸರ ಬಗ್ಗೆ ತನಗಿರುವ ಕಳಕಳಿಯನ್ನು ಪ್ರಕಟಿಸಿದಂತಾಗುತ್ತದೆ. ನಿಜವಾಗಿ ಭಾವನೆಗಳು ಧರ್ಮದ ತಿರುಳಾಗಿವೆ.

ದೇವನಿಷ್ಠೆ ಮತ್ತು ಜನಸೇವಾ ಭಾವನೆ ಇಲ್ಲದ ವ್ಯಕ್ತಿಗಳ ವರ್ತನೆಯು ಇದ ತದ್ವಿರುದ್ಧವಾಗಿರುತ್ತದೆ. ಇಂದು ಅಂತಹ ವರ್ತನೆಯನ್ನು ನಾವು ಎಲ್ಲೆಲ್ಲೂ ಕಾಣಬಹುದ ಒಬ್ಬನು ಬಾಳೆ ಹಣ್ಣು ತಿಂದು ಅದರ ಸಿಪ್ಪೆಯನ್ನು ರಸ್ತೆಗೆಸೆಯುತ್ತಾನೆ. ಯಾರಾದರೂ ಅದ ಮೇಲೆ ನಡೆದು ಜಾರಿ ಬೀಳಬಹುದು ಮತ್ತು ಈ ರೀತಿ ಒಬ್ಬ ವ್ಯಕ್ತಿಗೆ ಸಂಕಟವಾದೀತು ಎಂ ಅವನು ಆಲೋಚಿಸುವುದಿಲ್ಲ. ಒಬ್ಬನು ಕೊಳೆತು ನಾರುವ ಯಾವುದಾದರೂ ವಸ್ತುವನ್ನು ನಾ ಜನ ಸೇರುವ ಸ್ಥಳಕ್ಕೆ ಅಥವಾ ಜನರು ನಡೆದಾಡುವ ಬೀದಿಗೆ ಎಸೆದು ಬಿಡುತ್ತಾನೆ. ಅಲ್ಲಿಂ ಹಾದು ಹೋಗುವ ಜನರಿಗೆ ಅದರಿಂದ ಹೇಸಿಕೆಯಾದೀತೆಂದಾಗಲಿ ವಾಕರಿಕೆ ಬಂದೀತೆಂದಾಗ

ಪಕ್ಷ ಅವರಿಗೆ ಅದು ಅಸಹ್ಯವಾದೀತೆಂದಾಗಲಿ ಅವನು ಆಲೋಚಿಸುವುದಿಲ್ಲ. ಒಬ್ಬನು ಬೇಡದ ಕಬ್ಬಿಣದ ಮೊಳೆಯನ್ನು ರಸ್ತೆಗೆಸೆದು ಬಿಡುತ್ತಾನೆ. ಅದು ಯಾರಿಗಾದರೂ ನರೆ ಆ ವ್ಯಕ್ತಿಗೆ ತೀವ್ರ ಹಾನಿಯಾಗಬಹುದು. ಕೆಲವೊಮ್ಮೆ ಟಿಟಾನಸ್‌ನಂತಹ ವ್ಯಾಧಿ ಿ ಅವರ ಜೀವಕ್ಕೂ ಅಪಾಯವುಂಟಾದೀತು ಎಂದು ಆಲೋಚಿಸುವ ಗೊಡವೆಗೇ ಅವನು ಗುವುದಿಲ್ಲ. ಮನುಷ್ಯನು ಎಷ್ಟು ಹೊಣೆಗೇಡಿ ಮತ್ತು ನಿಶ್ಚಿಂತನಾಗಿದ್ದಾನೆಂಬುದಕ್ಕೆ ಇವು ಉದಾಹರಣೆಗಳು ಮಾತ್ರ. ಇದಕ್ಕೆದುರಾಗಿ ಪ್ರವಾದಿವರ್ಯರ(ಸ) ಬೋಧನೆಗಳು ರೊಬ್ಬ ವ್ಯಕ್ತಿಯನ್ನೂ ಜವಾಬ್ದಾರಿಯುತನಾದ, ಮಾನವೀಯ ಕಳಕಳಿಯುಳ್ಳ ಸಜ್ಜನನಾಗಿ ರ್ಪಡಿಸುತ್ತದೆ.

ಸಹಾನುಭೂತಿ

عَنْ اَبِی موسیٰ الاشعری(رض)قَالَ قَالَ رَسُوْلُ اللّٰهِ ﷺ
اَطْعِمُوْا الجَائِعَ وَعُودُوا الْمَرِيضَ وَفُكُّوْا الْعَانِیَ
(بخاری کتاب المرضٰ

ಪ್ರವಾದಿವರ್ಯ(ಸ)ರು ಹೀಗೆ ಹೇಳಿರುವರು:

''ಹಸಿದವನಿಗೆ ಉಣಬಡಿಸಿರಿ, ರೋಗಿಯನ್ನು ಸಂದರ್ಶಿಸಿರಿ ಮತ್ತು ಕೈದಿಯನ್ನು ಗಡೆಗೊಳಿಸಿರಿ.'' [ಹಝ್ರತ್ ಅಬೂ ಮೂಸಾ ಅಶ್‌ಅರಿ(ರ) -ಬುಖಾರಿ]

ಇಸ್ಲಾಮ್ ಮನುಷ್ಯನಲ್ಲಿ ಪ್ರೀತಿ, ವಾತ್ಸಲ್ಯ, ದಯೆ, ಅನುಕಂಪಗಳೇ ನವಾಗಿರುವಂತಹ ಸಚ್ಚಾರಿತ್ರ್ಯವನ್ನು ಬೆಳೆಸ ಬಯಸುತ್ತದೆ. ಮನುಷ್ಯನು ಇತರರು ಗಲ್ಲಿರುವಾಗ ಅವರಿಗೆ ನೆರವಾಗಬೇಕು. ಇತರರ ಸಂಕಷ್ಟಗಳನ್ನು ತನ್ನ ಸಂಕಷ್ಟಗಳೆಂದು ಣಿಸಬೇಕು ಮತ್ತು ಅವನ ಈ ಕಾಳಜಿ ತನ್ನ ಆಪ್ತರಿಗೆ ಮತ್ತು ಸ್ವಜಾತಿ ಬಾಂಧವರಿಗೆ ಮಾತ್ರ ಲಾಗಿರದೆ ತನ್ನವರು ಪರರೆಂಬ ಭೇದವಿಲ್ಲದೆ, ಜಾತಿ ಮತ ಪಕ್ಷಪಾತಗಳಿಲ್ಲದೆ ಸರ್ವರಿಗೂ ಮಿಸುವಂತಿರಬೇಕು.

ಹಸಿದವನಿಗೆ ಉಣಬಡಿಸುವುದು ಮತ್ತು ಬಡವರ ದಾರಿದ್ರ್ಯವನ್ನು ನೀಗಿಸುವುದು ಮಿನ ಪ್ರಮುಖ ಉದ್ದೇಶಗಳಲ್ಲೊಂದು. ರೋಗಿಯನ್ನು ಸಂದರ್ಶಿಸಿರಿ ಎಂಬ ಮಾತಿನಲ್ಲಿ ಗಿಯ ಯೋಗಕ್ಷೇಮ ವಿಚಾರಿಸಬೇಕು, ಅವನ ಸೇವೆ ಹಾಗೂ ಆರೈಕೆ ಮಾಡಬೇಕು ಎಂಬ ರ್ವವೂ ಸೇರಿದೆ. ಇನ್ನು ಕೈದಿಗಳನ್ನು ಬಿಡುಗಡೆಗೊಳಿಸುವುದೆಂದರೆ, ನಿರಪರಾಧಿಗಳಾಗಿದ್ದು ವುದಾದರೂ ಕಾರಣದಿಂದ ಬಂಧಿಸಲ್ಪಟ್ಟವರನ್ನು ಸೂಕ್ತ ರೀತಿಯಲ್ಲಿ ಬಿಡಿಸಿಕೊಳ್ಳಲು ಸಬೇಕು ಎಂದರ್ಥ.

ವಿದಾಯ ಭಾಷಣ

جَابِرِ بْنِ عبْدِ اللَّهِ (رض) قَالَ اَتَى رَسُولُ اللَّهِ ﷺ
ـةَ فَخَطَبَ النَّاسَ وَقَالَ:((اِنَّ دِمَاءَ كُمْ وَاَمْوَالَكُمْ حَرَامٌ
كُمْ كَحُرْمَةِ يَوْمِكُمْ هَذَا فِى شَهْرِ كُمْ هَذَا فِىْ بَلَدِ كُمْ هَذَا
كُلُّ شَیْءٍ مِنْ اَمْرِ الْجَاهِلِيَّةِ تَحْتَ قَدَمَیَّ مَوْضُوعٌ ،وَدِمَاءُ
حِلِيَّةِ مَوْضُعَةٌ وَاِنَّ اَوَّلَ دَمٍ اَضَعُ مِنْ دِمَائِنَا دَمُ ابْنِ رَبِيعَةَ
لْحَارِثِ كَانَ مُسْتَرْضِعًا فِىْ بَنِى سَعْدٍ فَقَتَلَتْهُ هُذَيْلٌ ، وَرِبَا
هلِيَةِ مَوْضُعَةٌ وَاَوَّلُ رِبًا اَضَعُ رِبَانَا رِبَا عَبَّاسِ بْنِ عَبْدِ الْمُطَّلِبِ
مَوْضُوعٌ كُلُّهُ . فَاتَّقُو اللّٰهِ فِىْ النِّسَاءِ فَاِنَّكُمْ اَخَذْتُمُوهُنَّ
ـنِ اللّٰهِ وَسْتَحْلَلْتُمْ فُرُوجَهُنَّ بِكَلِمَاتِ اللّٰهِ وَلَكُمْ عَلَيْهِنَّ اَنْ
ـوطِئْنَ فُرُشَكُمْ اَحَدًا تَكْرَهُونَهُ فَاِنْ فَعَلْنَ ذٰلِكَ فَضْرِبُوهُنَّ
ـبًا غَيْرَ مُبَرِّحٍ وَلَهُنَّ عَلَيْكُمْ رِزْقُهُنَّ وَكِسْوَتُهُنَّ
ـمَعْرُفِ وَقَدْ تَرَكْتُ فِيكُمْ مَالَنْ تَضِلُّ بَعْدَهُ اِنِ اعْتَصَمْتُمْ
كِتَابَ اللَّهِ , وَاَنْتُمْ تُسَالُونَ عَنِّى فَمَا اَنْتُمْ قَائِلُونَ؟ قَالُو نَشْهَدُ
ـكَ قَدْ بَلَّغْتَ وَاَدَّيْتَ وَنَصَحْتَ فَقَالَ بِاصْبِعِهِ السَّبَّابَةِ
ـعُهَا اِلَى السَّمَاءِ وَيَنْكُتُهَا الٰى النَّاسِ اللَّهُمَّ اشْهَدُ ثَلٰثَ
ـاتٍ)) (مسلم-كتاب الحَج)

ಪ್ರವಾದಿವರ್ಯರು(ಸ) ಅರಫಾತ್‌ಗೆ ತಲಪಿ ಖುತ್ಬಾ(ಭಾಷಣ) ಮಾಡಿದರು. ಆ ಷಣದಲ್ಲಿ ಅವರು ಹೀಗೆ ಹೇಳಿದರು:

''ಈ ನಿಮ್ಮ ತಿಂಗಳಲ್ಲಿ, ಈ ನಿಮ್ಮ ನಗರದಲ್ಲಿ, ಈ ನಿಮ್ಮ ದಿನವು ಪವಿತ್ರ ಗಿರುವಂತೆಯೇ ನಿಮ್ಮ ರಕ್ತ ಮತ್ತು ಸಂಪತ್ತು ನಿಮ್ಮ(ಪರಸ್ಪರರ) ಪಾಲಿಗೆ ಪವಿತ್ರವಾಗಿವೆ. ಕ್ತರಿಕೆ! ಅಜ್ಞಾನ ಕಾಲದ ಎಲ್ಲ ಕಂದಾಚಾರಗಳು ನನ್ನ ಪಾದದಡಿಯಲ್ಲಿವೆ. ಅಜ್ಞಾನ ಕಾಲದ ಲೆಯ ಪ್ರತೀಕಾರದ ಹಕ್ಕುಗಳನ್ನೆಲ್ಲಾ ರದ್ದುಗೊಳಿಸಲಾಗಿದೆ. ಪ್ರಪ್ರಥಮವಾಗಿ ನಾನು ನನ್ನ ಧು ಇಬ್ನು ರಬೀಅ ಬಿನ್ ಹಾರಿಸ್‌ರ ಹತ್ಯೆಯ ಪ್ರತೀಕಾರವನ್ನು ಕೈ ಬಿಡುತ್ತೇನೆ. ಆತನು, ಬನೀ ದ್ ಗೋತ್ರದವರ ಹಾಲು ಕುಡಿದವನು. ಆತನನ್ನು ಹುಝೈಲ್ ಹತ್ಯೆ ಮಾಡಿದ್ದನು. ಅಜ್ಞಾನ ಲದ ಬಡ್ಡಿಯನ್ನು ರದ್ದುಗೊಳಿಸಲಾಗಿದೆ. ಪ್ರಪ್ರಥಮವಾಗಿ ನಾನು ನನ್ನ ಬಂಧು ಅಬ್ಬಾಸ್ ಬಿನ್ ಬ್ದುಲ್ ಮುತ್ತಲಿಬ್‌ರಿಗೆ ಸಲ್ಲಬೇಕಾಗಿದ್ದ ಬಡ್ಡಿಯನ್ನು ಸಂಪೂರ್ಣವಾಗಿ ಕೈ ಬಿಡುತ್ತೇನೆ.

(ಜನರೇ!) ಮಹಿಳೆಯರ ವಿಷಯದಲ್ಲಿ ಅಲ್ಲಾಹನನ್ನು ಭಯಪಡಿರಿ. ಏಕೆಂದರೆ ನೀವು ಲ್ಲಾಹನ ರಕ್ಷೆಯೊಂದಿಗೆ ಅವರನ್ನು ಪಡೆದಿರುವಿರಿ. ಅಲ್ಲಾಹನ ಆದೇಶ ಪ್ರಕಾರ ಅವರ ಗುಪ್ತಾಂಗ ನ್ನು ಧರ್ಮಬದ್ಧಗೊಳಿಸಿ ಕೊಂಡಿರುವಿರಿ. ಅವರಿಗೆ ನಿಮ್ಮ ಬಗ್ಗೆ ಇರುವ ಬಾಧ್ಯತೆಯೇನೆಂದರೆ ರು ನಿಮಗೆ ಇಷ್ಟವಿಲ್ಲದ ಯಾರನ್ನೂ ನಿಮ್ಮ ಮಂಚದಲ್ಲಿ ಕೂರಿಸಬಾರದು. ಅವರು ಗೆ ಮಾಡಿದರೆ ನೀವು ಅವರಿಗೆ ಹೊಡೆಯಬಹುದು. ಆದರೆ ಅದು ಹಾನಿ ಮಾಡಬಲ್ಲ ಡೆತವಾಗಿರಬಾರದು. ಇನ್ನು ನಿಮಗೆ ಅವರ ಬಗ್ಗೆ ಇರುವ ಕರ್ತವ್ಯವೇನೆಂದರೆ ಅವರಿಗೆ ವು ಸೂಕ್ತವಾದ ರೀತಿಯಲ್ಲಿ ಅನ್ನ ವಸ್ತ್ರಗಳನ್ನು ಒದಗಿಸುವ ಏರ್ಪಾಡು ಮಾಡಬೇಕು.

(ಜನರೇ!) ನಾನು ನಿಮ್ಮ ಮಧ್ಯೆ ಒಂದು ವಸ್ತುವನ್ನು ಬಿಟ್ಟು ಹೋಗುತ್ತಿರುವೆನು. ನೀವು ನ್ನು ಬಲವಾಗಿ ಹಿಡಿದುಕೊಂಡರೆ ನೀವೆಂದೂ ದಾರಿ ತಪ್ಪಲಾರಿರಿ. ಅದು ಅಲ್ಲಾಹನ ಗ್ರಂಥ.

(ಜನರೇ!) ನಿಮ್ಮೊಡನೆ ನನ್ನ ಕುರಿತು ವಿಚಾರಿಸಲಾದರೆ ನೀವೇನು ಹೇಳುವಿರಿ? ಜನರು ಿದರು: ''ತಾವು (ಅಲ್ಲಾಹನ ಧರ್ಮವನ್ನು) ನಮಗೆ ತಲುಪಿಸಿದ್ದೀರೆಂದೂ, ತಮ್ಮ ್ಯವನ್ನು ಈಡೇರಿಸಿರುವಿರೆಂದೂ ಮತ್ತು ನಮ್ಮ ಹಿತಾಕಾಂಕ್ಷಿಯಾಗಿದ್ದೀರೆಂದೂ ನಾವು ಹೇಳುವೆವು.''

ಪ್ರವಾದಿವರ್ಯರು(ಸ) ತಮ್ಮ ತೋರುಬೆರಳನ್ನು ಬಾನಿನೆಡೆಗೆ ಎತ್ತಿ ಅನಂತರ ಜನರ ಕಡೆಗೆ ರಿಸುತ್ತಾ ''ಅಲ್ಲಾಹ್! ನೀನು ಸಾಕ್ಷಿಯಾಗಿರು'' ''ಅಲ್ಲಾಹ್! ನೀನು ಸಾಕ್ಷಿಯಾಗಿರು'' ನು ಮೂರು ಬಾರಿ ಹೇಳಿದರು. [ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ(ರ) -ಮುಸ್ಲಿಮ್]

ಇವು, ಹಿ.ಶ. 10ರ ದುಲ್‌ಹಜ್ಜ್ ತಿಂಗಳಲ್ಲಿ ಅರಫಾ ಮೈದಾನದಲ್ಲಿ ಸುಮಾರು ಒಂದು ಮಂದಿ ಮುಸ್ಲಿಮರ ಸಮಕ್ಷಮ ಪ್ರವಾದಿ ಮುಹಮ್ಮದ್(ಸ) ಅವರು ಮಾಡಿದ ಪ್ರಖ್ಯಾತ ಯ ಭಾಷಣದ ಕೆಲವು ಪ್ರಮುಖ ಅಂಶಗಳಾಗಿವೆ. ಅದಾಗಲೇ ಇಸ್ಲಾಮೀ ವ್ಯವಸ್ಥೆಯನ್ನು ಪೂರ್ಣವಾಗಿ ತನ್ನೆಲ್ಲಾ ವೈಭವಗಳೊಂದಿಗೆ ಸ್ಥಾಪಿಸಿ ಆಗಿತ್ತು. ಅಜ್ಞಾನಾಧಾರಿತ ಮಿಥ್ಯ ಸ್ಥೆಯನ್ನು ಬುಡ ಸಹಿತ ಕಿತ್ತೊಗೆಯಲಾಗಿತ್ತು. ಮುಸ್ಲಿಮ್ ಸಮುದಾಯವೆಂಬ ಹೆಸರಲ್ಲಿ

ಆದರ್ಶ ಸಮಾಜವೊಂದು ಅಸ್ತಿತ್ವಕ್ಕೆ ಬಂದಿತ್ತು. ಅಲ್ಲಾಹನ ಸಂದೇಶವಾಹಕರು ಈ ರಿ ತಮ್ಮ ಮೂಲ ಕರ್ತವ್ಯವನ್ನು ಈಡೇರಿಸಿ ಶೀಘ್ರವೇ ಈ ಲೋಕಕ್ಕೆ ವಿದಾಯ ಹೇಳಲಿದ್ದ ಅಂತಹ ವಿಶಿಷ್ಟ ಸಂದರ್ಭದಲ್ಲಿ ಪ್ರವಾದಿವರ್ಯರು(ಸ) ಸಮುದಾಯವನ್ನುದ್ದೇಶಿಸಿ ನೀಡಿ ಆದೇಶಗಳು ಕೇವಲ ಮುಸ್ಲಿಮ್ ಸಮುದಾಯಕ್ಕೆ ಮಾತ್ರವಲ್ಲ, ಸಂಪೂರ್ಣ ಮಾನವಕುಲ ಪಾಲಿಗೆ ಅಸಾಮಾನ್ಯ ಮಹತ್ವವನ್ನು ಹೊಂದಿದೆ. ಆ ಪೈಕಿ ಕೆಲವು ಆದೇಶಗಳ ಸಾರ ಇಲ್ಲಿದೆ:

1. ಮನುಷ್ಯನ ಜೀವ ಮತ್ತು ಸೊತ್ತುಗಳು: ಹಜ್ಜ್‌ನ ತಿಂಗಳು, ಹಜ್ಜ್‌ನ ದಿನಮ ಪಟ್ಟಣದಷ್ಟೇ ಗೌರವಾರ್ಹವೆಂದು ಘೋಷಿಸಲಾಯಿತು. ಆ ರೀತಿ ಉದಾಹರಣೆ ಕೊಡ ಕಾರಣವೇನೆಂದರೆ ಆ ತಿಂಗಳು, ಆ ದಿನ ಮತ್ತು ಆ ನಗರವು ಪವಿತ್ರ ಹಾಗೂ ಗೌರವಾರ ವೆಂಬುದು ಅರೇಬಿಯದಾದ್ಯಂತ ಸಾರ್ವತ್ರಿಕವಾಗಿ ಎಲ್ಲರೂ ವಿವಾದಾತೀತವಾಗಿ ಒಪ್ಪ ವಿಷಯವಾಗಿತ್ತು. ಇಸ್ಲಾಮ್ ಅವುಗಳ ಗೌರವಾರ್ಹತೆಯನ್ನು ಮತ್ತಷ್ಟು ಒತ್ತು ಕೊಟ್ಟು ಸಾರಿತ ಆದ್ದರಿಂದ ಜನರ ಜೀವ ಮತ್ತು ಸೊತ್ತುಗಳನ್ನು ರಕ್ಷಿಸಬೇಕು ಹಾಗೂ ಗೌರವಿಸಬೇಕೆನ್ನ ಇದಕ್ಕಿಂತ ಉತ್ತಮ ಹಾಗೂ ಪರಿಣಾಮಕಾರಿ ಉದಾಹರಣೆ ಬೇರೆ ಇರಲು ಸಾಧ್ಯವಿಲ್ಲ.

2. ಅಜ್ಞಾನ ಕಾಲದ ಪ್ರತೀಕಾರಗಳು, ಪ್ರಾಣ ಮತ್ತು ಸೊತ್ತಿನ ಪಾವಿತ್ರ್ಯ: ಅಜ್ಞಾನ ಕಾಲ ಪ್ರತೀಕಾರದ ಹಕ್ಕು ಮತ್ತು ಬೇಡಿಕೆಗಳನ್ನೆಲ್ಲಾ ಸಂಪೂರ್ಣವಾಗಿ ಅನೂರ್ಜಿತಗೊಳಿಸಲಾಯಿತ ಒಂದು ಕೊಲೆ ಸಂಭವಿಸಿದರೆ, ಆ ಕೊಲೆ ಮಾಡಿದ್ದ ವ್ಯಕ್ತಿ ಯಾವ ಗೋತ್ರಕ್ಕೆ ಸೇರಿರುವನ ಆ ಗೋತ್ರದ ವಿರುದ್ಧ ಹಲವು ವರ್ಷಗಳವರೆಗೂ ಪ್ರತೀಕಾರ ತೀರಿಸುತ್ತಾ ಇರುವ ಬರ್ಬ ಪದ್ಧತಿಯು ಅರೇಬಿಯಾದಲ್ಲಿತ್ತು. ಆದ್ದರಿಂದಲೇ ಒಮ್ಮೆ ಆರಂಭವಾಗುವ ಯುದ್ಧ ಅನ ವರ್ಷಗಳ ಬಳಿಕವೂ ಸ್ಥಗಿತಗೊಳ್ಳುತ್ತಿರಲಿಲ್ಲ. ಈ ಅಜ್ಞಾನಜನ್ಯ ಸಂಪ್ರದಾಯವನ್ನು ಇಸ್ಲಾ ಹತ್ತಿಕ್ಕಿತು. ಅದು ನ್ಯಾಯಪೂರ್ಣವಾದ 'ಕಿಸಾಸ್' ವ್ಯವಸ್ಥೆಯನ್ನು ಕಾನೂನಿನ ರೂಪದ ಅನುಷ್ಠಾನಿಸಿತು. ಅಂದರೆ ಒಂದು ಕೊಲೆ ನಡೆದರೆ ಆ ಕೊಲೆಗೆ ಪ್ರತೀಕಾರ ಕೊಲೆಗಾರನಿಂದ ಮ ತೀರಿಸಬೇಕು, ಅವನ ಗೋತ್ರದವರಿಂದ ಅಥವಾ ಗೋತ್ರದ ಇತರ ಯಾವ ವ್ಯಕ್ತಿಯಿಂದಲ ಅಲ್ಲ. ಈ ರೀತಿ ಇಸ್ಲಾಮ್ ನ್ಯಾಯ ನೀತಿಯ ವ್ಯವಸ್ಥೆಯನ್ನು ಸ್ಥಾಪಿಸಿತು. ಈ ಸಂಬಂಧ ಪ್ರವಾದಿವರ್ಯರು(ಸ) ತಮ್ಮ ಸ್ವಂತ ಗೋತ್ರದವರಾದ ರಬೀಅ ಬಿನ್ ಹಾರಿಸ್‌ರ ಪು ಕೊಲೆಯ ಪ್ರತೀಕಾರವನ್ನು ಮೊಟ್ಟಮೊದಲು ಕೈಬಿಟ್ಟರು. ರಬೀಅ ಬಿನ್ ಹಾರಿಸ್, ಪ್ರವಾದಿ ಚಿಕ್ಕಪ್ಪನ ಮಗನಾಗಿದ್ದರು. ಅವರ ಪುತ್ರ ಅಯಾಸ್ ಎಂಬಾತನನ್ನು ಆತನು ಬನೂಸಅ ಗೋತ್ರದವರ ಆಶ್ರಯದಲ್ಲಿ ಬೆಳೆಯುತ್ತಿದ್ದಾಗ ಹುರೈಲ್ ಎಂಬಾತನು ಕೊಂದಿದ್ದನು.

3. ಅಜ್ಞಾನ ಕಾಲದ ಬಡ್ಡಿ: ಅಜ್ಞಾನ ಕಾಲದಲ್ಲಿದ್ದ ಬಡ್ಡಿಯ ವ್ಯವಸ್ಥೆಯನ್ನು ಸಂಪೂರ್ಣವ ಅಳಿಸಿ ಹಾಕಲಾಯಿತು. ಇಸ್ಲಾಮ್ ಅದನ್ನು ನಿಷಿದ್ಧವೆಂದು ಘೋಷಿಸಿತು. ಕಾನೂ ಮೂಲಕವೂ ಅದನ್ನು ನಿಷೇಧಿಸಲಾಯಿತು. ಹಿಂದಿನಿಂದಲೂ ನಡೆದು ಬಂದಿದ್ದ ಎಲ್ಲ ಹಳೆ ಬಾಕಿಗಳನ್ನೂ ಧರ್ಮಬಾಹಿರವೆಂದು ಸಾರಿ ಕಾನೂನು ಮೂಲಕ ರದ್ದುಗೊಳಿಸಲಾಯಿ ಈ ಕಾನೂನನ್ನು ಕೂಡಾ ಪ್ರವಾದಿವರ್ಯರು(ಸ) ಪ್ರಥಮವಾಗಿ ತಮ್ಮ ಕುಟುಂಬದವರ ಮೆ

ಗೊಳಿಸಿ ತೋರಿಸಿದರು. ಪ್ರವಾದಿಯವರ ಚಿಕ್ಕಪ್ಪ ಹಝ್ರತ್ ಅಬ್ಬಾಸ್(ರ) ಇಸ್ಲಾಮ್ ರಿಸುವುದಕ್ಕಿಂತ ಮುಂಚೆ ಬಡ್ಡಿಯ ವ್ಯವಹಾರ ಮಾಡುತ್ತಿದ್ದರು. ಅನೇಕ ಸಾಲಗಾರರು ರಿಗೆ ಬಡ್ಡಿಕೊಡಲು ಬಾಕಿಯಿತ್ತು. ಪ್ರವಾದಿವರ್ಯರು(ಸ) ಪ್ರಥಮತಃ ಆ ಬಡ್ಡಿಯನ್ನು ದ್ದುಗೊಳಿಸಿರುವುದಾಗಿ ಘೋಷಿಸಿದರು.

4. ಮಹಿಳೆಯರ ಬಗ್ಗೆ ದೇವಭಯ: ಅಜ್ಞಾನ ಕಾಲದ ಅರೇಬಿಯಾದಲ್ಲಿ ಮಹಿಳೆಯರ ಸ್ಥಿಯು ಅತ್ಯಂತ ಶೋಚನೀಯವಾಗಿತ್ತು. ಅವರು ಎಲ್ಲ ರೀತಿಯ ಶೋಷಣೆ ಹಾಗೂ ರ್ತನಗಳಿಗೆ ತುತ್ತಾಗಿದ್ದರು. ಇಸ್ಲಾಮ್ ಅವರನ್ನು ಈ ಮರ್ದಿತ ಅವಸ್ಥೆಯಿಂದ ಗೌರವ ನಕ್ಕೇರಿಸಿತು. ಪತಿಪತ್ನಿಯರ ಹಕ್ಕು ಬಾಧ್ಯತೆಗಳನ್ನು ವಿವರವಾಗಿ ನಿಶ್ಚಯಿಸಿಕೊಟ್ಟಿತು. ವಾದಿವರ್ಯರು(ಸ) ತಮ್ಮ ವಿದಾಯ ಭಾಷಣದಲ್ಲಿ ಸಮಾಜದ ಈ ದುರ್ಬಲ ವರ್ಗದ ಕ್ಕಗಳ ಸಂರಕ್ಷಣೆಗಾಗಿ ವಿಶೇಷ ಬೋಧನೆ ನೀಡಿದರು. ಇದರಿಂದ ದುರ್ಬಲರಿಗೆ ಅವರ ಕ್ಕಗಳನ್ನು ದೊರಕಿಸುವ ಬಗ್ಗೆ ಪ್ರವಾದಿವರ್ಯರು(ಸ) ಎಷ್ಟು ಚಿಂತಿತರಾಗಿದ್ದರೆಂದು ಹಿಸಬಹುದು.

ನಿಮ್ಮ ಪತ್ನಿಯರಿಗೆ ಅವರ ಅಶನ ವಸನಗಳನ್ನು ಒದಗಿಸುವ ಸೂಕ್ತ ಏರ್ಪಾಡು ಡಬೇಕು ಹಾಗೂ ಅವರೊಂದಿಗೆ ದುರ್ವರ್ತನೆ ತೋರಬಾರದೆಂದು ಅವರು ಆದೇಶಿಸಿದರು. ರ ಬೋಧನೆಯಂತೆ ಮಹಿಳೆಯರನ್ನು ಹಿಂಸಿಸಬಾರದು. ಅವರ ಸುಧಾರಣೆ ಹಾಗೂ ಬೇತಿಗಾಗಿ ಅವರನ್ನು ಅನಿವಾರ್ಯ ಸಂದರ್ಭಗಳಲ್ಲಿ ಶಿಕ್ಷಿಸಬಹುದಾದರೂ ಅಂತಹ ಯೂ ಸರಳವಾಗಿರಬೇಕು. ಶರೀರಕ್ಕೆ ಯಾವುದೇ ತರದ ಹಾನಿಯುಂಟು ಮಾಡುವಂತಹ ಕೊಡಬಾರದು. ಮಹಿಳೆ ಕೂಡಾ ತನ್ನ ಪತಿಯ ಭಾವನೆಗಳನ್ನು ಗೌರವಿಸಬೇಕು. ಪತಿಯು ಷ್ಟಪಡದಂತಹ ವ್ಯಕ್ತಿಗಳನ್ನು ಮನೆಯಲ್ಲಿ ಸೇರಿಸಿಕೊಳ್ಳಬಾರದು.

ವಿದಾಯ ಹಜ್ಜ್‌ನ ಈ ಪವಿತ್ರ ಸಭೆಯಲ್ಲಿ ಪ್ರವಾದಿವರ್ಯರು(ಸ) ಇಂತಹ ಅನೇಕ ಮುಖ ಬೋಧನೆಗಳನ್ನು ನೀಡುವುದರ ಜೊತೆಗೆ ಒಳಿತು ಮತ್ತು ಸನ್ಮಾರ್ಗದ ನೈಜ ಲವಾಗಿರುವ ಪವಿತ್ರ ಕುರ್‌ಆನಿನ ಜೊತೆ ಗಾಢವಾದ ಸಂಬಂಧವನ್ನು ಬೆಳೆಸಿಕೊಳ್ಳಬೇಕೆಂದೂ ದೇಶಿಸಿದರು. ಜೀವನದ ಸಂಕೀರ್ಣ ಮಾರ್ಗಗಳ ಮತ್ತು ಜಟಿಲ ಸಮಸ್ಯೆಗಳ ಮಧ್ಯೆ ರ್‌ಆನ್ ಮಾತ್ರ ಮನುಷ್ಯನಿಗೆ ಸರಿಯಾದ ಮಾರ್ಗದರ್ಶನ ನೀಡಬಲ್ಲುದು ಮತ್ತು ಆ ರ್ಗದರ್ಶನವನ್ನು ಅನುಸರಿಸುವವನು ಎಂದೂ ದಾರಿಗೆಡಲಾರ ಎಂಬುದನ್ನು ನೆನಪಿಸಿದರು.

ಕೊನೆಯದಾಗಿ ಪ್ರವಾದಿವರ್ಯರು(ಸ) 'ನಾನು ಅಲ್ಲಾಹನ ಧರ್ಮವನ್ನು ನಿಮಗೆ ಲುಪಿಸಿದ್ದೇನೆಯೇ ಎಂದು ನಿಮ್ಮೊಡನೆ ಕೇಳಲಾದರೆ ಏನುತ್ತರ ಕೊಡುವಿರಿ' ಎಂದು ಪ್ರಶ್ನಿಸಿದರು. ವಾದಿವರ್ಯರಿಗೆ(ಸ) ತಮ್ಮ ಸಂದೇಶವಾಹಕತ್ವದ ಕರ್ತವ್ಯದ ಬಗ್ಗೆ ಎಂತಹ ತೀವ್ರ ಕಳಕಳಿ ತ್ತೆಂಬುದನ್ನು ಇದರಿಂದ ಊಹಿಸಬಹುದು. ನೆರೆದ ಜನರು, 'ತಾವು ತಮ್ಮ ಕರ್ತವ್ಯವನ್ನು ಸಕ್ಕೂ ನೆರವೇರಿಸಿರುವಿರಿ, ಸತ್ಯಧರ್ಮವನ್ನು ನಮಗೆ ತಲುಪಿಸಿರುವಿರಿ ಮತ್ತು ನಮ್ಮ ಶಾಕಾಂಕ್ಷೆಯನ್ನು ಪೂರ್ಣವಾಗಿ ಮಾಡಿರುವಿರಿ' ಎಂದು ಒಕ್ಕೊರಲಿನಿಂದ ಸಾರಿದಾಗ, ಅವರ

ಈ ಘೋಷಣೆಗೆ ಅಲ್ಲಾಹನನ್ನು ಸಾಕ್ಷಿಯಾಗಿ ಮಾಡಿದರು. ಇಷ್ಟಾದ ಮೇಲೆ ನಾಳೆ ಪರಲೋಕ ಯಾವ ವ್ಯಕ್ತಿಯೂ ತನ್ನ ದುರ್ನಡತೆಗಳನ್ನು ಸಮರ್ಥಿಸಲು, ತನಗೆ ಅಲ್ಲಾಹನ ಧರ್ಮ ಆದೇಶಗಳು ತಲುಪಿರಲಿಲ್ಲವೆಂದು ನೆಪವೊಡ್ಡಲು ಅವಕಾಶವೇ ಉಳಿದಿಲ್ಲ. ಆದ್ದರಿಂದ ಪ್ರವ ಮುಹಮ್ಮದ್‌ರು(ಸ) ನಮಗೆ ತಲಪಿಸಿ ಹೋಗಿರುವಂತಹ ಅಲ್ಲಾಹನ ಧರ್ಮದ ವಿಷ ದಲ್ಲಿ ನಮ್ಮ ಮೇಲಿರುವ ಹೊಣೆಗಾರಿಕೆಗಳೇನು? ನಮ್ಮ ವರ್ತನೆ ಹೇಗಿರಬೇಕು? ಮ ಒಂದು ವೇಳೆ ಆ ಕರ್ತವ್ಯಗಳನ್ನು ನಾವು ಈಡೇರಿಸದಿದ್ದರೆ ನಾಳೆ ಅಲ್ಲಾಹನ ಮುಂದೆ ವಿಚಾ ನಡೆಯುವಾಗ ನಾವು ಏನುತ್ತರ ನೀಡಬಲ್ಲೆವು ಎಂಬುದು ನಾವು ಚಿಂತಿಸಬೇಕಾದ ವಿಚಾರ.

ಮನಸ್ಸಿನ ಶ್ರೀಮಂತಿಕೆ

نْ اَبِىْ هُرَيْرَةَ (رض) عَنِ النَّبِىِّ ﷺ قَالَ : لَيْسَ الغَنِىُّ عَنْ كَثْرَةِ
رَضِ وَلَكِنَّ الْغِنَى غِنَى النَّفْسِ (البخارى كتاب الرقاق)

ಪ್ರವಾದಿವರ್ಯರು(ಸ) ಹೇಳಿದರು: ''ಶ್ರೀಮಂತಿಕೆ ಎಂಬುದು ಸಂಪತ್ ಸೌಕರ್ಯ ಆಧಿಕ್ಯದ ಹೆಸರಲ್ಲ. ಮನಸ್ಸಿನ ಶ್ರೀಮಂತಿಕೆಯೇ ನಿಜವಾದ ಶ್ರೀಮಂತಿಕೆಯಾಗಿದೆ.''

[ಹಝ್ರತ್ ಅಬೂ ಹುರೈರಾ(ರ) -ಬುಖಾ

ಈ ಪ್ರವಾದಿ ವಚನವು ಮನುಷ್ಯನ ಮನಃಶಾಸ್ತ್ರಕ್ಕೆ ಸಂಬಂಧಿಸಿದ ಪ್ರಮು ವಾಸ್ತವಿಕತೆಯೊಂದನ್ನು ತಿಳಿಸುತ್ತದೆ. ಜನರು ಒಬ್ಬನ ಬಳಿ ಧಾರಾಳ ಸಂಪತ್ ಸಾಮಗ್ರಿಗಳಿ ಅದುವೇ ಶ್ರೀಮಂತಿಕೆಯೆಂದು ಭಾವಿಸುತ್ತಾರೆ. ಆದರೆ ನಿಜಕ್ಕೂ ಇದುವೇ ಶ್ರೀಮಂ ಯಾಗಿದ್ದರೆ, ಸಂಪತ್ತುಳ್ಳ ಜನರೆಲ್ಲರೂ ಜಗತ್ತಿನಲ್ಲಿ ನೆಮ್ಮದಿಯಿಂದಿರಬೇಕಿತ್ತು. ಆದ ಈ ಲೋಕದಲ್ಲಿ ಅದೆಷ್ಟೋ ಜನ ಐಶ್ವರ್ಯವಂತರು ಅನೇಕ ಬಗೆಯ ಚಿಂತೆಗಳ ನರಳುತ್ತಿರುವುದನ್ನು ನಾವು ಕಾಣುತ್ತೇವೆ. ಸಾಕಷ್ಟು ಧನಕನಕಗಳಿದ್ದಾಗ್ಯೂ ಅವರು ಯಾವುದೋ ಅಸಮಾಧಾನ ಮತ್ತು ಅತೃಪ್ತಿಯಿಂದ ಕೊರಗುತ್ತಿರುತ್ತಾರೆ.

ತದ್ವಿರುದ್ಧವಾಗಿ ಮನಸ್ಸಿನ ಶ್ರೀಮಂತಿಕೆ ಪಡೆದವನು ತನ್ನ ಬಳಿ ಸಂಪತ್ ಸೌಕರ್ಯಗಳಿ ದಿದ್ದರೂ ನೆಮ್ಮದಿಯಿಂದ ಬಾಳುತ್ತಾನೆ. ಅವನು ತನ್ನ ಬಳಿ ಏನಿದೆಯೋ ಅದರ ತೃಪ್ತನಾಗಿರುವುದರಿಂದ ತಾನು ಬಡವನೆಂಬ ಭಾವನೆ ಅವನಲ್ಲಿ ಮೂಡುವುದಿಲ್ಲ. ಅವ ಈ ಮನೋಭಾವವು ಅವನಿಗೆ ಮನಃಶಾಂತಿಯನ್ನು ತಂದು ಕೊಡುತ್ತದೆ. ಇಂತ ಮನೋಭಾವದವರು ದಾರಿದ್ರ್ಯದಲ್ಲೂ ದೊರೆಗಳಂತೆ ಬಾಳುತ್ತಾರೆ.

نْ حَكِيمِ ابْنِ حِزَامٍ (رض) قَالَ سَأَلْتُ النَّبِىَّ ﷺ فَاَعْطَانِى ثُمَّ

سَاَلْتُهُ فَاعْطَانِیْ , ثُمَّ سَاَلْتُهُ فَاعْطَانِیْ ثُمَّ قَالَ اِنَّ هَذَا الْمَالَ =
وَرُبَّمَا قَالَ سُفْيَانُ , قَالَ لِیْ حَكِيمُ ! = اِنَّ هَذَا الْمَالَ خَضِرَةٌ
حُلْوَةٌ , فَمَنْ اَخَذَهُ بِطِيْبِ نَفْسٍ بُوْرِكَ لَهُ فِيْهِ وَمَنْ اَخَذَهُ
بِاَشْرَافِ نَفْسٍ لَمْ يُبَارَكْ لَهُ فِيْهِ وَكَانَ كَالَّذِیْ يَاْكُلُ وَلَا يَشْبَعُ
وَالْيَدُ الْعُلْيَا خَيْرٌ مِنَ الْيَدِ السُّفْلَى (البخاری کتاب الرقاق)

ನಾನು, ಪ್ರವಾದಿ(ಸ) ಅವರೊಡನೆ ನನಗೆ ಧನ ಬೇಕೆಂದು ಹೇಳಿದೆ. ಅವರು ನನಗೆ ೀಡಿದರು. ನಾನು ಇನ್ನಷ್ಟು ಬೇಕು ಎಂದೆ. ಅವರು ಇನ್ನಷ್ಟು ಕೊಟ್ಟರು. ನಾನು ಮತ್ತಷ್ಟು ೇಕು ಎಂದೆ. ಅವರು ಮತ್ತಷ್ಟನ್ನೂ ಕೊಟ್ಟರು. ಆ ಬಳಿಕ ಅವರು ಹೇಳಿದರು, ''ಹಕೀಮ್! ಈ ಧನ ಸಂಪತ್ತುಗಳು ಬಹಳ ಆಕರ್ಷಕ ಹಾಗೂ ಮಧುರವಾಗಿದೆ. ಯಾರು ಇದನ್ನು ಅಂತಃ ಶುದ್ಧಿಯೊಂದಿಗೆ ಪಡೆಯುವರೋ ಅವರಿಗೆ ಅದರಲ್ಲಿ ಸಮೃದ್ಧಿಯನ್ನು ದಯಪಾಲಿಸಲಾಗುತ್ತದೆ. ಆದರೆ ಯಾರಾದರೂ ಇದನ್ನು ಆಶೆಯೊಂದಿಗೆ ಪಡೆಯುವರೋ ಅವರಿಗೆ ಅದರಲ್ಲಿ ಸಮೃದ್ಧಿಯನ್ನು ನೀಡಲಾಗುವುದಿಲ್ಲ. ಅಂತಹ ಮನುಷ್ಯನ ಅವಸ್ಥೆಯು, ಎಷ್ಟು ತಿಂದರೂ ಹೊಟ್ಟೆ ತುಂಬದೆ, ತಿನ್ನುತ್ತಲೇ ಹೋಗುವವನಂತೆ ಆಗಿ ಬಿಡುತ್ತದೆ. ನೆನಪಿರಲಿ! ಮೇಲಿರುವ ಕೈಯು ಕೆಳಗಿರುವ ಕೈಗಿಂತ ಉತ್ತಮವಾಗಿದೆ.'' [ಹಕೀಮ್ ಬಿನ್ ಹಿಝಾಮ್(ರ) -ಬುಖಾರಿ]

ಅಲ್ಲಾಹನು ಸಂಪತ್ತಿನಲ್ಲಿ ಆಕರ್ಷಣೆಯನ್ನಿರಿಸಿದ್ದಾನೆ. ಇದರ ಉದ್ದೇಶ ಈ ವಿಷಯದಲ್ಲಿ ಮನುಷ್ಯನನ್ನು ಪರೀಕ್ಷಿಸುವುದಾಗಿದೆ. ಸಂಪತ್ತಿನ ದುರಾಶೆಗೆ ಸಿಲುಕಿದವನ ಆಶೆ ಹೆಚ್ಚುತ್ತಲೇ ಹೋಗುತ್ತದೆ. ಎಷ್ಟು ಸಂಪತ್ತು ಸಂಗ್ರಹವಾದರೂ ಅವನು ತೃಪ್ತನಾಗುವುದಿಲ್ಲ. ತನ್ನ ಬಳಿ ಎಷ್ಟಿದ್ದರೂ ಅವನಿಗೆ ಸಾಕಾಗುವುದಿಲ್ಲ. ಅತ್ತ, ಲೋಭ ಮತ್ತು ದುರಾಸೆಗಳಿಂದ ತನ್ನ ಮನಸ್ಸನ್ನು ಮುಕ್ತವಾಗಿಟ್ಟವನು ತನಗೆ ಸಿಕ್ಕಿದುದರಲ್ಲೇ ಸಂತೃಪ್ತನಾಗುತ್ತಾನೆ. ತನಗೇನು ಸಿಕ್ಕಿದರೂ ಅದಕ್ಕೆ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸುತ್ತಾನೆ. ಸ್ವಲ್ಪವೇ ಸಿಕ್ಕಿದರೂ ಅವನಿಗೆ ಸಾಕೆನಿಸುತ್ತದೆ. ಏಕೆಂದರೆ ಅವನ ಸಂಪತ್ತಿನಲ್ಲಿ ಅಲ್ಲಾಹನು ಸಮೃದ್ಧಿಯನ್ನಿಟ್ಟಿರುತ್ತಾನೆ.

'ಮೇಲಿರುವ ಕೈಯು ಕೆಳಗಿರುವ ಕೈಗಿಂತ ಉತ್ತಮವಾಗಿದೆ' ಎಂದರೆ ದಾನ ಕೊಡುವ ವನು ದಾನ ಸ್ವೀಕರಿಸುವವನಿಗಿಂತ ಉತ್ತಮನು ಎಂದರ್ಥ.

ಸ್ವೀಕಾರಾರ್ಹ ದಾನ

عَنْ اَبِی هُرَيْرَةَ (رضـ) قَالَ قَالَ رَسُولُ اللّٰهِ ﷺ : مَنْ تَصَدَّقَ

بِعَدْلِ تَمْرَةٍ مِنْ كَسْبٍ طَيِّبٍ وَلَا يَقْبَلُ اللّٰهُ وَلَا الطَّيِّبَ , وَاِنَّ
اللّٰهَ يَتَقَبَّلُهَا بِيَمِينِهِ ثُمَّ يُرَبِّيْهَا لِصَاحِبِهِ كَمَا يُرَبِّى اَحَدُكُمْ
فَلُوَّهُ حَتَّى تَكُونَ مَثْلَ الْجَبَلِ (بخارى كتاب الزكاة)

ಪ್ರವಾದಿ(ಸ) ಹೀಗೆ ಹೇಳಿರುವರು:

''ಅಲ್ಲಾಹನು ಶುದ್ಧ ವಸ್ತುವನ್ನು ಮಾತ್ರ ಸ್ವೀಕರಿಸುತ್ತಾನೆ. ಒಬ್ಬ ವ್ಯಕ್ತಿಯು ತನ್ನ ಶು ಸಂಪಾದನೆಯಿಂದ ಕೇವಲ ಒಂದು ಖರ್ಜೂರದಷ್ಟು ದಾನ ಮಾಡಿದರೂ ಅಲ್ಲಾಹನು ಅವ ದಾನವನ್ನು ಬಲಗೈಯಿಂದ ಸ್ವೀಕರಿಸುತ್ತಾನೆ ಮತ್ತು ನೀವು ನಿಮ್ಮ ಕರುವನ್ನು ಪೋಷಿಸುವಂ ಅವನು ಅದನ್ನು ಪೋಷಿಸುತ್ತಾನೆ. ಕೊನೆಗೆ ಅದು (ಆ ಸಾಮಾನ್ಯ ದಾನವು ಬೆಳೆದು) ಬೆಟ್ಟದಷ ದೊಡ್ಡದಾಗುತ್ತದೆ.'' [ಹಝ್ರುತ್ ಅಬೂ ಹುರೈರಾ(ರ) -ಬುಖಾರಿ

ಅಲ್ಲಾಹನ ಸಂಪ್ರೀತಿಗಾಗಿ ಅವನು ಮೆಚ್ಚುವ ಮಾರ್ಗದಲ್ಲಿ ಯಾರಾದರೂ ಸಂಪತ್ತನ ವ್ಯಯಿಸಿದರೆ ಅಲ್ಲಾಹನು ಅದನ್ನು ಬಹಳ ಗೌರವದಿಂದ ಕಾಣುತ್ತಾನೆ ಮತ್ತು ಪರಲೋಕದ ಅದಕ್ಕೆ ಭಾರೀ ಪ್ರತಿಫಲ ನೀಡುತ್ತಾನೆ. ಒಬ್ಬ ವ್ಯಕ್ತಿಗೆ, ದೊಡ್ಡ ಮೊತ್ತಗಳನ್ನು ದಾನವಾಗಿ ಕೊಡು ಸಾಮರ್ಥ್ಯವಿಲ್ಲದಿದ್ದರೆ ಅವನು ತನಗೆ ಸಾಧ್ಯವಿರುವಷ್ಟನ್ನು ದಾನ ಮಾಡಬೇಕು. ಏಕೆಂದ ಅಲ್ಲಾಹನ ದೃಷ್ಟಿಯಲ್ಲಿ ದಾನದ ಪ್ರಮಾಣಕ್ಕಿಂತ ಅದರ ಗುಣಮಟ್ಟ ಮುಖ್ಯವಾಗಿರುತ್ತದೆ ದಾನಿಯು ಎಂತಹ ಮನೋಭಾವದೊಂದಿಗೆ ದಾನ ಮಾಡಿರುವನೆಂಬುದನ್ನು ಅವನ ನೋಡುತ್ತಾನೆ. ದಾನ ಮಾಡುವಾತನ ಮನಸ್ಸಿನಲ್ಲಿ ಜನರು ತನ್ನನ್ನು ದಾನಶೂರನೆಂದ ಕರೆಯಬೇಕೆಂಬ ಅಭಿಲಾಶೆ ಇದೆಯೇ ಅಥವಾ ಅವನು ಕೇವಲ ದೇವನ ಮೆಚ್ಚುಗೆಗಾಗಿ ದಾ ನೀಡುತ್ತಿದ್ದಾನೆಯೇ ಎಂಬುದನ್ನು ಅಲ್ಲಾಹನು ಪರೀಕ್ಷಿಸುತ್ತಾನೆ. ಪ್ರಾಮಾಣಿಕ ಸಂಕಲ್ಪದೊಂದಿ ಕೊಡುವ ದಾನಕ್ಕೆ ಅಲ್ಲಾಹನ ದೃಷ್ಟಿಯಲ್ಲಿ ಬಹಳ ಗೌರವವಿದೆ. ಅಂತಹ ದಾನವು ಬಹ ಸಮೃದ್ಧಿದಾಯಕವಾಗಿರುತ್ತದೆ.

ದಾನವು ಅಲ್ಲಾಹನ ಬಳಿ ಸ್ವೀಕೃತವಾಗಬೇಕಿದ್ದರೆ ಅದಕ್ಕಿರುವ ಇನ್ನೊಂದು ಪ್ರಧಾ ಶರತ್ತು ಏನೆಂದರೆ ಅದು ಧರ್ಮಬದ್ಧ ಸಂಪಾದನೆಯಿಂದ ಮಾಡಿದ ದಾನವಾಗಿರಬೇಕು ನಿಷಿದ್ಧ ವಿಧಾನಗಳಿಂದ ಸಂಪಾದಿಸಿದ ಸಂಪತ್ತಿನಿಂದ ಒಬ್ಬ ವ್ಯಕ್ತಿ ಎಷ್ಟೇ ದೊಡ್ಡ ಮೊತ್ತವನ್ನು ದಾ ಮಾಡಿದರೂ ಅಲ್ಲಾಹನು ಅದನ್ನು ಸ್ವೀಕರಿಸುವುದಿಲ್ಲ, ಏಕೆಂದರೆ ಹರಾಮ್ ಅಥವಾ ನಿಷಿ ಸಂಪಾದನೆಯು ಅಲ್ಲಾಹನ ದೃಷ್ಟಿಯಲ್ಲಿ ಅಶುದ್ಧವಾಗಿದೆ. ಅವನು ಯಾವ ಅಶುದ್ಧ ವಸ್ತುವನು ಸ್ವೀಕರಿಸಲಾರನು.

ಸ್ತ್ರೀಯರೊಂದಿಗೆ ವರ್ತನೆ

عَنْ اَبِى هُرَيْرَةَ (رض) قَالَ قَالَ رَسُولُ اللّٰهِ ﷺ : اِسْتَوْصُوْا بِالنِّسَاءِ فَاِنَّ الْمَرْأَةَ خُلِقَتْ مِنْ ضِلْعٍ وَاِنَّ اَعْوَجَ شَىْءٍ فِى الضِّلْعِ اَعْلَاهُ فَاِنْ ذَهَبْتَ تُقِيْمُهُ كَسَرْتَهُ وَاِنْ تَرَكْتَهُ لَمْ يَزَلْ اَعْوَجَ , فَاسْتَوْصُوا بِالنِّسَاءِ

(البخارى , كتاب احادث الانبياء)

ಪ್ರವಾದಿ(ಸ) ಹೀಗೆ ಹೇಳಿರುವರು:

''ಸ್ತ್ರೀಯರೊಂದಿಗೆ ಉತ್ತಮವಾಗಿ ವರ್ತಿಸಿರಿ. ಏಕೆಂದರೆ ಸ್ತ್ರೀಯನ್ನು ಪಕ್ಕೆಲುಬಿನಿಂದ ಸೃಷ್ಟಿಸಲಾಗಿದೆ ಮತ್ತು ಅತಿ ಹೆಚ್ಚಿನ ವಕ್ರತೆಯು ಪಕ್ಕೆಲುಬಿನ ಮೇಲಿನ ಭಾಗದಲ್ಲಿರುತ್ತದೆ. ನೀವು ಅದನ್ನು ತೀರಾ ನೇರಗೊಳಿಸಲು ಹೊರಟರೆ ಅದು ಮುರಿದು ಹೋಗುವುದು ಮತ್ತು ಅದರ ಪಾಡಿಗೆ ಬಿಟ್ಟರೆ ಅದು ವಕ್ರವಾಗಿಯೇ ಉಳಿಯುವುದು. ಆದ್ದರಿಂದ ಸ್ತ್ರೀಯರೊಂದಿಗೆ ಉತ್ತಮವಾಗಿ ವರ್ತಿಸಿರಿ.'' [ಹಝ್ರತ್ ಅಬೂ ಹುರೈರಾ(ರ) -ಬುಖಾರಿ]

''ನಾವು ಮನುಷ್ಯನನ್ನು ಅತ್ಯುತ್ತಮ ಪ್ರಕೃತಿಯಲ್ಲಿ ಸೃಷ್ಟಿಸಿರುವೆವು'' ಎಂದು ಅಲ್ಲಾಹನು ಪವಿತ್ರ ಕುರ್‌ಆನಿನಲ್ಲಿ ತಿಳಿಸಿರುವನು (95:1). ಇಲ್ಲಿ ಮನುಷ್ಯನೆಂದರೆ ಅದರಲ್ಲಿ ಸ್ತ್ರೀ ಮತ್ತು ಪುರುಷ ಇಬ್ಬರೂ ಸೇರಿರುವರು. ಇದರ ಪ್ರಕಾರ ಸ್ತ್ರೀ ಪುರುಷರಿಬ್ಬರನ್ನೂ ಅಲ್ಲಾಹನು ಅತ್ಯುತ್ತಮ ಪ್ರಕೃತಿಯಲ್ಲಿ ಸೃಷ್ಟಿಸಿದ್ದಾನೆ. ಆದ್ದರಿಂದ ಸ್ತ್ರೀಯ ಸೃಷ್ಟಿ ಮತ್ತು ರಚನೆಯಲ್ಲಿ ಏನಾದರೂ ದೋಷವಿದೆ ಎಂಬುದು ಈ ಹದೀಸ್‌ನ ಆಶಯವಲ್ಲ ಎಂದು ದಿಟವಾಗಿ ಹೇಳಬಹುದು. ಸ್ತ್ರೀಯ ಸಹಜ ಸ್ವಭಾವದೊಂದಿಗೆ ಹೊಂದಾಣಿಕೆ ಮಾಡಿಕೊಂಡು, ಅತ್ಯಂತ ಸಂಯಮ ಹಾಗೂ ಕ್ಷಮಾಶೀಲತೆಯೊಂದಿಗೆ ಆಕೆಯ ಜೊತೆ ವರ್ತಿಸಬೇಕು ಎಂಬುದೇ ಈ ಮಾತಿನ ನಿಜವಾದ ಉದ್ದೇಶವಾಗಿದೆ.

ಸ್ತ್ರೀಯ ಸ್ವಭಾವದ ದೌರ್ಬಲ್ಯಗಳನ್ನು ಇಲ್ಲಿ ಪಕ್ಕೆಲುಬಿಗೆ ಹೋಲಿಸಲಾಗಿದೆ. ಈ ವಿಷಯಕ್ಕೆ ಸಂಬಂಧಿಸಿರುವ ಇನ್ನೊಂದು ಪ್ರವಾದಿ ವಚನದಿಂದ ಇದು ಸ್ಪಷ್ಟವಾಗುತ್ತದೆ. ಸಹೀಹ್ ಮುಸ್ಲಿಮ್ ಗ್ರಂಥದಲ್ಲಿ ಪ್ರಸ್ತಾಪಿಸಲಾಗಿರುವ ಹಝ್ರತ್ ಅಬೂ ಹುರೈರಾ(ರ) ಅವರಿಂದಲೇ ವರದಿ ಮಾಡಲಾಗಿರುವ ಆ ಪ್ರವಾದಿ ವಚನ ಹೀಗಿದೆ:

'ಸ್ತ್ರೀಯು ಪಕ್ಕೆಲುಬಿನಂತಿರುತ್ತಾಳೆ. ನೀವು (ಬಲವಂತವಾಗಿ) ಅದನ್ನು ನೇರಗೊಳಿಸ ಹೊರಟರೆ ಅದು ಮುರಿದು ಬಿಡುವುದು, ಇನ್ನು ನೀವು ಅದನ್ನು ಅದರ ಪಾಡಿಗೆ ಬಿಟ್ಟು ಬಿಟ್ಟರೆ, ಅದರಲ್ಲಿರುವ ವಕ್ರತೆಯ ಹೊರತಾಗಿಯೂ ಅದರಿಂದ ಪ್ರಯೋಜನ ಪಡೆಯಬಹುದು.'

ಪಕ್ಕೆಲುಬನ್ನು ಕೇವಲ ಹೋಲಿಕೆಗಾಗಿ ಪ್ರಸ್ತಾಪಿಸಲಾಗಿದೆ ಎಂಬುದಕ್ಕೆ ಈ ವಚನವು ಧಾರಾಳ ಆಧಾರವಾಗಿದೆ. ಈ ಹೋಲಿಕೆಯ ಉದ್ದೇಶ ಕೂಡಾ ಸ್ತ್ರೀಯೊಂದಿಗೆ ಸೌಮ್ಯವಾಗಿ ವರ್ತಿಸಬೇಕೆಂದು ಪುರುಷನಿಗೆ ಬೋಧಿಸುವುದಾಗಿದೆಯೇ ಹೊರತು ಇದು ಸ್ತ್ರೀಯನ್ನು ಕೀಳಾಗಿಸುವ ಮಾತಲ್ಲ.

ಪುರುಷರಿಗೆ ಹೋಲಿಸಿದರೆ ಮಹಿಳೆಯರು ಸಾಮಾನ್ಯವಾಗಿ ಹೆಚ್ಚು ಭಾವುಕರಾಗಿರುತ್ತಾರೆ. ದೇವನು ಮಹಿಳೆಯರಿಗೆ, ಪುರುಷರಿಗಿಂತ ಭಿನ್ನವಾದ ಕೆಲವು ನೈಸರ್ಗಿಕ ಕರ್ತವ್ಯಗಳನ್ನು ವಹಿಸಿಕೊಟ್ಟಿದ್ದು, ಆ ಕರ್ತವ್ಯಗಳ ನಿರ್ವಹಣೆಯಲ್ಲಿ ಆಕೆಯ ಈ ಭಾವುಕತೆ ಆಕೆಗೆ ಸಹಾಯಕವಾಗುತ್ತದೆ. ಗರ್ಭಧಾರಣೆ, ಪ್ರಸವ, ಮಗುವಿನ ಪೋಷಣೆ ಮುಂತಾದ ನೈಸರ್ಗಿಕವಾಗಿ ಸ್ತ್ರೀಯ ಮೇಲೆಯೇ ಇರುವ ಜವಾಬ್ದಾರಿಕೆಗಳು ವಸ್ತುತಃ ಅತ್ಯಂತ ತ್ರಾಸದಾಯಕ ವಾಗಿವೆ. ಆದರೆ ಸ್ತ್ರೀಯರಲ್ಲಿ ಧಾರಾಳ ಪ್ರಮಾಣದಲ್ಲಿರುವ ಭಾವನೆಗಳು, ಈ ಸಂಕಷ್ಟಗಳನ್ನು ಸಹಿಸುವಲ್ಲಿ ಆಕೆಗೆ ಸಹಾಯಕವಾಗುತ್ತವೆ. ಮನುಷ್ಯನಿಗೆ ಒಂದು ವಸ್ತುವಿನೊಂದಿಗೆ ಎಷ್ಟು ಹೆಚ್ಚು ಭಾವನಾತ್ಮಕವಾಗಿ ಸಂಬಂಧವಿರುವುದೋ, ಆ ವಸ್ತುವಿನ ವಿಷಯದಲ್ಲಿ ಮುಂದಾಗುವ ಸಂಕಷ್ಟಗಳನ್ನು ಎದುರಿಸುವುದು ಅಷ್ಟೇ ಹೆಚ್ಚು ಸುಲಭವಾಗುವುದು.

ಈ ರೀತಿ ಭಾವುಕತೆ ಒಂದು ಸಾಮರ್ಥ್ಯವೆಂಬುದು ನಿಜವಾದರೂ ಮನುಷ್ಯನು ತನ್ನ ಅನೇಕ ಸಾಮರ್ಥ್ಯಗಳನ್ನು ತಪ್ಪಾಗಿ ಬಳಸುವಂತೆ, ಸ್ತ್ರೀಯೂ ಕೆಲವೊಮ್ಮೆ ತನ್ನ ಭಾವನಾತ್ಮಕ ಸಾಮರ್ಥ್ಯಗಳನ್ನು ತಪ್ಪಾಗಿ ಬಳಸುವುದುಂಟು. ಭಾವನೆಗಳು ಬುದ್ಧಿಯನ್ನು ಮೀರುವಷ್ಟು ತೀವ್ರವಾಗಿ ಬಿಟ್ಟಾಗ ತೀರಾ ಸರಳ ವಿಷಯಗಳೂ ಜಗಳಕ್ಕೆ ಕಾರಣವಾಗುತ್ತವೆ. ಒಬ್ಬ ಸ್ತ್ರೀಯು ತನ್ನ ಸ್ವಾಭಾವಿಕ ಸಮತೋಲನವನ್ನು ಉಳಿಸಿಕೊಳ್ಳಲು ಮತ್ತು ತನ್ನನ್ನು ಸರಿಯಾಗಿ ತರಬೇತಿಗೊಳಿಸಲು ಪ್ರಯತ್ನಿಸದಿದ್ದರೆ ಅದರಿಂದ ಅಸಂತುಲಿತಗೊಳ್ಳುವ ಆಕೆಯ ಭಾವನೆಗಳು ಅವಳ ಸ್ವಭಾವದ ಮೇಲೆ ದುಷ್ಪರಿಣಾಮ ಬೀರುತ್ತವೆ. ಇಂತಹ ದೌರ್ಬಲ್ಯವನ್ನೇ ಈ ಹದೀಸ್‌ನಲ್ಲಿ ಪಕ್ಕೆಲುಬಿನ ವಕ್ರತೆಗೆ ಹೋಲಿಸಲಾಗಿದೆ. ಮಹಿಳೆಯ ದೌರ್ಬಲ್ಯಗಳನ್ನು ಗಮನದಲ್ಲಿಟ್ಟು, ಆಕೆಯ ಸ್ವಭಾವವನ್ನು ಬಲವಂತವಾಗಿ ತಿದ್ದಲೆತ್ನಿಸುವ ಬದಲು ಆಕೆಯೊಂದಿಗೆ ಸೌಮ್ಯತೆ, ಕ್ಷಮಾಶೀಲತೆ ಮತ್ತು ಔದಾರ್ಯದಿಂದ ವರ್ತಿಸಬೇಕು ಎಂದು ಈ ಹದೀಸ್‌ನಲ್ಲಿ ಪುರುಷರಿಗೆ ಬೋಧಿಸಲಾಗಿದೆ. ಹಾಗೆಯೇ, ಪುರುಷನು ಸ್ತ್ರೀಯ ಗುಣವನ್ನರಿತು ನಿಭಾಯಿಸಿಕೊಂಡು ಹೋಗಲು ಕಲಿಯದಿದ್ದರೆ ವಿಚ್ಛೇದನದ ಗತಿ ಬಂದೀತು ಎಂಬ ಎಚ್ಚರಿಕೆಯನ್ನೂ ಪುರುಷನಿಗೆ ನೀಡಲಾಗಿದೆ.

ಸಂಪಾದನೆಯಲ್ಲಿ ಸ್ವಾಭಿಮಾನ

عَنْ الزبير بن العوام (رض) عن النبى ﷺ قالَ : لَأَنْ يَأْخُذَ اَحَدُكُمْ اَحْبُلاً فَيَأْخُذَ حُزْمَةً مِنْ حَطَبٍ فَيَبِيْعَ فَيَكُفَّ اللّٰهُ بِهِ وَجْهَهُ

خَيْرٌ مِنْ اَنْ يَسْأَلَ النَّاسَ اُعْطِيَ اَمْ مُنِعَ

(بخاری-کتاب المزارع

ಪ್ರವಾದಿ(ಸ) ಹೀಗೆ ಹೇಳಿರುವರು:

''ಅಲ್ಲಾಹನು ತನ್ನ ಗೌರವವನ್ನುಳಿಸಬೇಕೆಂಬ ದೃಷ್ಟಿಯಿಂದ ನಿಮ್ಮಲ್ಲೊಬ್ಬನು ಹಗ್ಗ ದುಕೊಂಡು, ಕಟ್ಟಿಗೆಯ ಹೊರೆಯನ್ನು ಹೊತ್ತು ತಂದು ಮಾರುತ್ತಾನೆಂದಾದರೆ, ಅದು ರ ಬಳಿ ಬೇಡುತ್ತಾ ತಿರುಗುವುದಕ್ಕಿಂತ ಉತ್ತಮ. ಹಾಗೆ ಬೇಡಿದಾಗ ಜನರು ಅವನಿಗೆ ತಲೂಬಹುದು, ಕೊಡದಿರಲೂಬಹುದು''. [ಝುಬೈರ್ ಬಿನ್ ಅವ್ವಾಮ್(ರ) –ಬುಖಾರಿ]

ಜನರೊಡನೆ ಬೇಡುವ ಅಭ್ಯಾಸ ಬಹಳ ಕೆಟ್ಟದು. ಅದರಿಂದ ಮನುಷ್ಯನ ಸ್ವಾಭಿಮಾನವು ಹಿಗೊಳ್ಳುತ್ತದೆ. ಆದ್ದರಿಂದ ಪ್ರವಾದಿವರ್ಯರು(ಸ) ಜನರಿಗೆ ಭಿಕ್ಷೆಯಿಂದ ದೂರವಿರಬೇಕೆಂದು ಟ್ಟ ಶ್ರಮಪಟ್ಟು ದುಡಿದು ಸಂಪಾದನೆ ಮಾಡಬೇಕೆಂದು ಬೋಧಿಸಿದ್ದಾರೆ. ಕಾಡಿಗೆ ೇಗಿ ಕಟ್ಟಿಗೆ ಸಂಗ್ರಹಿಸಿ ಹೊತ್ತು ತಂದು ಪಟ್ಟಣದಲ್ಲಿ ಮಾರುವುದು ಆ ಕಾಲದಲ್ಲಿ ಹಣ ಾದನೆಯ ಒಂದು ಪರಿಚಿತ ವಿಧಾನವಾಗಿತ್ತು. ಆದುದರಿಂದ ಪ್ರವಾದಿ(ಸ) ಈ ಯನ್ನು ತೋರಿಸಿಕೊಟ್ಟರು. ಶ್ರಮಿಸಿ ಸಂಪಾದಿಸುವ ಇತರ ಧರ್ಮಬದ್ಧ ಪ್ರಕಾರಗಳಿಗೂ ಂ ಅನ್ವಯಿಸುತ್ತದೆ. ಒಟ್ಟಿನಲ್ಲಿ ಈ ಪ್ರವಾದಿ ವಚನದ ಇಂಗಿತವೇನೆಂದರೆ, ಸಂಪಾದನೆಯ ರ್ಗವೊಂದು ಧರ್ಮಬದ್ಧವಾಗಿರುವ ತನಕ ಆ ಮಾರ್ಗವನ್ನು ಅವಲಂಬಿಸುವ ಬಗ್ಗೆ ರೂ ಸಂಕೋಚಪಡಬಾರದು. ಶ್ರಮ ಪಟ್ಟು ದುಡಿಯುವುದು ಅಭಿಮಾನಾರ್ಹವೇ ರತು ಲಜ್ಜಾಸ್ಪದ ಕ್ರಿಯೆಯಲ್ಲ. ನಿಜವಾಗಿ ಜನರ ಮುಂದೆ ಕೈಚಾಚುವುದೇ ಲಜ್ಜಾಸ್ಪದ ಕ್ರಿಯೆ. ೆ ಕೈ ಚಾಚಿದಾಗ ಜನರು ಏನಾದರೂ ಕೊಡುತ್ತಾರೋ ಇಲ್ಲವೋ ಎಂಬುದು ಮುಖ್ಯವಲ್ಲ.

ಕಾರ್ಮಿಕನ ಹಕ್ಕು

عَنْ عَبْدِ اللّٰهِ بِنِ عُمَرَ(رض) قَالَ قَالَ رَسُولُ اللّٰهِ ﷺ اَعْطُو الْاَ

اَجْرَهُ قَبْلَ اَنْ يَجُفَّ عَرَقُهُ (ابن ماجه-باب اجر الاجرا

ಪ್ರವಾದಿ(ಸ) ಹೇಳಿರುವರು:

''ಕಾರ್ಮಿಕನ ಬೆವರು ಆರುವುದಕ್ಕಿಂತ ಮುಂಚೆ ಅವನ ವೇತನವನ್ನು ಕೊಟ್ಟು ಬಿಡಿ''.

[ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ) –ಇಬ್ನು ಮಾಜಃ]

عَنْ اَبِى هُرَيْرَةَ (رض) عَنِ النَّبِىِّ ﷺ قَالَ قَالَ اللّٰهُ تَعَالَ

ثَلَاثَةٌ اَنَا خَصْمُهُمْ يَوْمَ الْقِيَامَةِ رَجُلٌ اَعْطَى بِىْ ثُمَّ غَدَرَ وَرَ

عَ حُرًّا فَاَكَلَ ثَمَنَهُ وَرَجُلٌ اِسْتَاجَرَ اَجِيرًا فَاسْتَوْفَى مِنْهُ وَلَمْ
طِهِ اَجْرَهُ (بخارى , ابن ماجه)

ಪ್ರವಾದಿ(ಸ) ಹೇಳಿರುವರು:

''ಅಲ್ಲಾಹನು ಹೇಳುತ್ತಾನೆ: ಪುನರುತ್ಥಾನ ದಿನ ಮೂವರು ವ್ಯಕ್ತಿಗಳ ವಿರುದ್ಧ ನಾ ವಾದಿಯಾಗುವೆನು. ಮೊದಲನೆಯದಾಗಿ, ನನ್ನ ಹೆಸರಲ್ಲಿ ಆಣೆ ಹಾಕಿ ಒಂದು ಕರಾರನ್ನು ಮ ಆ ಕರಾರನ್ನು ಮುರಿದವನ ವಿರುದ್ಧ. ಎರಡನೆಯದಾಗಿ, ಒಬ್ಬ ಸ್ವತಂತ್ರ ವ್ಯಕ್ತಿಯನ್ನು ಮಾ ಮಾಡಿ ಅದರ ಹಣ ತಿಂದವನ ವಿರುದ್ಧ. ಮೂರನೆಯದಾಗಿ, ಒಬ್ಬ ಕಾರ್ಮಿಕನನ್ನು ಕೆ ನೇಮಿಸಿ ಅವನು ಕೆಲಸವನ್ನು ಪೂರ್ತಿಯಾಗಿ ಮಾಡಿದ ಬಳಿಕವೂ ಅವನ ವೇತನವನ್ನು ಕೊ ಇರುವವನ ವಿರುದ್ಧ.'' [ಹಝ್ರತ್ ಅಬೂ ಹುರೈರಾ(ರ) -ಬುಖಾರಿ, ಇಬ್ನು ಮಾ

ಇಸ್ಲಾಮಿನಲ್ಲಿ ಕಾರ್ಮಿಕನ ಹಕ್ಕುಗಳಿಗೆ ಎಷ್ಟೊಂದು ಮಹತ್ವ ನೀಡಲಾಗಿದೆ ಎಂಬು ಈ ಹದೀಸ್‌ಗಳು ಸೂಚಿಸುತ್ತವೆ.

ಶ್ರಮಿಕನ ಶ್ರಮದ ವೇತನವನ್ನು ಕೊಡುವುದರಲ್ಲಿ ವಿಳಂಬ ಮಾಡುವುದು ಕೂ ತಪ್ಪೆಂದು ಪ್ರವಾದಿ(ಸ) ತಿಳಿಸಿರುವರು. ಹಾಗೆಯೇ ಕೆಲಸ ಮಾಡಿಸಿದ ಬಳಿಕ ಶ್ರಮಿಕನಿಗೆ ವೇ ಕೊಡದೆ ಇರುವುದು ಎಂತಹ ಘೋರ ಪಾಪವೆಂದರೆ, ಪರಲೋಕದಲ್ಲಿ ಆ ಬಗ್ಗೆ ಉಗ್ರ ವಿಚಾ ನಡೆಯುವುದು ಮತ್ತು ಅಲ್ಲಾಹನು ವಂಚಿತ ಶ್ರಮಿಕನ ಪರವಾಗಿ ಹಾಗೂ ವಂಚಕನ ವಿ ಸ್ವತಃ ತಾನೇ ವಾದಿಯಾಗಿರುವನು ಎಂದೂ ತಿಳಿಸಲಾಗಿದೆ.

ಒಬ್ಬ ಸ್ವತಂತ್ರ ವ್ಯಕ್ತಿಯನ್ನು ಗುಲಾಮನಾಗಿ ಮಾಡುವುದು ಕೂಡಾ ಇಸ್ಲಾಮಿನ ದೃಷ್ಟಿ ಪಾಪವಾಗಿದೆ. ಪರಲೋಕದಲ್ಲಿ ಈ ಕುರಿತು ಉಗ್ರ ವಿಚಾರಣೆ ನಡೆಯಲಿದೆ.

ಶ್ರಮಿಕನಿಗೆ ವೇತನ ವಂಚಿಸುವುದು, ಕರಾರು ಮುರಿಯುವುದು, ಸ್ವ ವ್ಯಕ್ತಿಯನ್ನು ದಾಸ್ಯಕ್ಕೊಳಪಡಿಸುವುದು ಮುಂತಾದ ಅಪರಾಧಗಳು ಪರಲೋಕದಲ್ಲಿ ವ ಶಿಕ್ಷಾರ್ಹವಾಗಿರುವುದಲ್ಲ, ಈ ಲೋಕದಲ್ಲೂ ಅವು ಶಿಕ್ಷಾರ್ಹವಾಗಿದೆ. ಇಸ್ಲಾಮ್, ಅಪರಾಧಗಳನ್ನು ತಡೆಯುವ ನಿಟ್ಟಿನಲ್ಲಿ ನ್ಯಾಯಸಮ್ಮತವಾದ ಸೂಕ್ತ ಕಾನೂನು ನಿಯಮಗ ನಿರ್ಮಿಸಲು ಅನುಮತಿಸುತ್ತದೆ.

ಪ್ರಾಣಿ ದಯೆ

نْ شَدَّادِ ابْنِ اَوْسٍ (رض) قَالَ رَسُولُ اللّٰهِ ﷺ : اِنَّ اللّٰهَ
بَ الْاِحْسَانَ عَلَى كُلِّ شَيْءٍ فَاِذَا قَتَلْتُمْ فَاحْسِنُو الْقِتْلَةَ

وَاذَا ذَبَحْتُمْ فَاَحْسِنُو الذَّبْحَ وَلْيُحِدَّ اَحَدُكُمْ شَفْرَتَهُ فَلْيُرِ
ذَبِيْحَتَهُ (مسلِمْ-كتاب الصيد)

ಪ್ರವಾದಿ ಮುಹಮ್ಮದ್(ಸ) ಹೀಗೆ ಹೇಳಿರುವರು: ''ಪ್ರತಿಯೊಂದು ವಸ್ತುವಿನ ಮೇಲೆ ರುಣೆ ತೋರುವುದನ್ನು ಅಲ್ಲಾಹನು ಕಡ್ಡಾಯಗೊಳಿಸಿರುವನು. ಆದ್ದರಿಂದ ನೀವು ಪ್ರಾಣಿಯನ್ನು ಕೊಲ್ಲುವುದಿದ್ದರೂ ಉತ್ತಮ ವಿಧಾನದಿಂದ ಕೊಲ್ಲಿರಿ. ದಿಬ್ಹ ಮಾಡುವಾಗ ಉತ್ತಮ ವಿಧಾನದಿಂದ ಬ್ಹ ಮಾಡಿರಿ. ಚೂರಿಯನ್ನು ಹರಿತಗೊಳಿಸಿರಿ ಮತ್ತು ದಿಬ್ಹ ಮಾಡಲ್ಪಡುವ ಪ್ರಾಣಿಗೆ ರಾಮವನ್ನೊದಗಿಸಿರಿ.'' [ಶದ್ದಾದ್ ಬಿನ್ ಔಸ್ (ರ) -ಮುಸ್ಲಿಮ್]

عَنْ عَبْدِ اللّٰهِ بنِ عُمَرَ (رض) أَنَّ رَسُولَ اللّٰهِ ﷺ : قَالَ عُذِّبَتْ
اِمْرَأَةٌ فِي هِرَّةٍ سَجَنَتْهَا حَتّٰى مَا تَتْ فَدَخَلَتْ فِيهَا النَّارُ—
لا هِىَ اَطْعَمَتْهَا وَلا سَقَتْهَا اذْ حَبَسَتْهَا وَلا هِىَ تَرَكَتْهَ
تأكُلُ مِنْ خَشَّاشِ الأَرْضِ (بخارى-كتاب احادث الانبياء)

ಪ್ರವಾದಿ(ಸ) ಹೀಗೆ ಹೇಳಿರುವರು:

''ಒಬ್ಬ ಮಹಿಳೆಯನ್ನು ಒಂದು ಬೆಕ್ಕಿನ ವಿಷಯದಲ್ಲಿ ಯಾತನೆಗೆ ಒಳಪಡಿಸಲಾಯಿತು. ಏಕೆಂದರೆ ಆಕೆ ಬೆಕ್ಕನ್ನು ಬಂಧಿಸಿಟ್ಟಿದ್ದಳು. ಆ ಬೆಕ್ಕು ಅದೇ ಸ್ಥಿತಿಯಲ್ಲಿ ಸತ್ತು ಹೋಯಿತು. ಇದೇ ಕಾರಣಕ್ಕಾಗಿ ಆಕೆ ನರಕಾಗ್ನಿಗೆ ತಳ್ಳಲ್ಪಟ್ಟಳು. ಆಕೆ ಆ ಬೆಕ್ಕಿಗೆ ಆಹಾರ ಕೊಡುತ್ತಲೂ ಇರಲಿಲ್ಲ ಮತ್ತು ಅದು ಭೂಮಿಯ ಹುಳು ಹುಪ್ಪಟೆ ಇತ್ಯಾದಿ ಜೀವಿಗಳನ್ನು ತಿಂದುಕೊಳ್ಳುವಂತಾಗಲು ಅದನ್ನು ಸ್ವತಂತ್ರವಾಗಿ ಬಿಡಲೂ ಇಲ್ಲ.'' [ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ) -ಬುಖಾರಿ]

ಪ್ರವಾದಿವರ್ಯರ(ಸ) ಶಿಕ್ಷಣಗಳಲ್ಲಿ ಕಾರುಣ್ಯದ ಕಲ್ಪನೆ ಎಷ್ಟೊಂದು ವಿಶಾಲವಾಗಿದೆ ಯೆಂದರೆ ಪ್ರಾಣಿಗಳು ಕೂಡಾ ಅದರ ವೃತ್ತದಿಂದ ಹೊರಗಿಲ್ಲ. ಇಲ್ಲಿ ಪ್ರಾಣಿಗಳಿಗೆ ಅನಗತ್ಯವಾಗಿ ಕಿರುಕುಳ ನೀಡಬಾರದೆಂದು ಬೋಧಿಸಲಾಗಿದೆ. ಹಾಗೆಯೇ ಯಾವುದಾದರೂ ಪ್ರಾಣಿಯನ್ನು ಕಟ್ಟಿಹಾಕಿ ಅನ್ನ ನೀರು ನೀಡದೆ ಸಾಯಿಸುವುದು ಘೋರ ಪಾಪವೆಂದು ತಿಳಿಸಲಾಗಿದೆ.

ಒಂದು ಪ್ರಾಣಿಯನ್ನು ಶಾಸ್ತ್ರೋಕ್ತವಾಗಿ ದಿಬ್ಹ ಮಾಡುವಾಗ(ಕೊಯ್ಯುವಾಗ) ಚೂರಿಯು ಹರಿತವಾಗಿರದಿದ್ದರೆ ಅದರಿಂದ ಆ ಪ್ರಾಣಿಗೆ ಬಹಳ ಹಿಂಸೆಯಾಗುತ್ತದೆ. ಆದ್ದರಿಂದ ಚೂರಿಯನ್ನು ಹರಿತಗೊಳಿಸಬೇಕು ಮತ್ತು ಕೊಲ್ಲಲ್ಪಡುವ ಪ್ರಾಣಿಗೆ ಸಾಧ್ಯವಿದ್ದಷ್ಟು ಹೆಚ್ಚು ಆರಾಮವೊದಗಿಸಲು ಪ್ರಯತ್ನಿಸಬೇಕೆಂದು ಆದೇಶಿಸಲಾಗಿದೆ.

ಜಾಣರ ಲಕ್ಷಣ

نْ شَدَّادِ بْنِ اَوسٍ (رض) عَنِ النَّبِيِّ ﷺ قَالَ اَلْكَيِّسُ مَنْ دَانَ
ْسَهُ وَعَمِلَ لِمَا بَعْدَ المَوْتِ وَالعَاجِزُ مَنْ اَتْبَعَ نَفْسَهُ هَوَاهَا
تَمَنَّى عَلَى اللّٰهِ (ترمذى ابواب صفة القيامة)

ಪ್ರವಾದಿ(ಸ) ಹೀಗೆ ಹೇಳಿರುವರು: ''ತನ್ನ ಸ್ವೇಚ್ಛೆಯನ್ನು (ಅಲ್ಲಾಹ ಅಧೀನಗೊಳಿಸಿಕೊಂಡು, ಮರಣಾನಂತರದ ಜೀವನಕ್ಕಾಗಿ ಕೆಲಸ ಮಾಡುವವನೇ ಜಾಣ. ತ ಸ್ವೇಚ್ಛೆಗಳ ಗುಲಾಮನಾಗಿ, ಆ ಬಳಿಕ ಅಲ್ಲಾಹನಿಂದ ತಪ್ಪಾದ ನಿರೀಕ್ಷೆಗಳನ್ನಿಟ್ಟುಕೊಳ್ಳುವವ ಮೂರ್ಖ.''
[ಶದ್ದಾದ್ ಬಿನ್ ಔಸ್ (ರ) –ತಿರ್ಮಿ

ಮರಣವೆಂಬುದು ಜೀವನದ ಅಂತ್ಯವಲ್ಲ, ಅದು ಕರ್ಮಗಳ ಜೀವನದಿಂ ಪರಿಣಾಮಗಳ ಜೀವನದ ಕಡೆಗೆ ವರ್ಗಾವಣೆಯಾಗುವ ಹಂತವಾಗಿದೆ. ಆದ್ದರಿಂದ ಪರಿಣಾವ ಮತ್ತು ಫಲಿತಾಂಶಗಳ ಮೇಲೆ ದೃಷ್ಟಿಯನ್ನಿಟ್ಟುಕೊಂಡು, ತನಗೆ ಎಂತಹ ಫಲಿತಾಂಶ ಬೇಕೋ ಅಂತಹದೇ ಕರ್ಮಗಳನ್ನು ಮಾಡುತ್ತಾ ತನ್ನ ಕರ್ಮಗಳನ್ನು ಸರಿಪಡಿಸಿಕೊಳ್ಳುವವನೆ ಜಾಣ. ಇದಕ್ಕೆ ತದ್ವಿರುದ್ಧವಾಗಿ ಫಲಿತಾಂಶವನ್ನು ಲೆಕ್ಕಿಸದೆ, ತನಗಿಚ್ಛೆ ಬಂದಂತೆ ಬಾಳುವ ತಾನಿಚ್ಛಿಸಿದ್ದನ್ನೆಲ್ಲಾ ಮಾಡುವ ಮತ್ತು ಇಷ್ಟಾಗಿಯೂ ಅಲ್ಲಾಹನು ತನಗೆ ಸ್ವರ್ಗ ನೀಡುವನೆಂ ಭ್ರಮೆಯಲ್ಲಿರುವವನೇ ಮೂರ್ಖ. ಹೀಗೆ ಮಾಡುವವನು ಈ ಮೂಲಕ ತಾನು ತ ಸ್ವೇಚ್ಛೆಗಳ ದಾಸನೆಂಬುದನ್ನು ಮಾತ್ರ ತೋರಿಸಿಕೊಡುತ್ತಾನೆ. ಇಂತಹವರು ಲೋಕದಲ್ಲಿ ಭಾರಿ ಬುದ್ಧಿವಂತರೆಂದು ಪರಿಗಣಿಸಲ್ಪಡುವವರಾಗಿದ್ದರೂ ವಾಸ್ತವದಲ್ಲಿ ಅವಿವೇಕಿಗಳಾಗಿರುವರು.

ಸತ್ಯವಿಶ್ವಾಸದ ಬೇಡಿಕೆಗಳು

عَنْ اَبِى هُرَيْرَةَ (رض) قَالَ قَالَ رَسُولُ اللّٰهِ ﷺ : مَنْ
كَانَ يُؤمِنُ بِاللّٰهِ وَلْيَوْمِ الآخِرِ فَلْيَقُلْ خَيْرًا اَوْ لِيَصْمُتْ وَمَنْ كَانَ
يُؤْمِنُ بِاللّٰهِ وَالْيَوْمِ الْاخِرِ فَلاَ يُؤْذِ جَارَهُ وَمَنْ كَانَ يُؤْمِنُ بِاللّٰهِ
وَالْيَوْمِ الْاخِرِ فَالْيُكْرِمْ ضَيْفَهُ (بخارى كتاب الرقاق)

ಪ್ರವಾದಿ(ಸ) ಹೀಗೆ ಹೇಳಿರುವರು:

''ಅಲ್ಲಾಹನ ಮೇಲೆ ಮತ್ತು ಪರಲೋಕದ ಮೇಲೆ ವಿಶ್ವಾಸವಿರುವವನು ಮಾತಾಡಿದರೆ ಒಳ್ಳೆಯ ಮಾತನ್ನೇ ಆಡಬೇಕು, ಇಲ್ಲವಾದರೆ ಮೌನವಾಗಿರಬೇಕು. ಅಲ್ಲಾಹನ ಮೇಲೆ

ಂ ಪರಲೋಕದ ಮೇಲೆ ವಿಶ್ವಾಸವುಳ್ಳವನು ತನ್ನ ನೆರೆಯವರಿಗೆ ಕಿರುಕುಳ ನೀಡಬಾರದು. ಹನ ಮೇಲೆ ಹಾಗೂ ಪರಲೋಕದ ಮೇಲೆ ವಿಶ್ವಾಸವಿರುವಾತನು ತನ್ನ ಅತಿಥಿಯನ್ನು ಸಬೇಕು.'' [ಹಝ್ರತ್ ಅಬೂ ಹುರೈರಾ(ರ) -ಬುಖಾರಿ]

ಈ ಪ್ರವಾದಿ ವಚನದಲ್ಲಿ ಸತ್ಯವಿಶ್ವಾಸದ ಮೂರು ಪ್ರಮುಖ ಬೇಡಿಕೆಗಳನ್ನು ಪ್ರಸ್ತಾಪಿಸ . ಮೊದಲನೆಯದಾಗಿ, ಮಾತನಾಡುವ ವಿಷಯದಲ್ಲಿ ಎಚ್ಚರಿಕೆ ವಹಿಸಬೇಕು. ಡಯದಾಗಿ, ನೆರೆಹೊರೆಯವರಿಗೆ ಯಾವುದೇ ಬಗೆಯ ಕಿರುಕುಳವುಂಟು ಮಾಡ ಬಾರದು. ನೆಯದಾಗಿ, ಅತಿಥಿಯನ್ನು ಗೌರವದಿಂದ ಕಾಣಬೇಕು. ಇವೆಲ್ಲಾ ಸರ್ವಮಾನ್ಯ ನೈತಿಕತೆಯ ಳು. ಆದರೂ ಹಲವರು ಈ ಅಂಶಗಳನ್ನು ಕಡೆಗಣಿಸುತ್ತಾರೆ. ಅನಗತ್ಯವಾಗಿ ಮಾತನಾಡುವುದು ಅಸಭ್ಯವಾದ ಮಾತುಗಳನ್ನಾಡುವುದು ಬೇಜವಾಬ್ದಾರಿತನದ ಲಕ್ಷಣವಾಗಿದೆ.

ಅಲ್ಲಾಹನ ಮೇಲೆ ಮತ್ತು ಪರಲೋಕದ ಮೇಲೆ ವಿಶ್ವಾಸವಿಡುವುದೆಂದರೆ, ತಾನು ಹನ ಹೊಣೆಗಾರ ದಾಸನಾಗಿದ್ದು ಎಲ್ಲ ವಿಷಯದಲ್ಲೂ ಪರಲೋಕದಲ್ಲಿ ಅವನ ಮುಂದೆ ರಣಾರ್ಹನಾಗಿದ್ದೇನೆಂಬ ಪ್ರಜ್ಞೆಯನ್ನು ಬೆಳೆಸಿಕೊಳ್ಳುವುದಾಗಿದೆ. ಒಬ್ಬ ಮನುಷ್ಯನಲ್ಲಿ ಕ್ಕ ಇಂತಹ ಪ್ರಜ್ಞೆ ಜಾಗೃತವಾಗಿದ್ದರೆ ಅವನು ತನ್ನ ಮಾತುಗಳ ಬಗ್ಗೆ ಬಹಳಷ್ಟು ಎಚ್ಚರಿಕೆ ತ್ತಾನೆ. ಆಡಿದರೆ ಒಳ್ಳೆಯ ಮಾತನ್ನೇ ಆಡುತ್ತಾನೆ. ಅನ್ಯಥಾ ಮೌನವೇ ಲೇಸೆಂದು ನಿರುತ್ತಾನೆ. ಈ ರೀತಿ ನಾಲಿಗೆಯನ್ನು ನಿಯಂತ್ರಿಸುವುದು ಪರಲೋಕದ ಮೇಲಿನ ವೇ ಆಗಿದೆ.

ಹೀಗೆಯೇ ನೆರೆಹೊರೆಯವರಿಗೆ ಉಪಟಳ ನೀಡದೆ ಇರುವುದು ಮತ್ತು ಅತಿಥಿಯನ್ನು ಸುವುದು ಕೂಡಾ ಸತ್ಯವಿಶ್ವಾಸದ ಸ್ವಾಭಾವಿಕ ಪರಿಣಾಮವಾಗಿದೆ. ಇಸ್ಲಾಮಿನಲ್ಲಿ ಈಮಾನ್ ೨ ಸತ್ಯವಿಶ್ವಾಸವೆಂಬುದು ಒಂದು ನಿಶ್ಚಲವಾದ ಗೊಡ್ಡುನಂಬಿಕೆ(Dogma)ಯಲ್ಲ, ಅದು ಪ್ರಜ್ಞಾವಂತ ಸ್ಥಿತಿಯ ಹೆಸರಾಗಿದೆ ಮತ್ತು ಅದು ಮನುಷ್ಯನಿಗೆ ದೃಢವಾದ ವಿಶ್ವಾಸ ಳನ್ನು ನೀಡುವ ಜೊತೆಗೆ ಒಂದು ನೀತಿಶೀಲವಾದ ಜವಾಬ್ದಾರಿಯುತ ಬದುಕನ್ನು ಲು ಪ್ರೇರಣೆಯನ್ನು ಕೊಡುತ್ತದೆ ಎಂದು ಇದರಿಂದ ಸ್ಪಷ್ಟವಾಗುತ್ತದೆ.

ಸತ್ಯವಿಶ್ವಾಸದ ಪರಿಣಾಮಗಳು

عَنْ اَبِى هُرَيْرَةَ (رض) قَالَ قَالَ رَسُولُ اللّٰهِ ﷺ
الْأَيمَانُ بِضْعٌ وَسَبْعُونَ شُعْبَةً , فَاَفْضَلُهَا قَوْلُ لاَ اِلٰهَ اِلَّا
وَاَدْنَاهَا اِمَاطَةُ الأَذَى عَنِ الطَّرِيقِ وَالحَيَاءُ شُعْبَةٌ مِنَ الاي
(مسلم كتاب الاما

ಪ್ರವಾದಿ(ಸ) ಹೀಗೆ ಹೇಳಿರುವರು: ''ಈಮಾನ್‌ಗೆ(ಸತ್ಯವಿಶ್ವಾಸಕ್ಕೆ) ಎಪ್ಪತ್ತಕ್ಕಿಂತ ಶಾಖೆಗಳಿವೆ. ಈ ಪೈಕಿ ಲಾಇಲಾಹ ಇಲ್ಲಲ್ಲಾಹ್(ಅಲ್ಲಾಹನ ಹೊರತು ಅನ್ಯ ಆರಾಧ್ಯ ಎಂದುಚ್ಚರಿಸುವುದು ಅತ್ಯಂತ ಶ್ರೇಷ್ಠ ಶಾಖೆಯಾಗಿದೆ ಮತ್ತು ರಸ್ತೆಯಲ್ಲಿರುವ ಕಂಟಕ ನಿವಾರಿಸುವುದು ಕನಿಷ್ಠ ಮಟ್ಟದ ಶಾಖೆಯಾಗಿದೆ ಹಾಗೂ ಲಜ್ಜೆಯು ಈಮಾನಿನ ಒ (ಪ್ರಮುಖ) ಶಾಖೆಯಾಗಿದೆ.'' [ಹಝ್ರತ್ ಅಬೂ ಹುರೈರಾ(ರ) -ಮುಸ್ಲಿ

ಅಂದರೆ ಈಮಾನ್ ಅಥವಾ ಸತ್ಯವಿಶ್ವಾಸವೆಂಬುದು ಕೇವಲ ಒಂದು ನಿಜಿ ನಂಬಿಕೆಯಲ್ಲ, ವಾಸ್ತವದಲ್ಲಿ ಅದು ಒಂದು ನಿರ್ದಿಷ್ಟ ವಾಸ್ತವಿಕತೆಯನ್ನು ಅಂಗೀಕರಿಸುವ ಹೆಸರಾಗಿದೆ. ಪ್ರವಾದಿವರ್ಯರು(ಸ) ಪ್ರತಿಪಾದಿಸುವಂತಹ ವಾಸ್ತವಿಕತೆಗಳನ್ನು ಮನುಷ್ಯನು ಅಂಗೀಕರಿಸಿದಾಗ, ಆ ವಾಸ್ತವಿಕತೆಗಳು ಅವನ ಸಂಪೂರ್ಣ ಜೀವನದ ಪ ಪ್ರಭಾವ ಬೀರತೊಡಗುತ್ತದೆ. ಅವನಲ್ಲಿ ಅತ್ಯುತ್ತಮ ಗುಣವಿಶೇಷಗಳು ಮೂಡತೊಡಗು ಹೀಗೆ ಬೆಳೆಯುವ ಗುಣಗಳ ಪೈಕಿ 'ಲಾ ಇಲಾಹ ಇಲ್ಲಲ್ಲಾಹ್'(ಅಲ್ಲಾಹನ ಹೊರತು ಆರಾಧ್ಯರಿಲ್ಲ) ಎಂಬ ಏಕದೇವತ್ವದ ಅಂಗೀಕಾರ ಮತ್ತು ಪ್ರತಿಪಾದನೆಯು ಅತ್ಯಂತ ಗುಣವಾಗಿದೆ. ಜನರಿಗೆ ಕಿರುಕುಳವಾಗಬಾರದೆಂಬ ದೃಷ್ಟಿಯಿಂದ ಜನರು ನಡೆದಾ ದಾರಿಯಿಂದ ಒಂದು ಕಂಟಕವನ್ನು ನಿವಾರಿಸುವುದು ಈ ಪೈಕಿ ಅತ್ಯಂತ ಸಾಮಾನ್ಯ ಗುಣವಾಗಿದೆ. ಈ ರೀತಿ ಜನಸೇವೆ ಮತ್ತು ಜನರೊಂದಿಗೆ ತೋರುವ ಅನುಕಂಪ ಕು ಸತ್ಯವಿಶ್ವಾಸದ ಒಂದು ಅಂಗವಾಗಿದೆ. ಜನಸೇವೆಗೆ ಇದಕ್ಕಿಂತ ಉನ್ನತ ಸ್ಥಾನ ಬೇರೆ ಇದೆಯೆ

ಇಲ್ಲಿ ಲಜ್ಜೆಯನ್ನು ಸತ್ಯವಿಶ್ವಾಸದ ಅಂಗವೆಂದು ಕರೆಯಲಾಗಿದ್ದು, ಅದರಿಂದ ಲಜ ಮಹತ್ವವು ಸ್ಪಷ್ಟವಾಗುತ್ತದೆ. ಲಜ್ಜೆಯು ಸತ್ಯವಿಶ್ವಾಸದ ಲಕ್ಷಣಗಳಲ್ಲೊಂದಾಗಿದೆ. ಇಸ್ ಚಾರಿತ್ರ್ಯದಲ್ಲಿ ಲಜ್ಜೆಗೆ ಬಹಳ ಪ್ರಾಮುಖ್ಯವಾದ ಸ್ಥಾನವಿದೆ. ಏಕೆಂದರೆ ಲಜ್ಜೆಯು ಮನುಷ್ಯ ಅನೇಕ ಕೆಡುಕುಗಳಿಂದ ದೂರವಿಡುವ ಸಾಧನವಾಗಿದೆ.

ಏಕಪಕ್ಷೀಯ ಸದ್ವರ್ತನೆ

عَبْدُ اللّٰهِ بن عُمَرو (رض) قَالَ قَالَ رَسُولُ اللّٰهِ ﷺ : لَيْسَ الواصلُ مُكَافِيءِ وَلَكِنَّ الواصلُ الَّذِى اِذَا قُطِعَتْ رَحِمُهُ وَصَلَهَا (البخارى-كتاب الادب)

ಪ್ರವಾದಿ(ಸ) ಹೀಗೆ ಹೇಳಿರುವರು: ''ಪ್ರತಿಕ್ರಿಯೆಯ ರೂಪದಲ್ಲಿ ಹಿತ ಮಾಡುವ ಸಂಬಂಧಿಕರಿಗೆ ಹಿತ ಮಾಡುವವನಲ್ಲ, ವಾಸ್ತವದಲ್ಲಿ, ತನಗೆ ಅಹಿತ ಮಾಡಲಾಗಿದ್ದರೂ ತ ಹಿತವನ್ನುಂಟು ಮಾಡುವವನೇ ಸಂಬಂಧಿಕರಿಗೆ ಹಿತ ಮಾಡುವವನಾಗಿದ್ದಾನೆ.''

[ಹಝ್ರತ್ ಅಬ್ದುಲ್ಲಾ ಬಿನ್ ಅಮ್ರ್ (ರ)ಬುಖ

ಅಂದರೆ ಮನುಷ್ಯನಿಗೆ ಸ್ವತಃ ತನ್ನ ಕರ್ತವ್ಯಗಳ ಅರಿವಿರಬೇಕು ಮತ್ತು ಇತರರು ಏನು ಮಾಡಿದರೂ ತಾನು ತನ್ನ ಕರ್ತವ್ಯವನ್ನು ನೆರವೇರಿಸಬೇಕೆಂಬ ಪ್ರಜ್ಞೆ ಇರಬೇಕು. ಅವನ ಸಂಬಂಧಿಕರು ಅವನ ವಿಷಯದಲ್ಲಿ ತಮಗಿರುವ ಕರ್ತವ್ಯಗಳನ್ನು ಮರೆತಿದ್ದರೂ ಅವನ ಹಕ್ಕುಗಳನ್ನು ಕಡೆಗಣಿಸಿದ್ದರೂ ಅವನು ಮಾತ್ರ ಅವರ ಹಕ್ಕುಗಳನ್ನು ಕಡೆಗಣಿಸಬಾರದು. ಇತರರ ಸದ್ವರ್ತನೆಗೆ ಪ್ರತಿಯಾಗಿ ಸದ್ವರ್ತನೆ ತೋರುವುದು ಮಹತ್ಸಾಧನೆಯಲ್ಲ, ಬದಲಾಗಿ ಇತರರ ದುರ್ವರ್ತನೆಯನ್ನು ಕಡೆಗಣಿಸಿ ತಾನು ಅವರ ಜೊತೆ ಸದ್ವರ್ತನೆ ತೋರುವುದು ಮತ್ತು ಅವರಿಗೆ ಹಿತವನ್ನುಂಟು ಮಾಡುವುದು ಮಹತ್ಸಾಧನೆಯಾಗಿದೆ. ಅಲ್ಲಾಹನಿಗೆ ಇಷ್ಟವಾದ ವರ್ತನೆ ಇದುವೇ ಆಗಿದೆ.

ಪ್ರವಾದಿವರ್ಯರ(ಸ) ಈ ಬೋಧನೆಯು ಮನುಷ್ಯನನ್ನು ಸಚ್ಚಾರಿತ್ರ್ಯದ ಪರಮೋಚ್ಚ ಶಿಖರಕ್ಕೆ ತಲುಪಿಸುವಂತಹ ಬೋಧನೆಯಾಗಿದೆ. ಇಂತಹ ಮಹಾನ್ ಬೋಧನೆ ನೀಡಲು ಒಬ್ಬ ದೇವ ಸಂದೇಶವಾಹಕನಿಗೆ ಮಾತ್ರ ಸಾಧ್ಯ.

ಮಾತಾಪಿತರ ಜೊತೆ ಸದ್ವರ್ತನೆ

عَنْ اَبِى هُرَيْرَةَ قَالَ جَاءَ رَجُلٌ اِلَى رَسُولِ اللّٰهِ ﷺ فَقَالَ يَارَسُولَ اللّٰهِ مَنْ اَحَقُّ بِحُسْنِ صَحَابَتِىْ ؟ قَالَ : أُمُّكَ قَالَ مَنْ ؟ قَالَ اُمُّكَ قَالَ ثُمَّ مَنْ ؟ قَالَ اُمُّكَ قَالَ ثُمَّ مَنْ قَالَ ثُمَّ اَبُوكَ
(البخارى كتاب الادب)

ಒಮ್ಮೆ ಒಬ್ಬ ವ್ಯಕ್ತಿಯು ಪ್ರವಾದಿವರ್ಯರ(ಸ) ಬಳಿ ಬಂದು, 'ಅಲ್ಲಾಹನ ಸಂದೇಶವಾಹಕರೇ! ನನ್ನ ಸದ್ವರ್ತನೆಗೆ ಅತಿ ಹೆಚ್ಚು ಅರ್ಹರು ಯಾರು?' ಎಂದು ಪ್ರಶ್ನಿಸಿದರು. ಆಗ ಅವರು, 'ನಿನ್ನ ತಾಯಿ' ಎಂದುತ್ತರಿಸಿದರು. 'ಇವರ ಬಳಿಕ ಯಾರು?' ಎಂದು ಆ ವ್ಯಕ್ತಿ ಪ್ರಶ್ನಿಸಿದನು. 'ನಿನ್ನ ತಾಯಿ' ಎಂದು ಪ್ರವಾದಿ(ಸ) ಉತ್ತರಿಸಿದರು. ಆ ವ್ಯಕ್ತಿ ಪುನಃ 'ಆ ಬಳಿಕ ಯಾರು?' ಎಂದು ಕೇಳಿದನು. ಪ್ರವಾದಿವರ್ಯರು(ಸ) 'ನಿನ್ನ ತಾಯಿ' ಎಂದು ಉತ್ತರಿಸಿದರು. 'ಅವರ ಬಳಿಕ ಯಾರು?' ಎಂದು ಅವನು ಮತ್ತೆ ಪ್ರಶ್ನಿಸಿದನು, ಆಗ ಪ್ರವಾದಿ(ಸ) 'ನಿನ್ನ ತಂದೆ' ಎಂದು ಉತ್ತರಿಸಿದರು. [ಹಝ್ರತ್ ಅಬೂ ಹುರೈರಾ(ರ) -ಬುಖಾರಿ]

ಹೆತ್ತವರೊಂದಿಗೆ ಅತ್ಯುತ್ತಮವಾಗಿ ವರ್ತಿಸಬೇಕೆಂದು ಪವಿತ್ರ ಕುರ್‌ಆನಿನಲ್ಲಿ ಪದೇ ಪದೇ ಆದೇಶಿಸಲಾಗಿದೆ. ಹಾಗೆಯೇ ಒಬ್ಬ ತಾಯಿಯು ತನ್ನ ಮಗುವಿಗಾಗಿ ಸಹಿಸುವಂತಹ ಕಷ್ಟಗಳನ್ನು ವಿಶೇಷವಾಗಿ ಪ್ರಸ್ತಾಪಿಸಲಾಗಿದೆ. ಈ ಹಿನ್ನೆಲೆಯಲ್ಲೇ ಪ್ರವಾದಿವರ್ಯರು(ಸ) ಸದ್ವರ್ತನೆಯ ವಿಷಯದಲ್ಲಿ ತಾಯಿಯ ಹಕ್ಕು ತಂದೆಗಿಂತಲೂ ಹೆಚ್ಚಿನದು ಎಂಬುದನ್ನು ಮನವರಿಕೆ ಮಾಡಿಸಲು ತಾಯಿಯನ್ನು ಮೂರು ಸಲ ಪ್ರಸ್ತಾಪಿಸಿದ್ದಾರೆ.

ಆತ್ಮ ನಿಯಂತ್ರಣ

عَنْ اَبِى هُرَيْرَةَ (رض) اَنَّ رَسُولَ اللّٰهِ ﷺ قَالَ: لَيْسَ الشَّدِيدُ بِالصُّرْعَةِ اِنَّمَا الشَّدِيدُ الَّذِى يَمْلِكُ نَفْسَهُ عِنْدَ الْغَضَبِ (بخارى كتاب الادب)

ಪ್ರವಾದಿ(ಸ) ಹೀಗೆ ಹೇಳಿರುವರು:

''(ಮಲ್ಲಯುದ್ಧದಲ್ಲಿ) ಜನರನ್ನು ಅಪ್ಪಳಿಸುವವನು ಬಲಾಢ್ಯನಲ್ಲ, ಕೋಪಬಂದಾಗ ತನ್ನನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವವನೇ ನಿಜವಾದ ಬಲಾಢ್ಯ.''

[ಹಝ್ರತ್ ಅಬೂ ಹುರೈರಾ(ರ) -ಬುಖಾರಿ]

ಕೋಪ ಬಂದಾಗ ತನ್ನನ್ನು ನಿಯಂತ್ರಿಸಿಟ್ಟುಕೊಳ್ಳುವುದು, ಎದುರಾಳಿಯನ್ನು ಅಪ್ಪಳಿಸುವುದಕ್ಕಿಂತ ಹೆಚ್ಚು ತ್ರಾಸದಾಯಕವಾದ ಕೆಲಸವಾಗಿದೆ. ಒಬ್ಬ ವ್ಯಕ್ತಿ ಕೋಪ ಬಂದಾಗಲೂ ಸಂಯಮ ಕಳಕೊಳ್ಳದೆ ಸಂತುಲಿತವಾಗಿ ವರ್ತಿಸುತ್ತಾನೆಂದಾದರೆ ಅವನು ತನ್ನನ್ನು ಪ್ರಚೋದಿಸುವ ಶೈತಾನನನ್ನು ಸೋಲಿಸಿ ಕೆಡವಿ ಹಾಕಿದ್ದಾನೆಂದೇ ಅರ್ಥ. ನಿಜವಾಗಿ ಶಕ್ತಿಶಾಲಿ ಅಥವಾ ಬಲಾಢ್ಯ ಎಂಬ ಬಿರುದು ಇಂತಹವರಿಗೆ ಸಲ್ಲಬೇಕು.

ಮನುಷ್ಯನು ಯಾವ ಸ್ಥಿತಿಯಲ್ಲೂ ಭಾವನೆಗಳ ಪ್ರವಾಹದಲ್ಲಿ ಕೊಚ್ಚಿ ಹೋಗದೆ, ತನ್ನನ್ನು ನಿಯಂತ್ರಣದಲ್ಲಿಟ್ಟುಕೊಳ್ಳಬೇಕೆಂಬುದೇ ಈ ಹದೀಸ್‌ನಿಂದ ಸಿಗುವ ಪಾಠವಾಗಿದೆ.

عَنْ جَابِرِابْنِ عَبْدُ اللّٰهِ (رض) اَنَّ رَسُولَ اللّٰهِ ﷺ قَالَ : رَحِمَ اللّٰهُ رَجُلاً سَمْحًا اِذَا بَاعَ وَاِذَا اِشْتَرَى وَاِذَا اقْتَضَى (بخارى كتاب البيوع)

ಪ್ರವಾದಿ(ಸ) ಹೀಗೆ ಹೇಳಿರುವರು:

''ಖರೀದಿಸುವ, ಮಾರಾಟ ಮಾಡುವ ಮತ್ತು (ಸಾಲವನ್ನು) ಮರಳಿಸಲು ಕೇಳುವ ವಿಷಯದಲ್ಲಿ ಔದಾರ್ಯ ಪಾಲಿಸುವವನ ಮೇಲೆ ಅಲ್ಲಾಹನು ಕರುಣೆ ತೋರಲಿ.''

[ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ(ರ) -ಬುಖಾರಿ]

ಯಾರು ವ್ಯಾಪಾರದ ವಿಷಯದಲ್ಲಿ ಸಂಕುಚಿತವಾಗಿ ವರ್ತಿಸಲಿಲ್ಲವೋ ಹಾಗೆಯೇ ತನ್ನಿಂದ ಸಾಲ ಪಡೆದ ವ್ಯಕ್ತಿಯಿಂದ ಸಾಲವನ್ನು ಮರಳಿ ಪಡೆಯಬೇಕಾದಾಗ ಸಾಲಗಾರನಿಗೆ ಹಿಂಸೆ, ಕಿರುಕುಳ ನೀಡದೆ ದಯೆ, ಸಹಾನುಭೂತಿ, ಕ್ಷಮೆ ಮತ್ತು ಉದಾರತೆಯ ನೀತಿಯನ್ನು ಅನುಸರಿಸುವನೋ ಅವನು ಅಲ್ಲಾಹನ ಕೃಪೆಗೆ ಅರ್ಹನಾಗುತ್ತಾನೆ.

ವಿನಾಶಕಾರಿ ಗುಣಗಳು

ಅನ್ಯಾಯ

عَنْ اَبِى ذَرٍّ (رض) عَنْ النَّبِيِّ ﷺ فِيمَا رَوَى عَنِ اللّٰهِ تَبَارَكَ تَعَا

اَنَّهُ قَالَ :

يَا عِبَادِى اِنِّى حَرَّمْتُ الظُّلْمَ عَلَى نَفْسِى وَجَعَلْ

بَيْنَكُمْ مُحَرَّمًا فَلاَ تَظَالَمُوا يَا عِبَادِى كُلُّكُمْ ضَالٌّ اِلَّا مَنْ هَدَ

فَاسْتَهْدُوْنِى اَهْدِكُمْ يَا عِبَادِى كُلُّكُمْ جَائِعٌ اِلَّا اَطْعَمْ

فَسْتَطْعِمُونِى اُطْعِمُكُمْ يَا عِبَادِى كُلُّكُم عَارٍ اِلا مَنْ كَسَوْ

فَاسْتَكْسُونِى اَكْسُكُمْ يَا عِبَادِى اِنَّكُمْ تُخْطِئُونَ بِاللَّيْ

وَالنَّهَار وَاَنَا اَغْفِرُ الذُّنُوْبَ جَمِيعًا فَسْتَغْفِرُونِى اَغْ

لَكُمْ يَاعِبَادِى اِنَّكُمْ لَنْ تَبْلُغُوا ضَرِّىْ فَتَضُرُّنِى وَلَنْ تَبْلُغُوا

نَفْعِى وَفَتَنْفَعُونِى يَا عِبَادِى لَوْاَنَّ اَوَّلَكُم وَآخِرَكُمْ وَاِنْسَ

وَجِنَّكُمْ كَانُوا عَلَى اَتْقَى قَلْبِ رَجُلٍ وَاحِدٍ مِنْكُمْ مَاز

ذَالِكَ فِىْ مُلْكِى شَيْئًا يَا عِبَادِى لَوْاَنَّ اَوَّلَكُم وَآخِرَ

وَاِنْسَكُمْ وَجِنَّكُم كَانُوا عَلَى اَفْجَرِ قَلْبِ رَجُلٍ وَاحِدٍ مِّنْكُمْ مَانَقَ

ذَلِكَ مِنْ مُلْكِى شَيْئًا يَا عِبَادِى لَوْ اَنَّ اَوَّلَكُمْ وَآخِرَكُمْ وَاِنْسَ

وَجِنَّكُم قَامُوا فِى صَعِيدٍ وَاحِدٍ فَأَسْأَلُونِى فَاَعْطَيْتُ كُلَّ اِنْسَ

مَسْئَلَتَهُ مَا نَقَصَ ذَلِكَ مِمَّا عِنْدِي اِلَّا كَمَا يَنْقُصُ الْمِخْيَطُ اِذَا
دْخِلَ الْبَحْرَ يَا عِبَادِي اِنَّمَا هِيَ اَعْمَالُكُمْ اُحْصِيْهَا لَكُمْ ثُمَّ
اُوَفِّيْكُمْ اِيَّاهَا فَمَنْ وَجَدَ خَيْرًا فَلْيَحْمَدِ اللّٰهَ وَمَنْ وَجَدَ
غَيْرَ ذَلِكَ فَلَا يَلُوْمَنَّ اِلَّا نَفْسَهُ
(صحيح المسلم كتاب البر)

ಪ್ರವಾದಿ(ಸ) ಹೀಗೆ ಹೇಳಿರುವರು:

''ಅಲ್ಲಾಹನು ಹೇಳುತ್ತಾನೆ: ನನ್ನ ದಾಸರೇ! ನಾನು ಅನ್ಯಾಯವನ್ನು ನನ್ನ ಮೇ ನಿಷಿದ್ಧಗೊಳಿಸಿಕೊಂಡಿರುವೆನು ಮತ್ತು ನಿಮ್ಮ ನಡುವೆಯೂ ಅದನ್ನು ನಿಷಿದ್ಧಗೊಳಿಸಿರುವೆ ಆದ್ದರಿಂದ ನೀವು ಪರಸ್ಪರರ ಮೇಲೆ ಅನ್ಯಾಯವೆಸಗದಿರಿ. ನನ್ನ ದಾಸರೇ! ನಾನು ಯಾ ಮಾರ್ಗದರ್ಶನ ನೀಡುವೆನೋ ಅವನ ಹೊರತು ನೀವೆಲ್ಲರೂ ದಾರಿತಪ್ಪಿದವರಾಗಿರು ಆದ್ದರಿಂದ ನನ್ನಿಂದ ಮಾರ್ಗದರ್ಶನವನ್ನು ಯಾಚಿಸಿರಿ. ನಾನು ನಿಮಗೆ ಮಾರ್ಗದರ್ಶ ನೀಡುವೆನು. ನನ್ನ ದಾಸರೇ! ನಾನು ಯಾರಿಗೆ ಉಣಿಸುವೆನೋ ಅವನ ಹೊರತು ನೀವೆಲ್ಲ ಹಸಿದವರಾಗಿರುವಿರಿ. ಆದ್ದರಿಂದ ನನ್ನಿಂದ ಆಹಾರವನ್ನು ಅಪೇಕ್ಷಿಸಿರಿ. ನಾನು ನಿಮಗೆ ಆಹ ನೀಡುವೆನು. ನನ್ನ ದಾಸರೇ! ನಾನು ಯಾರಿಗೆ ವಸ್ತ್ರ ತೊಡಿಸುವೆನೋ ಅವನ ಹೊ ನೀವೆಲ್ಲರೂ ನಗ್ನರಾಗಿರುವಿರಿ. ಆದ್ದರಿಂದ ನೀವು ನನ್ನಿಂದ ವಸ್ತ್ರವನ್ನು ಯಾಚಿಸಿರಿ. ನಾನು ನಿ ವಸ್ತ್ರವನ್ನು ನೀಡುವೆನು. ನನ್ನ ದಾಸರೇ! ನೀವು ಹಗಲಿರುಳೂ ಪಾಪಗಳನ್ನು ಮಾಡುತ್ತಲಿರುತ್ತಿ ನಾನು ಎಲ್ಲ ಬಗೆಯ ಪಾಪಗಳನ್ನು ಕ್ಷಮಿಸುತ್ತೇನೆ. ಆದ್ದರಿಂದ ನನ್ನಿಂದ ಕ್ಷಮೆಯಾಚಿಸಿರಿ. ನಾ ನಿಮ್ಮನ್ನು ಕ್ಷಮಿಸಿ ಬಿಡುವೆನು. ನನ್ನ ದಾಸರೇ! ನನಗೆ ಯಾವುದೇ ನಷ್ಟವನ್ನುಂಟು ಮಾಡಲ ನಿಮಗೆ ಸಾಧ್ಯವಿಲ್ಲ, ನನ್ನ ದಾಸರೇ! ನಿಮಗಿಂತ ಹಿಂದಿನ ಮತ್ತು ನಿಮ್ಮ ಅನಂತರದ ಮನುಷ್ಯರೂ, ಜಿನ್ನ್‌ಗಳೂ ಸರ್ವೋಚ್ಚ ದೇವಭಕ್ತ ವ್ಯಕ್ತಿಗೆ ಸಮಾನರಾಗಿ ಬಿಟ್ಟರೂ ಅದರಿ ನನ್ನ ಸಾಮ್ರಾಜ್ಯದಲ್ಲಿ ಕಿಂಚಿತ್ತೂ ಹೆಚ್ಚಳವಾಗದು. ನನ್ನ ದಾಸರೇ! ನಿಮಗಿಂತ ಹಿಂದಿನ ಮ ನಿಮ್ಮ ಅನಂತರದ ಎಲ್ಲ ಮನುಷ್ಯರೂ ಜಿನ್ನ್‌ಗಳೂ ಜಗತ್ತಿನ ಅತ್ಯಂತ ನಿಕೃಷ್ಟ ದುಷ್ಕಮಿ ಸಮಾನರಾಗಿ ಬಿಟ್ಟರೂ ಅದರಿಂದ ನನ್ನ ಸಾಮ್ರಾಜ್ಯದಲ್ಲಿ ಕಿಂಚಿತ್ತೂ ಕೊರತೆಯುಂಟಾಗ ನನ್ನ ದಾಸರೇ! ನಿಮಗಿಂತ ಹಿಂದಿನ ಮತ್ತು ನಿಮ್ಮ ಅನಂತರದ ಎಲ್ಲ ಮನುಷ್ಯ ಜಿನ್ನ್‌ಗಳೂ ಒಂದು ಸಮತಟ್ಟಾದ ಬಯಲಲ್ಲಿ ಸೇರಿ ನನ್ನಿಂದ ಬೇಡಿದಾಗ ನಾನು ಪ್ರತಿಯೊ ಬೇಡಿಕೆಯನ್ನು ಈಡೇರಿಸಿದರೂ ಅದರಿಂದ ನನ್ನ ಖಜಾನೆಯಲ್ಲಿ ಸೂಜಿಯನ್ನು ಸಮುದ್ರ ಮುಳುಗಿಸುವುದರಿಂದ ಸಮುದ್ರದಲ್ಲಾಗುವುದಕ್ಕಿಂತ ಹೆಚ್ಚಿನ ಯಾವುದೇ ಕೊರತೆ ಉಂಟಾಗ

ನ್ನ ದಾಸರೇ! ಈ ನಿಮ್ಮ ಕರ್ಮಗಳನ್ನು ನಾನು ನಿಮಗಾಗಿ ಎಣಿಸುತ್ತಿದ್ದೇನೆ. ಅನಂತರ ನಾನು ನುಗೆ ಅವುಗಳ ಪೂರ್ಣ ಪ್ರತಿಫಲ ನೀಡಲಿದ್ದೇನೆ. ಆಗ ಒಳಿತನ್ನು ಪಡೆಯುವವನು ಲ್ಲಾಹನಿಗೆ ಕೃತಜ್ಞತೆ ಸಲ್ಲಿಸಲಿ ಮತ್ತು ಒಳಿತಿನ ಹೊರತು ಬೇರೇನನ್ನಾದರೂ ಪಡೆದವನು ನ್ನನ್ನೇ ಹಳಿದುಕೊಳ್ಳಲಿ.'' [ಹಝ್ರತ್ ಅಬೂದರ್(ರ) –ಮುಸ್ಲಿಮ್]

ಇದು ಪ್ರವಾದಿವರ್ಯರು(ಸ) ಅಲ್ಲಾಹನ ನುಡಿಯನ್ನು ತಿಳಿಸುವಂತಹ ಹದೀಸ್ ಗಿದ್ದು, ಹದೀಸ್‌ಗಳ ಸಮೂಹದಲ್ಲಿ ಇಂತಹ ಹದೀಸ್‌ಗಳಿಗೆ ಉನ್ನತ ಸ್ಥಾನವಿದೆ. ಇಂತಹ 'ದೀಸ್‌ಗಳನ್ನು ಹದೀಸ್ ಕುದ್ಸೀ ಎಂದು ಕರೆಯಲಾಗುತ್ತದೆ.

ಈ ಹದೀಸ್‌ನಲ್ಲಿ ಅಲ್ಲಾಹನು ಅತ್ಯಂತ ವಾತ್ಸಲ್ಯದೊಂದಿಗೆ ದಾಸರನ್ನು ಭಿಸಂಬೋಧಿಸಿರುವನು. 'ನನ್ನ ದಾಸರೇ' ಎಂದು ಪದೇ ಪದೇ ಕರೆದಿರುವುದು ವಾತ್ಸಲ್ಯದ ಂಕೇತವಾಗಿದೆ. ಈ ಅಭಿಸಂಬೋಧನಾ ಶೈಲಿಯು ಮನುಷ್ಯನ ಅಂತಃಕರಣವನ್ನು ಡಿದೆಬ್ಬಿಸುತ್ತದೆ ಮತ್ತು ಜನರ ಮೇಲೆ ಅನ್ಯಾಯ ಮಾಡದಿರುವಂತೆ ಪ್ರೇರೇಪಿಸುತ್ತದೆ.

ಪರಸ್ಪರ ಅನ್ಯಾಯ ಮಾಡಬಾರದೆಂಬ ಈ ಆದೇಶ ನೀಡುತ್ತಾ ಮನುಷ್ಯನಿಗೆ ಈ ರೀತಿ ಉಪದೇಶಿಸಲಾಗಿದೆ. ಅಲ್ಲಾಹನು ಸರ್ವಶಕ್ತ ಹಾಗೂ ಪ್ರಶ್ನಾತೀತ ಸಾರ್ವಭೌಮನಾಗಿದ್ದರೂ ಅವನು ಯಾರ ಮೇಲೂ ಕಿಂಚಿತ್ತೂ ಅನ್ಯಾಯ ಮಾಡುವುದಿಲ್ಲ. ಹೀಗಿರುವಾಗ ಮನುಷ್ಯನಿಗೆ, ನ್ನ ದೇವದತ್ತ ಸಾಮರ್ಥ್ಯಗಳನ್ನು ಇತರರ ಮೇಲೆ ಅನ್ಯಾಯವೆಸಗಲಿಕ್ಕಾಗಿ ಬಳಸಲು ಯಾವ ಅಧಿಕಾರವೂ ಇಲ್ಲ. ಮನುಷ್ಯನು ತನಗೆ ಅಲ್ಲಾಹನು ತಾತ್ಕಾಲಿಕವಾಗಿ ನೀಡಿರುವ ಯಾವುದೇ ಸಾಮರ್ಥ್ಯ ಮತ್ತು ಅಧಿಕಾರಗಳ ಬಗ್ಗೆ ದುರಭಿಮಾನಕ್ಕೆ ಒಳಗಾಗಬಾರದು. ಯಾರಿಗಾದರೂ ಅನ್ಯಾಯವೆಸಗುವುದು ಅಲ್ಪತನದ ಕಾರ್ಯವಾಗಿದೆ.

ಸ್ವತಃ ಮನುಷ್ಯನ ಪ್ರಕೃತಿಯು ಅನ್ಯಾಯವನ್ನು ವಿರೋಧಿಸುತ್ತದೆ. ದೇವದತ್ತವಾದ ಸತ್ಯಧರ್ಮ ಕೂಡಾ ಜನರು ಯಾವುದೇ ಜಾತಿ ಮತಗಳಿಗೆ ಸೇರಿದವರಾಗಿದ್ದರೂ ಅವರ ಮೇಲೆ ಅನ್ಯಾಯವೆಸಗುವುದನ್ನು ವಿರೋಧಿಸುತ್ತದೆ.

ಇಂದು ಅನ್ಯಾಯ ವ್ಯಾಪಕವಾಗಿದೆ. ವಿವಿಧ ಸಮುದಾಯ, ವರ್ಗ ಮತ್ತು ರಾಷ್ಟ್ರಗಳು ಪರಸ್ಪರರ ಮೇಲೆ ಅನ್ಯಾಯವೆಸಗುತ್ತಿವೆ. ಮನುಷ್ಯ ಜೀವಕ್ಕೆ ಬೆಲೆಯೇ ಇಲ್ಲವಾಗಿದೆ. ಇದಕ್ಕಿರುವ ಒಂದೇ ಪರಿಹಾರವೇನೆಂದರೆ ಮನುಷ್ಯನು ತನ್ನ ಸೃಷ್ಟಿಕರ್ತ ಮತ್ತು ಪಾಲಕನನ್ನು ಗುರುತಿಸಬೇಕು. ಅವನೆಡೆಗೆ ಮರಳಬೇಕು. ಆಗ ಮಾತ್ರ ಮನುಷ್ಯನ ಆತ್ಮಸಾಕ್ಷಿಯು ಜಾಗೃತಗೊಂಡೀತು ಮತ್ತು ಎಲ್ಲರ ಜೊತೆ ನ್ಯಾಯಪಾಲಿಸಲು ಅವನಿಗೆ ಸಾಧ್ಯವಾದೀತು.

ಈ ಹದೀಸ್ ಅಲ್ಲಾಹನ ಮಹಾನತೆಯನ್ನು ವಿವರಿಸುವ ಜೊತೆಗೆ ಅವನ ಏಕಮೇವಾದ್ವಿತೀಯ ಅಸ್ತಿತ್ವವನ್ನು ಅಂಗೀಕರಿಸಲು ಕರೆ ನೀಡುತ್ತದೆ. ಅಲ್ಲಾಹನೇ ಈ ಸಕಲ ವಿಶ್ವದ ಎಲ್ಲ ಚರಾಚರಗಳ ಪೋಷಕನೂ ಸಾರ್ವಭೌಮನೂ ಆಗಿದ್ದು ಮನುಷ್ಯನ ನಿರೀಕ್ಷೆಗಳೆಲ್ಲಾ ಅವನಲ್ಲೇ ಕೇಂದ್ರೀಕೃತವಾಗಿರಬೇಕು ಮತ್ತು ಏನು ಬೇಕಿದ್ದರೂ ಅವನಿಂದ ಮಾತ್ರ ಯಾಚಿಸಬೇಕು. ಅವನ ಬೊಕ್ಕಸವು ನಾವು ಊಹಿಸಲಾಗದಷ್ಟು ವಿಶಾಲ ಹಾಗೂ ಸಂಪನ್ನವಾಗಿದೆ. ಅವನ ಹೊರತು ಬೇರೆ ಯಾರಾದರೂ (ದೇವಿ, ದೇವತೆ, ವಿಗ್ರಹ, ನಕ್ಷತ್ರ,

ಮಲಕ್, ಪ್ರವಾದಿ, ವಲೀ ಇತ್ಯಾದಿ ಯಾರೇ ಆದರೂ) ಅನ್ನದಾತರೆಂಬ ಅಥವಾ ಇನ್ನೇನನ್ನಾದ ಕೊಡಬಲ್ಲವರೆಂಬ ಕಲ್ಪನೆಯೇ ಮಿಥ್ಯವಾಗಿದೆ.

ಹದೀಸ್‌ನ ಕೊನೆಯ ಭಾಗವು ಕರ್ಮಗಳ ಪ್ರತಿಫಲದ ಕಲ್ಪನೆಯನ್ನು ಮೂಡಿಸುತ್ತ ಒಳ್ಳೆಯ ಕರ್ಮಗಳ ಪರಿಣಾಮ ಉತ್ತಮವೂ ಕೆಟ್ಟ ಕರ್ಮಗಳ ಪರಿಣಾಮವು ಕೆಟ್ಟ ಆಗಿರುವುದು.

ಅಲ್ಲಾಹನ ಈ ಸ್ಪಷ್ಟ ಎಚ್ಚರಿಕೆಯ ಹೊರತಾಗಿಯೂ ಯಾರಾದರೂ ಸರಿದಾ ಬಾರದಿದ್ದರೆ ಅವರು ತಮ್ಮ ದುರಂತ ಅಂತ್ಯಕ್ಕೆ ಸ್ವಯಂ ಹೊಣೆಗಾರರಾಗಿರುವರು.

نْ ابنِ عُمَرَ (رض) قَالَ قَالَ رَسُوْلُ اللّٰهِ ﷺ اِنَّ الظُّلْمَ ظُلُمَاتٌ وْمَ الْقِيَامَةِ (مسلم كتاب الادب)

ಪ್ರವಾದಿ(ಸ) ಹೀಗೆ ಹೇಳಿರುವರು:

''ಅಕ್ರಮವು ಪುನರುತ್ಥಾನ ದಿನದಂದು ಅಂಧಕಾರಗಳ ರೂಪದಲ್ಲಿ ಪ್ರತ್ಯಕ್ಷವಾಗುವುದು.

[ಹಝ್ರತ್ ಇಬ್ನು ಉಮರ್(ರ) -ಮುಸ್ಲಿಮ್

ಒಬ್ಬ ಮನುಷ್ಯನು ಇತರರ ಮೇಲೆ ಅಕ್ರಮವೆಸಗುತ್ತಾನೆಂದಾದರೆ ಆ ಮನುಷ್ಯನ ಕುರುಡನೆಂದೇ ಅರ್ಥ. ಅವನು ವಾಸ್ತವಿಕತೆಗಳನ್ನು ಕಣ್ತೆರೆದು ನೋಡಬಲ್ಲವನಾಗಿದ್ದರೆ ಖಂಡಿ ಅನ್ಯಾಯ ಮಾಡುತ್ತಿರಲಿಲ್ಲ. ಸ್ವಾರ್ಥ, ಸಂಕುಚಿತವಾದ ಮತ್ತು ಅಹಂಭಾವವು ಮನುಷ್ಯನನ ಕುರುಡಾಗಿ ಮಾಡಿ ಬಿಡುತ್ತದೆ. ಅಕ್ರಮ ಅನ್ಯಾಯಗಳಿಂದಾಗಿ ಜಗತ್ತಿನಲ್ಲುಂಟಾಗುವ ಈ ಮಾನಸಿಕ ಅಂಧಕಾರವು ಪುನರುತ್ಥಾನ ದಿನದಂದು ಅವನನ್ನು ಪೂರ್ಣವಾಗಿ ಆವರಿ ಬಿಡುವುದು. ಅವನ ಸುತ್ತಲೂ ಅಂಧಕಾರದ ದಟ್ಟ ನೆರಳು ಕವಿದಂತಾಗುವುದು.

ಅನ್ಯರ ಜಮೀನು ಕಬಳಿಸುವುದು

عَنْ عَبْدُ اللّٰهِ بْنِ عُمَرَ (رض) قَالَ قَالَ النَّبِيُّ ﷺ مَنْ اَخَذَ شَيْئًا مِنَ الأَرْضِ بِغَيْرِ حَقِّهِ خُسِفَ بِهِ يَوْمَ الْقِيَامَةِ اِلَى سَبْعِ اَرْضِيْنَ (بخارى = كتاب بدء الخلق)

ಪ್ರವಾದಿ(ಸ) ಹೀಗೆ ಹೇಳಿರುವರು:

''ಯಾರಾದರೂ ಇತರರ ಜಮೀನನ್ನು ಅಕ್ರಮವಾಗಿ ಕಬಳಿಸಿದರೆ ಪುನರುತ್ಥಾನ ದಿನ ಅವನನ್ನು ಏಳು ಭೂಮಿಗಳಷ್ಟು ಆಳಕ್ಕೆ ತಳ್ಳಲಾಗುವುದು.''

[ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ) -ಬುಖಾರಿ]

ಇತರರ ಜಮೀನನ್ನು ಅಕ್ರಮವಾಗಿ ಕಬಳಿಸುವುದು ಘೋರ ಅನ್ಯಾಯ. ಆದರೆ ಹಿಂದಿನ ಲ್ಲೂ ಇಂದಿನ ಕಾಲದಲ್ಲೂ ಈ ರೀತಿ ಅನ್ಯರ ಸೊತ್ತನ್ನು ಕಬಳಿಸುವವರು ಧಾರಾಳ ಯಲ್ಲಿ ಕಂಡು ಬರುತ್ತಾರೆ. ಮನುಷ್ಯನು ತನ್ನ ಇಹಲೋಕದ ಪ್ರತಿಯೊಂದು ಕರ್ಮದಿಂದ ಲೋಕದಲ್ಲಿ ಉಂಟಾಗಬಹುದಾದ ಪರಿಣಾಮಗಳ ಬಗ್ಗೆ ನಿಶ್ಚಿಂತನಾಗಿರುವುದೇ ಈ ಅವಸ್ಥೆಗೆ ವಾಗಿದೆ. ತಾನು ಇಂದು ಈ ಲೋಕದಲ್ಲಿ ಯಾರದಾದರೂ ಜಮೀನನ್ನು ಕಬಳಿಸಿದರೆ ಪರಲೋಕದಲ್ಲಿ ಈ ಅಕ್ರಮದ ಪ್ರತಿಫಲವಾಗಿ ತನ್ನನ್ನು ಏಳು ಭೂಮಿಗಳಷ್ಟು ಆಳಕ್ಕೆ ಗುವುದು ಎಂಬ ನಂಬಿಕೆ ಒಬ್ಬ ಮನುಷ್ಯನಲ್ಲಿ ಮೂಡಿದರೆ ಅವನು ಇಂತಹ ಅನ್ಯಾಯ ಲಾರನು. ಕಾನೂನಿನ ಹಿಡಿತವು ಅವನ ಮೇಲೆ ಇದ್ದರೂ ಇಲ್ಲದಿದ್ದರೂ ಸರಿ.

ಬಾಂಧವ್ಯ ರಕ್ಷಣೆ

عَنْ جُبَيْرِبْنِ مُطْعِمٍ (رض) اَنَّ رَسُوْلَ اللّٰهِ ﷺ : قَالَ لاَ يَدْ
الْجَنَّةَ قَاطِعُ رَحِمٍ (مسلم-كتاب ال

ಪ್ರವಾದಿ(ಸ) ಹೀಗೆ ಹೇಳಿರುವರು:

''ಸಂಬಂಧ ಮುರಿಯುವವನು ಸ್ವರ್ಗವನ್ನು ಪ್ರವೇಶಿಸಲಾರನು.''

[ಹ. ಜುಬೈರ್ ಬಿನ್ ಮುತ್‌ಇಮ್(ರ) -ಮುಸ್ಲಿಮ್]

ಸಂಬಂಧಿಕರೊಂದಿಗೆ ಕೆಟ್ಟದಾಗಿ ವರ್ತಿಸುವುದು ಮತ್ತು ತನ್ನ ಬಂಧುಗಳೊಂದಿಗೆ ರ್ ಕಡಿದುಕೊಳ್ಳುವುದನ್ನು ಇಲ್ಲಿ ಸಂಬಂಧ ಮುರಿಯುವುದು ಎಂದು ಕರೆಯಲಾಗಿದೆ. ಮನ ದೃಷ್ಟಿಯಲ್ಲಿ ಇದು ಎಷ್ಟೊಂದು ದೊಡ್ಡ ಪಾಪವೆಂದರೆ ಈ ಕೃತ್ಯವೆಸಗಿದವನು ಸ್ವರ್ಗ ಶಕ್ಕೆ ಅನರ್ಹನೆನಿಸಿಕೊಳ್ಳುತ್ತಾನೆ. ಆದುದರಿಂದ ಸಂಬಂಧ ಮುರಿಯುವ ಒಬ್ಬ ವ್ಯಕ್ತಿ ಸ್ವರ್ಗ ಶಕ್ಕೆ ಅರ್ಹನಾಗಬೇಕಿದ್ದರೆ ಕೇವಲ ಕೆಲವು ಬಾಹ್ಯದ ಧರ್ಮಾಚರಣೆಗಳನ್ನು ಪಾಲಿಸಿದರೆ ಬ ಭ್ರಮೆಯಲ್ಲಿರಬಾರದು. ಅವನಲ್ಲಿ ನಿಜವಾದ ದೇವಭಯವಿರಬೇಕು. ಮನದಾಳದಲ್ಲಿ ಭಕ್ತಿ ಇರುವ ವ್ಯಕ್ತಿಯು ಸಂಬಂಧಗಳನ್ನು ಮುರಿಯುವ ಬದಲು ಅವುಗಳನ್ನು ಡಿಸಲು ಶ್ರಮಿಸುತ್ತಾನೆ.

ಧನ ಮೋಹ

عَنْ ابنِ عَبَّاس (رض) قَالَ سَمِعْتُ النَّبِيَّ ﷺ يَقُولُ : لَوْ كَانَ لا
آدَمَ وَادِيَانِ مِنْ مَالٍ لا يَبْتَغَى ثَالِثاً وَلاَ يَمْلَأ جَوْفَ ابْنِ

التُّرَابُ وَيَتُوبَ اللّٰهِ عَلَى مَنْ تَابَ (بخارى-كتاب الرقاق)

ಪ್ರವಾದಿ(ಸ) ಹೀಗೆ ಹೇಳಿದರು:

''ಮನುಷ್ಯನ ಬಳಿ ಎರಡು ಕಣಿವೆ ತುಂಬಾ ಸಂಪತ್ತಿದ್ದರೂ ಅವನು ಮೂರನೆಯ ಹಾತೊರೆಯುತ್ತಾನೆ. ಮನುಷ್ಯನ ಹೊಟ್ಟೆಯನ್ನು ಮಣ್ಣು ಮಾತ್ರ ತುಂಬಬಲ್ಲುದು. ತನ್ನ ಮರಳುವವರ ಕಡೆಗೆ ಅಲ್ಲಾಹನು ಗಮನ ಹರಿಸುತ್ತಾನೆ.''

[ಹ. ಇಬ್ನು ಅಬ್ಬಾಸ್(ರ) -ಬು

ಇದು ಮನುಷ್ಯನ ಲೋಭ ಮತ್ತು ದುರಾಶೆಯ ಬಗ್ಗೆ ನೀಡಲಾ ಒಂದು ಉಪಮೆಯಾಗಿದೆ. ಸಂಪತ್ತಿನ ಆಶೆಗೆ ತುತ್ತಾದ ಮನುಷ್ಯನಿಗೆ ಎಷ್ಟು ಸಿಕ್ಕಿ ತೃಪ್ತಿಯಾಗುವುದಿಲ್ಲ. ಅವನು ಮತ್ತಷ್ಟನ್ನು ಸಂಗ್ರಹಿಸುವ ಆತುರದಲ್ಲಿ ಅವಿಶ್ರಾಂತ ದುಡಿಯುತ್ತಾನೆ. ಶ್ರೇಷ್ಠ ಉದ್ದೇಶಗಳಿಗಾಗಿ ದೇವನು ತನಗೆ ನೀಡಿರುವ ಜೀವನವನ್ನೆಲ್ಲಾ ಕ ಧನ ಸಂಪಾದನೆಗಾಗಿ ಮುಡಿಪಿಟ್ಟು ಬಿಡುತ್ತಾನೆ. ಧನ ಸಂಪಾದನೆಯ ಮತ್ತಿನಲ್ಲಿ ಅವನಿ ಜೀವನಕ್ಕೊಂದು ಉದ್ದೇಶವೂ ಇದೆ ಎಂಬುದೇ ಮರೆತು ಹೋಗುತ್ತದೆ. ಇಂತಹ ವ್ಯಕ್ತಿ ತನ್ನ ಜೀವನದ ಉದ್ದೇಶದಲ್ಲಿ ವಿಫಲನಾಗುತ್ತಾನೆ. ಶ್ರಮವೆಲ್ಲಾ ನಿರರ್ಥಕವೆಂಬುದು ಅ ಪರಲೋಕದಲ್ಲಿ ಮನವರಿಕೆಯಾಗಲಿದೆ. ಆಗ ಅವನಿಗೆ ನಿರಾಶೆಯಲ್ಲದೆ ಇನ್ನೇನೂ ದಕ್ಕದು

ಮನುಷ್ಯನ ಹೊಟ್ಟೆಯನ್ನು ಮಣ್ಣು ಮಾತ್ರ ತುಂಬಬಲ್ಲುದು ಎಂದರೆ, ಮನ ಲೋಭ ಮತ್ತು ದುರಾಶೆಯು ಕೊನೆಗೊಳ್ಳುವುದು ಅವನು ಸತ್ತು ಗೋರಿ ಸೇರಿದಾಗ ಎಂದರ್ಥ.

ಕೊನೆಯ ಮಾತಿನ ಅರ್ಥವೇನೆಂದರೆ ಒಬ್ಬ ವ್ಯಕ್ತಿಯು ಅಲ್ಲಾಹನತ್ತ ಮರ ಅಲ್ಲಾಹನು ಅವನಿಗೆ ಮಾರ್ಗದರ್ಶನ ನೀಡುವನು. ಅವನನ್ನು ಲೌಕಿಕ ಲೋಭ ದುರಾಶೆಗಳಿಂದ ಮುಕ್ತಗೊಳಿಸುವನು ಹಾಗೂ ತನ್ನ ನೈಜ ಜೀವನೋದ್ದೇಶವನ್ನು ಅ ಅದಕ್ಕಾಗಿ ಶ್ರಮಿಸುವ ಸೌಭಾಗ್ಯ ಅವನಿಗೆ ನೀಡುವನು.

ನಿಷಿದ್ಧ ಆಹಾರ

اَبِى بَكْرٍ اَنَّ رَسُولَ اللّٰهِ ﷺ قَالَ لَا يَدْخُلُ الْجَنَّةَ جَسَدٌ

ى بِالْحَرَامِ (مشكوة -كتاب البيوع رواه البيهقى فى شعب الايمان)

ಪ್ರವಾದಿ(ಸ) ಹೀಗೆ ಹೇಳಿದರು:

''ನಿಷಿದ್ಧ ಆಹಾರದಿಂದ ಪೋಷಿಸಲ್ಪಟ್ಟ ಶರೀರವು ಸ್ವರ್ಗವನ್ನು ಪ್ರವೇಶಿಸಲಾರದು.''

[ಹ. ಅಬೂಬಕರ್(ರ) -ಮಿಷ್ಕಾತ್, ಬೈ

عَنْ جَابِرٍ (رض) قَالَ قَالَ رَسُولُ اللّٰهِ ﷺ لا يَدْخُلُ الجَنَّةَ ا
نَبَتَ مِنَ السُّحْتِ , وَكُلُّ لَحْمٍ نبتَ مِنَ السُّحُتِ كا
النَّارُ اَوْلٰى بِهِ (مشكوة كتاب البيوع رواه احم

ಪ್ರವಾದಿ(ಸ) ಹೀಗೆ ಹೇಳಿರುವರು:

''ನಿಷಿದ್ಧ ಆಹಾರದಿಂದ ಪೋಷಿಸಲ್ಪಟ್ಟ ಮಾಂಸವು ಸ್ವರ್ಗವನ್ನು ಪ್ರವೇಶಿಸಲಾರದು. ದ್ಧ ಆಹಾರದಿಂದ ಪೋಷಿತವಾದ ಮಾಂಸವು ನರಕಕ್ಕೇ ಯೋಗ್ಯವಾಗಿದೆ.''

[ಹ. ಜಾಬಿರ್(ರ) -ಮಿಷ್ಕಾತ್, ಅಹ್ಮದ್]

ಅನ್ನಾಹಾರಗಳನ್ನೇ ಜೀವನೋದ್ದೇಶವಾಗಿ ಮಾಡಿಕೊಂಡು ಅಕ್ರಮ-ಸಕ್ರಮವೆಂಬ ್ಯಸವನ್ನು ಕಡೆಗಣಿಸಿ ಹೇಗಾದರೂ ಸಂಪಾದನೆ ಮಾಡಿದರಾಯಿತು ಎಂಬ ಮನೋಭಾವ ಜನರಿಗೆ ಇದೊಂದು ಗಂಭೀರ ಎಚ್ಚರಿಕೆಯಾಗಿದೆ. ಅವರು ಜೀವನೋಪಾಯದ ಯದಲ್ಲಿ ಶುದ್ಧ-ಅಶುದ್ಧ ಎಂಬ ಕಲ್ಪನೆಯನ್ನೇ ಹೊಂದಿರುವುದಿಲ್ಲ ಮತ್ತು ಈ ಉನ್ನತ ಮೌಲ್ಯವನ್ನು ಅವರು ಸಂಕುಚಿತವಾದವೆಂದು ಪರಿಗಣಿಸುತ್ತಾರೆ. ಇಸ್ಲಾಮಿನ ದೃಷ್ಟಿಯಲ್ಲಿ ಮವಾಗಿ ಸಂಪಾದಿಸಿದ ಆಹಾರದಿಂದ ಶರೀರ ದಷ್ಟಪುಷ್ಟವಾಗಬಹುದಾದರೂ ಅದು ಷ್ಟವಾಗದು. ನಿಷಿದ್ಧ ಆಹಾರವು ಶರೀರವನ್ನು ಮಲಿನಗೊಳಿಸುತ್ತದೆ. ನಿಷಿದ್ಧ ಆಹಾರದಿಂದ ಷಿತವಾದ ಈ ಮಲಿನ ಶರೀರವನ್ನು ಸ್ವರ್ಗವು ತನ್ನೊಳಗೆ ಸೇರಿಸಿಕೊಳ್ಳುವುದಿಲ್ಲ, ು ನರಕಕ್ಕೆ ಮಾತ್ರ ಯೋಗ್ಯವಾಗಿರುತ್ತದೆ.

عَنْ ابِى هُرَيْرَةَ (رض) عَنِ النبى ﷺ قَالَ يَاتِىْ عَلَى النَّا
زَمَانٌ لا يُبَالِى الْمَرْءُ مَا اَخَذَ مِنْهُ أَمِنَ الحَلالِ اَمْ مِنَ الحَر
بخارى كتاب البيو)

ಪ್ರವಾದಿ(ಸ) ಹೀಗೆ ಹೇಳಿರುವರು:

''ಒಂದು ಕಾಲ ಬರಲಿದೆ. ಆಗ ಮನುಷ್ಯನಿಗೆ ತಾನು ಯಾವ ವಿಧಾನದಿಂದ ಪಾದಿಸುತ್ತಿದ್ದೇನೆಂಬ, ಅಂದರೆ ಧರ್ಮಸಮ್ಮತ ಮಾರ್ಗದಿಂದಲೋ ನಿಷಿದ್ಧ ಮಾರ್ಗ ದಲೋ ಎಂಬ ಪರಿವೆಯೇ ಇರಲಾರದು.'' [ಹಝ್ರತ್ ಅಬೂ ಹುರೈರಾ(ರ) -ಬುಖಾರಿ]

ಈ ಪ್ರವಾದಿ ವಚನದಲ್ಲಿ ಭವಿಷ್ಯ ನುಡಿಯಲಾಗಿರುವಂತಹ ನೈತಿಕ ಅಧೋಗತಿಯು ಂದು ವ್ಯಾಪಕವಾಗಿ ಗೋಚರಿಸುತ್ತಿದೆ. ಆಧುನಿಕ ಸಮಾಜದಲ್ಲಿ ಹೆಚ್ಚಿನವರಿಗೆ ಅಕ್ರಮ

ಸಕ್ರಮವೆಂಬ ಪರಿವೆಯಿಲ್ಲದೆ ಯಾವ ವಿಧಾನದಿಂದಾದರೂ ಧನ ಸಂಪಾದನೆ ಮಾಡಬೆ ಹುಚ್ಚು ತಗಲಿದೆ. ಈ ರೀತಿ ಪ್ರವಾದಿವರ್ಯರ(ಸ) ಈ ಭವಿಷ್ಯವಾಣಿಯು ಅ ನಿಜವೆಂಬುದು ವ್ಯಕ್ತವಾಗಿದೆ.

ابِی هُرَیْرَةَ (رض) قَالَ قَالَ رَسُولُ اللّٰهِ ﷺ اَيُّهَا النَّاسُ
لَّهَ طَيِّبٌ لا يَقْبَلُ اِلّا طَيِّبًا وَاَنَّ اللّٰهَ اَمَرَ الْمُؤْمِنِينَ بِمَا اَمَرَ بِهِ
رْسَلِينَ فَقَالَ يَااَيُّهَا الرُّسُلُ كُلُوا مِنْ الطَّيِّبَاتِ وَاعْمَلُوا
لِحًا اِنِّی بِمَا تَعْمَلُونَ عَلِيمٌ وَقَالَ يَااَيُّهَا الَّذِينَ آمَنُوا
وا مِنْ طَيِّبَاتِ مَا رَزَقْنَاكُمْ ثُمَّ ذَكَرَ الرَّجُلُ يُطِيلُ السَّفَرَ
ثَ اَغْبَرَ يَمُدُّ يَدَيْهِ اِلَى السَّمَاءِ يَا رَبِّ ! يَارَبِّ ! وَمَطْعَمُهُ
امٌ وَمَشْرَبُهُ حَرامٌ وَمَلْبَسُهُ حَرَامٌ وَغُذِیَ بِالْحَرَامِ فَاَنّٰی
تَجَابُ لِذٰلِکَ (مسلم-كتاب الزكاة)

ಪ್ರವಾದಿ(ಸ) ಹೀಗೆ ಹೇಳಿರುವರು:

''ಅಲ್ಲಾಹನು ಪಾವನನು. ಅವನು ಪಾವನ ವಸ್ತುಗಳನ್ನು ಮಾತ್ರ ಸ್ವೀಕರಿಸುತ್ತಾನೆ. ಅ ತನ್ನ ಸಂದೇಶವಾಹಕರಿಗೆ ಆದೇಶಿಸಿದ್ದನ್ನೇ ಸಾಮಾನ್ಯ ಸತ್ಯವಿಶ್ವಾಸಿಗಳಿಗೂ ಆದೇಶಿಸಿದ 'ಸಂದೇಶವಾಹಕರುಗಳೇ! ಶುದ್ಧ ವಸ್ತುಗಳನ್ನು ತಿನ್ನಿರಿ ಮತ್ತು ಸತ್ಕರ್ಮಗಳನ್ನು ಮಾಡಿರಿ. ನಿ ಮಾಡುತ್ತಿರುವುದನ್ನೆಲ್ಲಾ ನಾನು ಚೆನ್ನಾಗಿ ತಿಳಿಯುತ್ತಿರುವೆನು' ಎಂದು ಅವನು ಹೇಳಿರುವ (ಪವಿತ್ರ ಕುರ್‌ಆನ್23:51) ಅವನು, ಸತ್ಯವಿಶ್ವಾಸಿಗಳೇ! ನಾವು ನಿಮಗೆ ದಯಪಾಲಿಸಿ ಶುದ್ಧ ವಸ್ತುಗಳನ್ನು ಭಕ್ಷಿಸಿರಿ'' ಎಂದೂ ಹೇಳಿರುವನು. (2:172)

ಇಷ್ಟು ಹೇಳಿದ ಬಳಿಕ ಪ್ರವಾದಿವರ್ಯರು ಒಬ್ಬ ವ್ಯಕ್ತಿಯ ಕುರಿತು ಹೀಗೆಂದರೆ ಹದೀಸ್ ವರದಿಗಾರರು ಹೇಳಿದ್ದಾರೆ:

ಅವನು(ಹಜ್ಜ್‌ಗಾಗಿ) ಬಹಳ ದೀರ್ಘ ಪ್ರಯಾಣ ಮಾಡುತ್ತಾನೆ. (ಪ್ರಯಾಣದಿಂದಾ ಅವನ ಕೂದಲುಗಳು ಕೆದರಿಕೊಂಡು ಧೂಳಿನಿಂದಾವೃತವಾಗಿವೆ. ಅವನು ಬಾನಿನೆಡೆಗೆ ಕೈಗಳನ್ 'ನನ್ನ ಪ್ರಭೂ! ನನ್ನ ಪ್ರಭೂ!' ಎಂದು ಪ್ರಾರ್ಥಿಸುತ್ತಾನೆ. ಆದರೆ ವಾಸ್ತವದಲ್ಲಿ ಅವನ ಆ ಪಾನೀಯ ಮತ್ತು ಅವನ ವಸ್ತ್ರವೆಲ್ಲವೂ ನಿಷಿದ್ಧ ಸಂಪಾದನೆಗಳಾಗಿವೆ. ಅವನು ನಿಷಿದ್ಧ ಆಹಾರದಿ

ೀಪಿಸಲ್ಪಟ್ಟಿದ್ದಾನೆ. ಹೀಗಿರುತ್ತಾ ಅವನ ಪ್ರಾರ್ಥನೆಯು ಸ್ವೀಕೃತವಾಗುವುದಾದರೂ ಹೇಗೆ?

[ಹಝ್ರತ್ ಅಬೂ ಹುರೈರಾ(ರ) -ಮುಸ್ಲಿಮ್]

ಧನ ಸಂಪಾದನೆಗೆ ಧರ್ಮಸಮ್ಮತ ಮಾರ್ಗಗಳನ್ನು ಮಾತ್ರ ಅವಲಂಬಿಸಬೇಕೆಂದು ಸ್ಲಾಮ್ ಆದೇಶಿಸುತ್ತದೆ. ಆರ್ಥಿಕ ಕ್ಷೇತ್ರವೂ ಸೇರಿದಂತೆ ಬದುಕಿನ ಎಲ್ಲ ಕ್ಷೇತ್ರಗಳಲ್ಲೂ ನುಷ್ಯನು ಅಲ್ಲಾಹನ ಆದೇಶಗಳನ್ನು ಪಾಲಿಸಬೇಕು ಮತ್ತು ಅವನ ನಿಯಮಗಳಿಗೆ ದ್ಧನಾಗಿರಬೇಕು ಎಂಬುದು ಇಸ್ಲಾಮಿನ ಬೋಧನೆಯಾಗಿದೆ.

ಅಲ್ಲಾಹನ ಆದೇಶಗಳನ್ನು ಲೆಕ್ಕಿಸದೆ, ಅವನು ನಿಷೇಧಿಸಿರುವ ಮಾರ್ಗಗಳಿಂದ ಪಾದನೆ ಮಾಡುವ ವ್ಯಕ್ತಿ ಅಲ್ಲಾಹನೊಡನೆ ಮಾಡುವ ಪ್ರಾರ್ಥನೆ ಅರ್ಥಹೀನವೆನಿಸುತ್ತದೆ. ಲ್ಲಾಹನ ಆಜ್ಞಾಪಾಲನೆ ಮಾಡುವೆನೆಂಬ ಸಂಕಲ್ಪದೊಂದಿಗೆ ಮತ್ತು ಶುದ್ಧ ಮನಸ್ಸಿನಿಂದ ದ್ಧಾಪೂರ್ವಕವಾಗಿ ಮಾಡುವ ಪ್ರಾರ್ಥನೆ ಮಾತ್ರ ಸ್ವೀಕಾರಾರ್ಹವಾಗಿರುತ್ತದೆ.

ಲೋಭ

عَنْ اَبِى هُرَيْرَةَ (رض) اَنَّ النَّبِى ﷺ قَالَ مَا مِنْ يَوْمٍ يُصْبِ
الْعِبَادُ فِيهِ اِلَّا مَلَكَانِ يَنْزِلَانِ فَيَقُوْلُ اَحَدُهُمَا اللّٰهُمَّ اَعْ
مُنْفِقًا خَلَفًا وَيَقُوْلُ الاٰخَرُ اللّٰهُمَّ اَعْطِ مُمْسِكًا تَلَفًا
(بخارى كتاب الزكوة

ಪ್ರವಾದಿ(ಸ) ಹೀಗೆ ಹೇಳಿರುವರು:

''ನಿತ್ಯವೂ ಮುಂಜಾನೆ ಇಬ್ಬರು ಮಲಕ್‌ಗಳು(ದೇವಚರರು) ಅವತರಿಸಲ್ಪಡುತ್ತಾರೆ. ಬ್ಬನು, 'ದೇವಾ! ದಾನ ಮಾಡುವವನಿಗೆ ಅವನ ಸ್ಥಾನವನ್ನು ದಯಪಾಲಿಸು' ಎನ್ನುತ್ತಾನೆ. ನ್ನೊಬ್ಬನು 'ದೇವಾ! ಜಿಪುಣನ ಸಂಪತ್ತನ್ನು ನಾಶಮಾಡು' ಎನ್ನುತ್ತಾನೆ.''

[ಹಝ್ರತ್ ಅಬೂ ಹುರೈರಾ(ರ) -ಬುಖಾರಿ]

ಇತರರ ಹಕ್ಕುಗಳನ್ನು ಈಡೇರಿಸಲಿಕ್ಕಾಗಿ ವ್ಯಯಿಸಲಾಗುವ ಸಂಪತ್ತು ಸಮೃದ್ಧಿದಾಯಕ ಗುತ್ತದೆ. ಹಾಗೆ ವ್ಯಯಿಸಲಾದ ಸಂಪತ್ತಿಗೆ ಪ್ರತಿಯಾಗಿ ಅಲ್ಲಾಹನು ಬೇರೆ ಸಂಪತ್ತನ್ನು ಯಪಾಲಿಸುತ್ತಾನೆ. ಭೌತಿಕವಾದಕ್ಕೆ ತುತ್ತಾಗಿ ತಾವು ಸಂಪತ್ತನ್ನು ವ್ಯಯಿಸಿದರೆ ಅದು ಮೆಯಾದೀತೆಂಬ ಭ್ರಮೆಯಿಂದ ತಮ್ಮ ಕರ್ತವ್ಯಗಳನ್ನು ನೆರವೇರಿಸದೆ, ಇತರರ ಕ್ಕಗಳನ್ನು ಈಡೇರಿಸದೆ ಜಿಪುಣತೆ ತೋರುವವರ ಪಾಲಿಗೆ ಅವರ ಸಂಪತ್ತು ಒಂದು ಪವಾಗಿ ಮಾರ್ಪಡುತ್ತದೆ. ಅವರು ಒಳಿತಿನ ಮಾರ್ಗದಲ್ಲಿ ವ್ಯಯಿಸದೆ ಉಳಿಸಿಡುವ ಅವರ ಪತ್ತು ಅವರ ವಿನಾಶಕ್ಕೆ ಕಾರಣವಾಗುತ್ತದೆ.

نْ ابى هُرَيْرَةَ (رض) اَنَّهُ سَمِعَ رَسُولَ اللّٰهِ ﷺ يَقُولُ :
ثَلَ البَخِيلَ وَالْمُنْفِقِ كَمَثَلِ رَجُلَيْنِ عَلَيْهِمَا جُبَّتَانِ مِنَ
حَدِيدِ مِنْ ثَدْيِهِمَا اِلَى تَرَاقِيهِمَا فَاَمَّا الْمُنْفِقُ فَلَا يُنْفِقُ اِلَّا
بَغَتْ اَوْ وَفَرَتْ عَلَى جِلْدِهِ حَتَّى تُخْفِى بَنَانَهُ وَتَعْفُوْا اَثَرَهُ , اَمَّا
بَخِيلُ فَلَا يُرِيدُ اَنْ يُنْفِقَ شَيْئًا اِلَّا لَزِقَتْ كُلُّ حَلْقَةٍ مَكَانَهَا
هُوَ يُوَسِّعُهَا وَلَا تَتَّسِعُ (بخارى كتاب الزكوة)

ಪ್ರವಾದಿವರ್ಯರು(ಸ) ಹೀಗೆ ಹೇಳಿರುವರು:

''ಜಿಪುಣತೆ ತೋರುವವರ ಮತ್ತು ದಾನಶೀಲರಾಗಿರುವವರ ಉದಾಹರಣೆ ಹೀಗಿ ಇಬ್ಬರು ವ್ಯಕ್ತಿಗಳಿದ್ದಾರೆ. ಅವರು ಎದೆಯಿಂದ ಸೊಂಟದ ತನಕ ಕಬ್ಬಿಣದ ಕವಚವನ್ನು ಧ ಕೊಂಡಿದ್ದಾರೆ. ಅವರ ಪೈಕಿ ದಾನಶೀಲನು ದಾನ ಮಾಡುವಾಗ ಅವನ ಕವಚವು ವಿಶಾಲವಾಗು ಹೋಗುತ್ತದೆ. ಅದು ಅವನ ಸಂಪೂರ್ಣ ಶರೀರವನ್ನು ಮುಚ್ಚುವಷ್ಟು ವಿಶಾಲವಾಗುತ್ತ ಕೊನೆಗೆ ಅವನ ಬೆರಳುಗಳು ಮತ್ತು ಹೆಜ್ಜೆ ಗುರುತುಗಳು ಕೂಡಾ ಮರೆಸಲ್ಪಡುತ್ತವೆ. ತದ್ವಿರುದ್ಧವಾ ಜಿಪುಣನು ಖರ್ಚು ಮಾಡಹೊರಟಾಗ ಆ ಕವಚದ ತುಣುಕುಗಳು (ಸಂಕುಚಿತಗೊಂಡ ಅವನ ಶರೀರಕ್ಕೆ ಅಂಟಿಕೊಳ್ಳುತ್ತವೆ. ಅವನು ಅವುಗಳನ್ನು ಹಿಗ್ಗಿಸ ಬಯಸುತ್ತಾನೆ. ಆದರೆ ಅ ಹಿಗ್ಗುವುದಿಲ್ಲ.'' [ಹಝ್ರತ್ ಅಬೂ ಹುರೈರಾ(ರ) - ಬುಖಾ

ಇದು ದೇವಮಾರ್ಗದಲ್ಲಿ ವೆಚ್ಚ ಮಾಡುವ ಉದಾರಿಯ ಮತ್ತು ಜಿಪುಣ ಉದಾಹರಣೆಗಳಾಗಿವೆ. ದಾನ ಮಾಡುವಾತನ ರಕ್ಷಾಕವಚವು ವಿಶಾಲವಾಗುವುದೆಂದ ಅವನ ಮನಸ್ಸು ಬಹಳ ಮುಕ್ತ ಹಾಗೂ ವಿಶಾಲವಾಗಿರುತ್ತದೆ. ಅದು ದಾನ ಮಾಡುವುದ ಸ್ವಲ್ಪವೂ ತಡೆಯುವುದಿಲ್ಲ, ಅವನು ಸ್ವಂತ ಇಚ್ಛೆಯಿಂದ ಮತ್ತು ಸಂತೋಷದಿಂದ ದಾ ಮಾಡುತ್ತಾನೆ. ಅವನಿಗೆ ಅವನ ದಾನದಿಂದ ಮನಶ್ಶಾಂತಿ ಪ್ರಾಪ್ತವಾಗುತ್ತದೆ ಮತ್ತು ತಾ ದಾನ ಮಾಡಿದ ಬಗ್ಗೆ ಅವನಿಗೆ ಯಾವುದೇ ಕೊರಗು ಇರುವುದಿಲ್ಲ ಎಂದರ್ಥ. ಇದ ವಿರುದ್ಧವಾಗಿ ಜಿಪುಣನಿಗೆ ದಾನದ ಮಹತ್ವ ಮನವರಿಕೆಯಾಗಿ ಅವನು ದಾನ ಮಾಡಬೇಕೆಂ ಆಲೋಚಿಸುತ್ತಿದ್ದರೂ ಅವನ ಮನಸ್ಸಿನ ಜಿಪುಣತೆಯು ಅವನನ್ನು ಬಂಧಿಸಿಡುತ್ತದೆ. ಈ ರೀತಿ ಅವನು ಸಂಕುಚಿತತೆಗೆ ತುತ್ತಾಗುತ್ತಾನೆ. ಅವನಿಗೆ ಮನಃಶ್ಶಾಂತಿ ಪ್ರಾಪ್ತವಾಗುವುದೇ ಅಸಮಾಧಾನದಿಂದ ಕೊರಗುತ್ತಿರುತ್ತಾನೆ.

ಕಾಪಟ್ಯದ ಲಕ್ಷಣಗಳು

عَنْ عَبْدِاللّٰهِ بِنْ عُمَرِو (رض) اَنَّ النَّبِیَّ صلى الله عليه وسلم قَالَ : اَرْبَعٌ مَنْ كُنَّ كَانَ مُنَافِقًا خَالِصًا وَمَنْ كَانَتْ فِيهِ خَصْلَةٌ مِنْهُنَّ كَانَتْ خَصْلَةٌ مِنَ النِّفَاقِ حَتّٰى يَدَعَهَا اِذَا اُوْتُمِنَ خَانَ وَاِذَاحَدَّثَ كَذَ وَاِذَا عَاهَدَ غَدَرَ وَاِذَا خَاصَمَ فَجَرَ (بخاری-کتاب الايمان)

ಪ್ರವಾದಿ(ಸ) ಹೀಗೆ ಹೇಳಿರುವರು:

''ನಾಲ್ಕು ಗುಣಗಳು ಒಬ್ಬ ವ್ಯಕ್ತಿಯಲ್ಲಿದ್ದರೆ ಅವನು ಅಪ್ಪಟ ಮುನಾಫಿಕ್(ಕಪಟ ಶ್ವಾಸಿ) ಆಗಿರುವನು. ಇನ್ನು ಯಾರಲ್ಲಾದರೂ ಈ ಪೈಕಿ ಯಾವುದಾದರೂ ಒಂದು ಣ ಇದ್ದರೆ, ಅವನು ಅದನ್ನು ತೊರೆಯುವವರೆಗೂ ಅದು ನಿಫಾಕ್‌ನ(ಕಾಪಟ್ಯದ) ಣವೆಂದು ಪರಿಗಣಿಸಲ್ಪಡುವುದು. ವಿಶ್ವಾಸವಿಟ್ಟು ಏನಾದರೂ ಒಪ್ಪಿಸಿದಾಗ ಅದರಲ್ಲಿ ಂಚನೆ ಮಾಡುವುದು, ಮಾತನಾಡುವಾಗ ಸುಳ್ಳು ಹೇಳುವುದು, ಮಾತು ಕೊಟ್ಟ ಬಳಿಕ ವಚನ ಂಗ ಮಾಡುವುದು ಮತ್ತು ಜಗಳವಾದಾಗ ಬಯ್ಯುವುದು.''

[ಹ. ಅಬ್ದುಲ್ಲಾ ಬಿನ್ ಅಮ್ರ್(ರ) –ಬುಖಾರಿ]

ನಿಫಾಕ್ ಅಥವಾ ಕಪಟವಿಶ್ವಾಸವೆಂದರೆ ಒಬ್ಬ ವ್ಯಕ್ತಿ ತಾನು ಮುಸ್ಲಿಮ್ ಎಂದು ಸಮಾಜದ ುಂದೆ ಸಾರಿದ್ದರೂ ಅವನು ತನ್ನ ವಿಶ್ವಾಸದಲ್ಲಿ ಪ್ರಾಮಾಣಿಕನಾಗಿಲ್ಲದಿರುವುದು. ಏಕೆಂದರೆ ರ್ವ ಪ್ರಾಮಾಣಿಕ ಸತ್ಯವಿಶ್ವಾಸಿಯಲ್ಲಿ ಸತ್ಯವಿಶ್ವಾಸಕ್ಕೆ ವಿರುದ್ಧವಾದ ಗುಣಗಳು ಮ್ಮಿಳಿತವಾಗುವುದು ಅಸಾಧ್ಯ. ಒಬ್ಬ ವ್ಯಕ್ತಿ ನಿಜವಾದ ಮುಸ್ಲಿಮನಾಗಿದ್ದರೆ ಅವನಲ್ಲಿ ಕೆಲವು ಮುಖ ಸದ್ಗುಣಗಳು ಸ್ವಾಭಾವಿಕವಾಗಿ ಗೋಚರಿಸುತ್ತದೆ. ಈ ಹದೀಸ್‌ನಲ್ಲಿ ಕಪಟವಿಶ್ವಾಸಿಯ ಶಿಷ್ಟ್ಯವೆನ್ನಬಹುದಾದ ನಾಲ್ಕು ಗುಣಗಳನ್ನು ಪ್ರಸ್ತಾಪಿಸಲಾಗಿದೆ. ವಂಚನೆ, ಸುಳ್ಳು, ವಚನ ಂಗ ಮತ್ತು ಬಯ್ಗುಳಗಳೇ ಆ ನಾಲ್ಕು ದುರ್ಗುಣಗಳು.

ದುರದೃಷ್ಟವಶಾತ್ ಇಂದು, ಪ್ರವಾದಿವರ್ಯರ(ಸ) ಈ ಉಗ್ರ ಎಚ್ಚರಿಕೆಯ ೊರತಾಗಿಯೂ ಈ ಕೆಡುಕುಗಳೆಲ್ಲಾ ಮುಸ್ಲಿಮರ ಮಧ್ಯೆಯೂ ಧಾರಾಳವಾಗಿ ಂಸುಳಿಕೊಂಡಿದೆ. ಇಸ್ಲಾಮ್ ಧರ್ಮ ತನ್ನ ಅನುಯಾಯಿಗಳನ್ನು ನೈತಿಕವಾಗಿ ಔನ್ನತ್ಯದಲ್ಲಿ ಣ ಬಯಸುತ್ತದೆ, ಆದರೆ ಅವರು ಅದೆಂತಹ ಅಧೋಗತಿಗೆ ಹೋಗುತ್ತಿದ್ದಾರೆ!

ನೆರೆಕರೆಯವರಿಗೆ ಕಿರುಕುಳ

عَنْ ابی شُرَيْحٍ (رض) اَنَّ النَّبِیَّ قَالَ: وَاللّٰهِ لا يُؤْمِنُ وَاللّٰهِ لا يُؤْمِنُ

للّٰهِ لا يُؤمِنُ – قِيلَ وَمَنْ يَا رَسُولَ اللّٰهِ قَالَ الَّذى لا يأمَنُ
ارَهُ بَوَائِقَهُ (بخارى كتاب الادب)

ಪ್ರವಾದಿ(ಸ) ಹೀಗೆ ಹೇಳಿರುವರು:

''ಅಲ್ಲಾಹನಾಣೆ, ಅವನು ಸತ್ಯವಿಶ್ವಾಸಿಯಲ್ಲ, ಅಲ್ಲಾಹನಾಣೆ! ಅವನು ಸತ್ಯವಿಶ್ವಾಸಿಯ ಅಲ್ಲಾಹನಾಣೆ, ಅವನು ಸತ್ಯವಿಶ್ವಾಸಿಯಲ್ಲ.''

'ಅಲ್ಲಾಹನ ಸಂದೇಶವಾಹಕರೇ(ಸ), ಯಾರು ಸತ್ಯವಿಶ್ವಾಸಿಯಲ್ಲ' ಎಂದು ಯಾರ ಪ್ರಶ್ನಿಸಿದರು. ಪ್ರವಾದಿ(ಸ) ಹೇಳಿದರು:

''ಯಾರ ಕಿರುಕುಳದಿಂದ ಅವನ ನೆರೆಕರೆಯವರು ಸುರಕ್ಷಿತರಲ್ಲವೋ ಅವನು.''

[ಅಬೂ ಶುರೈಹ್(ರ) -ಬುಖಾ

ಒಬ್ಬ ಮುಸ್ಲಿಮನು ತನ್ನ ನೆರೆಹೊರೆಯವರಿಗೆ ಅನ್ಯಾಯ ಮಾಡುತ್ತಾನೆ ಅಥವಾ ಕಿರುಕ ಕೊಡುತ್ತಾನೆಂದಾದರೆ ಅವನಿನ್ನೂ ಇಸ್ಲಾಮ್ ಮತ್ತು ಸತ್ಯವಿಶ್ವಾಸದ ವಾಸ್ತವಿಕತೆಯನ್ನೇ ಅರಿ ಕೊಂಡಿಲ್ಲವೆಂದು ಅರ್ಥ. ಏಕೆಂದರೆ ಸತ್ಯವಿಶ್ವಾಸವು ಮನುಷ್ಯನಿಗೆ, ತನ್ನ ನೆರೆಹೊರೆಯವರೊಂ ಅತ್ಯುತ್ತಮವಾಗಿ ವರ್ತಿಸಲು ಕಲಿಸುತ್ತದೆ. ಅವರೊಂದಿಗೆ ದುರ್ವರ್ತನೆ ಮಾಡಲು ಅ ಅನುಮತಿಸುವುದಿಲ್ಲ.

ಪ್ರವಾದಿವರ್ಯರ(ಸ) ಈ ವಚನವು, ತಾವು ಮುಸ್ಲಿಮರೆಂದು ಅಭಿಮಾನ ಪಡುತ್ತಲ ಇಸ್ಲಾಮ್ ಧರ್ಮವು ಅನುಮತಿಸದ ಮತ್ತು ಸತ್ಯವಿಶ್ವಾಸಕ್ಕೆ ಭೂಷಣವಲ್ಲದಂತಹ ಗುಣಗಳ ಬೆಳೆಸಿಕೊಂಡಿರುವ ಜನರ ಪಾಲಿಗೆ ಒಂದು ಗಂಭೀರ ಎಚ್ಚರಿಕೆಯಾಗಿದೆ. ಒಂದು ವೇ ನಿಜವಾಗಿಯೂ ಅವರ ಮನಸ್ಸಿನಲ್ಲಿ ಸತ್ಯವಿಶ್ವಾಸದ ಅನಿವಾರ್ಯ ಬೇಡಿಕೆಯಾದ ಅಲ್ಲಾಹ ಭಯ ಇದ್ದಲ್ಲಿ ಅವರು ಖಂಡಿತ ಅನ್ಯಾಯ ಮತ್ತು ಕಿರುಕುಳದ ವರ್ತನೆ ಎಸಗುತ್ತಿರಲಿಲ್ಲ.

ಸ್ವೇಚ್ಛೆಯ ದಾಸ್ಯ

نْ ابِى هُرَيْرَةَ (رض) انَّ رَسُولَ اللّٰهِ ﷺ قَالَ حُجِبَتِ النَّارُ بِالشَّهَوَاتِ
حُجِبَتْ الْجَنَّةُ بِالْمَكَارِهِ (بخارى كتاب الرقاق)

ಪ್ರವಾದಿ(ಸ) ಹೀಗೆ ಹೇಳಿರುವರು:

''ನರಕವನ್ನು ಸ್ವೇಚ್ಛೆಗಳಿಂದ ಆವರಿಸಿಡಲಾಗಿದೆ ಮತ್ತು ಸ್ವರ್ಗವು ಮನಸ್ಸಿ ಅಪ್ರಿಯವಾಗಿರುವಂತಹ ವಸ್ತುಗಳಿಂದ ಆವರಿಸಲ್ಪಟ್ಟಿದೆ.''

[ಹಝ್ರತ್ ಅಬೂ ಹುರೈರಾ(ರ) -ಬುಖಾರಿ

ಮನುಷ್ಯನ ಮನಸ್ಸು ಸ್ವೇಚ್ಛೆಗಳನ್ನು ಈಡೇರಿಸುವಂತಹ ಕಾರ್ಯಗಳಿಗೆ ಸುಲಭವಾಗಿ ಎಲಿಯುತ್ತದೆ. ಏಕೆಂದರೆ ಅದರಿಂದ ಚಿತ್ತಕ್ಕೆ ಸುಖ ಸಿಗುತ್ತದೆ. ಆದರೆ ಸ್ವೇಚ್ಛಾಚಾರಿ ಕರ್ಮಗಳು ಅಂತಿಮವಾಗಿ ಮನುಷ್ಯನನ್ನು ನರಕಕ್ಕೆ ಒಯ್ದು ಬಿಡುತ್ತವೆ. ಏಕೆಂದರೆ ಸ್ವೇಚ್ಛೆಗಳ ಮಾರ್ಗವು ಅಲ್ಲಾಹನ ಇಚ್ಛೆಗೆ ವಿರುದ್ಧವಾದ ದಿಕ್ಕಿಗೆ ಹೋಗುತ್ತದೆ. ಉದಾಹರಣೆಗೆ ಮದ್ಯಪಾನ, ವ್ಯಭಿಚಾರ, ನಿಷಿದ್ಧ ಸಂಪಾದನೆ ಇತ್ಯಾದಿಗಳು ಮನಸ್ಸನ್ನು ಆಕರ್ಷಿಸುತ್ತವೆ. ಆದರೆ ಆ ಆಕರ್ಷಣೆಯನ್ನು ಪ್ರತಿರೋಧಿಸದೆ ಅವುಗಳಿಗೆ ಬಲಿಯಾಗುವವರು ಅಲ್ಲಾಹನ ಕೋಪಕ್ಕೆ ತುತ್ತಾಗುತ್ತಾರೆ ಮತ್ತು ಈ ಮೂಲಕ ನರಕಕ್ಕೆ ನಿಕಟರಾಗಿ ಬಿಡುತ್ತಾರೆ. ತದ್ವಿರುದ್ಧವಾಗಿ ಹಲವು ಸತ್ಕಾರ್ಯಗಳು ಮನುಷ್ಯನ ಪಾಲಿಗೆ ತ್ರಾಸದಾಯಕವಾಗಿರುತ್ತವೆ. ಏಕೆಂದರೆ ಅದರಲ್ಲಿ ಬಾಹ್ಯವಾಗಿ ಯಾವುದೇ ಆಕರ್ಷಣೆಯಾಗಲೀ ಸುಖವಾಗಲೀ ಇರುವುದಿಲ್ಲ, ಆದರೆ ಈ ಕಾರ್ಯಗಳು ಅಲ್ಲಾಹನ ಸಂಪ್ರೀತಿಗಾಗಿ ಅವನ ಆಜ್ಞೆಯಂತೆ ಮಾಡಲ್ಪಟ್ಟಿರುವುದರಿಂದ ಅವುಗಳ ಪರಿಣಾಮವು ಅತ್ಯಂತ ಸಂತೋಷದಾಯಕ, ಅರ್ಥಾತ್ ಸ್ವರ್ಗವಾಗಿರುವುದು. ಮನುಷ್ಯನಿಗೆ ತನ್ನ ಇಹಜೀವನದ ಕರ್ಮಗಳೆಲ್ಲಾ ಅತ್ಯುತ್ತಮ ಪರಿಣಾಮವನ್ನು ನೀಡಬೇಕೆಂಬ ಅಪೇಕ್ಷೆಯಿದ್ದರೆ ಅವನು ತನ್ನ ಸ್ವೇಚ್ಛೆಗಳ ಗುಲಾಮನಾಗುವ ಬದಲು ಅವುಗಳನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳಬೇಕು. ಸ್ವೇಚ್ಛೆಗೆ ಅಪ್ರಿಯವಾಗಿದ್ದರೂ ಅಲ್ಲಾಹನ ಅನುಸರಣೆಯ ಕಾರ್ಯಗಳನ್ನೇ ಮಾಡಬೇಕು.

ಜನಾಂಗವಾದ

عَنْ اَبِى هُرَيْرَةَ (رض) اَنَّ رَسُولَ اللهِ ﷺ : قَالَ اَذْهَبَ اللّٰهُ عَنْكُمْ عُبِيَّةَ الْجَاهِلِيَّةِ فَخْرَهَا بِالْاٰبَاءِ , مُؤْمِنٌ تَقِىٌّ وَفَاجِرٌ شَقِىٌّ وَالنَّاسُ بَنُوْ آدَمُ وَآدَمُ مِنْ تُرَابٍ

(ترمذی ابواب المناقب)

ಪ್ರವಾದಿ(ಸ) ಹೀಗೆ ಹೇಳಿರುವರು:

''ನಿಮ್ಮ ಅಜ್ಞಾನ ಕಾಲದ ಜಂಭವನ್ನು ಮತ್ತು ಪೂರ್ವಜರ ಬಗೆಗಿನ ದುರಭಿಮಾನವನ್ನು ಅಲ್ಲಾಹನು ಅಳಿಸಿ ಹಾಕಿರುವನು. ಮನುಷ್ಯನು ಒಂದೋ ದೇವಭಕ್ತ ಸತ್ಯವಿಶ್ವಾಸಿಯಾಗಿರುತ್ತಾನೆ . ಇಲ್ಲವೇ ದುಷ್ಟ ಧರ್ಮದ್ರೋಹಿಯಾಗಿರುತ್ತಾನೆ. ಎಲ್ಲ ಮನುಷ್ಯರೂ ಆದಮರ ಸಂತತಿಗಳು. ಆದಮರಾದರೋ ಮಣ್ಣಿನಿಂದ ಸೃಷ್ಟಿಸಲ್ಪಟ್ಟವರು.''

[ಹ. ಅಬೂ ಹುರೈರಾ(ರ) -ತಿರ್ಮಿದಿ]

ಪ್ರವಾದಿವರ್ಯರ(ಸ) ಆಗಮನಕ್ಕಿಂತ ಮುಂಚಿನ ಅಜ್ಞಾನ ಕಾಲದಲ್ಲಿ ಜನರು ಜನಾಂಗವಾದಕ್ಕೆ ತುತ್ತಾಗಿದ್ದರು. ಅವರ ದೃಷ್ಟಿಯಲ್ಲಿ ಯಾವುದಾದರೂ ಪ್ರತಿಷ್ಠಿತ ಜನಾಂಗ ಅಥವಾ ಗೋತ್ರದೊಂದಿಗಿನ ಸಂಬಂಧವೇ ಶ್ರೇಷ್ಠತೆಯ ಮಾನದಂಡವಾಗಿತ್ತು. ಅವರ

ಜನಾಂಗವಾದದಿಂದಾಗಿ ಅವರಲ್ಲಿ ಹುಟ್ಟಿಕೊಂಡಿದ್ದ ಜಂಭ ಮತ್ತು ಅಹಂಕಾರಗಳು ಅವ ಸುಧಾರಣೆಯ ಹಾದಿಯಲ್ಲಿ ದೊಡ್ಡ ಅಡಚಣೆಗಳಾಗಿದ್ದುವು. ಆ ಕಾಲದ ಯಹೂದಿಗಳ ಕೂಡಾ ತಮ್ಮ ಜನಾಂಗ ಮೇಲ್ಮೆಯ ರೋಗಗ್ರಸ್ತ ಭಾವನೆಗಳಿಂದ ನರಳುತ್ತಿದ್ದರು. ಅದ ಅವರನ್ನು ಸತ್ಕರ್ಮದಿಂದ ಮುಕ್ತಗೊಳಿಸಿತ್ತು.

ಪ್ರವಾದಿವರ್ಯರು(ಸ) ಅಜ್ಞಾನ ಕಾಲದ ಈ ಮೇಲ್ಮೆ ಮತ್ತು ಶ್ರೇಷ್ಠತೆಯ ಕಲ್ಪನೆಗಳೆಲ ಮಿಥ್ಯವೆಂದು ಸಾರಿದರು. ಮನುಷ್ಯನು ಶ್ರೇಷ್ಠನೋ ಅಧಮನೋ ಎಂಬುದು ಅವ ಚಾರಿತ್ರ್ಯ ಉತ್ತಮವಾಗಿದೆಯೋ ಇಲ್ಲವೋ ಎಂಬುದನ್ನು ಅವಲಂಬಿಸಿದೆ. ಮನುಷ್ಯನನ ಸದ್ಗುಣ ಸಂಪನ್ನನಾಗಿ ಮಾಡುವ ದೇವಭಯ ಮತ್ತು ಸತ್ಯಸಂಧತೆಯೇ ಅವನ ಶ್ರೇಷ್ಠತೆಯ ಮಾಪಕವಾಗಿದೆ. ಜನಾಂಗ, ವರ್ಗ ಇತ್ಯಾದಿಗಳಿಗೆ ಶ್ರೇಷ್ಠತೆಯೊಂದಿಗೆ ಯಾವ ಸಂಬಂಧವು ಇಲ್ಲ. ಒಬ್ಬ ವ್ಯಕ್ತಿ ಯಾವ ಜನಾಂಗದಲ್ಲಿ ಹುಟ್ಟಿದವನಾಗಿದ್ದರೂ ಅವನು ಸತ್ಯವಿಶ್ವಾಸಿಯು ಧರ್ಮನಿಷ್ಠನೂ ಆಗಿದ್ದರೆ ಅವನೇ ಗೌರವಾರ್ಹನು. ತದ್ವಿರುದ್ಧವಾಗಿ ಸತ್ಯವಿಶ್ವಾಸ ಮತ್ತ ದೇವಭಯವಿಲ್ಲದ ವ್ಯಕ್ತಿ ಎಂತಹ ಪ್ರತಿಷ್ಠಿತ ಕುಲದವನಾಗಿದ್ದರೂ ಅವನು ಗೌರವಾರ್ಹನಲ್ಲ.

ನಗ್ನತೆ

عَنْ اُمِّ سَلَمَةَ (رض) قَالَتْ قَالَ رَسُولُ اللّٰهِ ﷺ كَمْ مِنْ كَاسِيَةٍ فِى الدُّنْيَا عَارِيَةٍ يَوْمَ الْقِيَامَةِ (بخاری-كتاب اللباس)

ಪ್ರವಾದಿ(ಸ) ಹೀಗೆ ಹೇಳಿರುವರು:

''ಲೋಕದಲ್ಲಿ ವಸ್ತ್ರಧಾರಿಗಳಾಗಿರುವ ಅದೆಷ್ಟೋ ಮಹಿಳೆಯರು ಪುನರುತ್ಥಾನ ದಿ ನಗ್ನರಾಗಿರುವರು.'' [ಹಝ್ರತ್ ಉಮ್ಮು ಸಲಮ(ರ) -ಬುಖಾರಿ

ನಗ್ನತೆಯನ್ನು ಪೂರ್ಣವಾಗಿ ಮುಚ್ಚದಂತಹ ವಸ್ತ್ರಗಳನ್ನು ಧರಿಸುವ ಮಹಿಳೆಯರಿ ಈ ಮಾತು ಅನ್ವಯಿಸುತ್ತದೆ. ದೇಹದ ಉಬ್ಬುತಗ್ಗುಗಳನ್ನೆಲ್ಲಾ ಎತ್ತಿತೋರಿಸುವಂತಹ ಇಕ್ಕಟ್ಟಾ ವಸ್ತ್ರಗಳನ್ನು ಅಥವಾ ಪಾರದರ್ಶಕ ಉಡುಗೆಗಳನ್ನು ಧರಿಸುವ ಮಹಿಳೆಯರಿಗೂ ಈ ಮಾತು ಅನ್ವಯವಾಗುತ್ತದೆ. ನೈತಿಕತೆಗೆ ವಿದಾಯ ಹೇಳಿರುವ ಆಧುನಿಕ ಯುಗದ ಅನೇಕ ಫ್ಯಾಶನ್ ಭ್ರ ಮಹಿಳೆಯರು ತಮ್ಮ ನೈತಿಕ ಪ್ರಜ್ಞೆಯನ್ನೇ ಸಂಪೂರ್ಣವಾಗಿ ಕಳೆದುಕೊಂಡಂತಿದೆ. ಅಂಥವರು ತಮ್ಮ ಸ್ತ್ರೀತನಕ್ಕೆ ಭೂಷಣವಾದ ಲಜ್ಜೆಯಿಂದ ವಂಚಿತರಾಗಿದ್ದಾರೆ. ಫ್ಯಾಶನ್‌ನ ಹೆಸರಲ್ಲಿ ತೆಳುವಾದ ಹಾಗೂ ಇಕ್ಕಟ್ಟಾದ ಉಡುಗೆ ತೊಡುಗೆಗಳು ಇಂದು ವ್ಯಾಪಕವಾಗಿದೆ.

ಇಸ್ಲಾಮ್ ಧರ್ಮವು ನೈತಿಕ ಮೌಲ್ಯಗಳಿಗೆ ಅಪಾರ ಮಹತ್ವ ನೀಡುವುದರಿಂದ ನಿರ್ಲಜ್ಜೆಯನ್ನು ಪ್ರತಿನಿಧಿಸುವಂತಹ ಉಡುಗೆಗಳನ್ನು ಅದು ವಿರೋಧಿಸುತ್ತದೆ. ಅದು ಈ ಬಗೆಯ ಅಶ್ಲೀಲ ಉಡುಗೆಯನ್ನು 'ಮುಂಕರ್' ಅಥವಾ ಪ್ರತ್ಯಕ್ಷ ಕೆಡುಕೆಂದು ಸಾರುತ್ತದಲ್ಲದೆ ಲೋಕದಲ್ಲಿ ಇಂತಹ ವಸ್ತ್ರ ಧರಿಸುವ ಮಹಿಳೆಯರು ಪರಲೋಕದಲ್ಲಿ ಸಂಪೂರ್ಣವಾಗಿ ವಸ್ತ್ರದಿಂದ ವಂಚಿಸಲ್ಪಟ್ಟು ನಗ್ನರಾಗಿರಬೇಕಾಗುವುದು ಎಂದು ಎಚ್ಚರಿಸುತ್ತದೆ. ಅವರು

ಕದಲ್ಲಿ ನಗ್ನತೆಯನ್ನು ಇಷ್ಟಪಟ್ಟದ್ದರಿಂದ ಪರಲೋಕದಲ್ಲಿ ಅವರಿಗೆ ನಗ್ನತೆಯ ಶಿಕ್ಷೆಯನ್ನೇ ಲಾಗುವುದು. ಹದೀಸ್‌ನ ಪದಗಳಲ್ಲಿರುವ ಎಚ್ಚರಿಕೆ ಮತ್ತು ಆದರ ಅರ್ಥದಲ್ಲಿರುವ ಶೈಲಿ ಅನುಪಮವಾಗಿದೆ.

ಅನುಕರಣೆ

عَنْ اِبْنِ عَبَّاسٍ (رض) قَالَ لَعَنَ رَسُولُ اللَّهِ ﷺ الْمُتَشَبِّهِيْنَ الرِّجَالِ بِانِّسَاءِ وَلْمُتَشَبِّهَاتِ مِنَ النِّسَاءِ بِالرِّجَالِ

(بخاری-کتاب اللباس)

ಪ್ರವಾದಿ(ಸ) ಅವರು ಮಹಿಳೆಯರ ಅನುಕರಣೆ ಮಾಡುವ ಪುರುಷರನ್ನು ಮತ್ತು ಪುರುಷರ ಕರಣೆ ಮಾಡುವ ಸ್ತ್ರೀಯರನ್ನು ಶಪಿಸಿರುವರು. [ಹ. ಇಬ್ನು ಅಬ್ಬಾಸ್(ರ) –ಬುಖಾರಿ]

ಸ್ತ್ರೀ ಮತ್ತು ಪುರುಷರ ಶಾರೀರಿಕ ರಚನೆ ಸಮಾನವಾಗಿಲ್ಲ, ಸ್ವಾಭಾವಿಕವಾಗಿ ಅವುಗಳ ವೆ ಬಹಳಷ್ಟು ವ್ಯತ್ಯಾಸಗಳಿವೆ. ಹಾಗೆಯೇ ಸ್ತ್ರೀ ಪುರುಷರ ಮಾನಸಿಕ ಅವಸ್ಥೆಗಳಲ್ಲೂ ಸ್ಪರ ಬಹಳ ಅಂತರವಿದೆ. ಪುರುಷರಲ್ಲಿ ಪೌರುಷದ ವೈಶಿಷ್ಟ್ಯವಿದ್ದರೆ ಸ್ತ್ರೀಯರಲ್ಲಿ ಮಲತೆಯ ವೈಶಿಷ್ಟ್ಯವಿದೆ. ಈ ರೀತಿ ಸ್ತ್ರೀ ಪುರುಷರ ಶಾರೀರಿಕ, ಮಾನಸಿಕ ಸ್ಥಿತಿಗಳಲ್ಲಿ ಾವಿಕ ವ್ಯತ್ಯಾಸವಿರುವುದರಿಂದ ಅವರ ಉಡುಗೆ ತೊಡುಗೆಗಳು, ವೇಷಭೂಷಣಗಳು ತ್ತ ಹಾವಭಾವಗಳು ಕೂಡಾ ಭಿನ್ನವಾಗಿರಬೇಕಾದುದು ಅಗತ್ಯ.

ಸ್ತ್ರೀಯರು ಪುರುಷರಂತಹ ಮತ್ತು ಪುರುಷರು ಸ್ತ್ರೀಯರಂತಹ ಉಡುಗೆ ತುಗೆಗಳನ್ನೂ ವೇಷಭೂಷಣಗಳನ್ನೂ ಧರಿಸತೊಡಗಿದರೆ ಹಾಗೂ ಒಬ್ಬರು ಇನ್ನೊಬ್ಬರ ರಭಾವಗಳನ್ನು ಅನುಕರಿಸತೊಡಗಿದರೆ ಈ ಅಸ್ವಾಭಾವಿಕ ಕೃತ್ಯವು ಪ್ರಕೃತಿಯ ವಿರುದ್ಧ ಸುವ ಸಂಘರ್ಷವೆನಿಸಿಕೊಳ್ಳುತ್ತದೆ. ಆದ್ದರಿಂದ ಅವರು ದೇವ ಕ್ರೋಧಕ್ಕೆ ಪಾತ್ರರಾಗುತ್ತಾರೆ.

ಫ್ಯಾಶನ್ ಭಕ್ತ ಪಾಶ್ಚಿಮಾತ್ಯ ಸಂಸ್ಕೃತಿಯ ಪರಿಣಾಮವಾಗಿ ಇಂದು ಸ್ತ್ರೀಯರಲ್ಲಿ ುಷರಂತಾಗಬೇಕೆಂಬ ಮತ್ತು ಪುರುಷರಲ್ಲಿ ಸ್ತ್ರೀಯರಂತಾಗಬೇಕೆಂಬ ಹಂಬಲವು ಎಷ್ಟು ್ರವಾಗಿದೆಯೆಂದರೆ, ಬೀದಿಯಲ್ಲಿ ಕೆಲವೊಮ್ಮೆ ಸ್ತ್ರೀ ಯಾರು ಪುರುಷ ಯಾರು ಎಂದು ಯದೆ ಗೊಂದಲವುಂಟಾಗುತ್ತದೆ. ಕೆಲವೊಮ್ಮೆ ಪುರುಷರು ಸಾಕ್ಷಾತ್ ಸ್ತ್ರೀಯರಂತೆಯೂ ಯರು ಸಾಕ್ಷಾತ್ ಪುರುಷರಂತೆಯೂ ಕಂಡು ಮೋಸ ಹೋಗುವುದೂ ಉಂಟು.

ಸ್ತ್ರೀಯರಂತೆ ಕಾಣಬೇಕೆಂಬ ಆತುರದಲ್ಲಿ ಹಲವು ಪುರುಷರು ಗಡ್ಡ ಬೋಳಿಸಿಕೊಂಡು ುಷ ಲಕ್ಷಣವನ್ನು ಕಳಕೊಂಡುದು ಮಾತ್ರವಲ್ಲದೆ, ವಸ್ತ್ರವಿನ್ಯಾಸದಲ್ಲೂ ಸ್ತ್ರೀಯರ ಅನುಕರಣೆ ಡಿದ್ದಾರೆ. ಹಾಗೆಯೇ ಅನೇಕ ಸ್ತ್ರೀಯರು ಪುರುಷರಂತೆ ಕಾಣಿಸಬೇಕೆಂಬ ಆಶೆಯಿಂದ ುಷರಂತಹ ವಸ್ತ್ರಗಳನ್ನು ಧರಿಸಿ, ಕೂದಲುಗಳನ್ನು ಕಿರಿದಾಗಿ ಕತ್ತರಿಸಿಕೊಂಡು ಪುರುಷರನ್ನು ು ಮಾಡುತ್ತಿದ್ದಾರೆ.

ಸ್ತ್ರೀ ಪುರುಷರು ಪರಸ್ಪರರ ಅನುಕರಣೆ ಮಾಡುವುದರ ಸ್ಪಷ್ಟ ಉದಾಹರಣೆ ಆ
ಲೋಕವು 'ಹಿಪ್ಪಿ' ಎಂದು ಕರೆಯುವ ಸುಸಂಸ್ಕೃತ ಹುಚ್ಚರಾಗಿದ್ದಾರೆ.

ಸಂಬಂಧ ಕೆಡಿಸುವ ವಿಷಯಗಳು

ابی هُرَیْرَةَ (رض) قَالَ قَالَ رَسُولَ اللّٰهِ ﷺ : اِیَّاکُمْ وَالظَّنَّ فَاِنَّ
نَّ اَکْذَبُ الْحَدِیثِ وَلَا تَحَسَّسُوا وَلَا تَجَسَّسُوا وَلَا
اسَدُوا وَلَا تَبَاغَضُوا وَکُوْنُوْا عِبَادَاللّٰهِ اِخْوَانًا
(البخاری-کتاب الادب)

ಪ್ರವಾದಿ(ಸ) ಹೀಗೆ ಹೇಳಿರುವರು:

''ಕೆಟ್ಟ ಗುಮಾನಿಗಳಿಂದ ದೂರವಿರಿ. ಏಕೆಂದರೆ ಕೆಟ್ಟ ಗುಮಾನಿಯು ಅತ್ಯಂತ ಸುಳ್ಳಾಗಿದೆ. ಜನರ ದೋಷಗಳನ್ನು ಹುಡುಕಬೇಡಿ, ಹೊಂಚು ಹಾಕಬೇಡಿ, ಪರಸ್ಪರರ ಪ ಅಸೂಯೆ ಪಡಬೇಡಿ, ಪರಸ್ಪರರ ಮೇಲೆ ಹಗೆತನವಿಟ್ಟುಕೊಳ್ಳಬೇಡಿ, ಅಲ್ಲಾಹನ ದಾ ಪರಸ್ಪರ ಸಹೋದರರಾಗಿರಿ.'' [ಹಝ್ರತ್ ಅಬೂ ಹುರೈರಾ(ರ) -ಬುಖ

ಇವು ಚಾರಿತ್ರ್ಯದಲ್ಲಿ ಪತನ ಮತ್ತು ಪರಸ್ಪರ ಸಂಬಂಧದಲ್ಲಿ ಕೇಡು ಉಂಟು ಮಾ ವಿಷಯಗಳಾಗಿವೆ. ಇವುಗಳ ಪೈಕಿ ಮೊಟ್ಟಮೊದಲನೆಯ ವಿಷಯ ಕೆಟ್ಟ ಗುಮಾನಿಯಾ ಗುಮಾನಿಯೆಂದರೆ, ಯಾವುದೇ ಆಧಾರವಿಲ್ಲದೆ ಒಬ್ಬ ವ್ಯಕ್ತಿಯ ಬಗ್ಗೆ ಕೆಟ್ಟ ಅಭಿಪ್ರಾ ತಾಳುವುದಾಗಿದೆ. ಇತರರ ಬಗ್ಗೆ ವಾಸ್ತವಿಕ ತಿಳುವಳಿಕೆಯ ಬದಲು ಕೇವಲ ಗುಮಾ ಆಧಾರದಲ್ಲಿ ಅಭಿಪ್ರಾಯ ತಾಳುತ್ತಾರೆ. ಕೆಲವು ಸಲ ಇಂತಹ ನಿರಾಧಾರ ನಂಬಿ ಆಧಾರದಲ್ಲೇ ಅಂತಹ ವ್ಯಕ್ತಿಯ ವಿರುದ್ಧ ಕ್ರಮ ಕೈಗೊಳ್ಳುವುದೂ ಇದೆ. ಹೀಗೆ ಮಾಡುವ ಅನಂತರ ತಮಗೆ ವಾಸ್ತವಿಕತೆಯ ಅರಿವಾದಾಗ ಬಹಳ ಪಶ್ಚಾತ್ತಾಪ ಪಡುತ್ತಾರೆ. ಆದ್ದರಿಂ ಪ್ರವಾದಿವರ್ಯರು(ಸ) ಕೆಟ್ಟ ಗುಮಾನಿಯನ್ನು ಅತ್ಯಂತ ಕೆಟ್ಟ ಸುಳ್ಳೆಂದು ಕರೆದಿರುವ ಪವಿತ್ರ ಕುರ್‌ಆನಿನಲ್ಲೂ ಹೆಚ್ಚಿನ ಗುಮಾನಿಗಳಿಂದ ದೂರವಿರಬೇಕೆಂದು ಆದೇಶಿಸಲಾಗಿದೆ.

ಇತರರ ದೋಷಗಳನ್ನು ಹುಡುಕುವುದು ಮತ್ತು ಇತರರ ದೌರ್ಬಲ್ಯಗಳನ್ನು ಕಾ ಹೊಂಚು ಹಾಕುವುದು ಕೂಡಾ ನೈತಿಕ ದೃಷ್ಟಿಯಿಂದ ತಪ್ಪು, ತನ್ನ ಚಾರಿತ್ರ್ಯವನ್ನು ನಿರ್ಮಲವಾ ಬಯಸುವವನು ಸ್ವತಃ ತನ್ನ ದೌರ್ಬಲ್ಯಗಳನ್ನೇ ಹುಡುಕಿ ತೆಗೆಯುವುದರಲ್ಲಿ ಮಗ್ನನಾಗಿರುತ ಇದು ಅವನ ಸುಧಾರಣೆಗೆ ಸಹಾಯಕವಾಗುವುದು.

ಆದರೆ ತನ್ನ ಸುಧಾರಣೆಯ ಕಾಳಜಿ ಇಲ್ಲದವನು ಇತರರ ದೌರ್ಬಲ್ಯಗಳನ್ನು ಹುಡುಕ ಇರುತ್ತಾನೆ. ಈ ವಿಷಯದಲ್ಲಿ ಪ್ರವಾದಿ ಈಸಾ(ಅ) ಅವರು ನೀಡಿರುವ ಬೋಧನೆ ಗಮನಾರ್ಹವಾಗಿವೆ:

''ತೀರ್ಪು ಮಾಡಬೇಡಿರಿ; ಹಾಗೆ ನಿಮಗೂ ತೀರ್ಪಾಗುವುದಿಲ್ಲ. ನೀವು ಮಾಡುವ ್ಗೆ ಸರಿಯಾಗಿ ನಿಮಗೂ ತೀರ್ಪಾಗುವುದು. ನೀವು ಅಳೆಯುವ ಅಳತೆಯಿಂದಲೇ ಗೂ ಅಳೆಯುವರು. ನೀನು ನಿನ್ನ ಕಣ್ಣಿನಲ್ಲಿರುವ ತೊಲೆಯನ್ನು ಯೋಚಿಸದೆ ನಿನ್ನ ೀದರನ ಕಣ್ಣಿನಲ್ಲಿರುವ ರವೆಯನ್ನು ಯೋಚಿಸುವುದೇಕೆ? ನೀನು ನಿನ್ನ ಸಹೋದರನಿಗೆ ಕಣ್ಣಿನೊಳಗಿಂದ ರವೆಯನ್ನು ತೆಗೆಯುತ್ತೇನೆ ಬಾ ಎಂದು ಹೇಳುವುದು ಹೇಗೆ? ನಿನ್ನ ನಲ್ಲಿ ತೊಲೆಯಿದೆಯಲ್ಲಾ, ಕಪಟಿಯೇ, ಮೊದಲು ನಿನ್ನ ಕಣ್ಣಿನೊಳಗಿಂದ ಪೊರೆಯನ್ನು ಯಹಾಕಿಕೋ. ಆ ಮೇಲೆ ನಿನ್ನ ಸಹೋದರನ ಕಣ್ಣಿನೊಳಗಿಂದ ರವೆಯನ್ನು ತೆಗೆಯುವುದಕ್ಕೆ ್ನಗಿ ಕಾಣಿಸುವುದು.'' (ಮತ್ತಾಯ 7: 1ರಿಂದ5)

ಇನ್ನೊಬ್ಬನ ಒಳಿತು ಅಥವಾ ಸಂತೋಷವನ್ನು ನೋಡಿ ಸಹಿಸಲಿಕ್ಕಾಗದಿರುವುದು ಮತ್ತು ಆ ು ಅಥವಾ ಸಂತೋಷವು ಆತನಿಂದ ಕಿತ್ತು ಹೋಗಬೇಕೆಂದು ಆಶೆ ಪಡುವುದೇ ಅಸೂಯೆ. ಗೆಯ ಅಸೂಯೆಯ ಬೆಂಕಿಯಲ್ಲಿ ಮನುಷ್ಯನು ಸ್ವತಃ ತಾನೇ ಉರಿಯುತ್ತಾನೆ.

ಸ್ವಾರ್ಥದ ಆಧಾರದಲ್ಲಿ ಯಾರನ್ನಾದರೂ ದ್ವೇಷಿಸುವವನು ಆ ಮೂಲಕ ತನ್ನ ಮನಸ್ಸಿನ ಲಿನ್ಯವನ್ನು ಪ್ರದರ್ಶಿಸಿದಂತಾಗುತ್ತದೆ. ಮನುಷ್ಯನು ತನ್ನ ಮನಸ್ಸನ್ನು ದ್ವೇಷ, ಮದ, ಮತ್ಸರ ್ಯದಿ ಎಲ್ಲ ರೋಗಗಳಿಂದ ಮುಕ್ತವಾಗಿ ಶುದ್ಧವಾಗಿಡಬೇಕೆಂದು ಇಸ್ಲಾಮ್ ಕಲಿಸುತ್ತದೆ. ್ಲಾಮ್ ಸಹೋದರತೆಯನ್ನು ಕಲಿಸುವ ಧರ್ಮವಾಗಿದ್ದು, ಮನಸ್ಸು ಶುದ್ಧವಾದಾಗ ಮಾತ್ರ ು ಸ್ಥಾಪಿತವಾಗಬಲ್ಲುದು.

ಲಜ್ಜಾಹೀನತೆ

عَنِ ابْنِ مَسْعُودٍ (رض) قَالَ قَالَ النَّبِيُّ ﷺ : اِنَّ مِمَّا اَدْرَكَ النَّا
مِنْ كَلَامِ النُّبُوَّةِ الْاُوْلَى اِذَالَمْ تَسْتَحْ فَاصْنَعْ مَا شِئْتَ
(بخاری-کتاب الادب

ಪ್ರವಾದಿ(ಸ) ಹೀಗೆ ಹೇಳಿದರು:

''ನಿಮ್ಮಲ್ಲಿ ನಾಚಿಕೆ ಇಲ್ಲದೆ ಹೋದಾಗ ನಿಮಗಿಷ್ಟವಿದ್ದಂತೆ ಮಾಡಿರಿ ಎಂಬುದು ಗತ ಾದಿಗಳಿಂದ ಜನರಿಗೆ ದೊರೆತ ಬೋಧನೆಗಳ ಪೈಕಿ ಒಂದಾಗಿದೆ.''

[ಅಬ್ದುಲ್ಲಾ ಬಿನ್ ಮಸ್‌ಊದ್(ರ) –ಬುಖಾರಿ]

ಲಜ್ಜೆ ಅಥವಾ ನಾಚಿಕೆ ಎಂಬುದು ಗತ ಪ್ರವಾದಿಗಳ ಬೋಧನೆಯಲ್ಲೂ ಧರ್ಮದ ಗವಾಗಿತ್ತು. ನಾಚಿಕೆಯೊಂದು ಇಲ್ಲದಿದ್ದರೆ ಏನು ಬೇಕಾದರೂ ಮಾಡಬಹುದೆಂಬ ಾಡುವ ಮಾತು ವಾಸ್ತವದಲ್ಲಿ ಗತಕಾಲದ ಪ್ರವಾದಿಗಳ ಬೋಧನೆಯ ಭಾಗವಾಗಿದೆ. ್ಜೆಯು ಮನುಷ್ಯನನ್ನು ಅನೇಕ ದುಷ್ಕೃತ್ಯಗಳಿಂದ ದೂರವಿಡುತ್ತದೆ. ಲಜ್ಜೆ ಇಲ್ಲವಾದಾಗ

ಮನುಷ್ಯನು ಎಂತಹ ನೀಚ ಕೃತ್ಯವನ್ನೆಸಗಲಿಕ್ಕೂ ಹೇಸುವುದಿಲ್ಲ. ಆದ್ದರಿಂದ ಲಜ್ಜೆ ಸಚ್ಚಾರಿತ್ರ್ಯದ ನಿರ್ಮಾಣದಲ್ಲಿ ವಹಿಸುವ ಪಾತ್ರ ಬಹಳ ಪ್ರಮುಖವಾದುದು.

ಅಕ್ರಮ ತಡೆಯಿರಿ

نْ ابی بکرِن الصِّدِّیق (رض) اَنَّهُ قَالَ سَمِعْتُ رَسُولَ اللّٰهِ ﷺ
ولُ : اِنَّ النَّاسَ اِذَا رَاَوْالظَّالِمَ فَلَمْ يَأخُذُ عَلَى يَدَيْهِ اَنْ
مَّهُمُ اللّٰهُ بِعِقَابٍ مِنْهُ (الترمذی-ابواب الفتن)

ಪ್ರವಾದಿ(ಸ) ಹೀಗೆ ಹೇಳಿರುವರು:

''ಜನರು ಅಕ್ರಮಿಯನ್ನು ನೋಡಿಯೂ ಅವನ ಕೈ ಹಿಡಿಯದೆ ಹೋದರೆ ಅಲ್ಲಾಹ ಅವರ ಮೇಲೆ ಸಾರ್ವತ್ರಿಕ ಶಿಕ್ಷೆಯನ್ನಿಳಿಸುವನು.''

[ಹಝ್ರತ್ ಅಬೂಬಕರ್ ಸಿದ್ದೀಕ್(ರ) -ತಿರ್ಮಿ

ಸಮಾಜದಲ್ಲಿ ಅಕ್ರಮವನ್ನು ತಡೆಯಲು ಕ್ರಮ ಕೈಗೊಳ್ಳದಿದ್ದರೆ ದುಷ್ಟ ಶಕ್ತಿಗಳ ಧೈ ಹೆಚ್ಚುವುದು. ಕ್ರಮೇಣ ಅನ್ಯಾಯ ಮತ್ತು ಇತರ ದುಷ್ಕೃತ್ಯಗಳು ವ್ಯಾಪಕವಾಗುವು ಅಲ್ಲದೆ ಕೆಡುಕನ್ನು ನಿರ್ವಿಘ್ನವಾಗಿ ಮೆರೆಯಲು ಬಿಟ್ಟರೆ ಕಾಲಕ್ರಮೇಣ ಕೆಡುಕಿನ ವಿರ ಜನರ ಪ್ರತಿರೋಧ ಶಕ್ತಿಯೂ ಕುಂಠಿತವಾಗುತ್ತಾ ಹೋಗುವುದು. ಅವರು ಕೆಡುಕುಗಳ ಜೆ ಸಹಬಾಳ್ವೆಗೆ ಒಪ್ಪಿಕೊಳ್ಳುವರು. ಈ ರೀತಿ ಸಮಾಜದ ಒಂದು ಕೊಳೆತ ಅಂಗವನ್ನು ತಕ್ಷಣ ಮುರಿದು ಪ್ರತ್ಯೇಕಿಸದಿದ್ದರೆ ಸಮಾಜವೆಂಬ ಇಡೀ ಶರೀರವೇ ಕೊಳೆತು ಹೋದೀತು. ಸಮ ತನ್ನ ಕರ್ತವ್ಯವನ್ನು ಮರೆತರೆ ಅದರ ಶಿಕ್ಷೆಯನ್ನು ಅನುಭವಿಸಬೇಕಾದೀತು. ಅನ್ಯಾಯ ಮ ಮರ್ದನಗಳು ವ್ಯಾಪಕವಾದಾಗ ಇಡೀ ಜನಾಂಗವೇ ಅದರ ಪರಿಣಾಮವಾಗಿ ನಾಶವ ಘಟನೆಗಳು ಇತಿಹಾಸದಲ್ಲಿ ಧಾರಾಳ ಇವೆ. ನಿಜವಾಗಿ ಇದು ದೇವನ ವತಿಯಿಂದ ಬರ ಮತ್ತು ಅವನ ಪ್ರತಿಫಲಗಳ ಕಾನೂನಿನ ಪ್ರಕಾರ ಕಳುಹಿಸಲ್ಪಡುವ ಶಿಕ್ಷೆಯಾಗಿದೆ.

نْ وَاثِلَةَ بْنِ الْأَسْقَعِ (رض) قَالَ قُلْتُ يَارَسُولَ اللّٰهِ مَا الْعَصَبِيَّةُ
لَ : اَنْ تُعِيْنَ قَوْمَكَ عَلَى الظُّلْمِ (ابو دَاؤد-کتاب الادب)

ನಾನು ಪ್ರವಾದಿ(ಸ) ಅವರೊಡನೆ ಕೋಮುವಾದ ಅಂದರೇನು? ಎಂದು ಪ್ರಶ್ನಿಸಿ ಆದಕ್ಕವರು ಹೇಳಿದರು, ''ನೀನು ಅನ್ಯಾಯದ ವಿಷಯದಲ್ಲಿ ನಿನ್ನ ಜನಾಂಗಕ್ಕೆ ಸಹಾ ಮಾಡಿದರೆ ಅದುವೇ ಕೋಮುವಾದ.'' [ವಾಯಿಲ್ ಬಿನ್ ಅಸ್‌ಕಅ್ -ಅಬೂ ದಾವೂದ್

ವಂಚಕ ವ್ಯಾಪಾರಿಯ ಗತಿ

عَنْ رِفَاعَةَ عَنِ (رض) النَّبِى ﷺ قَالَ التُّجَّارُ يُحْشَرُونَ يَوْمَ الْقِيَامَهْ
فُجَّارًا اِلَّا مَنِ تَّقَى وَبَرَّ وَصَدَقَ (الترمذی)

ಪ್ರವಾದಿ(ಸ) ಹೀಗೆ ಹೇಳಿರುವರು:

''ಪುನರುತ್ಥಾನ ದಿನ ವ್ಯಾಪಾರಿಗಳು ಧರ್ಮಭ್ರಷ್ಟರ ರೂಪದಲ್ಲಿ ಎದ್ದೇಳಿಸಲ್ಪಡುವರು. ದರೆ ದೇವಭಕ್ತಿ, ಸತ್ಯ ಮತ್ತು ಪ್ರಾಮಾಣಿಕತೆಯ ನೀತಿಯನ್ನು ಅನುಸರಿಸಿದವರು ಇದಕ್ಕೆ ೊರತಾಗಿದ್ದಾರೆ.'' [ಹಝ್ರತ್ ರಿಫಾಅ್ (ರ) -ತಿರ್ಮಿದಿ]

ಅನೇಕರು ವ್ಯಾಪಾರದಲ್ಲಿ ಲಾಭವೇ ಮುಖ್ಯ, ನೀತಿಗಳಲ್ಲ ಎಂಬ ನಿಲುವನ್ನು ನುಸರಿಸುತ್ತಾರೆ. ಕೆಲವೊಮ್ಮೆ ಧರ್ಮಿಷ್ಠರೆಂದು ಖ್ಯಾತರಾಗಿರುವವರು ಕೂಡಾ ವ್ಯಾಪಾರದಲ್ಲಿ ರ್ಮ, ನೀತಿ ಇತ್ಯಾದಿಗಳನ್ನು ಮರೆತುಬಿಡುತ್ತಾರೆ. ಲಾಭ ಸಂಗ್ರಹಿಸುವ ಆತುರದಲ್ಲಿ ಅವರಿಗೆ ತ್ಯ, ನ್ಯಾಯ, ಪ್ರಾಮಾಣಿಕತೆ ಮುಂತಾದ ಮೌಲ್ಯಗಳೆಲ್ಲಾ ಮರೆತು ಹೋಗುತ್ತವೆ. ಧರ್ಮ ುತ್ತು ನೈತಿಕತೆಯ ಮೇರೆಗಳನ್ನು ಉಲ್ಲಂಘಿಸಿದರೂ ಪರವಾಗಿಲ್ಲ, ಲಾಭ ಸಂಗ್ರಹಿಸಬೇಕು ಂಬ ಚಿಂತೆ ಅವರನ್ನು ಆವರಿಸಿಕೊಂಡಿರುತ್ತದೆ. ಆದ್ದರಿಂದಲೇ ಇಲ್ಲಿ ಪ್ರವಾದಿವರ್ಯರು(ಸ), ಬ್ಬ ವ್ಯಕ್ತಿ ಬೇರೆ ವಿಷಯಗಳಲ್ಲಿ ಎಷ್ಟು ಧಾರ್ಮಿಕನಾಗಿದ್ದರೂ, ವ್ಯಾಪಾರ ವಹಿವಾಟುಗಳಲ್ಲಿ ೇವಭಯ, ನೈತಿಕತೆ ಮತ್ತು ಪ್ರಾಮಾಣಿಕತೆಗಳನ್ನು ಗಾಳಿಗೆ ತೂರಿದರೆ ಪರಲೋಕದಲ್ಲಿ ವನಿಗೂ, ಧರ್ಮಭ್ರಷ್ಟರಿಗಾಗುವಂತಹ ಗತಿಯೇ ಆಗುವುದೆಂದು ಎಚ್ಚರಿಸಿರುವರು.

ಅಕ್ರಮ ದಾಸ್ತಾನು

عَنْ مَعْمَرِ بْنِ عَبْدِ اللّٰهِ (رض) عَنْ رَسُولِ اللّٰهِ ﷺ قَالَ لَا يَحْتَكِرُ
اِلَّا خَاطِئٌ (مسلم-كتاب المساقاة)

ಪ್ರವಾದಿ(ಸ) ಹೀಗೆ ಹೇಳಿರುವರು: ''ಪಾಪಿಯಾದವನು ಮಾತ್ರ ಅಕ್ರಮ ದಾಸ್ತಾನು ಮಾಡುತ್ತಾನೆ.'' [ಹಝ್ರತ್ ಮಅ್ಮರ್ ಬಿನ್ ಅಬ್ದುಲ್ಲಾ-ಮುಸ್ಲಿಮ್]

ಮಾರುಕಟ್ಟೆಯಲ್ಲಿ ಧಾನ್ಯ ಮತ್ತಿತರ ವಸ್ತುಗಳು ಧಾರಾಳವಾಗಿ ಲಭ್ಯವಿಲ್ಲದ ಸಂದರ್ಭ ನೋಡಿ, ಬೆಲೆ ಹೆಚ್ಚಿಸಿ ಮಾರುವ ದೃಷ್ಟಿಯಿಂದ ಸಾಮಗ್ರಿಗಳನ್ನು ಅಕ್ರಮವಾಗಿ ಸಂಗ್ರಹಿಸಿಟ್ಟು ಮಾರುಕಟ್ಟೆಯಲ್ಲಿ ಕೃತಕ ಕೊರತೆ ನಿರ್ಮಿಸಿ, ಜನರ ಅಸಹಾಯಕತೆಯ ದುರ್ಲಾಭ ಪಡೆಯುವುದು ಘೋರ ಅನ್ಯಾಯವಾಗಿದೆ. ಈ ಬಗೆಯ ಅಕ್ರಮ ಸಂಗ್ರಹಣೆ ಮತ್ತು ಕಾಳಸಂತೆಯನ್ನು ಇಸ್ಲಾಮ್ ಧರ್ಮವು ಅಪರಾಧವೆಂದು ಘೋಷಿಸಿದ್ದು, ಅದಕ್ಕೆ ಶಿಕ್ಷೆಯನ್ನು ಸೂಚಿಸಿದೆ.

ಜನರನ್ನು ಮತ್ತಷ್ಟು ಸಂಕಷ್ಟಕ್ಕೊಳಪಡಿಸುವ ಈ ಕೃತ್ಯವು ಮಾನವೀಯ ಅನುಕಂಪ ಕಲ್ಪನೆಗೆ ಬದ್ಧ ವಿರುದ್ಧವಾಗಿದ್ದು, ಸ್ವಾರ್ಥ ಮತ್ತು ಸಂದರ್ಭಸಾಧಕ ಮನೋವೃತ್ತಿಯನ ಸೂಚಿಸುತ್ತದೆ. ಅಕ್ರಮ ದಾಸ್ತಾನು ಮಾಡುವ ಇಂತಹ ಜನರನ್ನು ಇಲ್ಲಿ ಸ್ಪಷ್ಟವಾಗಿ ಪಾಪಿಗಳೆಂದ ಕರೆಯಲಾಗಿದೆ.

ಅಧಿಕಾರ ಮತ್ತು ಆಡಳಿತ

ಕರ್ತವ್ಯ ಪ್ರಜ್ಞೆ

عَنْ عَبْدِ اللّٰهِ بْنِ عُمَرَ رَضِىَ اللّٰهُ عَنْهُمَا اَنَّ رَسُولَ اللّٰهِ ﷺ
قَالَ اَلاَ كُلُّكُمْ رَاعٍ وَكُلُّكُمْ مَسْئُولٌ عَنْ رِعِيَّتِهِ فَالْاَمَامُ الَّذِى
عَلَى النَّاسِ رَاعٍ وَهُوَ مَسْئُولٌ عَنْ رِعِيَّتِهِ وَالرَّجُلُ رَاعٍ عَلَى
اَهْلِ بَيْتِهِ وَهُوَ مَسْئُولٌ عَنْ رعِيَّتِهِ اَلْمَرْأَةُ رَاعِيَّةٌ عَلَى اَهْلِ بَيْتِ
زَوْجِهَا وَوَلَدِهِ وَهِىَ مَسْئُولَةٌ عَنْهُمْ وَعَبْدُ الرَّجُلُ رَاعٍ عَلَى مَالِ
سَيِّدِهِ وَهُوَ مَسْئَلَةٌ عَنهُ اَلاَ فَكُلُّكُمْ رَاعٍ وَكُلُّكُمْ مَسْئُولٌ عَنْ
رِعِيَّتِهِ
(بخارى-كتاب الاحكام)

ಪ್ರವಾದಿ(ಸ) ಹೀಗೆ ಹೇಳಿರುವರು:

''ಕೇಳಿರಿ! ನಿಮ್ಮ ಪೈಕಿ ಪ್ರತಿಯೊಬ್ಬನೂ ಮೇಲ್ವಿಚಾರಕನು. ಪ್ರತಿಯೊಬ್ಬನೊಡನೆ ಅವನ ಅಧೀನದಲ್ಲಿರುವವರ ಕುರಿತು ವಿಚಾರಣೆ ನಡೆಸಲಾಗುವುದು. ಜನರ ಮುಂದಾಳುವಾಗಿರುವ ಇಮಾಮ್(ನಾಯಕ) ಮೇಲ್ವಿಚಾರಕನಾಗಿದ್ದಾನೆ. ಅವನೊಡನೆ ಅವನ ಅಧೀನವಿದ್ದ ಜನರ ಬಗ್ಗೆ ಪ್ರಶ್ನಿಸಲಾಗುವುದು. ವ್ಯಕ್ತಿಯು ಅವನ ಮನೆಯವರ ಮೇಲ್ವಿಚಾರಕನಾಗಿದ್ದಾನೆ. ಅವನು ಅವರ ವಿಷಯದಲ್ಲಿ ವಿಚಾರಣಾರ್ಹನಾಗಿರುವನು. ಸ್ತ್ರೀಯು ತನ್ನ ಪತಿಯ ಮನೆ ಮತ್ತು ಅವನ ಮಕ್ಕಳ ಮೇಲ್ವಿಚಾರಕಳಾಗಿರುವಳು. ಅವಳೊಡನೆ ಅವುಗಳ ಬಗ್ಗೆ ವಿಚಾರಣೆ ನಡೆಸಲಾಗುವುದು. ಗುಲಾಮನು ತನ್ನ ಮಾಲಕನ ಸೊತ್ತುಗಳ ಮೇಲ್ವಿಚಾರಕನಾಗಿರುತ್ತಾನೆ. ಅವನೊಡನೆ ಆ ಕುರಿತು ವಿಚಾರಿಸಲಾಗುವುದು. ತಿಳಿದಿರಲಿ! ನಿಮ್ಮ ಪೈಕಿ ಪ್ರತಿಯೊಬ್ಬನೂ ಮೇಲ್ವಿಚಾರಕನಾಗಿರುವನು ಮತ್ತು ಪ್ರತಿಯೊಬ್ಬನೊಡನೆಯೂ ಅವನ ಹೊಣೆಗಾರಿಕೆಗಳ ಬಗ್ಗೆ ವಿಚಾರಣೆ ನಡೆಯಲಿದೆ.''

[ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ) –ಬುಖಾರಿ]

ಇದು ಪ್ರವಾದಿ ಮುಹಮ್ಮದ್‌ರ(ಸ) ಅತ್ಯಂತ ಪ್ರಖ್ಯಾತ ವಚನಗಳ ಪೈಕಿ ಒಂದು. ಆಡಳಿತಗಾರ, ನಾಯಕ, ಸೇವಕ, ಸ್ತ್ರೀ, ಪುರುಷ, ಪತಿ–ಪತ್ನಿ ಇತ್ಯಾದಿ ಯಾವ ಸ್ಥಾನದಲ್ಲಿದ್ದರೂ

ಅವನು ಹೊಣೆಗಾರನಾಗಿದ್ದಾನೆ. ಅವನ ಅಧೀನದಲ್ಲಿರುವ ವಸ್ತುಗಳು ಮತ್ತು ಅವನಿ ವಹಿಸಿಕೊಡಲಾಗಿರುವ ಜವಾಬ್ದಾರಿಕೆಗಳು ಇವೆಲ್ಲದರ ವಿಷಯದಲ್ಲೂ ಅವನ ಮೇಲೆ ಕೆಲವ ಕರ್ತವ್ಯಗಳಿವೆ ಮತ್ತು ಅವನು ಆ ಕರ್ತವ್ಯಗಳನ್ನು ಸರಿಯಾಗಿ ಈಡೇರಿಸಿರುವನೋ ಇಲ್ಲವೋ ಎಂಬ ಬಗ್ಗೆ ಅಲ್ಲಾಹನ ಮುಂದೆ ವಿಚಾರಣೆ ನಡೆಯಲಿದೆ ಎಂದು ಈ ವಚನದಿಂದ ತಿಳಿಯುತ್ತದೆ

ನಾಯಕನು ತನ್ನ ಅನುಯಾಯಿಗಳಿಗೆ ಪ್ರಾಮಾಣಿಕವಾಗಿ ಮಾರ್ಗದರ್ಶನ ಮಾಡಿದ್ದಾನೆಯೇ ಅಥವಾ ತನ್ನ ಸ್ಥಾನವನ್ನು ದುರುಪಯೋಗಿಸಿದ್ದಾನೆಯೇ, ಸೊತ್ತು ವಹಿಸಿ ಕೊಡಲ್ಪಡುವವನು ಆ ಸೊತ್ತುಗಳನ್ನು ರಕ್ಷಿಸಿದ್ದಾನೆಯೇ ಇಲ್ಲವೇ ಎಂಬಿತ್ಯಾದಿ ಪ್ರಶ್ನೆಗಳನ್ನು ಒಳಗೊಂಡ ಈ ವಿಚಾರಣೆಯು ಅಲ್ಲಾಹನ ಸನ್ನಿಧಿಯಲ್ಲಿ ಅವನ ನ್ಯಾಯಾಲಯದಲ್ಲಿ ನಡೆಯಲಿದೆ. ಅಂತಹ ವಿಚಾರಣೆಯೊಂದು ನಡೆಯಲಿಕ್ಕಿದೆ ಎಂಬ ಪ್ರಜ್ಞೆ ಒಬ್ಬ ಮನುಷ್ಯನಲ್ಲಿ ಮೂಡಿದರೆ, ಅವನನ್ನು ಜವಾಬ್ದಾರಿಯುತ ವ್ಯಕ್ತಿಯಾಗಿ ಮಾಡಲು ಅದುವೇ ಪರ್ಯಾಪ್ತವಾಗುತ್ತದೆ.

ಅನರ್ಹರಿಗೆ ಅಧಿಕಾರ

عَنْ اَبِى هُرَيْرَةَ (رض) قَالَ قَالَ رَسُولَ اللّٰهِ ﷺ اِذَا ضُيِّعَتِ الأَمَانَةُ فَانْتَظِرِ السَّاعَةَ قَالَ كَيْفَ اِضَاعَتُهَا قَالَ اِذَا وُسِدَّ الْأَمْرُ اِلَى غَيْرِ اَهْلِهِ فَانتَظِرِ السَّاعَةَ (بخارى-كتاب العلم)

ಪ್ರವಾದಿ(ಸ) ಹೀಗೆ ಹೇಳಿರುವರು:

"ಅಮಾನತ್(ವಿಶ್ವಸ್ಥ ವಸ್ತು) ಹಾಳುಗೆಡವಲ್ಪಟ್ಟರೆ, ನೀವು ಪುನರುತ್ಥಾನ ದಿನವನ್ನು ನಿರೀಕ್ಷಿಸಿರಿ."

ಒಬ್ಬರು ಪ್ರಶ್ನಿಸಿದರು 'ಅಮಾನತ್ ಹೇಗೆ ಹಾಳುಗೆಡವಲ್ಪಡುತ್ತದೆ?'

ಪ್ರವಾದಿ(ಸ) ಹೇಳಿದರು: "ಆಡಳಿತ ವ್ಯವಹಾರಗಳು ಅನರ್ಹ ವ್ಯಕ್ತಿಗಳ ಕೈಗೆ ಒಪ್ಪಿಸಲ್ಪಟ್ಟರೆ ನೀವು ಪುನರುತ್ಥಾನ ದಿನವನ್ನು ನಿರೀಕ್ಷಿಸಿರಿ." **[ಹಝ್ರತ್ ಅಬೂ ಹುರೈರಾ(ರ) -ಬುಖಾರಿ]**

ಅಧಿಕಾರವನ್ನು ಅನರ್ಹ ವ್ಯಕ್ತಿಗಳಿಗೆ ಒಪ್ಪಿಸಿ ಬಿಡುವವರಿಗೆ ಈ ಹದೀಸ್ ಒಂದು ಎಚ್ಚರಿಕೆಯಾಗಿದೆ. ಅಧಿಕಾರವನ್ನು ಅನರ್ಹ ಕೈಗಳಿಗೆ ನೀಡುವುದು ಒಂದು ಸಾಮಾನ್ಯ ವಿಷಯವೆಂದು ಭಾವಿಸಲಾಗುತ್ತದೆ. ಆದರೆ ಅದು ವ್ಯಾಪಕ ಅಶಾಂತಿ ಮತ್ತು ನಾಶ ನಷ್ಟಗಳಿಗೆ ಕಾರಣವಾಗುತ್ತದೆ. ಅಧಿಕಾರವು ದುಷ್ಟರ ಕೈಗೆ ಬಂದಾಗ ಅವರು ಕೆಡುಕುಗಳನ್ನೂ ಕೆಟ್ಟ ವಿಚಾರಗಳನ್ನೂ ಹರಡುತ್ತಾರೆ. ಅಶ್ಲೀಲ ಮತ್ತು ಅನಾಚಾರಗಳನ್ನು ವ್ಯಾಪಿಸಲು ಬಿಡುತ್ತಾರೆ. ಅವರ ದುರಾಡಳಿತದಲ್ಲಿ ಜನರ ನೈತಿಕ ಮಟ್ಟ ಕುಸಿಯುತ್ತದೆ. ಅಕ್ರಮ ಹೆಚ್ಚುತ್ತದೆ. ಅನ್ಯಾಯವಾಗಿ ಇತರರ ವಸ್ತುಗಳನ್ನು ಕಬಳಿಸುವ ಚಪಲ ಮತ್ತು ಅಧಿಕಾರ ದಾಹ ವ್ಯಾಪಿಸುತ್ತವೆ. ಕೊನೆಗೆ ಪರಿಸ್ಥಿತಿ

ಎಷ್ಟು ಹದಗೆಡುತ್ತದೆಂದರೆ ಇಂತಹ ಆಡಳಿತಗಾರರ ಅಧೀನದಲ್ಲಿನರಳಿದ ಸಮಾಜಗಳನ್ನು ಮತ್ತೆ ಸುಧಾರಿಸುವುದು ಕಷ್ಟಸಾಧ್ಯವಾಗುತ್ತವೆ.

ಇಲ್ಲಿ ಅನರ್ಹರು ಎಂದರೆ ಜವಾಬ್ದಾರಿಕೆಯ ಪ್ರಜ್ಞೆ ಇಲ್ಲದವರು. ಅಧಿಕಾರವನ್ನು ದೇವದತ್ತವಾದ ಅಮಾನತ್(ವಿಶ್ವಸ್ಥ ವಸ್ತು) ಎಂದು ಪರಿಗಣಿಸುವ ಬದಲು ನಿಶ್ಚಿಂತರಾಗಿ ತಮ್ಮ ಅಧಿಕಾರವನ್ನು ದುರುಪಯೋಗಿಸುವವರು. ಈ ಹದೀಸ್‌ನಲ್ಲಿ ಅಧಿಕಾರವನ್ನು 'ಅಮಾನತ್' ಎಂದು ಕರೆದಿರುವುದೇಕೆಂದರೆ ಅಧಿಕಾರವು ಒಂದು ತಾತ್ಕಾಲಿಕ ಪರೀಕ್ಷೆಯಾಗಿದೆ. ಅಧಿಕಾರ ನೀಡಿದ ಅಲ್ಲಾಹನು ತನ್ಮೂಲಕ ಕೆಲವು ಭಾರೀ ಜವಾಬ್ದಾರಿಕೆಗಳನ್ನೂ ನೀಡಿರುವನು. ಆ ಜವಾಬ್ದಾರಿಕೆಗಳನ್ನು ಆತನು ಎಷ್ಟರ ಮಟ್ಟಿಗೆ ಈಡೇರಿಸಿರುವನೆಂಬ ಬಗ್ಗೆ ಅಲ್ಲಾಹನ ಸನ್ನಿಧಿಯಲ್ಲಿ ವಿಚಾರಣೆ ನಡೆಯಲಿದೆ. ಪವಿತ್ರ ಕುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ:

'ಅಲ್ಲಾಹನು ನಿಮಗೆ ಅಮಾನತ್‌ಗಳನ್ನು ಅರ್ಹ ವ್ಯಕ್ತಿಗಳಿಗೆ ಒಪ್ಪಿಸಲು ಆದೇಶಿಸುತ್ತಾನೆ.' (4:58)

ಸಮಾಜವು ಅಧಃಪತನದ ಪರಮಾವಧಿಗೆ ತಲುಪಿದಾಗ ಲೋಕವು ಅಂತ್ಯಗೊಂಡು ಪುನರುತ್ಥಾನ ದಿನವು ಉದಯಿಸುವುದು. ಆದರೆ ಲೋಕವನ್ನು ಅಂತಹ ಅಧಃಪತನಕ್ಕೆ ತಳ್ಳುವ ಕೆಲಸವನ್ನು, ತಮ್ಮ ಅನರ್ಹತೆಯ ಹೊರತಾಗಿಯೂ ಅಧಿಕಾರಕ್ಕೇರಿಸಲ್ಪಟ್ಟ ಬೇಜವಾಬ್ದಾರಿಯುತ ಆಡಳಿತಗಾರರು ಮಾಡುವರು.

ದುಷ್ಟ ಆಡಳಿತಗಾರ

عَنْ عَائِذِ ابْنِ عَمْرٍو (رض) قَالَ سَمِعْتُ رَسُولَ اللّٰهِ ﷺ اَنَّ شَرَّ الرِّعَاءِ الْحُطَمَةُ (مسلم-كتاب الامارة)

ಪ್ರವಾದಿ(ಸ) ಹೀಗೆ ಹೇಳಿರುವರು.

''ಜನತೆಯನ್ನು ಮರ್ದಿಸುವವರೇ ಅತ್ಯಂತ ದುಷ್ಟ ಆಡಳಿತಗಾರರು.''

[ಆಯಿದ್ ಬಿನ್ ಅಮ್ರ್ -ಮುಸ್ಲಿಮ್]

ಸರಕಾರ ಮತ್ತು ಆಡಳಿತವು ಅಲ್ಲಾಹನು ಪರೀಕ್ಷಾರ್ಥ ನೀಡುವ 'ಅಮಾನತ್' ಆಗಿದ್ದು ಅದನ್ನು ಜನಹಿತ, ಜನ ಕಲ್ಯಾಣ ಮತ್ತು ನ್ಯಾಯ ವ್ಯವಸ್ಥೆಯ ಅನುಷ್ಠಾನಕ್ಕಾಗಿ ಬಳಸಬೇಕು. ಇದನ್ನು ಮರೆತು ಜನರ ಹಕ್ಕುಗಳನ್ನು ಮೊಟಕುಗೊಳಿಸಿ, ಅವರ ಆಶೋತ್ತರಗಳನ್ನು ಮೆಟ್ಟಿ ನಿಲ್ಲಲು ಅಧಿಕಾರವನ್ನು ಬಳಸುವವರು ಖಂಡನಾರ್ಹರು.

ಮರ್ದಿತನ ಮೊರೆ

عَنْ ابْنِ عَبَّاس (رض) اَنَّ النَّبِيَّ ﷺ بَعَثَ مُعَاذًا اِلَى الْيَمَنِ فَقَالَ :

تَّقِ دَعْوَةَ الْمَظْلُوْمِ فَاِنَّهَا لَيْسَ بَيْنَهَا وَبَيْنَ اللّٰهِ حِجَابٌ

(البخاری کتاب المظالم)

ಪ್ರವಾದಿ(ಸ) ಅವರು, ಹಝ್ರತ್ ಮುಆದ್‌ರನ್ನು(ರ) ಯಮನ್‌ನ ರಾಜ್ಯಪಾಲರಾ ನೇಮಿಸಿ ಕಳುಹಿಸುವಾಗ ಅವರೊಡನೆ ಹೀಗೆಂದರು: ''ಮರ್ದಿತನ ಮೊರೆಯಿಂ ಸುರಕ್ಷಿತವಾಗಿರಿ. ಅವನ ಮತ್ತು ಅಲ್ಲಾಹನ ಮಧ್ಯೆ ಯಾವ ಅಡೆತಡೆಯೂ ಇರುವುದಿಲ್ಲ.''

[ಹಝ್ರತ್ ಇಬ್ನು ಅಬ್ಬಾಸ್(ರ) -ಬುಖಾರಿ

ಜನರ ಹಕ್ಕುಗಳನ್ನು ಸಂರಕ್ಷಿಸಬೇಕಾದುದು ಮತ್ತು ಅವರ ಮಧ್ಯೆ ನ್ಯಾಯವನ್ ಸ್ಥಾಪಿಸಬೇಕಾದುದು ಸರಕಾರದ ಮೂಲಭೂತ ಕರ್ತವ್ಯವಾಗಿದೆ. ಆದರೆ ಅಧಿಕಾರ ಎಂತಹ ಮಾದಕವೆಂದರೆ ಕೆಲವೊಮ್ಮೆ ಸ್ವತಃ ಆಡಳಿತಗಾರರೇ ಜನರಿಗೆ ಅನ್ಯಾಯ ಮಾಡುವುದುಂಟು. ಆದ್ದರಿಂದಲೇ ಪ್ರವಾದಿವರ್ಯರು(ಸ) ಹಝ್ರತ್ ಮುಆದ್‌ರನ್ನು(ರ) ಯಮನ್‌ ಆಡಳಿತಗಾರರಾಗಿ ನೇಮಿಸಿ ರವಾನಿಸುವಾಗ, ಅಲ್ಲಿ ಯಾರದೇ ಹಕ್ಕು ಚ್ಯುತಿ ಆಗದಂತೆ ಮತ್ತು ಯಾರ ಮೇಲೂ ಅನ್ಯಾಯವಾಗದಂತೆ ನೋಡಿಕೊಳ್ಳಬೇಕೆಂದು ಆದೇಶಿಸಿದರು. ಈ ಸಂದರ್ಭದಲ್ಲಿ ಪ್ರವಾದಿವರ್ಯರು(ಸ) ಬಳಸಿದ ಶಬ್ದಗಳು ಅತ್ಯಂತ ಪರಿಣಾಮಕಾರಿಯಾಗಿದೆ. ಅವರ ಮಾತಿನ ತಾತ್ಪರ್ಯವೇನೆಂದರೆ ಮರ್ದಿತನ ಮೊರೆಯು ನೇರವಾಗಿ ಅಲ್ಲಾಹನನ್ನು ತಲಪುತ್ತದೆ. ಆದ್ದರಿಂದ ಅಲ್ಲಾಹನನ್ನು ಭಯಪಟ್ಟು ಅಕ್ರಮದಿಂದ ದೂರವಿರಬೇಕು. ಈ ಹದೀಸ್, ಇಸ್ಲಾಮ್ ಎಂತಹ ಆಡಳಿತಗಾರರನ್ನು ಮುಂದೆ ತರಬಯಸುತ್ತದೆಂಬುದನ್ನು ವ್ಯಕ್ತಪಡಿಸುತ್ತದೆ.

ಆಶ್ರಿತನ ಹತ್ಯೆ

عَنْ عَبْدِ اللّٰهِ بْنِ عَمْرٍو (رض) عَنِ النبی ﷺ قَالَ : مَنْ قَتَلَ نَفْسًا مُعَاهِدًا لَمْ يَرِحْ رَائِحَةَ الْجَنَّةِ وَاِنَّ رِيْحَهَا يُوْجَدُ مِنْ مَسِيْرَةِ اَرْبَعِيْنَ عَامًا (بخاری-کتاب الدیات)

ಪ್ರವಾದಿ(ಸ) ಹೀಗೆ ಹೇಳಿರುವರು:

''ಯಾರಾದರೂ, ಒಪ್ಪಂದ ಮಾಡಿಕೊಂಡ ಮುಸ್ಲಿಮೇತರನ ಹತ್ಯೆ ಮಾಡಿದರೆ, ಅವನು ನಲ್ವತ್ತು ವರ್ಷ ಪ್ರಯಾಣಿಸಿ ಹೋಗಬೇಕಾದಷ್ಟು ದೂರದವರೆಗೂ ಹಬ್ಬುವಂತಹ ಸ್ವರ್ಗದ ಪರಿಮಳವನ್ನು ಕೂಡ ಅನುಭವಿಸಲಾರನು.''

[ಅಬ್ದುಲ್ಲಾ ಬಿನ್ ಅಮ್ರ್ -ಬುಖಾರಿ]

ಹದೀಸ್‌ನಲ್ಲಿ ಮುಆಹದ್ ಎಂಬ ಪದವನ್ನು ಪ್ರಯೋಗಿಸಲಾಗಿದೆ. ಇದು ಸ್ಲಾಮಿ ರಾಷ್ಟ್ರದ ಪೌರರಾಗಿರುವ ಅಥವಾ ಇಸ್ಲಾಮಿ ರಾಷ್ಟ್ರದೊಂದಿಗೆ ಶಾಂತಿ ಮತ್ತು ಹಾರ್ದದ ಒಪ್ಪಂದ ಮಾಡಿಕೊಂಡಿರುವ ಕರಾರುಬದ್ಧ ಮುಸ್ಲಿಮೇತರರ ಬಗ್ಗೆ ಬಳಸುವ ದವಾಗಿದೆ. ಇಂತಹ ಯಾವುದೇ ಮುಸ್ಲಿಮೇತರನನ್ನು ಅನ್ಯಾಯವಾಗಿ ಕೊಲ್ಲುವುದು ಪ್ಪಂದದ ಉಲ್ಲಂಘನೆಯೆನಿಸಿಕೊಳ್ಳುತ್ತದೆ ಮತ್ತು ಈ ಕೃತ್ಯವೆಸಗಿದವನು ಸ್ವರ್ಗ ಪ್ರವೇಶಕ್ಕೆ ಯೋಗ್ಯನೆನಿಸುತ್ತಾನೆ. ಇಸ್ಲಾಮಿ ರಾಷ್ಟ್ರದ ಮಿತಿಗಳೊಳಗೆ ಮುಸ್ಲಿಮೇತರರ ವಿರುದ್ಧ ಲಭೆಗಳನ್ನೆಬ್ಬಿಸುವುದು ಮತ್ತು ಅವರ ಜೀವ, ಸೊತ್ತು, ಮಾನ ಇತ್ಯಾದಿಗಳಿಗೆ ಹಾನಿ ೊಡುವುದರ ವಿರುದ್ಧ ಈ ಹದೀಸ್ ಒಂದು ಉಗ್ರ ಎಚ್ಚರಿಕೆಯಾಗಿದೆ. ಅಲ್ಲದೆ ಈ ಹದೀಸ್, ಪ್ಪಂದದ ಪಾಲನೆ ಮತ್ತು ವಾಗ್ದಾನದ ರಕ್ಷಣೆಗೆ ಪ್ರವಾದಿ(ಸ) ಎಷ್ಟು ಮಹತ್ವ ಕೊಡುತ್ತಿದ್ದರು ಂಬುದನ್ನು ಸೂಚಿಸುತ್ತದೆ.

ವಚನ ಭಂಗ

عَنْ اَبِی سَعِیدٍ (رض) قَالَ قَالَ رَسُولُ اللّٰهِ ﷺ : لِكُلِّ غَادِرٍ لِوَاءٌ يَوْ الْقِيمَةِ يُرْفَعُ لَهُ بِقَدْرِ غَدْرِهِ اَلاَ وَلاَ غَادِرَ اَعْظَمُ غَدْرًا مِنْ اَمِيْرِ عَامَةٍ (مسلم-كتاب الجهاد)

ಪ್ರವಾದಿ(ಸ) ಹೀಗೆ ಹೇಳಿರುವರು:

''ವಚನ ಭಂಗ ಮಾಡುವ ಪ್ರತಿಯೊಬ್ಬನ ಬಳಿ ಪುನರುತ್ಥಾನ ದಿನ ಒಂದು ಧ್ವಜ ಇರುವುದು. ಅವನ ವಚನ ಭಂಗದ ಪ್ರಮಾಣಕ್ಕನುಗುಣವಾಗಿ ಆ ಧ್ವಜವು ಎತ್ತರವಾಗಿರುವುದು. ತಿಳಿಯಿರಿ! ಜನತೆಗೆ ಕೊಟ್ಟ ವಚನವನ್ನು ಮುರಿದ ಆಡಳಿತಗಾರನಿಗಿಂತ ಕೆಟ್ಟ ವಚನ ಭಂಗ ಬೇರೆ ಯಾರದೂ ಇಲ್ಲ.'' [ಹ. ಅಬೂ ಸಈದ್(ರ) -ಮುಸ್ಲಿಮ್]

ಇಲ್ಲಿ ಕೊಟ್ಟ ಮಾತಿಗೆ ತಪ್ಪುವ ಮತ್ತು ವಚನ ಕರಾರುಗಳನ್ನು ಉಲ್ಲಂಘಿಸುವ ಪ್ರತಿ ಯೊಬ್ಬರಿಗೆ ಪರಲೋಕದಲ್ಲಿ ಉಗ್ರ ಶಿಕ್ಷೆಯ ಎಚ್ಚರಿಕೆ ನೀಡಲಾಗಿದೆ. ವಿಶೇಷತಃ ಆಡಳಿತಗಾರರು ಜನತೆಗೆ ಬಗೆಯುವ ವಚನ ದ್ರೋಹವನ್ನು ಅತ್ಯಂತ ಕೀಳ್ದರ್ಜೆಯ ವಂಚನೆಯೆಂದು ಖಂಡಿಸಲಾಗಿದೆ. ಇಂತಹವರು ಜನತೆಗೆ ಅವರ ಹಿತಚಿಂತನೆಯ ವಚನ ಕೊಡುತ್ತಾರೆ ಮತ್ತು ನಿಷ್ಠೆಯ ಪ್ರಮಾಣ ವಚನ ಕೈಗೊಳ್ಳುತ್ತಾರೆ. ಆದರೆ ಸಂದರ್ಭ ಬಂದಾಗ ತಮ್ಮ ವಚನ ಭಂಗ ಮಾಡಿ ಜನತೆಗೆ ದ್ರೋಹ ಬಗೆಯುವುದಕ್ಕೆ ಸ್ವಲ್ಪವೂ ಹಿಂಜರಿಯುವುದಿಲ್ಲ, ಆದರೆ ಒಂದು ದಿನ ಬರಲಿಕ್ಕಿದೆ. ಆಗ ಅವರ ದ್ರೋಹದ ರಹಸ್ಯ ಬಯಲಾಗುವುದು. ಅವರ ಪ್ರಮಾಣ ವಚನದ ವಾಸ್ತವಿಕತೆಯು ಬಹಿರಂಗವಾಗುವುದು. ಅಂದು ಇಂತಹವರಿಗೆ ಅತ್ಯಂತ ಅಪಮಾನದ ದಿನವಾಗಿರುವುದು.

ಲಂಚ

ن عَبْدِ اللَّهِ بْنِ عَمْرٍو (رض) قَالَ لَعَنَ رَسُولُ اللَّهِ ﷺ الرَّاشِي الْمُرْتَشِيَ (ترمذی ابواب الاحکام)

ಪ್ರವಾದಿವರ್ಯರು(ಸ) ಲಂಚ ಕೊಡುವವರನ್ನು ಮತ್ತು ಲಂಚ ಪಡೆಯುವವರ ಶಪಿಸಿರುವರು. [ಅಬ್ದುಲ್ಲಾಬಿನ್ ಅಮ್ರ್ -ತಿರ್ಮಿ

ಲಂಚವು ಸತ್ಯ ಮತ್ತು ನ್ಯಾಯಗಳ ಕಗ್ಗೊಲೆಗೆ ಕಾರಣವಾಗುತ್ತದೆ. ಒಂ ಸಮಾಜದಲ್ಲಿ ಲಂಚವು ವ್ಯಾಪಕವಾಗಿದೆ ಎಂದಾದರೆ ಅಲ್ಲಿ ಅಕ್ರಮ ಅನ್ಯಾಯಗಳು ಕೂಡ ವ್ಯಾಪಕವಾಗಿದೆಯೆಂದೇ ಅರ್ಥ. ಅಂತಹ ಸಮಾಜದಲ್ಲಿ ಬಡ ಹಾಗೂ ದುರ್ಬಲ ಜನ ನ್ಯಾಯಬದ್ಧ ಹಕ್ಕುಗಳು ಕೊಳ್ಳೆ ಹೊಡೆಯಲ್ಪಡುತ್ತವೆ. ಸರಕಾರೀ ಅಧಿಕಾರಿಗಳು ಮ ನೌಕರರಿಗೆ ಅಕ್ರಮ ಸಂಪಾದನೆಯ ಚಪಲ ತಗಲಿರುತ್ತದೆ. ಲಂಚದ ಈ ವಿನಾಶಕಾ ಪರಿಣಾಮಗಳಿಂದಾಗಿಯೇ ಇಸ್ಲಾಮ್, ಲಂಚ ಪಡೆಯುವುದು ಮತ್ತು ಲಂಚ ನೀಡುವುದ ಇವೆರಡನ್ನೂ ನಿಷಿದ್ಧವೆಂದೂ, ಶಾಪಕ್ಕೆ ಅರ್ಹವೆಂದು ಘೋಷಿಸಿದೆ.

ಭ್ರಷ್ಟಾಚಾರವು ವ್ಯಾಪಕವಾಗಿರುವ ಇಂದಿನ ದಿನಗಳಲ್ಲಿ ಒಬ್ಬ ವ್ಯಕ್ತಿ ಇತರರ ಹಕ್ಕುಚ್ಯು ಮಾಡದೆ ತನ್ನ ಒಂದು ನ್ಯಾಯ ಬದ್ಧವಾದ ಹಕ್ಕನ್ನು ಗಳಿಸಲು ಬೇರೆ ಯಾವ ಮಾರ್ಗವ ಕಾಣದೆ ಹೋದಾಗ ಅಥವಾ ತನ್ನ ಮೇಲಾಗುತ್ತಿರುವ ಅನ್ಯಾಯವೊಂದನ್ನು ನಿವಾರಿಸಲ ಅನ್ಯದಾರಿಯೇನೂ ಕಾಣದೆ ಹೋದಾಗ ಯಾರಿಗಾದರೂ ಏನಾದರೂ ಕೊಟ್ಟು ತ ರಕ್ಷಣೆ ಮಾಡಿಕೊಂಡರೆ ದೇವನು ಅವನನ್ನು ಕ್ಷಮಿಸಲೂ ಬಹುದು. ಏಕೆಂದರೆ ಇಸ್ಲಾಮ ಧರ್ಮವು ಅಸಹಾಯಕತೆ ಮತ್ತು ಅನಿವಾರ್ಯತೆಗಳನ್ನು ಮಾನ್ಯ ಮಾಡುತ್ತದೆ. ಆದರೆ ಲಂ ಪಡೆಯುವುದು ಮಾತ್ರ ಯಾವ ಸ್ಥಿತಿಯಲ್ಲೂ ಕ್ಷಮಾರ್ಹವಲ್ಲ. ಏಕೆಂದರೆ ಯಾವ ಮನುಷ್ಯನು ತಾನು ಲಂಚ ಪಡೆಯಲು ಸಂಪೂರ್ಣ ನಿರ್ಬಂಧಿತನಾಗಿದ್ದೇನೆಂದು ವಾದಿಸುವ ಹಾಗಿ ಆದ್ದರಿಂದ ಲಂಚದಿಂದ ತಮ್ಮ ಜೇಬು ತುಂಬುತ್ತಿರುವವರು ಪ್ರಸ್ತುತ ಹದೀಸ್‌ನ ಪ್ರಕಾರ ತಾ ನಿಷಿದ್ಧ ಸಂಪಾದನೆ ಮಾಡುತ್ತಿದ್ದೇವೆ ಮತ್ತು ಆ ಮೂಲಕ ಶಾಪಕ್ಕೆ ಅರ್ಹರಾಗುತ್ತೇವೆ ಎಂಬುದನ ಅರಿತುಕೊಳ್ಳಬೇಕು.

ಇಹಲೋಕದ ವಾಸ್ತವಿಕತೆ

ಇಹಪರಲೋಕಗಳ ಹೋಲಿಕೆ

عَنْ مُسْتَوْرِدٍ (رض) قَالَ قَالَ رَسُولُ اللَّهِ ﷺ وَاللَّهِ مَا الدُّنْيَا الْأَخِرَةِ اِلَّا مِثْلُ مَا يَجْعَلُ اَحَدُكُمْ اِصْبَعَهُ هَذِهِ فِي الْيَمِّ فَلْيَنْ بِمَا تَرْجِعُ (مُسْلِم-كتاب الجنّة)

ಪ್ರವಾದಿ(ಸ) ಹೀಗೆ ಹೇಳಿರುವರು:

''ಅಲ್ಲಾಹನಾಣೆ! ಪರಲೋಕಕ್ಕೆ ಹೋಲಿಸಿದರೆ ಈ ಲೋಕವು ಒಬ್ಬ ವ್ಯಕ್ತಿ ಸಮುದ್ರಕ್ಕೆ ಳನ್ನು ಮುಳುಗಿಸಿ ಆ ಬಳಿಕ ಅದನ್ನು ಹೊರ ತೆಗೆದು ಅದಕ್ಕೆ ಎಷ್ಟು ನೀರು ತಗಲಿದೆ ಎಂದು ೀಡುವಂತಿದೆ.'' [ಮುಸ್ತೌರಿದ್-ಮುಸ್ಲಿಮ್]

ಸಮುದ್ರದ ನೀರಿನ ಅಗಾಧ ಪ್ರಮಾಣಕ್ಕೆ ಹೋಲಿಸಿದರೆ ಅದರಲ್ಲಿ ಮುಳುಗಿಸಿ ದ ಬೆರಳಿನ ತುದಿಯಲ್ಲಿರುವ ನೀರಿನ ಪ್ರಮಾಣಕ್ಕೆ ಯಾವ ಸ್ಥಾನವೂ ಇಲ್ಲ. ಪರಲೋಕಕ್ಕೆ ೋಲಿಸಿದರೆ ಈ ಲೋಕದ ಅವಸ್ಥೆಯೂ ಅಷ್ಟೆ. ಪರಲೋಕದೆದುರು ಈ ಲೋಕದ ಮ್ಮ ಸೀಮಿತ ಜೀವನ ಮತ್ತು ಇಲ್ಲಿನ ಸುಖ ಸೌಕರ್ಯಗಳಿಗೆ ಯಾವ ಬೆಲೆಯೂ ಇಲ್ಲ. ರಲೋಕದೆದುರು ಈ ಲೋಕ ಎಷ್ಟು ಸಣ್ಣದೆಂದರೆ ಅವೆರಡನ್ನು ಹೋಲಿಸುವುದೇ ಅಸಾಧ್ಯ. ನ್ದರಿಂದ ಈ ಸೀಮಿತವಾದ ಸಣ್ಣ ಇಹಲೋಕದ ಸುಖಗಳಿಗೆ ಮಾರುಹೋಗದೆ ಪರಲೋಕದ ಜಯವನ್ನೇ ದೃಷ್ಟಿಯಲ್ಲಿಟ್ಟು ಅಲ್ಲಿಯ ವಿಜಯಕ್ಕೆ ಕಾರಣವಾಗುವಂತಹ ಕರ್ಮಗಳನ್ನು ಾಡಲು ಇಹಜೀವನವನ್ನು ಬಳಸುವಾತನೇ ಜಾಣ.

عَنْ جَابِرِ بْنِ عَبْدِ اللَّهِ (رض) اَنَّ رَسُولَ اللَّهِ ﷺ مَرَّ بِالسُّوقِ دَاخِ مِنْ بَعْضِ الْعَالِيَةِ وَالنَّاسُ كَنفَتَهُ فَمَرَّ بِجَدْيٍ اَسَكَّ مَيِّتٍ فَتَنَاوَلَهُ فَاَخَذَ بِاُذْنِهِ ثُمَّ قَالَ اَيُّكُمْ يُحِبُّ اَنَّ هَذَا لَهُ بِدِرْهَمٍ فَقَالُوا مَا نُحِبُّ اَنَّهُ لَنَا بِشَيْءٍ وَمَا نَصْنَعُ بِهِ قَالَ تُحِبُّونَ اَنَّهُ لَكُ قَالُو وَاللَّهِ لَوْ كَانَ حَيًّا كَانَ عَيْبًا فِيهِ لِاَنَّهُ اَسَكَّ فَكَيْفَ وَهُوَ

ـتُ فَقَالَ واللّٰهِ لَلدُّنْيَا اَهْوَنُ عَلٰى اللّٰهِ مِنْ هٰذَا عَلَيْكُمْ
(مسلم كتاب الزهد)

ಒಮ್ಮೆ ಪ್ರವಾದಿ ಮುಹಮ್ಮದ್(ಸ) ನಗರದ ಮೇಲ್ಭಾಗದಿಂದ ಆಗಮಿಸುತ್ತಿದ್ದರು. ಅ
ಪೇಟೆಯ ಬಳಿಯಿಂದ ಹಾದು ಹೋದರು. ಅವರ ಜೊತೆ ಅವರ ಕೆಲವು ಸಂಗಡಿಗ
ಇದ್ದರು. ದಾರಿಯಲ್ಲಿ ಆಡಿನ ಮರಿಯೊಂದು ಸತ್ತು ಬಿದ್ದಿರುವುದನ್ನು ಕಂಡರು. ಅದರ ಕಿವಿ
ಸಣ್ಣದಾಗಿದ್ದುವು. ಪ್ರವಾದಿ(ಸ) ಅದರ ಕಿವಿ ಹಿಡಿದು ಅದನ್ನೆತ್ತಿ ''ಇದನ್ನು ಒಂದು ದಿರ್ಹ
ಕೊಟ್ಟು ಖರೀದಿಸಲು ನಿಮ್ಮ ಪೈಕಿ ಯಾರು ಸಿದ್ಧರಿದ್ದಾರೆ?'' ಎಂದು ಕೇಳಿದರು. 'ನಾವು ಯ
ಬೆಲೆಗೂ ಅದನ್ನು ಖರೀದಿಸಲಾರೆವು. ಅದು ನಮಗೆ ಯಾಕೆ?' ಎಂದು ಸಂಗಡಿಗರು ಹೇಳಿದ
ಆಗ ಪ್ರವಾದಿ(ಸ) ''ನೀವಿದನ್ನು ಉಚಿತವಾಗಿ ತೆಗೆದುಕೊಳ್ಳಲು ಸಿದ್ಧರಿದ್ದೀರಾ'' ಎಂ
ಪ್ರಶ್ನಿಸಿದರು. ಸಂಗಡಿಗರು 'ಅಲ್ಲಾಹನಾಣೆ! ಇದು ಜೀವಂತವಿರುತ್ತಿದ್ದರೂ ಇದರ ಕಿವಿಗಳಲ್ಲಿರ
ವೈಕಲ್ಯದಿಂದಾಗಿ ಇದು ಮೌಲ್ಯಹೀನವಾಗಿತ್ತು. ಈಗಂತೂ ಇದು ಸತ್ತು ಹೋಗಿದೆ' ಎಂ
ಉತ್ತರಿಸಿದರು. ಆಗ ಪ್ರವಾದಿ(ಸ) ಹೇಳಿದರು, ''ಅಲ್ಲಾಹನಾಣೆ! ನಿಮ್ಮ ದೃಷ್ಟಿಯಲ್ಲಿ ಈ
ಆಡಿನ ಮರಿ ಎಷ್ಟು ನಿಕೃಷ್ಟವಾಗಿದೆಯೋ ಅದಕ್ಕಿಂತ ಹೆಚ್ಚು ಅಲ್ಲಾಹನ ದೃಷ್ಟಿಯಲ್ಲಿ ಈ ಲೋಕ
ನಿಕೃಷ್ಟವಾಗಿದೆ.'' [ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ(ರ) -ಮುಸ್ಲಿಮ

ಈ ಹದೀಸ್‌ನಲ್ಲಿ ವಿಕಲಾಂಗ ಮತ್ತು ನಿರ್ಜೀವ ಆಡಿನ ಮರಿಯ ಉಪಮೆ ಕೊಟ್ಟು
ಲೋಕ ಎಷ್ಟು ಮೌಲ್ಯಹೀನವೆಂಬುದನ್ನು ಮನವರಿಕೆ ಮಾಡಿಸಲಾಗಿದೆ. ಇಲ್ಲಿ ಲೋಕವ
ನಿಕೃಷ್ಟವೆಂದಿರುವುದು ಪರಲೋಕಕ್ಕೆ ಹೋಲಿಸಿದಾಗ ಅದಕ್ಕಿರುವ ಬೆಲೆಯ ಕುರಿತಾಗಿ
ತಾತ್ಪರ್ಯವೇನೆಂದರೆ, ಪರಲೋಕವನ್ನು ಕಡೆಗಣಿಸಿ ಇಹಲೋಕದ ಹಿತಾಸಕ್ತಿಗಳ ಬೆ
ಹತ್ತುವವರು ವಾಸ್ತವದಲ್ಲಿ ಅಮೂಲ್ಯವಾದ ವಸ್ತುವನ್ನು ಬಿಟ್ಟು ಬೆಲೆಯೇ ಇಲ್ಲದ ವಸ್ತುವಿ
ಬೆನ್ನು ಹತ್ತಿದಂತಾಗುತ್ತದೆ. ದೊಡ್ಡ ಲಾಭ ಬಿಟ್ಟು ನಿಕೃಷ್ಟ ಲಾಭಕ್ಕೆ ಪ್ರಾಶಸ್ತ್ಯ ಕೊಟ್ಟಂತಾಗುತ್ತದೆ.

ನಗುವ ಸ್ಥಳವಲ್ಲ

ـنْ ابى هريرة (رض) قَالَ قَالَ رسُول اللّٰهِ ﷺ : لَوْ تَعْلَمُونَ مَا
ـعْلَمُ لَضَحِكْتُمْ قَلِيلاً وَلَبَكَيْتُمْ كَثِيرًا (بخارى-كتاب الرقاق)

ಪ್ರವಾದಿ(ಸ) ಹೀಗೆ ಹೇಳಿರುವರು:

''ನಾನು ತಿಳಿದುಕೊಂಡಿರುವುದನ್ನು ನೀವು ತಿಳಿದುಕೊಂಡಿದ್ದರೆ ನೀವು ಕಡಿಮೆ ನಗುತ್ತಿದ್ದಿ
ಹೆಚ್ಚು ಅಳುತ್ತಿದ್ದಿರಿ.'' [ಹಝ್ರತ್ ಅಬೂ ಹುರೈರಾ(ರ) -ಬುಖಾ

ಮನುಷ್ಯನು ತನ್ನ ಬದುಕನ್ನು ಹೆಚ್ಚೆಚ್ಚು ಗಂಭೀರವಾಗಿ ಪರಿಗಣಿಸುತ್ತಾ ಹೋದಂತೆ ಜವಾಬ್ದಾರಿಕೆಯ ಪ್ರಜ್ಞೆಯೂ ಹೆಚ್ಚುತ್ತಾ ಹೋಗುತ್ತದೆ. ತಾನು ವಿಚಾರಣೆಗಾಗಿ ...ನ ಕಡೆಗೆ ಮರಳಿ ಹೋಗಲಿಕ್ಕಿರುವವನು ಎಂಬ ಪ್ರಜ್ಞೆ ಒಬ್ಬನಲ್ಲಿ ಬೆಳೆದು ಬಿಟ್ಟರೆ ...ಎಲ್ಲ ವಿಷಯಗಳಲ್ಲೂ ಎಚ್ಚರಿಕೆ ವಹಿಸಲಾರಂಭಿಸುವನು. ತನ್ನ ಪ್ರತಿಯೊಂದು ಮಾತು ... ಕೃತಿಯ ಪರಿಣಾಮವು ಪರಲೋಕದಲ್ಲಿ ತನ್ನ ಮುಂದೆ ಬರಲಿದೆ ಎಂಬ ಪ್ರಜ್ಞೆಯನ್ನು ...ಕೊಂಡ ಮನುಷ್ಯನು ಅವನಲ್ಲಿ ಈ ಪ್ರಜ್ಞೆ ಎಷ್ಟು ಗಾಢವಾಗಿದೆಯೋ ಅಷ್ಟೇ ಹೆಚ್ಚು ...ೀರ ಹಾಗೂ ಜಾಗೃತನಾಗುತ್ತಾನೆ. ಈ ಪ್ರಜ್ಞೆಯು ಪರಲೋಕದ ಬಗೆಗಿನ ಜ್ಞಾನದಿಂದ ...ಡುತ್ತದೆ. ಪರಲೋಕದ ಬಗ್ಗೆ ಒಬ್ಬನಿಗೆ ಎಷ್ಟು ಹೆಚ್ಚು ಜ್ಞಾನವಿರುವುದೋ ಅವನು ಅಷ್ಟೇ ...ಗ್ಗಿ ಪರಲೋಕದ ಬಗ್ಗೆ ಚಿಂತಾಕ್ರಾಂತನಾಗುತ್ತಾನೆ. ಈ ಚಿಂತೆಯು ಅವನನ್ನು ಹೆಚ್ಚು ನಗಲು ...ಮತಿಸುವುದಿಲ್ಲ, ವಾಸ್ತವದಲ್ಲಿ ಈ ಲೋಕವು ನಗುವ ಸ್ಥಳವೇ ಅಲ್ಲ. ಮನುಷ್ಯನು ತನ್ನ ...ಮೂಲ್ಯ ಸಮಯವನ್ನು ನಗೆ ಮತ್ತು ಮನ ರಂಜನೆಗಳಲ್ಲಿ ವ್ಯರ್ಥಗೊಳಿಸುವ ಬದಲು, ...ನನ್ನು ಮೆಚ್ಚಿಸುವಂತಹ ಕಾರ್ಯಗಳಲ್ಲಿ ವ್ಯಯಿಸಬೇಕು.

ಪ್ರಯಾಣಿಕ

عَنْ عَبْدِ اللّٰهِ بْنِ عُمَرَ (رض) قَالَ اَخَذَ رَسُولُ اللّٰهِ ﷺ بِمَنْكِ

فَقَالَ كُنْ فِي الدُّنْيَا كَأَنَّكَ غَرِيبٌ اَو عَابِرُ سَبِيلٍ

(بخاری-کتاب الرقاق

ಪ್ರವಾದಿ(ಸ) ನನ್ನ ಹೆಗಲ ಮೇಲೆ ಕೈಯಿಟ್ಟು ಹೀಗೆ ಹೇಳಿದರು:

''ಲೋಕದಲ್ಲಿ ನೀವು ವಿದೇಶಿಯಂತೆ ಅಥವಾ ಒಬ್ಬ ಪ್ರಯಾಣಿಕನಂತೆ ಬದುಕಿರಿ.''

[ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ) -ಬುಖಾರಿ]

ತನ್ನ ನಾಡನ್ನು ಬಿಟ್ಟು ಯಾವುದಾದರೂ ತಾತ್ಕಾಲಿಕ ಉದ್ದೇಶದಿಂದ ಬೇರೊಂದು ದೇಶಕ್ಕೆ ...ೀದವನು ಅಲ್ಲಿ ಅಪರಿಚಿತತೆಯನ್ನು ಅನುಭವಿಸುತ್ತಾನೆ. ಹೊಸ ಪರಕೀಯ ಪರಿಸರಕ್ಕೆ ಒಗ್ಗಿ ...ೀಗಲು ಅವನಿಗೆ ಕಷ್ಟವಾಗುತ್ತದೆ. ತನ್ನ ತಾಯ್ನಾಡಿನ ನೆನಪು ಅವನನ್ನು ಕಾಡುತ್ತಲಿರುತ್ತದೆ. ...ಲ್ಲದೆ ಹೊಸ ನಾಡಿನಲ್ಲಿ ತಾನು ಕೇವಲ ಕೆಲವೇ ದಿನ ಇರಬೇಕಾಗಿರುವುದರಿಂದ ಅವನು ಅಲ್ಲಿಯ ...ವಲತ್ತುಗಳ ಬಗ್ಗೆ ಹೆಚ್ಚೇನೂ ತಲೆಕೆಡಿಸಿಕೊಳ್ಳುವುದಿಲ್ಲ, ಅಲ್ಲಿ ಇರಲು ಅನಿವಾರ್ಯವಾಗಿ ಎಷ್ಟು ...ೀಕೋ ಅಷ್ಟು ಸಿಕ್ಕರೆ ಸಾಕು, ಅವನು ಸಂತೃಪ್ತನಾಗುತ್ತಾನೆ.

ಇದೇ ರೀತಿ ಪರಲೋಕವೇ ತನ್ನ ನೈಜ ನೆಲೆಯೆಂದೂ ಇಹಲೋಕವು ಕೇವಲ ಒಂದು ...ತ್ಕಾಲಿಕ ನಿವಾಸವೆಂದೂ ಭಾವಿಸುವ ವ್ಯಕ್ತಿಯು ಎಂದೂ ಲೌಕಿಕ ಸುಖಗಳಿಗೆ ಮಾರು ...ೋಗಲಾರನು. ಜಗತ್ತಿನ ಆಕರ್ಷಣೆಗಳು ಅವನನ್ನು ಸಮ್ಮೋಹಿತಗೊಳಿಸಲಾರವು. ಅವನು

ಲೋಕದಲ್ಲಿ ಸುಖಲೋಲುಪನಾಗುವ ಬದಲು ಇದ್ದುದರಲ್ಲಿ ತೃಪ್ತಿಪಡುವನು. ಲೌಕಿಕ ಅವನು ಕೇವಲ ಜೀವನದ ನೈಜ ಅಗತ್ಯಗಳನ್ನು ಪೂರೈಸಲಿಕ್ಕಾಗಿ ಮಾತ್ರ ಶ್ರಮಿಸುವನು.

ಈ ಹದೀಸ್‌ನಲ್ಲಿರುವ ಪ್ರಯಾಣಿಕನ ಉದಾಹರಣೆಯ ವಿಷಯವನ್ನು ಮ ಪರಿಣಾಮಕಾರಿಯಾಗಿ ಮಂದಟ್ಟು ಮಾಡಿಸುತ್ತದೆ. ಪ್ರಯಾಣಿಕನು ತನ್ನ ಪ್ರಯಾಣ ಅತ್ಯಗತ್ಯವಾಗಿ ಬೇಕಾಗುವ ಕನಿಷ್ಠ ಪ್ರಯಾಣದ ಸಾಮಾನು ಸರಂಜಾಮುಗಳನ್ನು ವ ಹೊತ್ತು ಕೊಂಡಿರುತ್ತಾನೆ. ಆದಷ್ಟು ಬೇಗನೆ ಸುರಕ್ಷಿತವಾಗಿ ತನ್ನ ನೆಲೆಯನ್ನು ಸೇರಬೇ ಚಿಂತೆಯೇ ಅವನನ್ನು ಸದಾ ಕಾಡುತ್ತಿರುತ್ತವೆ.

ಇದೇ ರೀತಿ ಪರಲೋಕವನ್ನು ತನ್ನ ನೈಜ ನೆಲೆಯೆಂದು ನಂಬುವ ಮನುಷ್ಯ ಈ ಲೋಕವನ್ನೇ ತಮ್ಮ ನೈಜ ನೆಲೆಯೆಂದು ಭಾವಿಸುವವರು ವರ್ತಿಸುವಂತೆ ಖ ವರ್ತಿಸಲಾರನು. ಅವರಂತೆ ಅವನು ಐಷಾರಾಮಗಳಲ್ಲಿ ಮೈ ಮರೆಯಲಾರನು. ಭೌ ವಸ್ತುಗಳನ್ನು ಆಸೆಗಣ್ಣಿನಿಂದ ನೋಡಲಾರನು. ತನ್ನ ವಾಸ್ತವಿಕ ಅಗತ್ಯಕ್ಕಿಂತ ಹೆಚ್ಚಿನ ಸಂಗ್ರಹಿಸಲಾರನು.

ಪ್ರಯಾಣಿಕನ ಬಳಿ ವಸ್ತುಗಳ ಹೊರೆ ಹಗುರವಾಗಿರುವಷ್ಟೇ ಪ್ರಯಾ ಸುಗಮವಾಗಿರುತ್ತದೆ. ಇದೇ ರೀತಿ ಪರಲೋಕದ ಕಡೆಗೆ ಪ್ರಯಾಣಿಸುತ್ತಿರುವ ಮನು ಮೇಲೆ ಲೌಕಿಕ ಸಂಪತ್ ಸಾಧನಗಳ ಹೊರೆ ಎಷ್ಟು ಕಡಿಮೆ ಇರುವುದೋ ಅಷ್ಟೇ ಅ ಪ್ರಯಾಣವು ಸುಲಭ ಹಾಗೂ ಸುಖಮಯವಾಗಿರುವುದು.

ಬದುಕು ಇರುವುದು ಮೋಜಿಗಲ್ಲ

نْ ابی ہریرۃ (رض) قَالَ قَالَ رَسُولُ اللّٰهِ ﷺ : الدُّنْيَا سِجْنُ
مُؤْمِنِ وَجَنَّةُ الْكَافِرِ (مسلم-کتاب الزّھد)

ಪ್ರವಾದಿ(ಸ) ಹೀಗೆ ಹೇಳಿರುವರು:

''ಲೋಕವು ಸತ್ಯವಿಶ್ವಾಸಿಯ ಪಾಲಿಗೆ ಸೆರೆಮನೆಯಾಗಿದೆ. ಸತ್ಯಧಿಕ್ಕಾರಿಯ ಪಾ ಸ್ವರ್ಗವಾಗಿದೆ.'' [ಹಝ್ರತ್ ಅಬೂ ಹುರೈರಾ(ರ) -ಮುಸ್ಲಿಮ

ದೇವನ ಮೇಲೆ ವಿಶ್ವಾಸವಿಡುವ ವ್ಯಕ್ತಿ ಲೋಕದಲ್ಲಿ ತಾನಿಚ್ಛಿಸಿದಂತೆ ಬದುಕುವಂತಿ ಅವನು ತನ್ನ ಬದುಕನ್ನು ಒಂದು ನಿರ್ದಿಷ್ಟ ನೀತಿ ಸಂಹಿತೆಗೆ ಮತ್ತು ಕೆಲವು ಮೌಲ್ಯಗ ಬದ್ಧಗೊಳಿಸಬೇಕಾಗುತ್ತದೆ. ತನ್ನ ಅಪೇಕ್ಷೆಗಳನ್ನು ನಿಯಂತ್ರಣದಲ್ಲಿರಿಸಬೇಕಾಗುತ್ತದೆ. ಎ ಚಟುವಟಿಕೆಗಳನ್ನು ಧರ್ಮದ ಮೇರೆಗಳೊಳಗೆ ಮಾಡಬೇಕಾಗುತ್ತದೆ. ಸತ್ಯದ ಮಾರ್ಗ ನಡೆಯುವಾಗ ಮುಂದಾಗುವ ಕಷ್ಟನಷ್ಟಗಳನ್ನು ಎದುರಿಸಬೇಕಾಗುತ್ತದೆ. ಅವನು ದೇ ಅನುಸರಣೆಯ ಬಂಧನದಲ್ಲಿ ಬಂಧಿತನಾಗಿರುತ್ತಾನೆ. ಅವನ ದೃಷ್ಟಿಯಲ್ಲಿ ಲೋಕವು ಮೋ

ನರಂಜನೆಗಳಿಗಿರುವ ಸ್ಥಳವಲ್ಲ, ಇದು ಪರೀಕ್ಷಾಗೃಹ. ತಾನಿಲ್ಲಿ ದೇವಾದೇಶಗಳನ್ನು ಲಿಸುತ್ತಾ ಜವಾಬ್ದಾರಿಯುತವಾಗಿ ಬಾಳಿದರೆ ಪರಲೋಕದ ಶಾಶ್ವತ ಯಶಸ್ಸು ಮತ್ತು ಅನಂತ ುಖ ತನ್ನದಾಗುವುದೆಂದು ಅವನು ತಿಳಿದುಕೊಂಡಿರುತ್ತಾನೆ. ಈ ರೀತಿ ಅವನು ತನ್ನ ಜೀವನದ ಮೇಲೆ ಹಲವು ನಿರ್ಬಂಧಗಳನ್ನು ಹೇರಿಕೊಂಡು ನಿಯಂತ್ರಿತವಾಗಿ ಬದುಕುವುದರಿಂದಲೇ ವನ ಲೌಕಿಕ ಜೀವನವನ್ನು ಸೆರೆಮನೆಯ ಜೀವನಕ್ಕೆ ಹೋಲಿಸಿ, ಸತ್ಯವಿಶ್ವಾಸಿಯ ಪಾಲಿಗೆ ಈ ೋಕವು ಒಂದು ಸೆರೆಮನೆಯಾಗಿದೆಯೆಂದು ಹೇಳಲಾಗಿದೆ.

ತದ್ವಿರುದ್ಧವಾಗಿ ಕಾಫಿರ್ ಅಥವಾ ಸತ್ಯಧಿಕ್ಕಾರಿಯು ಈ ಲೋಕವನ್ನು ಮನರಂಜನೆಯ ಳವೆಂದು ಭಾವಿಸುತ್ತಾನೆ. ಈ ಲೋಕದ ಸುಖ ಸಂಪತ್ತುಗಳನ್ನು ಸಂಗ್ರಹಿಸುವ ಭರದಲ್ಲಿ ೇವನಿಶ್ಚಿತ ನಿಯಮಗಳನ್ನೆಲ್ಲಾ ಧಾರಾಳವಾಗಿ ಉಲ್ಲಂಘಿಸುತ್ತಾನೆ. ಅವನು ತಾನಿಚ್ಛಿಸಿದ್ದನ್ನೆಲ್ಲಾ ರ್ವಿಘ್ನವಾಗಿ ಮಾಡುತ್ತಲೇ ಹೋಗುತ್ತಾನೆ. ಆದ್ದರಿಂದ ಅವನು ಓರ್ವ ಸತ್ಯವಿಶ್ವಾಸಿ ದುರಿಸುವಂತಹ ಸಂಕಷ್ಟಗಳನ್ನು ಎದುರಿಸಬೇಕಾಗುವುದಿಲ್ಲ. ಸತ್ಯವಿಶ್ವಾಸಿಯು ರ್ಪಿಸುವ ತ್ಯಾಗ ಬಲಿದಾನಗಳನ್ನು ಅವನು ಅರ್ಪಿಸಬೇಕಾಗುವುದಿಲ್ಲ. ಹಲವೊಮ್ಮೆ ೋಕದ ಸುಖ ಸೌಕರ್ಯಗಳು ಹೆಚ್ಚಾಗಿ ಲೋಕಾರಾಧಕರ ಪಾಲಿಗೆ ಬರುತ್ತದೆ. ಇದರಿಂದ ಅವರು ಸುಖಲೋಲುಪತೆಯಿಂದ ಬದುಕುತ್ತಾರೆ. ಪರಲೋಕದಲ್ಲಿ ಅವರು ನರಕದ ಇಂಧನವಾಗುತ್ತಾರೆ. ಈ ರೀತಿ ಓರ್ವ ಸತ್ಯಧಿಕ್ಕಾರಿಗೆ ಲೋಕದಲ್ಲಿ ಅನಿಯಂತ್ರಿತ ಬದುಕು ಾಗಿಸುವ ಅವಕಾಶ ಒದಗುತ್ತದೆ. ಯಾವ ರೀತಿ ಲೋಕವು ಅವನಿಗೆ ಮನೋರಂಜನೆ ಮತ್ತು ಸುಖಭೋಗಗಳ ವಸ್ತುವಾಗಿ ಬಿಡುವುದೋ ಅದನ್ನು ಸ್ವರ್ಗವೆಂದು ಹೇಳಲಾಗಿದೆ.

ಇಸ್ಲಾಮ್ ಲೌಕಿಕ ಪ್ರಗತಿಯನ್ನು ವಿರೋಧಿಸುವುದಿಲ್ಲ. ಅದು ಲೌಕಿಕ ಪ್ರಗತಿಯ ಜೊತೆ ಮನುಷ್ಯನ ವೈಚಾರಿಕ, ನೈತಿಕ ಮತ್ತು ಕರ್ಮಗಳ ಕ್ಷೇತ್ರವು ವಿಕಾಸಗೊಳ್ಳುತ್ತಾ ಹೋಗಬೇಕು ಹಾಗೂ ಅವೆಲ್ಲಾ ಮನುಷ್ಯನನ್ನು ಅವನ ನೈಜ ಗುರಿಯಾಗಿರುವ ಪಾರಲೌಕಿಕ ಯಶಸ್ಸಿನೆಡೆಗೆ ಒಯ್ಯಲು ಸಮರ್ಥವಾಗಬೇಕೆಂದು ಆಶಿಸುತ್ತದೆ. ಮೇಲ್ನೋಟಕ್ಕೆ ಪ್ರಗತಿಯಂತೆ ಕಾಣಿಸಿ ಕೊಂಡು ಒಳಗಿನಿಂದ ಮನುಷ್ಯನನ್ನು ವೈಚಾರಿಕವಾಗಿಯೂ ನೈತಿಕವಾಗಿಯೂ ಕ್ರಿಯಾತ್ಮಕವಾಗಿಯೂ ಅಧೋಗತಿಗೆ ತಳ್ಳುವಂತಹ ಮತ್ತು ಅಂತಿಮವಾಗಿ ಮನುಷ್ಯನನ್ನು ಶಾಶ್ವತ ವಿನಾಶದ ಹಳ್ಳಕ್ಕೆ ತಳ್ಳುವಂತಹ ಪ್ರಗತಿಯನ್ನು ಅದು ವಿರೋಧಿಸುತ್ತದೆ.

ತ್ಯಾಗಗಳನ್ನು ನೀಡದೆ, ಕಷ್ಟಗಳನ್ನು ಸಹಿಸದೆ ಯಾವುದೇ ದೊಡ್ಡ ಗುರಿಯನ್ನು ಸಾಧಿಸುವಂತಿಲ್ಲ. ಆದ್ದರಿಂದ ಪರಲೋಕದ ಯಶಸ್ಸನ್ನು ಸಾಧಿಸಬಯಸುವವರು ಇಸ್ಲಾಮಿನ ಬೋಧನೆಗಳನ್ನು, ನೀತಿ-ನಿಯಮಗಳನ್ನು ಪಾಲಿಸುತ್ತಾ, ಇಸ್ಲಾಮ್ ವಿರೋಧಿಸಿರುವಂತಹ ಹಲವು ಸುಖ ಭೋಗಗಳನ್ನು ತ್ಯಾಗ ಮಾಡುತ್ತಾ ಬದುಕಬೇಕಾಗುತ್ತದೆ.

ಶಿರ್ಕ್ ಮತ್ತು ಬಿದ್‌ಅತ್

ಅತಿ ದೊಡ್ಡ ಪಾಪ

عَنْ عَبْدِ اللّٰهِ (رض) قَالَ قُلْتُ يَارَسُوْلَ اللّٰهِ اَىُّ الذَّنْبِ اَعْظَمُ قَالَ
اَنْ تَجْعَلَ لِلّٰهِ نِدًّا وَهُوَ خَلَقَكَ , ثُمَّ قَالَ اَىُّ قَالَ اَنْ تَقْتُلَ
وَلَدَكَ خَشِيَةَ اَنْ يَاكُلَ مَعَكَ قَالَ ثُمَّ اَىُّ قَالَ اَنْ تُزَانِى
حَلِيْلَةَ جَارِكَ (بخارى-كِتَاب الادب)

ನಾನು ಪ್ರವಾದಿವರ್ಯರೊಡನೆ(ಸ) ''ಅತಿ ದೊಡ್ಡ ಪಾಪ ಯಾವುದು?'' ಎಂದು ಪ್ರಶ್ನಿಸಿದೆ. ಅದಕ್ಕವರು ''ನೀನು, ಸೃಷ್ಟಿಸಿದಂತಹ ಅಲ್ಲಾಹನಿಗೆ ಇತರರನ್ನು ಸರಿಸಮಾನರೆಂದು ಪರಿಗಣಿಸುವುದು'' ಎಂದು ಉತ್ತರಿಸಿದರು. ''ಆ ಬಳಿಕ ಯಾವುದು?'' ಎಂದು ನಾನು ಪ್ರಶ್ನಿಸಿದೆ. ಅದಕ್ಕವರು ''ನೀನು, ನಿನ್ನ ಆಹಾರದಲ್ಲಿ ಪಾಲುದಾರರಾಗುವರೆಂಬ ಭೀತಿಯಿಂದ ನಿನ್ನ ಮಕ್ಕಳನ್ನು ಕೊಲ್ಲುವುದು'' ಎಂದು ಉತ್ತರಿಸಿದರು. ''ಆ ಬಳಿಕ ಯಾವುದು?'' ಎಂದು ಕೇಳಿದೆ. ಅದಕ್ಕುತ್ತರವಾಗಿ ಅವರು ''ನಿನ್ನ ನೆರೆಯವನ ಪತ್ನಿಯೊಂದಿಗೆ ವ್ಯಭಿಚಾರ ಮಾಡುವುದು'' ಎಂದರು. [ಹಝ್ರತ್ ಅಬ್ದುಲ್ಲಾ -ಬುಖಾರಿ]

ಈ ಹದೀಸ್‌ನಲ್ಲಿ ಕ್ರಮವಾಗಿ ಮೂರು ಮಹಾ ಪಾಪಗಳನ್ನು ಪ್ರಸ್ತಾಪಿಸಲಾಗಿದೆ. ಈ ಪೈಕಿ ಮೊದಲನೆಯದು, ಅನ್ಯರನ್ನು ಅಲ್ಲಾಹನಿಗೆ ಸರಿಸಮಾನರೆಂದು ಪರಿಗಣಿಸುವುದು ಅಂದರೆ ಅವರಲ್ಲೂ ಅಲ್ಲಾಹನಲ್ಲಿರುವ ಯಾವುದಾದರೂ ಗುಣ ಯಥಾವತ್ತಾಗಿ ಇದೆಯೆಂದು ಅಥವಾ ಅವರು ಕೂಡಾ ಆರಾಧನೆಗೆ ಅರ್ಹರು ಎಂದು ಭಾವಿಸುವುದು. ಇದು 'ಶಿರ್ಕ್' ಅಥವಾ ಬಹುದೇವಾರಾಧನೆ ಆಗಿದ್ದು, ಇದನ್ನು ಪವಿತ್ರ ಕುರ್‌ಆನಿನಲ್ಲಿ ''ಅತ್ಯಂತ ಘೋರ ಅಕ್ರಮ'' ಎಂದು ಬಣ್ಣಿಸಲಾಗಿದೆ. ಇಲ್ಲಿ ಶಿರ್ಕನ್ನು ಖಂಡಿಸುತ್ತಾ ಅದಕ್ಕೆ ಕಾರಣವನ್ನು ಕೊಡಲಾಗಿದೆ. ಅಲ್ಲಾಹನ ಬಗ್ಗೆ ನಿಮ್ಮನ್ನು ಸೃಷ್ಟಿಸಿದ ಅಲ್ಲಾಹ್ ಎಂದು ಹೇಳಲಾಗಿದೆ. ಅಲ್ಲಾಹನೇ ಸೃಷ್ಟಿಕರ್ತನೆಂದ ಮೇಲೆ ಉಳಿದೆಲ್ಲವೂ ಸೃಷ್ಟಿಗಳು ಎಂದಂತಾಯಿತು. ಸೃಷ್ಟಿಗಳಲ್ಲಿ ಸೃಷ್ಟಿಕರ್ತನ ಗುಣಗಳಿರಲು ಹೇಗೆ ಸಾಧ್ಯ? ಈ ರೀತಿ ಸೃಷ್ಟಿಕರ್ತನನ್ನು ಬಿಟ್ಟು ಅಥವಾ ಅವನ ಜೊತೆ ಅನ್ಯರನ್ನು ದೇವರೆಂದು ಪರಿಗಣಿಸುವುದು ಕೃತಘ್ನತೆ ಮತ್ತು ದ್ರೋಹವಾಗಿದೆ. ತನ್ನ ಸೃಷ್ಟಿಕರ್ತನಿಗೇ ಒಬ್ಬ ವ್ಯಕ್ತಿ ದ್ರೋಹ ಬಗೆಯುತ್ತಾನೆಂದಾದರೆ ಅವನಿಗಿಂತ ದೊಡ್ಡ ಅಪರಾಧಿ ಮತ್ತು ಪಾಪಿ ಬೇರಾರೂ ಇಲ್ಲ. ಅನೇಕರು ಒಬ್ಬ ದೇವನನ್ನು ನಂಬಿದರೇನು? ಹಲವು ದೇವರನ್ನು ನಂಬಿದರೇನು?

ಥವಾ ಯಾವ ದೇವರನ್ನೂ ನಂಬದಿದ್ದರೇನು? ಎಲ್ಲವೂ ಸಮಾನವಾಗಿದ್ದು ಇದರಿಂದ ನುಷ್ಯನು ಒಳ್ಳೆಯವನು ಅಥವಾ ಕೆಟ್ಟವನಾಗುವುದರಲ್ಲಿ ಯಾವ ಪ್ರಭಾವವೂ ಬೀಳುವುದಿಲ್ಲ ಬ ನಿಲುವನ್ನು ತಾಳಿರುತ್ತಾರೆ. ನಿಜವಾಗಿ ಈ ಕಲ್ಪನೆ ತಪ್ಪು. ಇಲ್ಲಿ ಬಹುದೇವಾರಾಧನೆಯನ್ನು ದೊಡ್ಡ ಪಾಪವೆಂದು ಕರೆಯಲಾಗಿದ್ದು ಎಲ್ಲಕ್ಕಿಂತ ಮೊದಲು ಜನರು ಈ ಪಾಪವನ್ನು ರೆಯಬೇಕು.

ಈ ಹದೀಸ್‌ನಲ್ಲಿ ಶಿರ್ಕ್‌ನ ಬಳಿಕ ಮಕ್ಕಳ ಹತ್ಯೆಯನ್ನು ಅತಿ ದೊಡ್ಡ ಪಾಪವೆನ್ನಲಾಗಿದೆ. ಜ್ಞಾನ ಕಾಲದಲ್ಲಿ ಜನರು ದಾರಿದ್ರ್ಯಕ್ಕೆ ಅಂಜಿ ತಮ್ಮ ಮಕ್ಕಳನ್ನು ಕೊಂದು ಬಿಡುತ್ತಿದ್ದರು. ಹೆಚ್ಚಾಗಿ ಣ್ಣು ಮಕ್ಕಳನ್ನು ಜೀವಂತ ಹೂಳಲಾಗುತ್ತಿತ್ತು. ದಾರಿದ್ರ್ಯದ ಭಯವಿರಲಿ ಅಥವಾ ಬೇರಾವುದೇ ರಣವಿರಲಿ, ಮಕ್ಕಳ ಹತ್ಯೆ ಒಂದು ಅಮಾನುಷವಾದ ಕ್ರೂರ ಕ್ರಿಯೆ ಎಂಬುದರಲ್ಲಿ ಸಂದೇಹವಿಲ್ಲ. ಲ್ಲುವುದು ತಮ್ಮ ಮಕ್ಕಳನ್ನಾಗಲಿ ಇತರರನ್ನಾಗಲಿ ಅದು ಮಹಾಪಾಪವೇ.

ಇದೇ ರೀತಿ ವ್ಯಭಿಚಾರವು ವಸ್ತುತಃ ಮಹಾ ಪಾಪವಾಗಿದೆ. ಆದರೆ ನೆರೆಯವರ ತ್ನಿಯೊಂದಿಗೆ ನಡೆಸುವ ವ್ಯಭಿಚಾರದ ಸ್ವರೂಪ ಮತ್ತಷ್ಟು ಹೇಯವಾಗಿದೆ. ಏಕೆಂದರೆ ರೆಹೊರೆಯವರು ಪರಸ್ಪರ ಸಹಾಯಕರೂ ಸಂರಕ್ಷಕರೂ ಆಗಿರಬೇಕಾದವರು. ಆದರೆ ವರಲ್ಲೊಬ್ಬರು ತಮ್ಮ ನೆರೆಕರೆಯವರ ಸಂರಕ್ಷಣೆ ಮಾಡುವ ಬದಲು ಆತನ ಪತ್ನಿಯ ಾನಭಂಗ ಮಾಡಿದರೆ ಅವನಿಗಿಂತ ದೊಡ್ಡ ಅಕ್ರಮಿ ಬೇರಾರಿರಬಹುದು.

عَنْ ابی بَكْرَةَ (ض) قَالَ قَالَ النَّبِيُّ ﷺ : اَكْبَرُ الْكَبَائِرِ الْاِشْرَاكُ بِاللّٰهِ وَعُقُوقُ الْوَالِدَيْنِ وَشَهَادَةُ الزُّوْرِ

(بخاری ـ كتاب استتابة المرتدين

ಪ್ರವಾದಿ(ಸ) ಹೀಗೆ ಹೇಳಿರುವರು:

"ಮಹಾ ಪಾಪಗಳ ಪೈಕಿ ಅತಿ ದೊಡ್ಡ ಪಾಪಗಳು ಹೀಗಿವೆ: ಅಲ್ಲಾಹನ ಜೊತೆ ಇತರರನ್ನು ಲುದಾರರಾಗಿ ಮಾಡುವುದು, ಹೆತ್ತವರೊಂದಿಗೆ ಕೆಟ್ಟದಾಗಿ ವರ್ತಿಸುವುದು ಮತ್ತು ಸುಳ್ಳು ಕ್ಷಿ ಹೇಳುವುದು." [ಹಝ್ರತ್ ಅಬೂಬಕ್ರಃ(ರ) -ಬುಖಾರಿ]

ಶಿರ್ಕ್ ವಿನಾಶಕಾರಿ

عَنْ جَابِرِ بْنِ عَبْدِ اللّٰهِ (ض) قَالَ سَمِعْتُ رَسُولَ اللّٰهِ ﷺ يَقُو مَنْ لَقِيَ اللّٰهُ لاَ يُشْرِكُ بِهِ شَيْئًا دَخَلَ الْجَنَّةَ وَمَنْ لَقِيَهُ يُشْرِكُ بِهِ دَخَلَ النَّارَ (مسلم كتاب الأيمان)

ಪ್ರವಾದಿ(ಸ) ಹೀಗೆ ಹೇಳಿರುವರು:

''ಒಬ್ಬನು ಅಲ್ಲಾಹನ ಜೊತೆ ಯಾರನ್ನೂ ಭಾಗೀದಾರರಾಗಿ ಮಾಡಿರದ ಆ ಸ್ಥಿತಿಯ ಅಲ್ಲಾಹನನ್ನು ಭೇಟಿಯಾದರೆ ಅವನು ಸ್ವರ್ಗವನ್ನು ಪ್ರವೇಶಿಸುವನು. ಒಬ್ಬನು ಅಲ್ಲಾಹನ ಜೊ ಇತರ ಯಾರನ್ನಾದರೂ ಭಾಗೀದಾರರಾಗಿ ಮಾಡಿ ಆ ಸ್ಥಿತಿಯಲ್ಲಿ ಅಲ್ಲಾಹನನ್ನು ಭೇಟಿಯಾದ ಅವನು ನರಕವನ್ನು ಪ್ರವೇಶಿಸುವನು.'' [ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ(ರ) -ಮುಸ್ಲಿಮ

ಶಿರ್ಕ್ ಅಥವಾ ಬಹುದೇವಾರಾಧನೆ ಎಂದರೆ ಅಲ್ಲಾಹನ ವ್ಯಕ್ತಿತ್ವ ಮತ್ತು ಅವನ ಗುಣಗಳ ಇತರ ಯಾರನ್ನಾದರೂ ಪಾಲುದಾರರೆಂದು ಭಾವಿಸುವುದಾಗಿದೆ. ಹಾಗೆ ಭಾವಿಸಲ್ಪಡುವವ ಸೂರ್ಯ, ಚಂದ್ರ, ನಕ್ಷತ್ರಗಳಿರಬಹುದು, ಸರ್ಪ ಅಥವಾ ಅಗ್ನಿ ಇರಬಹುದು. ಮನುಷ ಜಿನ್ನ್ ಅಥವಾ ಮಲಕ್‌ಗಳಿರಬಹುದು. ಮಹಾಪುರುಷರು, ಪ್ರವಾದಿಗಳು ಅಥ ವಿಗ್ರಹಗಳಿರಬಹುದು. ಕಾಲ್ಪನಿಕ ದೇವಿ ದೇವತೆಗಳಿರಬಹುದು. ಭೂತ ಪ್ರೇತಗಳಿರಬಹು ಅಥವಾ ಇನ್ನಾವುದಾದರೂ ಭೌತಿಕ ವಸ್ತುಗಳಿರಬಹುದು.

ಅಲ್ಲಾಹನ ವ್ಯಕ್ತಿತ್ವದಲ್ಲಿ ಶಿರ್ಕ್ ಮಾಡುವುದರ ಉದಾಹರಣೆಯನ್ನು ನಾವು ಕ್ರೈಸ್ತರ ಕಾಣಬಹುದಾಗಿದೆ. ಅವರು ಒಂದರ ಬದಲು ತಂದೆ, ಮಗ ಮತ್ತು ಪವಿತ್ರಾತ್ಮ ಹೀಗೆ ಮೂ ದೇವರುಗಳನ್ನು ನಂಬುತ್ತಾರೆ. ಹಾಗೆಯೇ ಭಾರತದಲ್ಲಿ ಭಾರೀ ಸಂಖ್ಯೆಯಲ್ಲಿರುವ ಒಂ ಮತೀಯ ಗುಂಪು ಕೂಡ ಸೃಷ್ಟಿ ಮತ್ತು ಸೃಷ್ಟಿಕರ್ತ ಇವೆರಡರ ಮಧ್ಯೆ ವ್ಯತ್ಯಾಸ ಕಾಣ ಎರಡೂ ಒಂದೇ ಎಂದು ನಂಬುತ್ತದೆ. ಅಂದರೆ ಅವರ ದೃಷ್ಟಿಯಲ್ಲಿ ಎಲ್ಲವೂ ದೇವರೆ ಮನುಷ್ಯ ಕೂಡಾ ದೇವರ ಒಂದು ಅಂಗವಾಗಿದ್ದಾನೆ. ಪರ್ಶಿಯನ್ ಭಾಷೆಯಲ್ಲಿ ಈ ತತ್ವ ''ಹಮ ಊಸ್ತ್'' (ಎಲ್ಲವೂ ಅವನೇ) ಮತ್ತು ಅರಬಿಯಲ್ಲಿ ''ವಹ್ದತುಲ್ ವುಜೂದ್ (ಏಕಾಸ್ತಿತ್ವ) ಎಂದು ಗುರುತಿಸಲ್ಪಡುತ್ತದೆ.

ಅಲ್ಲಾಹನ ಗುಣಗಳಲ್ಲಿ ಶಿರ್ಕ್ ಮಾಡುವುದು ಎಂದರೆ, ವಿಶ್ವದ ವ್ಯವಸ್ಥೆಯ ನಡೆಸುವುದರಲ್ಲಿ ಮತ್ತು ಸಾರ್ವಭೌಮತ್ವದಲ್ಲಿ ಅಲ್ಲಾಹನ ಜೊತೆ ಇತರರಿಗೂ ಪಾತ್ರವಿ ಎಂದು ನಂಬುವುದಾಗಿದೆ. ಉದಾ: ಮಳೆಗೊಬ್ಬ, ಗಾಳಿಗೊಬ್ಬ, ಬೆಂಕಿಗೊಬ್ಬ, ಆರೋಗ್ಯಕ್ಕೊ ಸಂಪತ್ತಿಗೊಬ್ಬ ಹೀಗೆ ಪ್ರತಿಯೊಂದಕ್ಕೂ ಪ್ರತ್ಯಪ್ರತ್ಯೇಕ ದೇವರುಗಳಿದ್ದಾರೆಂದು ನಂಬುವು ಅಥವಾ ಔಲಿಯಾಗಳು(ದೇವರ ಪ್ರೀತಿಗೆ ಪಾತ್ರರಾದ ಸಜ್ಜನರು) ಮತ್ತು ಮಹಾಪುರುಷರು ಕ ಪರಿಹಾರ ಮಾಡುತ್ತಾರೆ ಮತ್ತು ಪ್ರಾರ್ಥನೆಗಳನ್ನು ಆಲಿಸಿ ಅಗತ್ಯಗಳನ್ನು ಈಡೇರಿಸುತ್ತಾರೆ ಎಂ ನಂಬುವುದು. ವಾಸ್ತವದಲ್ಲಿ ಇವೆಲ್ಲಾ ಅಲ್ಲಾಹನಿಗೆ ಮಾತ್ರ ಮೀಸಲಿರುವ ಗುಣಗಳಾಗಿ ಅವನೇ ಪ್ರಭುವೂ ಪರಿಪಾಲಕನೂ ಅನ್ನದಾತನೂ ಕಷ್ಟ ಪರಿಹರಿಸುವವನೂ, ಪ್ರಾರ್ಥ ಆಲಿಸುವವನೂ ಆಗಿರುವಾಗ ಈ ಗುಣಗಳನ್ನು ಇತರ ಯಾರ ಮೇಲಾದರೂ ಆರೋಪಿಸಿದ ಅದು ಶಿರ್ಕ್ ಎನಿಸಿಕೊಳ್ಳುತ್ತದೆ.

ಅಲ್ಲಾಹನ ಗುಣಗಳ ಪೈಕಿ ಬಹಳ ಪ್ರಧಾನವಾದ ಒಂದು ಗುಣವೇನೆಂದರೆ ಅವನೊಬ್ಬ ಮಾತ್ರ ಆರಾಧನೆಗೆ ಅರ್ಹನಾಗಿದ್ದಾನೆ. ಅವನೇ ಎಲ್ಲದರ ಸೃಷ್ಟಿಕರ್ತನೆಂಬ ನೆಲೆಯಲ್ಲಿ ಅವ ಮಾತ್ರ ಆರಾಧಿಸಲ್ಪಡಬೇಕೆಂಬುದು ಅವನ ಹಕ್ಕು. ಮನುಷ್ಯನು ಬೇರೆ ಯಾರನ್ನಾದ

ಧನೆಗರ್ಹರೆಂದು ಪರಿಗಣಿಸಿದರೆ ಅಥವಾ ತಥಾಕಥಿತ ದೇವಿ ದೇವತೆಗಳನ್ನೋ ರ್ಯ, ಚಂದ್ರ, ನಕ್ಷತ್ರಾದಿಗಳನ್ನೋ ವಿಗ್ರಹಗಳನ್ನೋ ಮಹಾಪುರುಷರು ಮತ್ತು ಪ್ರವಾದಿ ನ್ನೋ ಪೂಜಿಸತೊಡಗಿದ್ದರೆ ಅದು ಈ ಕ್ಷೇತ್ರದಲ್ಲೆಸಗುವ ಶಿರ್ಕ್ ಎನಿಸಿಕೊಳ್ಳುತ್ತದೆ.

ಇದಲ್ಲದೆ ಅಲ್ಲಾಹನ ಹೊರತು ಇನ್ನಾರನ್ನಾದರೂ ಪ್ರಶ್ನಾತೀತ ಸಾರ್ವಭೌಮನೆಂದು ವಾ ಪ್ರಶ್ನಾತೀತವಾಗಿ ಅನುಸರಣಾರ್ಹರೆಂದು ನಂಬುವುದು ಕೂಡಾ ಶಿರ್ಕ್ ಆಗಿದೆ. ನ ನಿರ್ಮಿತ ಕಾನೂನುಗಳಲ್ಲಿ ಪರಿವರ್ತನೆ ಮಾಡುವ ಅಧಿಕಾರ ಯಾರಿಗಾದರೂ ಯೆಂದು ಅಥವಾ ಪ್ರಜಾಸತ್ತೆಯಲ್ಲಿರುವ ಬಹುಸಂಖ್ಯಾತರಿಗೆ ದೇವ ನಿಯಮ ಗೆದುರಾಗಿ ಎಲ್ಲ ಬಗೆಯ ಕಾನೂನುಗಳನ್ನು ರಚಿಸುವ ಸಂಪೂರ್ಣ ಅಧಿಕಾರವಿದೆಯೆಂದು ಬುವುದು ಕೂಡಾ ಶಿರ್ಕ್ ಆಗಿದೆ.

ಮನುಷ್ಯನನ್ನು ದೇವರು ಯಾವ ಪ್ರಕೃತಿಯಲ್ಲಿ ಸೃಷ್ಟಿಸಿರುವನೋ ಆ ಪ್ರಕೃತಿಗೆ ಶಿರ್ಕ್ ದ್ಧವಾಗಿದೆ ಮತ್ತು ಅದು ಸೃಷ್ಟಿಕರ್ತನ ವಿರುದ್ಧ ಬಂಡಾಯ ಹಾಗೂ ವಿದ್ರೋಹವೆಂಬ ಯಲ್ಲಿ ಅತಿ ದೊಡ್ಡ ಅಕ್ಷಮ್ಯ ಅಪರಾಧವಾಗಿದೆ.

ದೇವಧಿಕ್ಕಾರ ಮತ್ತು ನಾಸ್ತಿಕತೆ ಕೂಡಾ ಶಿರ್ಕ್‌ನ ಸಾಲಿಗೇ ಸೇರುತ್ತವೆ. ಏಕೆಂದರೆ ಇವು ಡಾ ದೇವನ ವಿರುದ್ಧ ಬಂಡಾಯವೇ ಆಗಿದೆ. ಮನುಷ್ಯನು ಅಲ್ಲಾಹನನ್ನು ನಿರಾಕರಿಸಿ ಟ್ಟರೆ ಆ ಬಳಿಕ ಒಂದೋ ಸ್ವತಃ ತನ್ನನ್ನು ಅಥವಾ ತನ್ನಂತಹ ಇತರ ಮಾನವರನ್ನು ದೇವತ್ವದ ನದಲ್ಲಿ ಕೂರಿಸುತ್ತಾನೆ. ಇಲ್ಲಿರುವ ವ್ಯತ್ಯಾಸ ಒಂದೇ. ಶಿರ್ಕ್ ವಿಕೃತ ಧರ್ಮದ ರೂಪದಲ್ಲಿ ಕಟವಾದರೆ ನಾಸ್ತಿಕತೆಯು ಧರ್ಮರಾಹಿತ್ಯದ ರೂಪದಲ್ಲಿ ಪ್ರಕಟವಾಗುತ್ತದೆ.

ಪವಿತ್ರ ಕುರ್‌ಆನ್‌ನಲ್ಲಿ (4:48) ತಿಳಿಸಲಾಗಿರುವಂತೆ ಶಿರ್ಕ್ ಒಂದು ಅಕ್ಷಮ್ಯ ಪರಾಧವಾಗಿದೆ. ಜೀವನದಲ್ಲಿ ಶಿರ್ಕ್ ಮಾಡಿದ ವ್ಯಕ್ತಿ ತನ್ನ ಮರಣಕ್ಕೆ ಮುಂಚೆ ಅದನ್ನು ರೆದು ಆ ಬಗ್ಗೆ ಪಶ್ಚಾತ್ತಾಪ ಪಡದಿದ್ದರೆ ಅಲ್ಲಾಹನು ಅವನ ಅಪರಾಧವನ್ನು ಖಂಡಿತ ಸಲಾರನು. ಅಂತಹವನಿಗೆ ಖಂಡಿತವಾಗಿಯೂ ನರಕಾಗ್ನಿಯೇ ಗತಿಯಾಗುವುದು. ರಣಕ್ಕೆ ಮುಂಚೆ ಶಿರ್ಕನ್ನು ತೊರೆದು ಏಕದೇವೋಪಾಸನೆಗೆ ಮರಳಿದವನ ಇತರ ಪರಾಧಗಳು ಒಂದು ವೇಳೆ ಕ್ಷಮಿಸಲ್ಪಡದಿದ್ದರೆ, ಆ ಅಪರಾಧಗಳಿಗಿರುವ ಶಿಕ್ಷೆಯನ್ನು ನುಭವಿಸಿದ ಬಳಿಕವಾದರೂ ಅವನು ಸ್ವರ್ಗವನ್ನು ಪ್ರವೇಶಿಸುವನು. ಒಟ್ಟಿನಲ್ಲಿ ಕದೇವೋಪಾಸಕನಿಗೆ ಏನಿದ್ದರೂ ಅಂತಿಮವಾಗಿ ಸ್ವರ್ಗವೇ ನೆಲೆಯಾಗಿರುವುದು.

ಗೋರಿ ಪೂಜೆ

عَنْ جَابِرٍ (رض) قَالَ : نَهَى رَسُولُ اللَّهِ ﷺ أَنْ يُجَصَّصَ الْقَبْرُ وَأَنْ يُقْعَدَ عَلَيْهِ وَأَنْ يُبْنَى عَلَيْهِ (مسلم كتاب الجنائز

ಪ್ರವಾದಿ(ಸ) ಅವರು ಗೋರಿಯನ್ನು ಗಾರೆಯಿಂದ ಭದ್ರಪಡಿಸುವುದನ್ನು, ಅದರ ಮ
ಕುಳಿತಿರುವುದನ್ನು ಮತ್ತು ಅದರ ಮೇಲೆ ಕಟ್ಟಡ ನಿರ್ಮಿಸುವುದನ್ನು ನಿಷೇಧಿಸಿರುವರು.

[ಹಝ್ರತ್ ಜಾಬಿರ್ -ಮುಸ್ಲಿ

ಈ ಹದೀಸ್ ಗೋರಿ ಪೂಜೆಯ ಬುನಾದಿಗೇ ಕೊಡಲಿಯೇಟು ಹಾಕು ಗೋರಿ ಪೂಜೆ ಆರಂಭವಾಗುವುದೇ ಯಾವುದಾದರೂ ಗೋರಿಯನ್ನು ಅಲಂಕ ಅದನ್ನು ಭದ್ರಪಡಿಸುವಲ್ಲಿಂದ. ಗೋರಿಗಳ ಮೇಲೆ ಕಟ್ಟಡಗಳನ್ನು ನಿರ್ಮಿಸಿ, ಅವುಗ ದರ್ಗಾಗಳೆಂದು ಕರೆಯಲಾಗುತ್ತದೆ. ಆದರೆ ಇಸ್ಲಾಮ್ ಧರ್ಮವು ಈ ರೀತಿ ಹಿರಿ ಗೋರಿಗಳನ್ನು ದರ್ಗಾಗಳಾಗಿ ಮಾರ್ಪಡಿಸುವುದನ್ನು ಅನುಮತಿಸುವುದಿಲ್ಲ. ಮುಸ್ಲಿಮ ನಿರ್ಮಿಸಿರುವ ತಮ್ಮ ಪೂರ್ವಜರ ಮತ್ತು ಸಂತರ ಭವ್ಯ ಗೋರಿಗಳು ಇಸ್ಲಾಮೀ ಶಿಕ್ಷಣ ತೀರಾ ವಿರುದ್ಧವಾಗಿವೆ. ಗೋರಿಯು ಎಷ್ಟು ದೊಡ್ಡ ಮಹಾ ಪುರುಷರದ್ದಾಗಿದ್ದರೂ ಅ ಸರಳವಾಗಿರಬೇಕೆಂಬುದೇ ಇಸ್ಲಾಮಿನ ಅಪೇಕ್ಷೆ. ಏಕೆಂದರೆ ಇಸ್ಲಾಮ್ ಜನ ಏಕದೇವೋಪಾಸಕರಾಗಿ ಇಡಬಯಸುತ್ತದೆ. ಅವರನ್ನು ಗೋರಿಯ ಆರಾಧಕರಾಗಿ ಮ ಬಯಸುವುದಿಲ್ಲ. ಆದರೆ ಇಂದು ಕೆಲವೆಡೆ ಮುಸ್ಲಿಮರೇ ನಿರ್ಮಿಸಿಕೊಂಡಿರುವ ಕೇ ಭವ್ಯ ಗೋರಿಗಳು ಮತ್ತು ದರ್ಗಾಗಳು ಎಷ್ಟು ಆಕರ್ಷಕವಾಗಿ ಬಿಟ್ಟಿವೆಯೆಂದರೆ ಅ ಆರಾಧನಾಲಯಗಳೋ ಎಂಬಂತೆ ಜನರು ಭಾರೀ ಸಂಖ್ಯೆಯಲ್ಲಿ ಅಲ್ಲಿ ಸೇರುತ್ತಾರೆ. ಗೋರಿ ಗೌರವವು ಮಿತಿಮೀರಿ ಪೂಜೆಯ ಮಟ್ಟಕ್ಕೆ ತಲುಪಿದೆ. ಹಲವರು ಗೋರಿಗಳಿಗೆ, ಗೋರಿಯೊ ದಫನರಾದವರಿಗೆ ದೇವತ್ವದ ಸ್ಥಾನವನ್ನೂ ಕಲ್ಪಿಸತೊಡಗಿದ್ದಾರೆ. ಅನೇಕರು ಈ ಗೋರಿ ಮುಂದೆ ಸಾಷ್ಟಾಂಗವೆರಗುತ್ತಾರೆ, ಹರಕೆ ಹೊರುತ್ತಾರೆ, ಬಲಿಗಳನ್ನು ನೀಡುತ್ತಾರೆ, ಆಶೀರ್ವಾ ಪಡೆಯುತ್ತಾರೆ. ಗೋರಿಗಳನ್ನು ಬೆಲೆಬಾಳುವ ಚಾದರಗಳಿಂದಲೂ ಪುಷ್ಪಗಳಿಂದ ಅಲಂಕರಿಸಲಾಗುತ್ತದೆ. ವರ್ಣರಂಜಿತ ದೀಪಾಲಂಕಾರವನ್ನೂ ಮಾಡಲಾಗುತ್ತದೆ. ಅ ಕೆಲವೆಡೆ ಜನರನ್ನು ಆಕರ್ಷಿಸಲಿಕ್ಕಾಗಿ ಕವ್ವಾಲಿ, ಸಂಗೀತ ಮತ್ತು ಉರೂಸ್ ಉತ್ಸವಗಳ ಏರ್ಪಡಿಸಲಾಗುತ್ತದೆ. ಇದನ್ನೆಲ್ಲಾ ಮಾಡುವ ಮುಸ್ಲಿಮರಲ್ಲಿನ ಗೋರಿಪೂಜಕ ಗುಂಪಿನವ ತಾವು ಇಷ್ಟೆಲ್ಲಾ ಮಾಡಿಯೂ ತೌಹೀದ್ ಅಥವಾ ಏಕದೇವ ವಿಶ್ವಾಸವು ಸ್ವಲ್ಪವೂ ಹಾನಿಯಾ ಸುರಕ್ಷಿತವಾಗಿಯೇ ಇರುತ್ತದೆಂಬ ಭ್ರಮೆಯಲ್ಲಿದ್ದಾರೆ. ಆದರೆ ವಾಸ್ತವದಲ್ಲಿ ಗೋರಿ ಮೇಲೆ ತೊಡಿಸಲಾಗುವ ಚಾದರವು ಧರ್ಮದ ಪಾಲಿಗೆ ಶವವಸ್ತ್ರವಾಗಿದೆ. ಹಾಗೆಯೇ ಭ ಗೋರಿಗಳ ನಿರ್ಮಾಣವು ಇಸ್ಲಾಮಿನ ಪಾಲಿಗೆ ಗೋರಿ ತೋಡುವುದಕ್ಕೆ ಸಮಾನವಾಗಿದೆ.

ಪ್ರಸ್ತುತ ಹದೀಸ್‌ನಲ್ಲಿ ಗೋರಿಯ ಮೇಲೆ ಕುಳಿತಿರುವುದನ್ನು ನಿಷೇಧಿಸಲಾಗಿ ಆಶೀರ್ವಾದಕ್ಕಾಗಿ, ಮುರಾಕಿಬಕ್ಕಾಗಿ ಅಥವಾ ಮುಜಾವರ್ ಆಗಿ ಗೋರಿಯ ಒ ಕುಳಿತುಕೊಳ್ಳುವುದೂ ಇದೇ ಸಾಲಿಗೆ ಸೇರುತ್ತದೆ. ಹದೀಸ್‌ನಲ್ಲಿ 'ಅಂಯುಕ್‌ಅದ ಅಲೈ ಎಂಬ ಪದ ಪ್ರಯೋಗಿಸಿದ್ದು ಅದು 'ಅದರ ಮೇಲೆ ಕೂರುವುದು' ಎಂಬ ಅರ್ಥದ ಜೊ 'ಅದರ ಆಕ್ಕಪಕ್ಕದಲ್ಲಿ ಕೂರುವುದು' ಎಂಬ ಅರ್ಥವನ್ನೂ ನೀಡುತ್ತದೆ. ಪವಿತ್ರ ಕುರ್‌ಆನಿನಲ

ು ಅಗ್ನಿಯ ಅಂಚಿನಲ್ಲಿ ಕುಳಿತಿದ್ದಾಗ' ಎಂಬ ಅರ್ಥದಲ್ಲಿ 'ಇದ್ ಹುಮ್ ಅಲೈಹಾ ಾದ್'(ಅವರು ಅಗ್ನಿಯ ಮೇಲೆ ಕುಳಿತಿದ್ದಾಗ) ಎಂಬ ಪದವನ್ನು ಪ್ರಯೋಗಿಸಲಾಗಿದೆ. ಃ ಬುರೂಜ್:6)

ಈ ರೀತಿ ಹದೀಸ್‌ನಲ್ಲಿ ಗೋರಿಯ ಬಳಿ ಕುಳಿತುಕೊಳ್ಳುವುದನ್ನು ಸ್ಪಷ್ಟವಾಗಿ ಧಿಸಿರುವಾಗ, ಗೋರಿಯ ಬಳಿ ಇಅ್‌ತಿಕಾಫ್ ಮಾಡುವುದಕ್ಕೆ ಅರ್ಚಕರಂತೆ ಮುಜಾವರ್ ಕುಳಿತುಕೊಳ್ಳುವುದಕ್ಕೆ ಅಥವಾ ಅಲ್ಲಿ ಉತ್ಸವ ಆಚರಿಸುವುದಕ್ಕೆ ಯಾವ ಅವಕಾಶವೂ ್ಠದಲ್ಲಿಲ್ಲ.

عَنْ اَبِى الْهَيَّاجِ الاسدى قال قال عَلِى : اَلاَ اَبْعَثُكَ عَ
مَا بَعَثَنِىْ عَلَيْهِ رَسُولُ اللّٰهِ ﷺ اَنْ لاَ تَدَعَ تِمْثَالاً طَمَ
وَلاَ قَبْرًا مُشْرِفًا اِلاَّ سَوَّيْتَهُ (مسلم كتاب الجنائز)

ಹಝ್ರತ್ ಅಲೀ(ರ) ನನ್ನನ್ನು ಕರೆದು ಹೀಗೆಂದರು: ''ಪ್ರವಾದಿವರ್ಯರು(ಸ) ನನ್ನನ್ನು ವ ಕಾರ್ಯಕ್ಕಾಗಿ ಕಳುಹಿಸಿದ್ದರೋ ಅದೇ ಕಾರ್ಯಕ್ಕಾಗಿ ನಾನು ನಿಮ್ಮನ್ನು ಕಳುಹಿಸಲೇ? ವ ವಿಗ್ರಹವನ್ನೂ ಅಳಿಸದೆ ಮತ್ತು ಯಾವುದೇ ಎತ್ತರದ ಗೋರಿಯನ್ನು ನೆಲಸಮಗೊಳಿಸದೆ ಬೇಡಿ.'' [ಅಬೂ ಹಯ್ಯಾಜ್ ಅಸದೀ -ಮುಸ್ಲಿಮ್]

ವಿಗ್ರಹಗಳ ಸಂಸ್ಕೃತಿಯನ್ನು ಇಸ್ಲಾಮ್ ಒಪ್ಪುವುದಿಲ್ಲ. ಏಕೆಂದರೆ ವಿಗ್ರಹಗಳು ಕ್ರಮೇಣ ಹಾರಾಧನೆ ಮತ್ತು ವ್ಯಕ್ತಿ ಪೂಜೆಗೆ ದಾರಿ ಮಾಡುತ್ತದೆ. ಇಂದಿನ ನಾಗರಿಕ ಜಗತ್ತಿನಲ್ಲೂ ಪ್ರತಿಷ್ಠಿತ ಗಳ ಮೂರ್ತಿ ನಿರ್ಮಿಸಿಡುವ ಕಲೆಯು ಬಹುದೇವಾರಾಧನೆಯನ್ನೇ ಪೋಷಿಸುತ್ತಿದೆ. ಇನ್ನು ರದ ಗೋರಿಗಳು ಕೂಡಾ ಗೋರಿ ಪೂಜೆಗೆ ಆಹ್ವಾನ ನೀಡುವ ಸಾಧನಗಳಾದ್ದರಿಂದ ಇಸ್ಲಾಮ್ ೇರಿಗಳನ್ನು ಎತ್ತರವಾಗಿ ಕಟ್ಟುವುದನ್ನು ವಿರೋಧಿಸಿದೆ. ಇಂದಿನ ಕೆಲವು ಮುಸ್ಲಿಮರಲ್ಲಿ ತಮ್ಮ ಯರ ಗೋರಿಗಳನ್ನು ಭವ್ಯವಾಗಿ ಎತ್ತರವಾಗಿ ನಿರ್ಮಿಸುವ ಉತ್ಸಾಹ ಕಂಡು ಬರುತ್ತಿದ್ದರೆ, ು ಬೇರೆ ವಿಷಯ.

عَنْ عَائِشَةَ عَنِ النَّبِى ﷺ قَالَ فِى مَرَضِهِ الَّذِى مَاتَ فِ
لَعَنَ اللّٰهُ الْيَهُودَ وَالنَّصَارَى اِتَّخَذُوْا قُبُوْرَ اَنْبِيَائِهِمْ مَسْجِ
(بخارى كتاب الجنائز

ಪ್ರವಾದಿ(ಸ) ಮರಣ ಶಯ್ಯೆಯಲ್ಲಿದ್ದಾಗ ಹೀಗೆ ಹೇಳಿರುವರು:

''ಯಹೂದಿಗಳು ಮತ್ತು ಕ್ರೈಸ್ತರ ಮೇಲೆ ಅಲ್ಲಾಹನ ಶಾಪವಿರಲಿ. ಅವರು ಪ್ರವಾದಿಗಳ ಗೋರಿಗಳನ್ನು ಸಾಷ್ಟಾಂಗವೆರಗುವ ಸ್ಥಳಗಳಾಗಿ ಮಾಡಿಕೊಂಡಿರುವರು.''

[ಹಝ್ರತ್ ಆಯಿಶಾ(ರ) -ಬು

ಅಲ್ಲಾಹನ ವತಿಯಿಂದ ಪ್ರವಾದಿಗಳು ಮತ್ತು ಸಂದೇಶವಾಹಕರು ಬರು ಜನರಿಗೆ ಏಕದೇವೋಪಾಸನೆಯನ್ನು ಬೋಧಿಸಲಿಕ್ಕಾಗಿ. ಜಗತ್ತಿಗೆ ಬಂದ ಎಲ್ಲ ಪ್ರವಾದಿ ಅಲ್ಲಾಹನ ಹೊರತು ಇನ್ನಾರನ್ನೂ ಆರಾಧಿಸಬಾರದು ಎಂದೇ ಬೋಧಿಸಿದ್ದರು. ಆದರೆ ಪ್ರವಾದಿಗಳ ನಿರ್ಗಮನಾನಂತರ ಅವರ ಅನುಯಾಯಿಗಳು ಅವರ ಮೂಲ ಶಿಕ್ಷಣಗಳ ಮರೆತು, ಅವರು ಕಲಿಸಿದ ಸತ್ಯದ ಜೊತೆ ಮಿಥ್ಯವನ್ನು ಮಿಶ್ರಗೊಳಿಸಿ, ವಿಕೃತ ಗೊಳಿಸಿ ಯಹೂದಿಗಳು ಮತ್ತು ಕ್ರೈಸ್ತರು ತಮ್ಮ ಪ್ರವಾದಿಗಳ ಗೋರಿಗಳನ್ನೇ ಆರಾಧಿಸತೊಡಗಿ ಇದು ಸ್ವತಃ ಪ್ರವಾದಿಗಳ ಬೋಧನೆಗೆ ಬಗೆದ ಘೋರ ಅಪಚಾರವಾಗಿತ್ತು.

ಪ್ರವಾದಿ ಮುಹಮ್ಮದ್(ಸ) ತಮ್ಮ ಕೊನೆಯ ಕ್ಷಣಗಳಲ್ಲಿ, ಯಹೂದ್ಯರು ಮತ್ತು ಕ್ರ ಮಾಡಿದ ಈ ತಪ್ಪನ್ನು ತಮ್ಮ ಸಮುದಾಯಕ್ಕೆ ನೆನಪಿಸಿದರು. ಈ ಮೂಲಕ ಅವರ ಉದ್ದೇಶ ಸಮುದಾಯದವರು ತಮ್ಮ ಗೋರಿಯನ್ನು ಆರಾಧನಾಲಯವಾಗಿ ಮಾಡಿಕೊಳ್ಳದಿರಲಿ ಆ ಮೂಲಕ ಏಕದೇವ ವಿಶ್ವಾಸದಿಂದ ವಿಚಲಿತವಾಗದಿರಲಿ ಎಂದು ಎಚ್ಚರಿಸುವುದಾಗಿತ್ತು.

ಗೋರಿಗಳನ್ನು ಆರಾಧನಾಲಯಗಳಾಗಿ ಮಾರ್ಪಡಿಸುವುದು ಅಥವಾ ಗೋ ಮುಂದೆ ಸಾಷ್ಟಾಂಗವೆರಗುವುದು ಏಕದೇವ ವಿಶ್ವಾಸಕ್ಕೆ ವಿರುದ್ಧವಾಗಿದ್ದ ಶಾಪಾರ್ಹ ಕೃತ್ಯವೆ ಈ ಹದೀಸ್‌ನಿಂದ ತಿಳಿಯುತ್ತದೆ.

، ابى هُرَيْرَةَ قَالَ قَالَ رَسُولُ اللّٰهِ ﷺ : لا تَجْعَلُوْا قَبْرِى
دًا وَصَلُّوا عَلَىَّ فَاِنَّ صَلاتَكُمْ تَبْلُغُنِى حَيْثُ كُنْتُمْ
(ابوداؤد-كتاب المناسك)

ಪ್ರವಾದಿ(ಸ) ಹೀಗೆ ಹೇಳಿರುವರು:

''ನನ್ನ ಗೋರಿಯನ್ನು ಉತ್ಸವದ ಸ್ಥಳವಾಗಿ ಮಾಡಬೇಡಿ. ಆದರೆ ನನಗೆ ಸಲಾತ್ ವಚನ) ಕಳುಹಿಸಿರಿ. ನೀವೆಲ್ಲಿದ್ದರೂ ನೀವು ಕಳುಹಿಸುವ ಸಲಾತ್ ನನಗೆ ತಲಪುತ್ತದೆ.''

[ಹಝ್ರತ್ ಅಬೂ ಹುರೈರಾ(ರ) -ಅಬೂ ದಾವೂ

ಹದೀಸ್‌ನಲ್ಲಿ ಈದ್ ಎಂಬ ಪದವಿದೆ. ಅದಕ್ಕೆ ಸಭಾಸ್ಥಳ, ವಾಸಸ್ಥಳ ಮತ್ತು ಉತ್ಸ ಸ್ಥಳವೆಂಬ ಅರ್ಥಗಳಿವೆ. ಇಲ್ಲಿ ಪ್ರವಾದಿವರ್ಯರು(ಸ) ತಮ್ಮ ಗೋರಿಯನ್ನು ಜನ ಸೇ ಉತ್ಸವದ ಸ್ಥಳವಾಗಿ ಮಾಡಬಾರದೆಂದು ತಮ್ಮ ಸಮುದಾಯದವರಿಗೆ ಆದೇಶ ನೀಡಿದ್ದಾರೆ

ಪ್ರವಾದಿವರ್ಯರ(ಸ) ಮೇಲೆ ಸಲಾತ್ ಅಥವಾ ಸ್ವಸ್ತಿ ವಚನ ಹೇಳಬೇಕೆಂಬ ಆದೇಶ

ದೀಸ್‌ನಲ್ಲಿದೆ. ಆದರೆ ಇದಕ್ಕಾಗಿ ಆಗಾಗ ಗೋರಿಯ ಬಳಿ ಹೋಗಬೇಕಾಗಿಲ್ಲ. ಇದೇ ಸ್‌ನಲ್ಲಿ ಸ್ಪಷ್ಟಪಡಿಸಲಾಗಿರುವಂತೆ ಒಬ್ಬ ಮುಸ್ಲಿಮನು ಯಾವ ಪ್ರದೇಶದಲ್ಲಿದ್ದು ಸಲಾತ್ ನರೂ ಅದು ಪ್ರವಾದಿವರ್ಯರಿಗೆ(ಸ) ತಲಪುವುದು. ಒಬ್ಬ ವ್ಯಕ್ತಿ ಮದೀನಾ ನಗರಕ್ಕೆ ವಾಗ ಪ್ರವಾದಿವರ್ಯರ(ಸ) ಗೋರಿಯನ್ನು ಸಂದರ್ಶಿಸಬಹುದು. ಆದರೆ ಕೇವಲ ು ಸಂದರ್ಶನಕ್ಕಾಗಿ ದೂರದ ದೇಶಗಳಿಂದ ಕಷ್ಟಪಟ್ಟು ಪ್ರಯಾಣಿಸಿ ಹೋಗಬೇಕೆಂದಿಲ್ಲ. ು ಪೂಜೆಯ ವಿರುದ್ಧ ಹದೀಸ್‌ಗಳಲ್ಲಿ ನೀಡಲಾಗಿರುವ ಉಗ್ರ ಎಚ್ಚರಿಕೆಗಳ ಹಿನ್ನೆಲೆಯಲ್ಲಿ ದಿವರ್ಯರ(ಸ) ಗೋರಿಯ ವಿಷಯದಲ್ಲಿ ಯಾವುದೇ ಉತ್ಪ್ರೇಕ್ಷೆ ಮತ್ತು ಅತಿಶಯಕ್ಕೆ ಮಾಗದೆ ಸಮತೋಲನ ಕಾಯ್ದುಕೊಳ್ಳಬೇಕಾದುದು ಅತ್ಯಗತ್ಯ.

ಪ್ರವಾದಿವರ್ಯರ(ಸ) ಗೋರಿಯನ್ನೇ ಜನ ಸೇರುವ ಸಭಾಸ್ಥಳವಾಗಿ ಮತ್ತು ಉತ್ಸವ ಸ್ರವಾಗಿ ಮಾಡಬಾರದೆಂದ ಮೇಲೆ ಇತರ ಮಹಾ ಪುರುಷರ ಮತ್ತು ಹಿರಿಯರ ರಿಗಳಿಗೆ ಹೀಗೆ ಮಾಡುವುದು ಧರ್ಮಸಮ್ಮತವಾಗುವುದು ಹೇಗೆ? ಗೋರಿ ಸಂದರ್ಶನದ ಚಾರಗಳನ್ನೆಲ್ಲಾ ಉಲ್ಲಂಘಿಸಿ ಅದನ್ನು ಗೋರಿ ಪೂಜೆಯಾಗಿ ಮಾರ್ಪಡಿಸಿಕೊಂಡವರು, ಪ್ರವಾದಿ ಮುಹಮ್ಮದ್(ಸ) ಉಗ್ರವಾಗಿ ಖಂಡಿಸಿರುವಂತಹ ಮತ್ತು ಇಸ್ಲಾಮಿನೊಂದಿಗೆ ವುದೇ ಸಂಬಂಧವಿಲ್ಲದ ಕೃತ್ಯ ಎಂಬುದನ್ನು ಮರೆಯಬಾರದು.

ಏಕದೇವತ್ವ

ಧರ್ಮದ ತಳಹದಿ

بنِ عُمَرَ (رض) قَالَ قَالَ رسُولُ اللّٰه ﷺ :

الْاسْلَامُ عَلى خَمْسٍ. شَهَادَةِ اَنْ لَا اِلٰهَ اِلَّا اللّٰهُ وَاَنَّ مُحَمَّدًا

سُولُ اللّٰهِ وَاِقَامِ الصَّلَاةِ وَاِيْتَاءِ الزَّكَاةِ وَالْحَجِّ وَصَوْمِ

ضَانَ (بخاری-کتاب الایمان)

ಪ್ರವಾದಿ(ಸ) ಹೀಗೆ ಹೇಳಿರುವರು:

''ಇಸ್ಲಾಮಿನ ತಳಹದಿ ಐದು ವಿಷಯಗಳಲ್ಲಿದೆ. ಅಲ್ಲಾಹನ ಹೊರತು ಬೇರ ಆರಾಧ್ಯನಿಲ್ಲ ಮತ್ತು ಮುಹಮ್ಮದ್(ಸ) ಅಲ್ಲಾಹನ ಸಂದೇಶವಾಹಕರಾಗಿದ್ದಾರೆ ಎ ಸಾಕ್ಷ್ಯ ನುಡಿಯುವುದು. ನಮಾಝನ್ನು ಸಂಸ್ಥಾಪಿಸುವುದು, ಝಕಾತ್ ನೀಡುವುದು, ಹ ನಿರ್ವಹಿಸುವುದು ಮತ್ತು ರಮಝಾನ್ ತಿಂಗಳ ಉಪವಾಸ ಆಚರಿಸುವುದು.''

[ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ) -ಬುಖ

ಇಸ್ಲಾಮ್ ಒಂದು ಸಂಪೂರ್ಣ ದಾಸ್ಯ ಮತ್ತು ಆರಾಧನಾ ವ್ಯವಸ್ಥೆಯೂ ಸಂಪೂ ಜೀವನ ವ್ಯವಸ್ಥೆಯೂ ಆಗಿದೆ. ಈ ಧರ್ಮದಲ್ಲಿ ಅತ್ಯಧಿಕ ಮಹತ್ವವೂ ಆದ್ಯತೆಯೂ ಇರುವ 'ಇಬಾದತ್' ಎಂಬ ಪಾರಿಭಾಷಿಕದಿಂದ ಕರೆಯಲ್ಪಡುವ ಕಾರ್ಯಕ್ಕಾಗಿದೆ. ಇಲ್ಲಿ ಅ 'ಇಬಾದತ್'ಗಳನ್ನೇ ಧರ್ಮದ ತಳಹದಿಗಳೆಂದು ಕರೆಯಲಾಗಿದೆ. ಈ ನಿರ್ದಿಷ್ಟ ಆರಾ ಕರ್ಮಗಳಿಂದ ಮನುಷ್ಯನಿಗೆ ದೇವನೊಂದಿಗೆ ನೈಜ ಸಂಬಂಧವುಂಟಾಗುತ್ತದೆ. ಅವ ಏಕದೇವತ್ವದ ಕಲ್ಪನೆ ಬಲಗೊಳ್ಳುತ್ತದೆ. ಈ ಆರಾಧನೆಗಳು ಮನಸ್ಸಿನಲ್ಲಿ ದೇವನ ಭಯ ವ ಭಕ್ತಿಯನ್ನು ಮೂಡಿಸುತ್ತದೆ. ದಾಸ್ಯ ಮತ್ತು ಅರ್ಪಣಾಭಾವವನ್ನು ಬೆಳೆಸುತ್ತದೆ. ಅಲ್ಲಾಹ ಪ್ರೀತಿಸಲು ಮತ್ತು ತನ್ನ ನಿರೀಕ್ಷೆಗಳನ್ನೆಲ್ಲಾ ಅವನಲ್ಲೇ ಕೇಂದ್ರೀಕರಿಸಲು ಕಲಿಸುತ್ತವೆ. ಅವನ ಶಿಕ್ಷೆ ಭೀತಿ ಮತ್ತು ಅವನ ಪುರಸ್ಕಾರಗಳ ನಿರೀಕ್ಷೆಯನ್ನು ಹುಟ್ಟಿಸುತ್ತದೆ. ಅವನಲ್ಲಿ ದೇವನ ಅನು ಉಂಟು ಮಾಡುತ್ತದೆ. ಅವನ ವಿಶ್ವಾಸ ಶ್ರದ್ಧೆಗಳ ಭಾವನೆಯನ್ನು ಪೋಷಿಸುತ್ತದೆ. ಅವ ಅನುಸರಣೆ ಮತ್ತು ವಿಧೇಯತೆಯ ಸ್ಫೂರ್ತಿಯನ್ನು ಹುಟ್ಟಿಸುತ್ತದೆ. ಅಲ್ಲಾಹನಿಗಾಗಿ ಬದುಕಲು, ಅಲ್ಲಾಹನಿಗಾಗಿಯೇ ಸಾಯಲು ಮತ್ತು ಅಲ್ಲಾಹನ ವಚನದ ಉತ್ಥಾನಕ್ಕಾಗಿ ಬಗೆಯ ತ್ಯಾಗ ಬಲಿದಾನಗಳನ್ನು ನೀಡಲು ಅವನನ್ನು ಸನ್ನದ್ಧಗೊಳಿಸುತ್ತದೆ. ಈ ಆರಾಧನೆಗ

ಪೂರ್ವಕವಾಗಿ ನಿರ್ವಹಿಸಿದರೆ ಅವು ಮನುಷ್ಯನ ಸಂಪೂರ್ಣ ಜೀವನದ ಮೇಲೆ ಣಾಮ ಬೀರುತ್ತವೆ. ಮನುಷ್ಯನು ತನ್ನ ಬದುಕಿನ ಎಲ್ಲ ಕ್ಷೇತ್ರಗಳಲ್ಲೂ ಅಲ್ಲಾಹನ ಶಗಳನ್ನು, ಅವನ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮಾಡುತ್ತವೆ. ಈ ಧನೆಗಳ ನೈಜ ಸ್ಫೂರ್ತಿಯನ್ನು ಮೈಗೂಡಿಸಿಕೊಳ್ಳದವರಿಗೆ, ತಮ್ಮ ವೈಯಕ್ತಿಕ ಜೀವನದಲ್ಲೂ, ಾಜಿಕ ಬದುಕಿನಲ್ಲೂ ಇಸ್ಲಾಮಿನ ನಿಯಮಗಳನ್ನು ಪಾಲಿಸಲು ಸಾಧ್ಯವಾಗುವುದಿಲ್ಲ. ಿಂದಲೇ ಈ ಆರಾಧನೆಗಳಿಗೆ ಇತರ ಎಲ್ಲ ಧಾರ್ಮಿಕ ಕರ್ತವ್ಯಗಳಿಗಿಂತ ಹೆಚ್ಚಿನ ಮಹತ್ವ ಲಾಗಿದೆ ಮತ್ತು ಅವುಗಳನ್ನು ಧರ್ಮದ ಆಧಾರ ಸ್ತಂಭಗಳೆಂದು ಕರೆಯಲಾಗಿದೆ.

ಇಲ್ಲಿ ಇನ್ನೊಂದು ವಿಷಯವನ್ನೂ ತಿಳಿದುಕೊಳ್ಳಬೇಕಾಗಿದೆ. 'ಜಿಹಾದ್'ನ ಮಹತ್ವ ಮತ್ತು ್ಯದ ಹೊರತಾಗಿಯೂ ಅದಕ್ಕೆ ಈ ಸ್ಥಾನ ನೀಡಲಾಗಿಲ್ಲ. ಅದಕ್ಕೆ ಕಾರಣವೇನೆಂದರೆ ಜಿಹಾದ್ ು ಸ್ವತಂತ್ರ ಕಡ್ಡಾಯ ಕರ್ತವ್ಯವಲ್ಲ. ಅದು ಪರಿಸ್ಥಿತಿಗನುಸಾರವಾಗಿ ಕಡ್ಡಾಯಗೊಳ್ಳುತ್ತದೆ. ು ಸಾಮಾನ್ಯವಾಗಿ ಸಾಮೂಹಿಕ ಕಡ್ಡಾಯ ಕರ್ತವ್ಯವಾಗಿದೆ. ಆದರೆ ಪ್ರಸ್ತುತ ಇಬಾದತ್ ಎಲ್ಲ ಪರಿಸ್ಥಿತಿಗಳಲ್ಲೂ ಶಾಶ್ವತ ಕಡ್ಡಾಯ ಕರ್ತವ್ಯಗಳಾಗಿವೆ. ಇದನ್ನು ಶರೀಅತ್ ಪ್ರತಿಯೊಬ್ಬ ಯ ಮೇಲೆ ಕಡ್ಡಾಯಗೊಳಿಸಿದೆ. ಈ ಪೈಕಿ ಯಾವುದಾದರೂ ಕಡ್ಡಾಯ ಕರ್ತವ್ಯವನ್ನು ಹಿಸುವ ಸಾಮರ್ಥ್ಯವೇ ಇಲ್ಲದವನು ಮಾತ್ರ ಇದಕ್ಕೆ ಹೊರತಾಗಿರುವನು. ಹಾಫಿಝ್ ್ನ ಹಜರ್(ರ) ಅವರು ಈ ಹದೀಸ್‌ನ ವ್ಯಾಖ್ಯಾನ ಮಾಡುತ್ತಾ ಈ ರೀತಿ ಬರೆದಿರುವರು: ಾದ್' ಇಲ್ಲಿ ಉಲ್ಲೇಖಿಸಲ್ಪಡದಿರಲು ಕಾರಣ ಅದು ಸಾಮೂಹಿಕ ಕಡ್ಡಾಯ ಕರ್ತವ್ಯವಾಗಿದ್ದು ು ಸಂದರ್ಭಗಳಲ್ಲಿ ಮಾತ್ರ ಅನ್ವಯವಾಗುತ್ತದೆ.

ನೈಜ ಸಾರ್ವಭೌಮ

عَنْ عَبْدِ اللّٰهِ بْنِ عُمَرَ (رض) قَالَ قَالَ رَسُوْلُ اللّٰهِ ﷺ يَطْوِى ا
عَزَّوَجَلَّ السَّمٰوَاتِ يَوْمَ الْقِيَامَةِ ثُمَّ يَاْخُذُهُنَّ بِيَدِهِ الْيُمْ
ثُمَّ يَقُوْلُ اَنَا الْمَلِكُ اَيْنَ الْجَبَّارُوْنَ ؟ اَيْنَ الْمُتَكَبِّرُوْ
ثُمَّ يَطْوِى لَارْضِيْنَ بِشِمَالِهِ ثُمَّ يَقُوْلُ اَنَا الْمَلِكُ اَيْنَ الْجَبَّارُوْ
اَيْنَ الْمُتَكَبِّرُوْنَ (مسلم- باب صفة القيام

ಪ್ರವಾದಿ(ಸ) ಹೀಗೆ ಹೇಳಿರುವರು:

''ಪುನರುತ್ಥಾನದ ದಿನ ಅಲ್ಲಾಹನು ಆಕಾಶವನ್ನು ಮಡಚಿ ಬಿಡುವನು ಮತ್ತು ಅದನ್ನು ಬಲಗೈಯಲ್ಲಿ ಹಿಡಿದುಕೊಂಡು 'ನಾನೇ ಸಾರ್ವಭೌಮ. ಎಲ್ಲಿದ್ದಾರೆ ಅಕ್ರಮಿ ದೊರೆಗಳು? ದ್ದಾರೆ ಅಹಂಕಾರಿಗಳು?' ಎಂದು ಕೇಳುವನು. ತರುವಾಯ ಭೂಮಿಯನ್ನು ಮಡಚಿ ತನ್ನ

ಎಡಗೈಯಲ್ಲಿ ಹಿಡಿದು ಇದೇ ರೀತಿ, 'ನಾನೇ ಸಾರ್ವಭೌಮ, ಎಲ್ಲಿದ್ದಾರೆ ಅಕ್ರಮಿ ದೊರೆಗ
ಎಲ್ಲಿದ್ದಾರೆ ಅಹಂಕಾರಿಗಳು?' ಎಂದು ಕೇಳುವನು.

[ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ) -ಮುಸ್ಲಿ

ಅಲ್ಲಾಹನೇ ಭೂಮ್ಯಾಕಾಶಗಳ ನೈಜ ಸಾರ್ವಭೌಮ. ಆದರೆ ಪರೀಕ್ಷಾರ್ಥವಾಗಿ ಈ ಜೀವನದಲ್ಲಿ ಅವನು ನೀಡುವ ತಾತ್ಕಾಲಿಕವಾದ ಶಕ್ತಿ ಮತ್ತು ಅಧಿಕಾರಗಳನ್ನು ಪ ಮನುಷ್ಯನು ಅಹಂಕಾರಕ್ಕೊಳಗಾಗುತ್ತಾನೆ. ತಾನೇ ಸಾರ್ವಭೌಮನೆಂದು ವಾದಿಸಿ ವರ್ತಿಸಲಾರಂಭಿಸುತ್ತಾನೆ. ಜನರ ಮೇಲೆ ಅಕ್ರಮ ಅನ್ಯಾಯಗಳನ್ನು ಎಸಗತೊಡಗುತ ಆದರೆ ಪುನರುತ್ಥಾನ ದಿನ ಎಲ್ಲರಿಂದ ಎಲ್ಲ ಅಧಿಕಾರಗಳು ಕಿತ್ತುಕೊಳ್ಳಲ್ಪಡುವುವು. ಅ ಯಾರೂ ತಾನು ಸಾರ್ವಭೌಮನೆಂದಾಗಲಿ ದೊರೆಯೆಂದಾಗಲೀ ವಾದಿಸಲಾರನು. ಅಲ್ಲಾ ನೈಜ ಸಾರ್ವಭೌಮನಾಗಿರುವನೆಂಬುದು ಆ ದಿನ ಪ್ರತಿಯೊಬ್ಬರಿಗೂ ಮನವರಿಕೆಯಾಗುವ ಮತ್ತು ಅಂದು ಈ ವಾಸ್ತವಿಕತೆಯನ್ನು ಪ್ರತಿಯೊಬ್ಬರೂ ಅಂಗೀಕರಿಸುವರು. ಹೀಗೆ ಅ ಅನಿವಾರ್ಯವಾಗಿ ಅಂಗೀಕರಿಸುವ ವಾಸ್ತವಿಕತೆಯನ್ನು ಮನುಷ್ಯನು ಈ ಜೀವನ ಸ್ವಇಚ್ಛೆಯಿಂದ ಅಂಗೀಕರಿಸಿದ್ದರೆ ಎಷ್ಟು ಚೆನ್ನಾಗಿತ್ತು!

ಪ್ರಕೃತಿ ಧರ್ಮ

ابى هريرة (رض) قَالَ قَالَ رَسُولُ اللّٰهِ ﷺ : مَا مِنْ مَوْلُودٍ اِلَّا
دُ عَلَى الْفِطْرَةِ . فَاَبَوَاهُ يُهَوِّدَانِهِ وَيُنَصِّرَانِهِ وَيُشَرِّكَانِهِ
(مسلم_كتاب القدر)

ಪ್ರವಾದಿ(ಸ) ಹೀಗೆ ಹೇಳಿರುವರು: ''ಪ್ರತಿಯೊಂದು ಮಗುವೂ ಪ್ರಕೃತಿ ಧರ್ಮ ಹುಟ್ಟುತ್ತದೆ. ಆ ಬಳಿಕ ಅದರ ಹೆತ್ತವರು ಅದನ್ನು ಯಹೂದಿಯಾಗಿ, ಕ್ರೈಸ್ತನಾಗಿ ಅಥವಾ ಬ ದೇವಾರಾಧಕನಾಗಿ ಮಾಡಿ ಬಿಡುತ್ತಾರೆ.'' [ಹಝ್ರತ್ ಅಬೂ ಹುರೈರಾ(ರ) -ಮುಸ್ಲಿ

ಪ್ರಕೃತಿ ಧರ್ಮದಲ್ಲಿ ಸೃಷ್ಟಿಸಲ್ಪಡುವುದೆಂದರೆ, ಏಕದೇವ ವಿಶ್ವಾಸದೊಂದಿಗೆ ಸೃಷ್ಟಿಸಲ್ಪಡ ವಾಗಿದೆ. ಒಬ್ಬ ಸೃಷ್ಟಿಕರ್ತನಿದ್ದಾನೆ ಮತ್ತು ಅವನು ಮಾತ್ರ ಆರಾಧನೆಗೆ ಅರ್ಹನೆಂಬ ಭಾವನೆ ಪ್ರತಿಯೊಬ್ಬ ಮನುಷ್ಯನ ಸ್ವಭಾವದಲ್ಲೇ ಇರುತ್ತದೆ. ಹಾಗೆಯೇ ಸ್ವಾಭಾವಿಕವಾಗಿ ಪ್ರತಿಯ ಮನುಷ್ಯನ ಪ್ರಕೃತಿಯು ಒಳಿತನ್ನು ಮತ್ತು ಸತ್ಕಾರ್ಯಗಳನ್ನು ಇಷ್ಟಪಡುತ್ತದೆ. ಕೆಡುಕುಗ ದ್ವೇಷಿಸುತ್ತದೆ. ತಾನು ತನ್ನ ಸೃಷ್ಟಿಕರ್ತನ ಮುಂದೆ ವಿಚಾರಣೆಗೆ ಗುರಿಯಾಗುವೆನ ಪ್ರತಿಯೊಬ್ಬನ ಆತ್ಮಸಾಕ್ಷಿಯಲ್ಲಿರುತ್ತದೆ. ಇಸ್ಲಾಮ್ ಎಂಬುದು ಮನುಷ್ಯನ ಮನದಾಳದಲ್ಲಿ ವಾಸ್ತವಿಕತೆಗಳ ಪ್ರತ್ಯಕ್ಷ ರೂಪ ಮತ್ತು ಅದರ ಸಂಪೂರ್ಣ ವಿವರಣೆಯಾಗಿದೆ. ಆದ್ದರಿಂದ ಅದನ್ನು ಪ್ರಕೃತಿ ಧರ್ಮವೆಂದು ಕರೆಯಲಾಗುತ್ತದೆ. ಪ್ರತಿಯೊಂದು ಮಗು ಈ ಪ್ರ

ರ್ಮದಲ್ಲಿ ಹುಟ್ಟುತ್ತದೆ. ಅದು ಇತರ ಮತಧರ್ಮಗಳ ಅನುಯಾಯಿಯಾಗಿ ರ್ಪಡುವುದು ಬಾಹ್ಯ ಹಸ್ತಕ್ಷೇಪದಿಂದಾಗಿ ಮಾತ್ರ. ಆದರ ಹೆತ್ತವರು ಮತ್ತು ಪರಿಸರವು ರುವ ಪ್ರಭಾವಗಳಿಂದಾಗಿ ಅದು ಕ್ರಮೇಣ ತನ್ನ ಪ್ರಕೃತಿ ಧರ್ಮವನ್ನು ಮರೆತು ಹೆತ್ತವರ ಥವಾ ಪರಿಸರದ ಧರ್ಮ ಮತ್ತು ವಿಚಾರಗಳನ್ನೇ (ಅದು ಯಹೂದಿ ಧರ್ಮವಾಗಿರಲಿ, ಗ್ರಹಾರಾಧನೆಯ ಧರ್ಮವಾಗಲಿ, ನಾಸ್ತಿಕತೆಯ ರೂಪದಲ್ಲಾಗಿರಲಿ) ಮೈಗೂಡಿಸಿಕೊಳ್ಳುತ್ತದೆ.

ಪಥಭ್ರಷ್ಟ ನಂಬಿಕೆಗಳು

عَنْ اَبِی هریرة (رض) قَالَ قَالَ رَسُولُ اللّٰهِ ﷺ قَالَ اللّٰهُ تعَالَی يَشْتِمُنِي ابْنُ آدَمَ ؟ وَمَا يَنْبَغِي لَهُ اَنْ يَشْتِمَنِي، وَيُكَذِّبُنِي وَمَا يَنْبَغِي لَهُ اَمَّا شَتْمُهُ فَقَوْلُهُ اَنَّ لِي وَلَدًا وَاَمَّا تَكْذِيبُهُ فَقَوْلُهُ لَيْسَ يُعِيدُنِي كَمَا بَدَأَنِي (البخاری-کتاب بدء الخلق)

ಪ್ರವಾದಿ(ಸ) ಹೇಳಿರುವರು:

''ಅಲ್ಲಾಹನು ಹೀಗೆನ್ನುತ್ತಾನೆ; ಆದಮನ ಪುತ್ರನು ನನ್ನನ್ನು ದೂಷಿಸುತ್ತಾನೆ. ಆದರೆ ಅದು ವನಿಗೆ ಭೂಷಣವಲ್ಲ, ಅವನು ನನ್ನನ್ನು ನಿರಾಕರಿಸುತ್ತಾನೆ. ಆದರೆ ಈ ನಿರಾಕರಣೆ ಅವನಿಗೆ ೂಷಣವಲ್ಲ. ನನಗೆ ಸಂತಾನವನ್ನಾರೋಪಿಸುವುದೇ ನನ್ನನ್ನು ದೂಷಿಸುವುದಾಗಿದೆ ಮತ್ತು ೇವನು ತನ್ನನ್ನು ಪ್ರಥಮ ಬಾರಿ ಸೃಷ್ಟಿಸಿದಂತೆ ದ್ವಿತೀಯ ಬಾರಿ ಸೃಷ್ಟಿಸಲಾರ ಎಂದು ಅವನು ೇಳುವುದೇ ನನ್ನನ್ನು ನಿರಾಕರಿಸುವುದಾಗಿದೆ.'' [ಹಝ್ರತ್ ಅಬೂ ಹುರೈರಾ(ರ) -ಬುಖಾರಿ]

ಇದೊಂದು ಕುದ್ಸೀ ಹದೀಸ್ ಆಗಿದ್ದು ಇದರಲ್ಲಿ ಪ್ರವಾದಿವರ್ಯರು(ಸ) ಅಲ್ಲಾಹನ ಾತನ್ನು ಉದ್ಧರಿಸಿರುವರು. ಇಂತಹ ಹದೀಸ್‌ಗಳು ವಿಶೇಷ ಮಹತ್ವ ಹೊಂದಿವೆ.

ಇದರಲ್ಲಿ ಹೆಚ್ಚಿನ ಜನರು ಸಿಲುಕಿರುವ ಎರಡು ಬಗೆಯ ಪಥಭ್ರಷ್ಟತೆಗಳ ಅವೈಚಾರಿಕತೆ ಯನ್ನು ಸ್ಪಷ್ಟಪಡಿಸಲಾಗಿದೆ. ಈ ಪೈಕಿ ಮೊದಲನೆಯ ಪಥಭ್ರಷ್ಟತೆಯು, ದೇವರಿಗೆ ಮಕ್ಕಳಿವೆ ಎಂದು ಆರೋಪಿಸುವುದಾಗಿದೆ. ಲೋಕದ ಹಲವು ಮತಧರ್ಮಗಳಲ್ಲಿ ದೇವರಿಗೆ ಮಕ್ಕಳಿದ್ದಾರೆಂಬ ಕಲ್ಪನೆಯಿದೆ. ಉದಾ: ಕ್ರೈಸ್ತರು ಪ್ರವಾದಿ ಈಸಾರನ್ನು(ಅ) ಅಲ್ಲಾಹನ ಪುತ್ರನೆಂದು ನಂಬುತ್ತಾರೆ. ಯಹೂದ್ಯರು ಹಝ್ರತ್ ಉಝೈರ್‌ರನ್ನು(ಅ) ದೇವಪುತ್ರನೆನ್ನುತ್ತಾರೆ. ಮಕ್ಕಾದ ಬಹುದೇವಾರಾಧಕರು ಮಲಕ್ ಅಥವಾ ದೇವಚರರನ್ನು ದೇವರ ಮಕ್ಕಳೆಂದು ಕರೆಯುತ್ತಿದ್ದರು. ವಾಸ್ತವದಲ್ಲಿ ಇಂತಹ ನಂಬಿಕೆ ಮತ್ತು ವಾದಗಳ ಹಿಂದೆ ಯಾವುದೇ ವೈಚಾರಿಕ ಅಥವಾ ಐತಿಹಾಸಿಕ ಆಧಾರಗಳಿಲ್ಲ. ಇದು ತರ್ಕಹೀನ ನಂಬಿಕೆಯೆಂದು ಮೇಲ್ನೋಟಕ್ಕೆ ವ್ಯಕ್ತವಾಗುತ್ತದೆ. ದೇವನಿಗೆ ಮಕ್ಕಳಿವೆ ಎಂದು ವಾದಿಸುವುದೆಂದರೆ ದೇವನನ್ನು ಮನುಷ್ಯನ ಸ್ಥಾನಕ್ಕೆ ಎಳೆದು ತರುವುದಾಗಿದೆ.

ವಾಸ್ತವದಲ್ಲಿ ದೇವನು ಮಹೋನ್ನತನಾಗಿದ್ದಾನೆ. ದೇವನಿಗೆ ಪುತ್ರ ಪುತ್ರಿ ಮುಂತಾದವರಿದ್ದ ಎಂಬ ಸಣ್ಣತನದ ಮಾತನ್ನು ತೀರಾ ಸಂಕುಚಿತ ಹಾಗೂ ಕೀಳ್ಮಟ್ಟದ ದೃಷ್ಟಿಕೋನವುಳ್ಳವರು ಮಾ ಹೇಳಬಲ್ಲರು. ಅನ್ಯಥಾ ಇಂತಹ ಆರೋಪವನ್ನು ಅಲ್ಲಾಹನ ಮೇಲೆ ಹೊರಿಸುವುದಾದರ ಹೇಗೆ? ಆದ್ದರಿಂದಲೇ 'ನನಗೆ ಸಂತಾನವಿದೆಯೆನ್ನುವುದು ನನ್ನನ್ನು ದೂಷಿಸಿದಂತೆ' ಎಂ ಅಲ್ಲಾಹನು ಹೇಳಿರುವನು.

ಮರಣಾನಂತರದ ಪುನರುಜ್ಜೀವನದ ನಿರಾಕರಣೆಯು ಇನ್ನೊಂದು ಪಥಭ್ರಷ್ಟತೆಯಾಗಿ ಪುನರುತ್ಥಾನ ದಿನವೊಂದು ಖಂಡಿತ ಬರಲಿದೆ. ಅಂದು ಪ್ರತಿಯೊಬ್ಬ ಮನುಷ್ಯನನ್ನು ಪು ಜೀವಂತಗೊಳಿಸಲಾಗುವುದು. ಪ್ರತಿಯೊಬ್ಬನಿಗೂ ತನ್ನ ಕರ್ಮಗಳಿಗೆ ತಕ್ಕ ಪ್ರತಿಫಲ ಪಡೆಯ ದೇವನ ನ್ಯಾಯಾಲಯದಲ್ಲಿ ಹಾಜರಾಗಿ ವಿಚಾರಣೆ ಎದುರಿಸಬೇಕಾಗುವುದು ಎಂದ ದೇವನು ಕಳುಹಿಸಿದಂತಹ ಎಲ್ಲ ಪ್ರವಾದಿಗಳು ಮತ್ತು ದಿವ್ಯ ಗ್ರಂಥಗಳು ಮನುಷ್ಯನಿ ತಿಳಿಸುತ್ತಲೇ ಬಂದಿವೆ. ಅಲ್ಲದೆ ಅಂತಹ ದಿನವೊಂದು ಇರಲೇ ಬೇಕು ಎಂಬುದು ಬು ಮತ್ತು ನ್ಯಾಯದ ಬೇಡಿಕೆಯೂ ಆಗಿದೆ. ಮನುಷ್ಯನನ್ನು ಈ ರೀತಿ ಪುನಃ ಸೃಷ್ಟಿಸಿ ವಿಚಾರ ಗೊಳಪಡಿಸುವ ಸಂಪೂರ್ಣ ಸಾಮರ್ಥ್ಯ ದೇವನಿಗೆ ಇದೆ ಎಂಬುದು ಕೂಡಾ ವ್ಯಕ್ತ. ಆದ ಈ ವಾಸ್ತವಿಕತೆಯನ್ನು ಅಂಗೀಕರಿಸಿದರೆ, ಲೋಕದಲ್ಲಿ ಅತ್ಯಂತ ಜವಾಬ್ದಾರಿಯುತವಾಗಿ ಬಾ ಬೇಕಾದೀತೆಂದು ಅಂಜುವ ಮನುಷ್ಯನು ಅದನ್ನು ನಿರಾಕರಿಸಿ ಬಿಡುತ್ತಾನೆ. ಮನುಷ್ಯನ ಸತ್ತು ಮಣ್ಣಲ್ಲಿ ಸೇರಿಹೋದ ಬಳಿಕ ಅವನನ್ನು ಪುನಃ ಜೀವಂತಗೊಳಿಸಲು ಹೇಗೆ ಸಾಧ್ಯ ಎಂಬಿತ್ಯಾದಿ ತರ್ಕಗಳನ್ನು ಮಂಡಿಸತೊಡಗುತ್ತಾನೆ. ಮನುಷ್ಯನನ್ನು ಪ್ರಥಮ ಬಾರಿ ಸೃಷ್ಟಿಸಲ ದೇವನು ಸಮರ್ಥನಾಗಿದ್ದಾನೆಂದಾದರೆ ಅವನನ್ನು ದ್ವಿತೀಯ ಬಾರಿ ಸೃಷ್ಟಿಸಲು ದೇವನ ಅಸಮರ್ಥನಾಗುವುದು ಹೇಗೆ? ಎಂದು ಅವರು ಆಲೋಚಿಸುವುದಿಲ್ಲ. ಇದು ದೇವ ಸಾಮರ್ಥ್ಯಗಳ ಕುರಿತು ಇರುವ ಅತ್ಯಂತ ಸಂಕುಚಿತ ಮತ್ತು ತಪ್ಪುಕಲ್ಪನೆಯಾಗಿದೆ ಎಂಬುದ ವ್ಯಕ್ತ. ಇದು ದೇವಗ್ರಂಥಗಳ ಮತ್ತು ದೇವ ಪ್ರವಾದಿಗಳ ನಿರಾಕರಣೆಯೂ ಆಗಿದೆ ಮಾತ್ರವಲ್ಲ, ನಿಜವಾಗಿ ಇದು ದೇವನನ್ನೇ ನಿರಾಕರಿಸುವುದಾಗಿದೆ. ಏಕೆಂದರೆ ಪುನರುತ್ಥಾನ ವಿವರವನ್ನು ಸ್ವತಃ ಅಲ್ಲಾಹನೇ ತನ್ನ ಗ್ರಂಥಗಳ ಹಾಗೂ ಪ್ರವಾದಿಗಳ ಮೂಲಕ ನೀಡಿರುವನ ಮತ್ತು ವಿಶ್ವದಲ್ಲಿ ಅದರತ್ತ ಮಾರ್ಗದರ್ಶನ ಮಾಡುವ ನಿದರ್ಶನಗಳನ್ನು ಇರಿಸಿರುವನು.

ಒಂದು ಪ್ರಾರ್ಥನೆ

عَنِ ابْنِ عَبَّاسٍ (رض) قَالَ كَانَ النَّبِيُّ ﷺ اِذَا تَهَجَّدَ مِنَ اللَّيْلِ قَالَ
اَللّٰهُمَّ رَبَّنَا لَكَ الحَمْدُ اَنْتَ قَيِّمُ السَّمَاوَاتِ وَالأَرْضِ وَلَكَ
الحَمْدُ اَنْتَ رَبُّ السَّمَاوَاتِ وَالأَرْضِ وَمَنْ فِيْهِنَّ وَلَكَ

الحَمْدُ اَنْتَ نُورُ السَّمَاوَاتِ وَالأَرْضِ وَمَنْ فِيْهِنَّ اَنْتَ
الحَقُّ وَقَوْلُكَ الحَقُّ وَوَعْدُكَ الحَقُّ وَلِقَاءُكَ الحَقُّ
والجَنَّةُ حَقٌ وَالنَّارُ حَقٌ وَالسَّاعةُ حَقٌّ اللَّهُمَّ لَكَ اَسْلَمْتُ
وبِكَ آمَنْتُ وَعَلَيْكَ تَوَكَّلْتُ وَاِلَيْكَ خَصَمْتُ وَبِكَ
حاكَمْتُ فَاغْفِرْلِي مَا قَدَّمْتُ وَمَا اَخَّرْتُ وَاَسْرَرْتُ وَاَعْلَنْتُ
وَمَا اَنْتَ اَعْلَمُ بِهِ مِنِّى لا اِلَهَ اِلَّا انْتَ (البخارى كتاب التوحيد

ಪ್ರವಾದಿ(ಸ) ರಾತ್ರಿ ತಹಜ್ಜುದ್ ನಮಾಝ್‌ನ ವೇಳೆ ಹೀಗೆ ಪ್ರಾರ್ಥಿಸುತ್ತಿದ್ದರು:

''ನಮ್ಮ ಒಡೆಯನಾದ ಅಲ್ಲಾಹನೇ! ಎಲ್ಲ ಪ್ರಶಂಸೆ ಮತ್ತು ಕೃತಜ್ಞತೆಗಳು ನಿನಗೆ ಮೀಸಲು. ಆಕಾಶಗಳನ್ನೂ ಭೂಮಿಯನ್ನೂ ಸ್ಥಾಪಿಸಿದವನು ಮತ್ತು ಸ್ಥಾಪಿತವಾಗಿ ಇಡುವವನು ನೀನೇ! ಹೊಗಳಿಕೆಗಳೆಲ್ಲಾ ನಿನಗೆ ಮೀಸಲು. ನೀನು ಆಕಾಶಗಳ, ಭೂಮಿಯ ಮತ್ತು ಅವುಗಳ ನಡುವೆ ಇರುವ ಎಲ್ಲ ಸೃಷ್ಟಿಗಳ ಒಡೆಯನು. ಪ್ರಶಂಸೆಗಳೆಲ್ಲಾ ನಿನಗೇ ಮೀಸಲು. ನೀನು ಆಕಾಶಗಳ, ಭೂಮಿಯ ಮತ್ತು ಅವುಗಳ ನಡುವೆ ಇರುವ ಎಲ್ಲ ಅಸ್ತಿತ್ವಗಳ ಪ್ರಕಾಶವಾಗಿರುವೆ. ನಿನ್ನ ಅಸ್ತಿತ್ವ ಸತ್ಯವಾಗಿದೆ. ನಿನ್ನ ವಚನ ಸತ್ಯವಾಗಿದೆ. ನಿನ್ನ ವಾಗ್ದಾನ ಸತ್ಯವಾಗಿದೆ. ನಿನ್ನೆದುರು ಹಾಜರಾಗಲಿಕ್ಕಿರುವುದು ಸತ್ಯವಾಗಿದೆ. ಸ್ವರ್ಗವೂ ಸತ್ಯವಾಗಿದೆ. ನರಕವೂ ಸತ್ಯವಾಗಿದೆ. ಪುನರುತ್ಥಾನದ ಘಳಿಗೆಯೂ ಸತ್ಯವಾಗಿದೆ. ಅಲ್ಲಾಹನೇ! ನಾನು ನನ್ನನ್ನು ನಿನ್ನ ವಶಕ್ಕೆ ಒಪ್ಪಿಸಿದೆ. ನಿನ್ನ ಮೇಲೆ ವಿಶ್ವಾಸವಿರಿಸಿದೆ. ನಿನ್ನ ಮೇಲೆಯೇ ಭರವಸೆಯಿರಿಸಿದೆ. ನನ್ನ ದೂರುಗಳನ್ನು ನಿನ್ನ ಮುಂದೆಯೇ ಸಮರ್ಪಿಸಿದೆ. ನಿನ್ನನ್ನೇ ತೀರ್ಪುಗಾರನಾಗಿ ಮಾಡಿದೆ. ಆದ್ದರಿಂದ ನನ್ನ ಹಿಂದಿನ ನನ್ನ ಮುಂದಿನ, ಗುಪ್ತ ಮತ್ತು ಬಹಿರಂಗ ಹಾಗೂ ನನಗಿಂತ ಹೆಚ್ಚು ನಿನಗೆ ತಿಳಿದಿರುವಂತಹ ನನ್ನ ಎಲ್ಲ ಪಾಪಗಳನ್ನು ಕ್ಷಮಿಸಿಬಿಡು. ನಿನ್ನ ಹೊರತು ಬೇರಾರೂ ಆರಾಧನೆಗೆ ಅರ್ಹರಿಲ್ಲ.

[ಹಝ್ರತ್ ಇಬ್ನು ಅಬ್ಬಾಸ್(ರ) -ಬುಖಾರಿ]

ಇದು ಪ್ರವಾದಿವರ್ಯರು(ಸ) ಮಧ್ಯ ರಾತ್ರಿಯ ಬಳಿಕ ಅಲ್ಲಾಹನೆದುರು ಮಾಡುತ್ತಿದ್ದ ಪ್ರಾರ್ಥನೆ. ಇದರಲ್ಲಿ ಅಲ್ಲಾಹನ ಏಕತ್ವದ ಘೋಷಣೆ ಇದೆ, ತನ್ನ ದಾಸ್ಯದ ಪ್ರಕಟಣೆ ಇದೆ, ದೇವನಿಗೆ ಪ್ರಶಂಸೆ ಇದೆ, ದೇವನಿಗೆ ಕೃತಜ್ಞತೆ ಇದೆ, ದೇವಗುಣಗಳ ವಿವರಣೆ ಇದೆ, ದೇವನ ಮೇಲಿನ ನಂಬಿಕೆ, ವಿಶ್ವಾಸ ಮತ್ತು ಭರವಸೆಯ ಅಭಿವ್ಯಕ್ತಿ ಇದೆ. ಕೊನೆಯಲ್ಲಿ ಕ್ಷಮಾ ಯಾಚನೆಯೂ ಇದೆ. ಒಟ್ಟಿನಲ್ಲಿ ಇಲ್ಲಿ ಪ್ರಾರ್ಥನೆಯ ಹೆಸರಲ್ಲಿ, ಅಲ್ಲಾಹನೊಂದಿಗೆ ಸರಿಯಾದ ಬುನಾದಿಯಲ್ಲಿ ಸಂಬಂಧ ಸ್ಥಾಪಿಸಲು ಬೇಕಾದ ಎಲ್ಲ ಅಂಶಗಳೂ ಇವೆ.

ಪ್ರವಾದಿತ್ವ

ವಿಶ್ವನಾಯಕ

الَ جابِرُ بْنِ عَبْدِ اللهِ (رض) قَالَ رَسُولُ اللهِ ﷺ : كَانَ
لنَّبِيُّ يُبْعَثُ اِلَى قَوْمِهِ خَاصَّةً وَبُعِثْتُ اِلَى النَّاسِ كَافَّةً
(البخاری – کتاب الصلوة)

ಪ್ರವಾದಿ(ಸ) ಹೀಗೆ ಹೇಳಿರುವರು:

''ಮುಂಚೆ ಪ್ರವಾದಿಗಳು ವಿಶೇಷವಾಗಿ ತಮ್ಮ ತಮ್ಮ ಜನಾಂಗಕ್ಕಾಗಿ ಕಳುಹಿಸಲ್ಪಡುತ್ತಿದ್ದರು ಆದರೆ ನಾನು ಎಲ್ಲ ಮಾನವರಿಗಾಗಿ ಕಳುಹಿಸಲ್ಪಟ್ಟಿರುವೆನು.''

[ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ(ರ) -ಬುಖಾ

ಪ್ರವಾದಿ ಮುಹಮ್ಮದ್‌ರಿಗಿಂತ(ಸ) ಮುಂಚೆಯೂ ಬೇರೆ ಬೇರೆ ಕಾಲ ಮತ ಬೇರೆ ಬೇರೆ ಪ್ರದೇಶಗಳಲ್ಲಿ ಅಲ್ಲಾಹನ ಪ್ರವಾದಿಗಳು ಬಂದಿರುವರು. ತನ್ನ ಧರ್ಮವನ ಜನರಿಗೆ ತಲಪಿಸುವ ಉದ್ದೇಶದಿಂದ ಅಲ್ಲಾಹನು ಪ್ರತಿಯೊಂದು ಜನಾಂಗದ ಕಡೆಗ ಯಾರಾದರೊಬ್ಬ ಪ್ರವಾದಿಯನ್ನು ಕಳುಹಿಸಿರುವನು. ಪ್ರವಾದಿ ಮುಹಮ್ಮದ್‌ರಿಗಿಂತ(ಸ ಮುಂಚೆ ಅಂತಾರಾಷ್ಟ್ರೀಯ ಸಂಬಂಧಗಳು ಹೆಚ್ಚು ವ್ಯಾಪಕವಾಗಿರಲಿಲ್ಲ. ಒಂದು ವಿಶ್ವಮಟ್ಟ ಪ್ರವಾದಿತ್ವ ಮತ್ತು ಸಂಪೂರ್ಣ ಜೀವನ ವ್ಯವಸ್ಥೆಗೆ ಪೂರಕವಾದಂತಹ ವಾತಾವರಣವಾಗಲಿ ಸವಲತ್ತುಗಳಾಗಲೀ ಲಭ್ಯವಿರಲಿಲ್ಲ. ನಾಗರಿಕತೆ ಅಷ್ಟು ಪ್ರಗತಿ ಸಾಧಿಸಿರಲಿಲ್ಲ. ಆದ್ದರಿಂದ ಹೆಚ್ಚಿನ ಪ್ರವಾದಿಗಳ ಪಾಲಿಗೆ ಅವರ ಸ್ವಂತ ಜನಾಂಗದವರೇ ಅಭಿಸಂಬೋಧಿತರಾಗಿದ್ದರು. ಅವ ಸಂದೇಶವು ಮೂಲತಃ ಎಲ್ಲ ಮಾನವರಿಗೆ ಅನ್ವಯಿಸುವಂತಹ ಸಾರ್ವತ್ರಿಕ ಸತ್ಯಸಂದೇಶವೆ ಆಗಿತ್ತೆಂಬುದು ಬೇರೆ ವಿಷಯ. ಎಲ್ಲ ಪ್ರವಾದಿಗಳು ಇಸ್ಲಾಮ್ ಎಂಬ, ಸಕಲ ಮಾನವ ಮಾರ್ಗದರ್ಶನಕ್ಕಿರುವ ಒಂದೇ ಸತ್ಯದ ಪ್ರತಿಪಾದಕರಾಗಿದ್ದರು. ಆದರೂ ಅಲ್ಲಾಹನು ಕಾ ಮತ್ತು ಸನ್ನಿವೇಶಗಳ ವ್ಯತ್ಯಾಸವನ್ನು ಪರಿಗಣಿಸಿ ಪ್ರತಿಯೊಂದು ಜನಾಂಗಕ್ಕೆ ಭಿನ್ನವಾದ ಶರೀಅತ (ಜೀವನ ಸಂಹಿತೆ)ಗಳನ್ನು ನಿಶ್ಚಯಿಸಿದ್ದನು. ಆದರೆ ಪ್ರವಾದಿ ಮುಹಮ್ಮದ್‌ರ(ಸ) ಆಗಮನ ವೇಳೆ ಈ ಜಗತ್ತು ಒಂದು ವಿಶ್ವಮಟ್ಟದ ಪ್ರವಾದಿತ್ವ ಮತ್ತು ಸರ್ವಾನ್ವಯವಾದ ಒಂದು ಸಂಪೂರ್ಣ ಶರೀಅತ್‌ನ ಅಗತ್ಯಗಳನ್ನು ಈಡೇರಿಸುವಷ್ಟು ವಿಕಾಸ ಹೊಂದಿತ್ತು. ನಾಗರಿಕವಾಗಿ ಜಗತ್ತು ಅಷ ಪ್ರಗತಿ ಸಾಧಿಸಿ ಪಕ್ವವಾಗಿತ್ತು. ಆದ್ದರಿಂದಲೇ ಅಲ್ಲಾಹನು ಪ್ರವಾದಿ ಮುಹಮ್ಮದ್‌ರನ್ನು(ಸ) ಕಾಲ ಪ್ರದೇಶ ಎಂಬ ವ್ಯತ್ಯಾಸವಿಲ್ಲದೆ ಅಂತಿಮ ದಿನದ ವರೆಗಿನ ಲೋಕದ ಎಲ್ಲ ಮಾನವರ ಪಾಲಿ

ಸಂದೇಶವಾಹಕರಾಗಿ ನೇಮಿಸಿದನು. ಹೀಗೆ ಕೇವಲ ಅರಬರು ಮಾತ್ರವಲ್ಲ, ಕೈಸರ್, ್ರಗಳನ್ನು ಅವರ ಸಂದೇಶದ ಅಭಿಸಂಬೋಧಿತರೆಂದು ಪರಿಗಣಿಸಲಾಯಿತು. ಬೇರೆ ಬೇರೆ ಶ ಮತ್ತು ಜನಾಂಗಗಳ ಜನರು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದರು. ಇಸ್ಲಾಮ್, ಜಗತ್ತಿನ ೂಲೆ ಮೂಲೆಗಳಿಗೆ ಹಬ್ಬಿತು.

ಈ ಹಿನ್ನೆಲೆಯಲ್ಲಿ ಪ್ರವಾದಿ ಮುಹಮ್ಮದ್‌ರನ್ನು(ಸ) ಯಾರಾದರೂ ಕೇವಲ 'ಮುಸ್ಲಿಮರ ವಾದಿ' ಎಂದು ಪರಿಗಣಿಸಿದ್ದರೆ ಅದು ತಪ್ಪು. ಅವರು ಯಾವುದಾದರೂ ಒಂದು ಮುದಾಯಕ್ಕೆ ಮಾತ್ರ ದಾರಿ ತೋರಲು ಬಂದವರಲ್ಲ. ಅಲ್ಲಾಹನು ಅವರನ್ನು ಜಗತ್ತಿನ ಎಲ್ಲ ನಾಂಗಗಳ ಮಾರ್ಗದರ್ಶನಕ್ಕಾಗಿ ಕಳುಹಿಸಿರುವನು. ಅವರ ಮಾರ್ಗದರ್ಶನವು ಅಂತ್ಯ ಲದವರೆಗೂ ಪ್ರಸ್ತುತವಾಗಿರುವುದು ಮತ್ತು ಅವರು ಪರಿಚಯಿಸಿದ ಇಸ್ಲಾಮ್ ಧರ್ಮವು ಾವುದೇ ಜನಾಂಗ ಮತ್ತು ಯಾವುದೇ ದೇಶದ ವ್ಯತ್ಯಾಸವಿಲ್ಲದೆ ಜಗತ್ತಿನ ಎಲ್ಲ ಮಾನವರ ಲಿಗೆ ಸದಾ ಉಪಯುಕ್ತವಾಗಿದೆ.

ತಮ್ಮ ಸಂಕುಚಿತ ದೃಷ್ಟಿಯ ಕಾರಣ ಪ್ರವಾದಿ ಮುಹಮ್ಮದ್‌ರ(ಸ) ಪ್ರವಾದಿತ್ವ ಮತ್ತು ತೃತ್ವವನ್ನು ತಿರಸ್ಕರಿಸುವವರು ಸ್ವತಃ ತಮ್ಮ ಹಿತವನ್ನು ತಿರಸ್ಕರಿಸುವವರಾಗುತ್ತಾರೆ. ಮಾತ್ರವಲ್ಲ, ುಗಾಗಿ ಬಂದ ದೇವನ ಪ್ರತಿನಿಧಿಯನ್ನು ತಿರಸ್ಕರಿಸುವ ಅಪರಾಧಿಗಳೂ ಆಗುತ್ತಾರೆ.

ವಿಶ್ವ ವಿಮೋಚಕ

عَنْ جَابِرٍ (رض) قَالَ قَالَ رَسُولُ اللّٰهِ ﷺ مَثَلِي وَمَثَلُكُمْ كَمَثَلِ رَجُلٍ اَوْقَدَ نَارًا فَجَعَلَ الجَنادِبُ وَالْفِرَاشُ يَقَعْنَ فِيْهِ وَهُوَ يَذُبُّهُنَّ عَنْهَا وَاَنَا آخِذٌ بِحُجَزِكُمْ عَنِ النَّارِ وَاَنْتُمْ تَفَلَّتُونَ مِنْ يَدِىْ (مسلم-كتاب الفضائل)

ಪ್ರವಾದಿ(ಸ) ಹೀಗೆ ಹೇಳಿರುವರು:

''ನನ್ನ ಮತ್ತು ನಿಮ್ಮ ಉದಾಹರಣೆ ಹೇಗಿದೆಯೆಂದರೆ, ಒಬ್ಬ ವ್ಯಕ್ತಿ ಬೆಂಕಿ ಹೊತ್ತಿಸಿದಾಗ ಂಗಗಳು ಮತ್ತು ಹಾತೆಗಳು ಬಂದು ಅದರಲ್ಲಿ ಬೀಳತೊಡಗುತ್ತವೆ. ಅವನು ಅವುಗಳನ್ನು ರ ಅಟ್ಟುತ್ತಿದ್ದಾನೆ. ನಾನು ಕೂಡಾ ನಿಮ್ಮ ಸೊಂಟ ಹಿಡಿದು ನಿಮ್ಮನ್ನು(ನರಕದ) ಅಗ್ನಿಯಿಂದ ರ ಸರಿಸುತ್ತಿದ್ದೇನೆ. ನೀವಾದರೋ ನನ್ನ ಕೈಯಿಂದ ತಪ್ಪಿಸಿಕೊಂಡು ಹೋಗುತ್ತಿದ್ದೀರಿ.''

[ಹಝ್ರತ್ ಜಾಬಿರ್(ರ) -ಮುಸ್ಲಿಮ್]

ಪ್ರವಾದಿ ಮುಹಮ್ಮದ್‌ರು(ಸ) ಅಲ್ಲಾಹನ ವತಿಯಿಂದ ಜನರಿಗೆ ಸನ್ಮಾರ್ಗವನ್ನು ೕರಿಸಲು ನಿಯುಕ್ತರಾಗಿದ್ದರು. ಮನುಷ್ಯನನ್ನು ನರಕಾಗ್ನಿಯಿಂದ ರಕ್ಷಿಸಬೇಕೆಂಬುದೇ ಅವರ ೋಧನೆಗಳ ಹಿಂದಿದ್ದ ಉದ್ದೇಶವಾಗಿತ್ತು. ಆದರೆ ಮನುಷ್ಯನು ಮಾತ್ರ ತನ್ನ ಸ್ವೇಚ್ಛೆಗಳಿಗೆ

ಮರುಳಾಗಿ ತನಗೊದಗಲಿರುವ ಗತಿಯನ್ನು ಮರೆತು, ಪಾಪ ಮತ್ತು ದುಷ್ಕೃತ್ಯಗಳ ಬಿದ್ದುಕೊಂಡಿರ ಬಯಸುತ್ತಾನೆ. ಅವರ ಅವಸ್ಥೆಯು ಬೆಂಕಿಯು ತಮ್ಮನ್ನು ಸುಟ್ಟು ಹಾಕ ಎಂಬುದನ್ನರಿಯದೆ ಕೇವಲ ಬೆಂಕಿಯ ಚಂದದಿಂದ ಆಕರ್ಷಿತರಾಗಿ ಬೆಂಕಿಗೆ ಧುಮುಕ ಪತಂಗಹಾತೆಗಳಂತಿದೆ. ಮನುಷ್ಯನು ನರಕದ ಘೋರ ಯಾತನೆಯಿಂದ ಸುರಕ್ಷಿತನಾಗಬೇಕಿ ಅದಕ್ಕಿರುವುದು ಒಂದೇ ಮಾರ್ಗ. ಅವನು ತನ್ನ ಸ್ವೇಚ್ಛೆಗಳ ಅನುಸರಣೆ ಬಿಟ್ಟು ಪ್ರವ ಮುಹಮ್ಮದ್‌ರು(ಸ) ತೋರಿಸಿರುವ ಸನ್ಮಾರ್ಗವನ್ನು ಅನುಸರಿಸಬೇಕು.

ಪ್ರವಾದಿ ಮುಹಮ್ಮದ್‌ರು(ಸ) ಯಾವುದೇ ಪ್ರತ್ಯೇಕ ಜನಾಂಗಕ್ಕಲ್ಲ; ಸಂಪೂರ್ಣ ವಿ ಮಾನವರಿಗೆ ವಿಮೋಚಕರಾಗಿ ಆಗಮಿಸಿದ್ದರೆಂಬುದನ್ನೂ ಅವರ ಶಿಕ್ಷಣಗಳು ಲೋಕಾಂ ವರೆಗೆ ಇರುವ ಎಲ್ಲ ಮನುಷ್ಯರಿಗೆ ಮತ್ತು ಎಲ್ಲಾ ಜನಾಂಗಗಳಿಗೆ ಆಗಿದೆ ಎಂಬುದನ್ನೂ ಜಗ ಅರಿತಿದ್ದರೆ!

نْ اَبِی مُوسَی (رض) عَنِ النبی ﷺ قَالَ اِنَّ مَثَلِیْ وَمَثَل مَا بَعَثَنِی
ہُ عَزَّوَجَلَّ بِهِ كَمَثَلِ رَجُلٍ اَتَی قَوْمَهُ فَقَالَ یَاقَوْمِ اِنِّی رَأَیْتُ
جَیْشَ بِعَیْنَیَّ وَاِنِّی اَنَا النَّذِیْرُ الْعُرْیَانُ فَالنَّجَاءَ فَطَاعَهُ
ائِفَةٌ مِّنْ قَوْمِهِ فَاَدْلَجُوْا فَانْطَلَقُوْا عَلَی مُهْلَتِهِمْ
كَذَّبَتْ طَائِفَةٌ مِّنْهُمْ فَاَصْبَحُوْا مَكَانَهُمْ فَصَبَّحَهُمُ الْجَیْشُ
هْلَكَهُمْ وَاجْتَاحَهُمْ فَذَالِكَ مَثَلُ مَنْ اَطَاعَنِیْ وَاتَّبَعَ مَا جِئْتُ
وَمَثَلُ مَنْ عَصَانِیْ وَكَذَّبَ مَا جِئْتُ بِهِ مِنَ الْحَقِّ

(مسلم-كتاب الفضائل)

ಪ್ರವಾದಿ(ಸ) ಹೀಗೆ ಹೇಳಿರುವರು:

''ಯಾವ ಸನ್ಮಾರ್ಗದೊಂದಿಗೆ ನನ್ನನ್ನು ಕಳುಹಿಸಲಾಗಿದೆಯೋ ಅದರ ಉದಾಹರ ಹೀಗಿದೆ: ಒಬ್ಬ ವ್ಯಕ್ತಿ ತನ್ನ ಜನಾಂಗದ ಬಳಿ ಬಂದು 'ಜನರೇ,(ನಿಮ್ಮ ಮೇಲೆ ಆಕ್ರಮ ಮಾಡಲು) ಒಂದು ಸೈನ್ಯವು ಬರುತ್ತಿರುವುದನ್ನು ನಾನು ಕಣ್ಣಾರೆ ಕಾಣುತ್ತಿರುವೆನು. ನಾನು ನಿಜ ನಿಮ್ಮ ಪಾಲಿಗೆ ಪ್ರತ್ಯಕ್ಷ ಎಚ್ಚರಿಕೆ ನೀಡುವವನಾಗಿರುವೆನು. ಆದ್ದರಿಂದ ರಕ್ಷಣೆಯ ಚಿಂತೆ ಮಾಡಿ ಎಂದು ಹೇಳಿದನು. ಜನಾಂಗದ ಒಂದು ಗುಂಪು ಅವನ ಮಾತನ್ನು ನಂಬಿತು. ಇದ್ದ ಅವಕಾಶವ ಅಮೂಲ್ಯವೆಂದು ಉಪಯೋಗಿಸಿಕೊಂಡು ಇರುಳಿನ ಅಂಧಕಾರದಲ್ಲೇ ಅಲ್ಲಿಂದ ಹೊರ

ಟ್ಟಿತು. ಇನ್ನೊಂದು ಗುಂಪು ಅವನ ಮಾತನ್ನು ಧಿಕ್ಕರಿಸಿತು ಮತ್ತು ಅಲ್ಲೇ ಇದ್ದು ಬಿಟ್ಟಿತು. ಗಾಗುವಷ್ಟರಲ್ಲೇ ಸೈನ್ಯವು ಅವರ ಮೇಲೆ ಆಕ್ರಮಣ ಮಾಡಿ ಅವರನ್ನು ನಾಶ ಮಾಡಿ ಬಿಟ್ಟಿತು. ನ್ನ ಮಾತನ್ನು ಒಪ್ಪಿ ನಾನು ತಂದಿರುವ ಸನ್ಮಾರ್ಗವನ್ನು ಅನುಸರಿಸುವವರ ಉದಾಹರಣೆಯು ಪೈಕಿ ಮೊದಲನೆಯ ಗುಂಪಿನಂತಿದೆ. ಇನ್ನು ನನ್ನ ಮಾತನ್ನು ಒಪ್ಪದೆ, ನಾನು ತಂದಿರುವ ನ್ಮಾರ್ಗವನ್ನು ತಿರಸ್ಕರಿಸಿದವರ ಉದಾಹರಣೆಯು ಎರಡನೆಯ ಗುಂಪಿನಂತಿದೆ.''

[ಹಝ್ರತ್ ಅಬೂ ಮೂಸಾ(ರ) -ಮುಸ್ಲಿಮ್]

ಅಜ್ಞಾನ ಕಾಲದಲ್ಲಿ ಅರಬರಲ್ಲಿ ಒಂದು ಸಂಪ್ರದಾಯವಿತ್ತು. ಒಂದು ಜನಾಂಗದ ದಾರನಿಗೆ ಆ ಜನಾಂಗದ ಮೇಲೆ ಯಾವುದಾದರೂ ಸೈನ್ಯದ ಆಕ್ರಮಣ ನಡೆಯಲಿದೆಯೆಂದು ದ್ದಿ ಸಿಕ್ಕಿದರೆ ಅವನು ಈ ಸುದ್ದಿಯನ್ನು ತನ್ನ ಜನಾಂಗದವರಿಗೆ ತಿಳಿಸಲಿಕ್ಕಾಗಿ, ಊರೊಳಗೆ ವೇಶಿಸುವ ಮುನ್ನ ದೂರದಿಂದಲೇ ತನ್ನ ಬಟ್ಟೆಬರೆಗಳನ್ನೆಲ್ಲಾ ಕಳಚಿ, ಅಪಾಯದ ಮುನ್ಸೂಚನೆ ಡುತ್ತಿದ್ದನು. ಆಗ ಜನರು ಎಚ್ಚರಗೊಂಡು ತಮ್ಮ ರಕ್ಷಣೆಗೆ ಕ್ರಮ ಕೈಗೊಳ್ಳುತ್ತಿದ್ದರು. ಈ ರೀತಿ ಚ್ಚರಿಕೆ ಕೊಡುವ ವ್ಯಕ್ತಿಯನ್ನು ''ನದಿರುಲ್ ಉರ್‌ಯಾನ್'' ಅರ್ಥಾತ್ ಎಚ್ಚರಿಕೆ ಕೊಡುವ ನಗ್ನ ಕ್ತಿ ಎಂದು ಕರೆಯಲಾಗುತ್ತಿತ್ತು. ಇದರ ಅರ್ಥ ಪ್ರತ್ಯಕ್ಷ ಎಚ್ಚರಿಕೆ ನೀಡುವವನು ಎಂದಾಗಿದೆ.

ಇಲ್ಲಿ ಈ ಉದಾಹರಣೆಯ ಮೂಲಕ ತಿಳಿಸಬಯಸಿರುವುದೇನೆಂದರೆ, ಪ್ರವಾದಿ ಮುಹಮ್ಮದ್‌ರು(ಸ) ಮಾನವಕುಲಕ್ಕೆ ಮುಂದೆ ಬರಲಿರುವಂತಹ ಪುನರುತ್ಥಾನ ಹಾಗೂ ಚಾರಣೆಯ ದಿನದ ಬಗ್ಗೆ ಎಚ್ಚರಿಕೆ ನೀಡಲಿಕ್ಕಾಗಿ ಆಗಮಿಸಿದ್ದಾರೆ. ಅವರ ಸಂದೇಶವು ೀಕದ ಜನರನ್ನು ಅವರಿಗೆದುರಾಗಲಿರುವ ನರಕಾಗ್ನಿಯಿಂದ ರಕ್ಷಿಸಿ ಶಾಶ್ವತ ವಿಜಯದ ದಿಯಲ್ಲಿ ನಡೆಸಲಿಕ್ಕಾಗಿ ಬಂದಿರುತ್ತದೆ. ಆದ್ದರಿಂದ ಅವರು ಲೋಕದ ಜನರ ಪಾಲಿಗೆ ಕರೂ ವಿಮೋಚಕರೂ ಆಗಿದ್ದಾರೆ. ಆದರೆ ಜನರು ಮಾತ್ರ ಅವರ ಈ ಸ್ವರೂಪವನ್ನು ಅರಿತಿಲ್ಲ. ವರು ಎಷ್ಟು ಎಚ್ಚರಿಸಿದರೂ ಜನರು ಮಾತ್ರ ತಮ್ಮ ಐಶಾರಾಮಗಳಲ್ಲೇ ಮಗ್ನರಾಗಿದ್ದಾರೆ. ನರುತ್ಥಾನ ದಿನವೊಂದು ಬರಲಿಕ್ಕಿದೆ ಎಂಬ ಪ್ರಜ್ಞೆಯಾಗಲೀ, ದೇವನ ಮುಂದೆ ವಿಚಾರಣೆ ುರಿಸಲಿಕ್ಕಿದೆಯೆಂಬ ಭಯವಾಗಲೀ ಅವರಿಗಿಲ್ಲ.

ಮುಕ್ತಿ ಮಾರ್ಗ

عَنْ اَبِى هريرة (رض) عن رَسُول اللّٰهِ ﷺ اَنَّهُ قَالَ : وَالَّذِ
نَفْسُ مُحَمَّدٍ بِيَدِهِ لاَ يَسْمَعُ بِى اَحَدٌ مِنْ هٰذِهِ الْاُمَّةِ يَهُوْدِ
وَلاَ نَصْرَانِيٌّ ثُمَّ يَمُوْتُ وَلَمْ يُؤْمِنْ بِالَّذِىْ اُرْسِلتُ بِهِ اِلَّا كَا
مِنْ اَصْحَابِ النَّارِ (مسلم-كتاب الايمان)

''ಯಾರ ಕೈಯಲ್ಲಿ ಮುಹಮ್ಮದ್‌ನ ಜೀವವಿದೆಯೋ ಅವನಾಣೆ! ಈ ಯುಗದ ಜ
ಪೈಕಿ ಯಾವುದೇ ವ್ಯಕ್ತಿ ಅವನು ಯಹೂದ್ಯನಿರಲಿ, ಕ್ರೈಸ್ತನಿರಲಿ, ನನ್ನ ಕುರಿತು ಕೇಳಿದ ಬಳಿಕ
ನಾನು ಯಾವುದರೊಂದಿಗೆ (ಯಾವ ಧರ್ಮದೊಂದಿಗೆ) ಕಳುಹಿಸಲ್ಪಟ್ಟಿರುವೆನೋ ಅದರ ಮೇ
ವಿಶ್ವಾಸವಿರಿಸದೆ ಮರಣ ಹೊಂದಿದರೆ ಅವನು ಖಂಡಿತ ನರಕವಾಸಿಯಾಗುವನು.''

[ಹಝ್ರತ್ ಅಬೂ ಹುರೈರಾ(ರ) -ಮುಸ್ಲಿಮ

ಇಲ್ಲಿ ಈ ಯುಗವೆಂದರೆ ಪ್ರವಾದಿ ಮುಹಮ್ಮದ್‌ರ(ಸ) ಆಗಮನದಿಂದ ಪುನರುತ
ದಿನದ ವರೆಗಿನ ಕಾಲಾವಧಿಯಾಗಿದೆ. ಏಕೆಂದರೆ ಪ್ರವಾದಿವರ್ಯರು(ಸ) ಅ
ಪ್ರವಾದಿಯಾಗಿದ್ದು, ಅಂತ್ಯಕಾಲದ ವರೆಗೂ ಲೋಕದ ಪಾಲಿಗೆ ಅವರೇ ಸಂದೇಶವಾಹಕರು
ತಾವು ಹೇಳುತ್ತಿರುವ ಮಾತು ಎಷ್ಟು ದಿಟ ಹಾಗೂ ಸಂದೇಹಾತೀತವಾದುದು ಎಂಬುದ
ಮನವರಿಕೆ ಮಾಡಿಸಲಿಕ್ಕಾಗಿ ಪ್ರವಾದಿ(ಸ) ಮೊದಲು ಅಲ್ಲಾಹನ ಆಣೆ ಹಾಕಿ ಅನಂತರ ವಿಷ
ತಿಳಿಸಿರುವರು.

ಈ ಮಾತಿನ ತಾತ್ಪರ್ಯವೇನೆಂದರೆ, ಪ್ರವಾದಿವರ್ಯರ(ಸ) ಆಗಮನ ಮತ್ತು ಅ
ಸಂದೇಶದ ಸುದ್ದಿ ಯಾರಿಗೆಲ್ಲಾ ತಲುಪುವುದೋ ಅವರೆಲ್ಲರ ಪಾಲಿಗೆ, ಪ್ರವಾದಿವರ್ಯರ(
ಮೇಲೆ ವಿಶ್ವಾಸವಿರಿಸಿ ಅವರು ತಂದಿರುವ ಧರ್ಮ ಮತ್ತು ಜೀವನ ಮಾರ್ಗವನ್ನು ಅಂಗೀಕರ
ಬೇಕಾದುದು ಕಡ್ಡಾಯವಾಗಿದೆ. ಯಾವುದೇ ವ್ಯಕ್ತಿ, ಯಾವುದೇ ಜನಾಂಗ ಮಾತ್ರವಲ್ಲ,
ಹಿಂದಿನ ಗ್ರಂಥದವರು (ಕ್ರೈಸ್ತರು, ಯಹೂದಿಗಳು) ಕೂಡಾ ಈ ಕರ್ತವ್ಯದಿಂದ ಮುಕ್ತರಲ್ಲ.

ಪ್ರವಾದಿವರ್ಯರ(ಸ) ಸಂದೇಶ ತಲುಪಿದ ಬಳಿಕವೂ ಅವರ ಮೇಲೆ ಹಾಗೂ ಅವ
ತಂದಿರುವ ಸತ್ಯಧರ್ಮದ ಮೇಲೆ ವಿಶ್ವಾಸವಿರಿಸದೆ ನಿರಾಕರಿಸುವವರು ಖಂಡಿತ ನರಕವಾಸಿಗಳ

ಪ್ರವಾದಿಯ ಅನುಸರಣೆ

ـن اَبِی هریرة (رض) اَنَّ رَسُول اللّٰهِ ﷺ قَالَ : مَنْ اَطَاعَنِیْ فَقَدْ
طَاعَ اللّٰهَ وَمَنْ عَصَانِی فَقَدْ عَصَی اللّٰهَ
(بخاری-کتاب الاحکام)

ಪ್ರವಾದಿ(ಸ) ಹೀಗೆ ಹೇಳಿರುವರು:

''ನನ್ನ ಅನುಸರಣೆ ಮಾಡಿದವನು ವಾಸ್ತವದಲ್ಲಿ ಅಲ್ಲಾಹನ ಅನುಸರಣೆ ಮಾಡಿದನ
ನನ್ನ ಆಜ್ಞೋಲ್ಲಂಘನೆ ಮಾಡಿದವನು ವಾಸ್ತವದಲ್ಲಿ ಅಲ್ಲಾಹನ ಆಜ್ಞೋಲ್ಲಂಘನೆ ಮಾಡಿದನು.

[ಹಝ್ರತ್ ಅಬೂ ಹುರೈರಾ(ರ) -ಬುಖಾ

ಒಬ್ಬ ವ್ಯಕ್ತಿಯನ್ನು ರಸೂಲ್ ಅಥವಾ ಅಲ್ಲಾಹನ ಸಂದೇಶವಾಹಕನೆಂದು ಅಂಗೀಕರಿ
ವುದೆಂದರೆ, ಅಲ್ಲಾಹನು ಆ ವ್ಯಕ್ತಿಯನ್ನು ಮಾರ್ಗದರ್ಶಕ ಸ್ಥಾನದಲ್ಲಿ ಕೂರಿಸಿದ್ದಾನೆ ಎಂದ

ಗೀಕರಿಸುವುದೆಂದೇ ಅರ್ಥ. ಅಲ್ಲಾಹನ ಸಂದೇಶವನ್ನು ಜನರಿಗೆ ತಲುಪಿಸುವುದು ಮತ್ತು ನ ಧರ್ಮದ ನೀತಿ ನಿಯಮಗಳನ್ನು ಜನರಿಗೆ ವಿವರಿಸಿ ಕೊಡುವುದು ಒಬ್ಬ ಪ್ರವಾದಿಯ ಲ ಕರ್ತವ್ಯ. ಅತ್ತ ಪ್ರಶ್ನಾತೀತವಾಗಿ ಪ್ರವಾದಿಯನ್ನು ಅನುಸರಿಸಬೇಕಾದುದು ಜನರ ರ್ವ್ಯ. ಪ್ರವಾದಿಯನ್ನು ಅನುಸರಿಸುವುದು ಅಲ್ಲಾಹನನ್ನು ಅನುಸರಿಸುವುದಕ್ಕೆ ಸಮಾನವಾಗಿದೆ. ಂದರೆ ಪ್ರವಾದಿಯು ತನ್ನಿಚ್ಛೆಯಿಂದ ಯಾವುದೇ ಆದೇಶವನ್ನು ನೀಡುವುದಿಲ್ಲ. ತನಗೆ ವನಿಂದ ಸಿಕ್ಕಿದ ಮಾರ್ಗದರ್ಶನದ ಪ್ರಕಾರ ಅಗತ್ಯವಿರುವ ಆದೇಶವನ್ನು ಮಾತ್ರ ಅವರು ಡುತ್ತಾರೆ. ಹೀಗೆ ಪ್ರವಾದಿಯ ಅನುಸರಣೆ ಅಲ್ಲಾಹನ ಅನುಸರಣೆಯಾಗಿರುವಂತೆಯೇ ವಾದಿಯ ಆಜ್ಞೋಲ್ಲಂಘನೆಯು ಅಲ್ಲಾಹನ ಆಜ್ಞೋಲ್ಲಂಘನೆಗೆ ಸಮಾನವಾಗಿದೆ.

ಪ್ರವಾದಿವರ್ಯರ(ಸ) ವಿಶೇಷತೆಗಳು

عَنْ اَبِی هریرة (رض) اَنَّ رَسُولَ اللّٰهِ ﷺ قَالَ : فُضِّلْتُ عَلَى الْأَنْبِيَاءِ بِسِتٍّ - اُعْطِيْتُ جَوَامِعَ الْكَلِمِ وَنُصِرْتُ بِالرُّعْبِ وَاُحِلَّتْ لِیَ الغَنَائِمُ , وَجُعِلَتْ لِیَ الْأَرْضُ طَهُورًا وَمَسْجِدًا , وَاُرْسِلْتُ اِلَی الْخَلْقِ كَافَّةً وَ خُتِمَ بِیَ النَّبِيُّونَ

مسلم-كتاب المساجد)

ಪ್ರವಾದಿವರ್ಯರು(ಸ) ಹೀಗೆ ಹೇಳಿರುವರು:

“ಇತರ ಪ್ರವಾದಿಗಳಿಗೆ ಹೋಲಿಸಿದರೆ ನನಗೆ ಆರು ವಿಷಯಗಳಲ್ಲಿ ಶ್ರೇಷ್ಠತೆಯನ್ನು ಯಪಾಲಿಸಲಾಗಿದೆ. ನನಗೆ ವಿಶಾಲಾರ್ಥದ ಸಮಗ್ರ ವಚನಗಳನ್ನು ನೀಡಲಾಗಿದೆ. ವರ್ಚಸ್ಸಿನ ಮೂಲಕ ನನಗೆ ಸಹಾಯ ಮಾಡಲಾಗಿದೆ. ಗನೀಮತ್(ಯುದ್ಧದಿಂದ ಬಂದು) ಸಂಪತ್ತನ್ನು ನನ್ನ ಪಾಲಿಗೆ ಧರ್ಮಬದ್ಧಗೊಳಿಸಲಾಗಿದೆ. ನನ್ನ ಪಾಲಿಗೆ ಸಂಪೂರ್ಣ ಭೂಮಿಯನ್ನು ಪವಿತ್ರವಾಗಿ ಹಾಗೂ ಆರಾಧನಾಲಯವಾಗಿ ಮಾಡಲಾಗಿದೆ. ನನ್ನನ್ನು ಎಲ್ಲ ಸೃಷ್ಟಿಗಳ ಕಡೆಗೆ ಸಂದೇಶವಾಹಕನಾಗಿ ಳುಹಿಸಲಾಗಿದೆ ಮತ್ತು ನನ್ನೊಂದಿಗೆ ಪ್ರವಾದಿಗಳ ಸರಣಿಯನ್ನು ಮುಕ್ತಾಯಗೊಳಿಸಲಾಗಿದೆ.”

[ಹಝ್ರತ್ ಅಬೂ ಹುರೈರಾ(ರ) –ಮುಸ್ಲಿಮ್]

ಈ ಹದೀಸ್‌ನಲ್ಲಿ ಅಲ್ಲಾಹನು ಪ್ರವಾದಿ ಮುಹಮ್ಮದ್‌ರಿಗೆ(ಸ) ಪ್ರದಾನ ಮಾಡಿರುವ 6 ವಿಶೇಷತೆಗಳನ್ನು ಪ್ರಸ್ತಾಪಿಸಲಾಗಿದೆ.

1) ಅವರಿಗೆ ಸಮಗ್ರ ವಚನಗಳನ್ನು ನೀಡಲಾಗಿದೆ. ಅವರ ಮೇಲೆ ಅವತೀರ್ಣಗೊಂಡ ಪವಿತ್ರ ಕುರ್‌ಆನಿನ ಬಗ್ಗೆ ಹೇಳುವುದಾದರೆ ಅದಂತೂ ಭಾಷೆಯ ದೃಷ್ಟಿಯಿಂದ ಮಾತ್ರವಲ್ಲ,

ಎಲ್ಲ ವಿಷಯದಲ್ಲೂ ಪವಾಡ ಸದೃಶವಾಗಿದೆ. ಇನ್ನು ಹದೀಸ್ ಅಥವಾ ಪ್ರವಾದಿ ವಚನಗ ಕೂಡಾ ಅದ್ಭುತ ವಿಶೇಷತೆಯನ್ನು ಹೊಂದಿದೆ. ಪ್ರತಿಯೊಂದು ಹದೀಸ್ ಕೂಡಾ ಸಾಗರವ ಹೂಜೆಯಲ್ಲಿ ಕಟ್ಟಿದಂತೆ ಇದೆ. ಅವುಗಳಲ್ಲಿ ಅತ್ಯಂತ ಸಂಕ್ಷಿಪ್ತ ಹಾಗೂ ಕನಿಷ್ಠ ಶಬ್ದಗಳಲ್ಲಿ ಅತ್ಯ ವಿಶಾಲಾರ್ಥವುಳ್ಳ ಬೋಧನೆಗಳನ್ನು ನೀಡಲಾಗಿದೆ. ಪ್ರವಾದಿ ವಚನಗಳ ಈ ವಿಶೇಷ ಯಿಂದಾಗಿಯೇ ಅವು ಬಹು ಬೇಗನೇ ಕಂಠಪಾಠವಾಗುತ್ತವೆ. ಕೇಳುವವನ ಮೇಲೆ ತಕ್ಷ ಪರಿಣಾಮ ಬೀರುತ್ತವೆ ಮತ್ತು ಒಮ್ಮೆ ಕೇಳಿದರೆ ಬಹುಕಾಲ ನೆನಪಿರುತ್ತವೆ.

2) ಪ್ರವಾದಿವರ್ಯರ(ಸ) ವ್ಯಕ್ತಿತ್ವಕ್ಕೆ ಅಲ್ಲಾಹನು ಅಪಾರ ವರ್ಚಸ್ಸನ್ನು ನೀಡಿದ್ದನು. ಬೇ ಹದೀಸ್‌ಗಳಲ್ಲಿ ಬಂದಿರುವಂತೆ ಪ್ರವಾದಿವರ್ಯರ(ಸ) ಶತ್ರು ಒಂದು ತಿಂಗಳ ಪ್ರಯಾಣದ ದೂರದಲ್ಲಿದ್ದರೂ ಅವರಿಂದ ಪ್ರಭಾವಿತನಾಗುವನು. ಆದ್ದರಿಂದ ಕೈಸರ್ ಮತ್ತು ಕಿಸ್ರಾ ಮೇಲೆ ಪ್ರವಾದಿವರ್ಯರ(ಸ) ಹೆಚ್ಚಿನ ವರ್ಚಸ್ಸು ಬಿದ್ದಿತ್ತು. ಅವರ ರಾಜಭವನಗಳ ನಡುಕವುಂಟಾಯಿತು.

3) ಯುದ್ಧದ ವೇಳೆ ಶತ್ರುಗಳ ಕೈಯಿಂದ ವಶಪಡಿಸಿಕೊಳ್ಳಲಾಗುವ ಸಂಪತ್ತು ಹಿಂದಿನ ಹಲ ಪ್ರವಾದಿಗಳ ಸಮುದಾಯಕ್ಕೆ ಧರ್ಮಸಮ್ಮತವಾಗಿರಲಿಲ್ಲ. ಆದರೆ ಪ್ರವಾದಿ ಮುಹಮ್ಮದ್(ಸ ಮತ್ತವರ ಸಮುದಾಯದ ಪಾಲಿಗೆ ಅಲ್ಲಾಹನು ಅದನ್ನು ಧರ್ಮಬದ್ಧಗೊಳಿಸಿದನು.

4) ಪ್ರವಾದಿ ಮುಹಮ್ಮದ್‌ರ(ಸ) ಶರೀಅತ್‌ನಲ್ಲಿ, ಯಾವುದಾದರೂ ನಿರ್ದಿಷ್ಟ ಸ್ಥಳದ ಅಥವಾ ಆರಾಧನಾಲಯದಲ್ಲಿ ಮಾತ್ರ ಆರಾಧನೆ ಮಾಡಬೇಕೆಂಬ ನಿರ್ಬಂಧವಿಲ್ಲ. ಮಸೀದಿ ವಿಶೇಷ ಪ್ರಾಧಾನ್ಯ ನೀಡಲಾಗಿದೆಯಾದರೂ ಭೂಮಿಯ ಯಾವುದೇ ಭಾಗದಲ್ಲಿ ಆರಾಧ ಮಾಡಲು ಅನುಮತಿ ಇದೆ. ಹಾಗೆಯೇ ವುಝೂ ಅಥವಾ ಸ್ನಾನ ಮಾಡಲು ನೀರು ಸಿಗ ಹೋದಾಗ ಶುದ್ಧ ಮಣ್ಣಿನಿಂದ ತಯಮ್ಮುಮ್ ಮಾಡಲಿಕ್ಕೂ ಅನುಮತಿ ನೀಡಲಾಗಿದೆ.

5) ಪ್ರವಾದಿ ಮುಹಮ್ಮದ್‌ರು(ಸ) ವಿಶ್ವ ಪ್ರವಾದಿಯಾಗಿರುವರು. ಅವರ ಪ್ರವಾದಿ ಯಾವುದಾದರೂ ಒಂದು ವರ್ಗ ಅಥವಾ ಜನಾಂಗಕ್ಕೆ ಸೀಮಿತವಾಗಿಲ್ಲ. ಕಾಲ, ದೇಶ ವರ್ಣಗಳ ವ್ಯತ್ಯಾಸಗಳನ್ನೆಲ್ಲಾ ಮೀರಿ, ಲೋಕಾಂತ್ಯದ ವರೆಗಿನ ಎಲ್ಲ ಮಾನವರು ಮತ ಜಿನ್ನ್‌ಗಳ ಪಾಲಿಗೆ ಅವರೇ ಅಲ್ಲಾಹನ ಸಂದೇಶವಾಹಕರಾಗಿರುವರು.

6) ಪ್ರವಾದಿ ಮುಹಮ್ಮದ್‌ರು(ಸ) ಪ್ರವಾದಿಗಳ ಸರಣಿಯಲ್ಲಿ ಕೊನೆಯವರು. ಅವ ಪ್ರವಾದಿತ್ವದ ಕಾಲವು ಲೋಕಾಂತ್ಯದವರೆಗೂ ಮುಂದುವರಿಯುತ್ತದೆ. ಅವರ ಕಾಲದ ಧರ್ಮವು ಸಂಪೂರ್ಣಗೊಂಡಿರುವುದರಿಂದ ಮತ್ತು ದೇವ ಸಂದೇಶವಾಗಿರುವ ಪವಿತ್ರ ಕುರ ಆನನ್ನು ಲೋಕಾಂತ್ಯದವರೆಗೆ ಸುರಕ್ಷಿತಗೊಳಿಸಲಾಗಿರುವುದರಿಂದ ಅವರ ಬಳಿಕ ಯಾವುದೆ ಹೊಸ ಪ್ರವಾದಿಯ ಅಗತ್ಯವೇ ಉಳಿದಿಲ್ಲ. ಆದ್ದರಿಂದ ಅವರ ಅನಂತರ ಯಾರಾದರೂ ತಾನ ಪ್ರವಾದಿಯೆಂದು ವಾದಿಸಿದರೆ ಅವನು ಸುಳ್ಳುಗಾರನೆಂಬುದರಲ್ಲಿ ಸಂದೇಹವೇ ಇಲ್ಲ.

ಜ್ಞಾನದ ಮಳೆ

عَنْ اَبِى مُوسَى (رض) عَنِ النبى صلى الله عليه وسلم قَالَ: اِنَّ وَمَثَلَ مَا بَعَثَنِى اللَّ
عَزَّوَجَلَّ مِنَ الْهُدَى وَالعِلْمِ كَمَثَلِ غَيْثٍ اَصَابَ اَرْضً
فَكَانَتْ مِنْهَا طَائِفَةٌ طَيِّبَةٌ قَبلَتِ الماءَ فَاَنبَتَتِ الْكَلاَ
وَالْعُشْبَ الكَثِيْرَ وَكَانَ مِنْهَا اَجَادِبَ اَمْسَكَتِ الْمَاءَ فَنَفَ
اللّهُ بِهَا النَّاسَ فَشَرِبُوْا مِنْهَا وَسَقُوْا وَرَعَوْا وَاَصَابَ طَائِفَ
مِنْهَا اُخْرَى اِنَّمَا هِىَ قِيْعَانٌ لاتُمْسِكُ مَاءً وَلَا تُنبتُ كَلاَ
فَذَالِكَ مَثَلُ مَنْ فَقُهَ فِىْ دِينِ اللّهِ وَنَفَعَهُ اللّهُ بِمَا بَعَثَنِىَ اللّهُ بِ
فَعَلِمَ وَعَلَّمَ وَمَثَلُ مَنْ لَّمْ يَرْفَعْ بِذَالِكَ رَاسًا وَلَمْ يَقْبَلْ هُدَى
اللّهِ الّذِى اُرْسِلْت بِهِ (مسلم-كتاب الفضائل

ಪ್ರವಾದಿ(ಸ) ಹೀಗೆ ಹೇಳಿರುವರು:

''ಅಲ್ಲಾಹನು ಯಾವ ಜ್ಞಾನ ಮತ್ತು ಮಾರ್ಗದರ್ಶನದೊಂದಿಗೆ ನನ್ನನ್ನು ಳುಹಿಸಿರುವನೋ ಅದರ ಉದಾಹರಣೆಯು ಮಳೆಯಂತಿದೆ. ಮಳೆಯು ಭೂಮಿಯ ಮೇಲೆ ುರಿದಾಗ ಭೂಮಿ ಅದರ ನೀರನ್ನು ಹೀರಿಕೊಂಡಿತು ಮತ್ತು ಅದರ ಮೇಲೆ ಧಾರಾಳ ುರಗಿಡಗಳು ಬೆಳೆದವು. ಅದರಲ್ಲಿನ ಮೃದುವಾದ ಭಾಗವು ನೀರನ್ನು ಶೇಖರಿಸಿಟ್ಟುಕೊಂಡಿತು. ಈ ರೀತಿ ಅಲ್ಲಾಹನು ಅದರಿಂದ ಜನರಿಗೂ ಪ್ರಯೋಜನವನ್ನೊದಗಿಸಿದನು. ಜನರು ಸ್ವತಃ ೀರು ಕುಡಿದರು. ಇತರರಿಗೂ ಕುಡಿಸಿದರು. ಆದರೆ ಭೂಮಿಯಲ್ಲಿದ್ದ ಬರಡಾದ ಬಯಲುಗಳ ಮೇಲೆ ಮಳೆ ಸುರಿದಾಗ, ನೀರನ್ನು ತಡೆದಿಡಲು ಅವುಗಳಿಂದಾಗಲಿಲ್ಲ. ಅವುಗಳ ಮೇಲೆ ಸ್ಯಗಳೂ ಬೆಳೆಯಲಿಲ್ಲ, ಈ ಪೈಕಿ ಮೊದಲನೆಯ ಉದಾಹರಣೆಯು, ಅಲ್ಲಾಹನ ಧರ್ಮದ ಇಂಗಿತಗಳನ್ನರಿತುಕೊಂಡು, ನನ್ನೊಂದಿಗೆ ಅಲ್ಲಾಹನು ಕಳುಹಿಸಿರುವ ಜ್ಞಾನ ಮತ್ತು ಮಾರ್ಗ ದರ್ಶನದಿಂದ ಪ್ರಯೋಜನ ಪಡೆದವರಿಗೆ ಅನ್ವಯಿಸುತ್ತದೆ. ಅವರು ಸ್ವತಃ ತಾವೂ ಜ್ಞಾನವನ್ನು ಸಂಪಾದಿಸಿದರು ಮತ್ತು ಇತರರಿಗೂ ಈ ಜ್ಞಾನವನ್ನು ಪಸರಿಸಿದರು.ಇನ್ನೊಂದು ಉದಾಹರಣೆಯು, ಈ ಜ್ಞಾನದ ಕಡೆಗೆ ಗಮನಹರಿಸದೆ ನಾನು ತಂದಿರುವ ಮಾರ್ಗ ದರ್ಶನವನ್ನು ಸ್ವೀಕರಿಸದೆ ಇರುವವರಿಗೆ ಅನ್ವಯವಾಗುತ್ತದೆ. [ಹಝ್ರತ್ ಅಬೂ ಮೂಸಾ(ರ) -ಮುಸ್ಲಿಮ್]

ಈ ಉದಾಹರಣೆಯಿಂದ ವ್ಯಕ್ತವಾಗುವಂತೆ ಪ್ರವಾದಿ ಮುಹಮ್ಮದ್‌ರನ್ನು(ಸ) ಅಲ್ಲಾಹ ಸತ್ಯದ ಜ್ಞಾನದೊಂದಿಗೆ ಕಳುಹಿಸಿರುವನು. ಆ ಮೂಲಕ ಜನರಿಗೆ ದೇವನ ಬಗ್ಗೆ ಅರಿವು ಮೂಡ ಮತ್ತು ಅವರು ಸತ್ಯದ ಬೆಳಕಿನಲ್ಲಿ ಜೀವನ ಸಾಗಿಸುವಂತಾಗಲಿ ಎಂಬುದೇ ಇದರ ಉದ್ದೇ ಆದರೆ ಬರಡು ಭೂಮಿಯ ಮೇಲೆ ಎಷ್ಟು ಮಳೆ ಬಿದ್ದರೂ ನಿಷ್ಪ್ರಯೋಜಕವಾಗುವಂತೆಯೆ ಕಠಿಣ ಹೃದಯಿಗಳಿಗೆ ಪ್ರವಾದಿಗಳು ತರುವ ಸತ್ಯ, ಜ್ಞಾನ ಮತ್ತು ಸನ್ಮಾರ್ಗದರ್ಶನದಿಂ ಯಾವುದೇ ಪ್ರಯೋಜನವಾಗುವುದಿಲ್ಲ. ಅವರು ಸತ್ಯವನ್ನು ಸ್ವೀಕರಿಸಿಕೊಳ್ಳುವ ಸಾಮರ್ಥ್ಯವ ಕಳೆದುಕೊಂಡಿರುತ್ತಾರೆ. ಸತ್ಯ ಸ್ವೀಕಾರದ ಸಾಮರ್ಥ್ಯವಿರುವ ಸಹೃದಯಿಗಳು ಮಾತ್ರ ಪ್ರವಾ ಮುಹಮ್ಮದ್(ಸ) ತಂದಿರುವ ಜ್ಞಾನ ಮತ್ತು ಮಾರ್ಗದರ್ಶನದಿಂದ ಸ್ವತಃ ತಾವು ಪ್ರಯೋಜ ಪಡೆಯುತ್ತಾರೆ. ಇತರರಿಗೂ ಪ್ರಯೋಜನವೊದಗಿಸುತ್ತಾರೆ.

ಅಂತ್ಯ ಪ್ರವಾದಿ

نْ اَبِی هُرَیْرَةَ (رض) اَنَّ رَسُول اللّٰهِ ﷺ قَالَ : اِنَّ مَثَلِی وَمَثَل لأَنْبِيَاءِ مِنْ قَبْلِی كَمَثَلِ رَجُلٍ بَنَى بَيْتًا فَاحْسَنَهُ وَاَجْمَلَهُ لَّا مَوْضِعَ لَبِنَةٍ مِنْ زَاوِيَةٍ فَجَعَلَ النَّاسُ يَطُوفُونَ بِهِ وَيَعْجَبُونَ هُ وَيَقُولُونَ هَلَّا وُضِعَتْ هَذِهِ اللَّبِنَةُ قَالَ فَأَنَا اللَّبِنَةُ وَاَنَا خَاتِمُ لنَّبِيِّيْنَ (بخاری-کتاب احادیث الانبیاء)

ಪ್ರವಾದಿ(ಸ) ಹೀಗೆ ಹೇಳಿರುವರು:

''ನನ್ನ ಮತ್ತು ಗತ ಪ್ರವಾದಿಗಳ ಉದಾಹರಣೆ ಹೀಗಿದೆ: ಒಬ್ಬ ವ್ಯಕ್ತಿ ಒಂದು ಭವ ಭವನವನ್ನು ನಿರ್ಮಿಸಿದನು. ಆದರೆ ಅದರ ಒಂದು ಮೂಲೆಯಲ್ಲಿ ಒಂದು ಇಟ್ಟಿಗೆಯ ಸ್ಥಳವನ ಮಾತ್ರ ಖಾಲಿ ಬಿಟ್ಟನು. ಜನರು ಆ ಭವನದ ಸುತ್ತ ತಿರುಗಿ ಅದರ ಸೌಂದರ್ಯದ ಬ ಬೆರಗುಗೊಳ್ಳುತ್ತಿದ್ದರು. ಆದರೆ(ಖಾಲಿ ಸ್ಥಳವನ್ನು ಕಂಡು) 'ಇಲ್ಲಿ ಒಂದು ಇಟ್ಟಿಗೆಯ ಸ್ಥಾನವನ ಖಾಲಿ ಬಿಡಲಾಗಿರುವುದೇಕೆ?' ಎಂದು ಆಡಿಕೊಳ್ಳುತ್ತಿದ್ದರು. ಅನಂತರ ಪ್ರವಾದಿ(ಸ) ಹೇಳಿದರು ''ಆ ಇಟ್ಟಿಗೆ ನಾನೇ ಆಗಿರುವೆನು ಮತ್ತು ನಾನು ಅಂತ್ಯ ಪ್ರವಾದಿಯಾಗಿರುವೆನು.''

[ಹಝ್ರತ್ ಅಬೂ ಹುರೈರಾ(ರ) -ಬುಖಾರಿ

ಪ್ರವಾದಿಗಳ ಪೈಕಿ ಹ.ಮುಹಮ್ಮದ್‌ರೇ(ಸ) ಅಂತಿಮ ಪ್ರವಾದಿ ಎಂಬುದು ಪವಿತ್ರ ಕುರ ಆನಿನಿಂದಲೂ, ಅನೇಕ ಅಧಿಕೃತ ಹದೀಸ್‌ಗಳಿಂದಲೂ ಸಂದೇಹಾತೀತವಾಗಿ ಸಾಬೀತಾಗುವ

ಂದು ವಾಸ್ತವಿಕತೆಯಾಗಿದೆ. ಈ ಬಗ್ಗೆ ಮುಸ್ಲಿಮ್ ಸಮುದಾಯದಲ್ಲಿ ಒಮ್ಮತಾಭಿಪ್ರಾಯವಿದೆ. ಹದೀಸ್ ಪ್ರವಾದಿ ಮುಹಮ್ಮದ್‌ರನ್ನು(ಸ) ಅಂತ್ಯ ಪ್ರವಾದಿ ಎಂದು ಸ್ಪಷ್ಟವಾಗಿ ಸಾರುವ ಲವಾರು ಹದೀಸ್‌ಗಳ ಪೈಕಿ ಒಂದು. ಪ್ರವಾದಿತ್ವವೆಂಬ ಕಟ್ಟಡದಲ್ಲಿ ಖಾಲಿ ಬಿಡಲಾಗಿದ್ದ ಂದು ಇಟ್ಟಿಗೆಯ ಸ್ಥಾನವನ್ನು ತುಂಬಲು ಬಂದ ಆ ಕೊನೆಯ ಇಟ್ಟಿಗೆ ನಾನೇ ಆಗಿರುವೆನೆಂದು ವಾದಿವರ್ಯರು(ಸ) ಸಾರಿರುವರು. ಈ ರೀತಿ ಕಟ್ಟಡವು ಪರಿಪೂರ್ಣಗೊಂಡಂತಾಯಿತು. ದ್ದರಿಂದ ಇನ್ನು ಮುಂದೆ ಯಾವುದೇ ಪ್ರವಾದಿ ಬರಲಿಕ್ಕಿಲ್ಲ, ಮುಂದೆ ಯಾರಾದರೂ ತಾನು ವಾದಿಯೆಂದು ವಾದಿಸಿದರೆ, ಅವನು ಅಪ್ಪಟ ವಂಚಕ ಹಾಗೂ ಅವನ ವಾದ ಸುಳ್ಳು ಂಬುದರಲ್ಲಿ ಎರಡು ಮಾತಿಲ್ಲ.

ಇಲ್ಲಿ ಕೊನೆಯ ಪ್ರವಾದಿ ಎನ್ನಲು 'ಖಾತಿಮುನ್ನಬಿಯ್ಯೀನ್' ಎಂಬ ಪದ ಯೋಗವಾಗಿದೆ. ಇದರರ್ಥ ಪ್ರವಾದಿತ್ವದ ಸರಣಿಯನ್ನು ಕೊನೆಗೊಳಿಸುವವರು ಮತ್ತು ಸರಣಿಗೆ ಅಂತಿಮ ಮೊಹರಿನ ರೂಪದಲ್ಲಿ ಬಂದವರು ಎಂದಾಗಿದೆ. ಪತ್ರ ಮಡಚಿ ಅದಕ್ಕೆ ೊಹರು ಹೊಡೆದ ಬಳಿಕ ಯಾವುದೇ ವಸ್ತು ಅದರೊಳಗೆ ಪ್ರವೇಶಿಸುವಂತಿಲ್ಲ. ಹಾಗೆಯೇ ುಹಮ್ಮದ್‌ರ(ಸ) ನಿರ್ಗಮನಾನಂತರ ಪ್ರವಾದಿತ್ವ ವೃತ್ತದೊಳಗೆ ಪ್ರವೇಶಿಸಲು ಯಾರಿಗೂ ವಕಾಶವಿಲ್ಲ. ಏಕೆಂದರೆ ಅವರು ತಂದಿರುವ ಶರೀಅತ್ ಕಾಲ, ಪ್ರದೇಶ, ಭಾಷೆ, ವರ್ಣ ತ್ಯಾದಿ ಯಾವುದೇ ಭೇದವಿಲ್ಲದೆ ಅಂತ್ಯದಿನದ ವರೆಗಿನ ಎಲ್ಲ ಮಾನವರಿಗಾಗಿ ಬಂದಿದೆ. ಅಂತ್ಯ ವಾದಿ ಎಂಬ ನೆಲೆಯಲ್ಲಿ ಅವರ ಮೇಲೆ ವಿಶ್ವಾಸವಿರಿಸಿ, ಅವರು ತಂದಿರುವ ದಿವ್ಯ ಧರ್ಮ ುತ್ತು ನಿಯಮವನ್ನು ಅನುಸರಿಸುವುದೊಂದೇ ಮಾನವಕುಲದ ಮುಕ್ತಿಗಿರುವ ದಾರಿ.

ಒಬ್ಬ ವ್ಯಕ್ತಿ ಪ್ರವಾದಿ ಮುಹಮ್ಮದ್‌ರ(ಸ) ಅನಂತರ ಇನ್ನಾರನ್ನಾದರೂ ಪ್ರವಾದಿಯೆಂದು ಂಗೀಕರಿಸಿದರೆ, ಅವನು ಪ್ರವಾದಿ ಮುಹಮ್ಮದ್(ಸ) ಅಂತ್ಯ ಪ್ರವಾದಿ ಎಂಬ ವಾಸ್ತವಿಕತೆಯನ್ನು ಕ್ಕರಿಸಿದಂತಾಗುತ್ತದೆ. ಈ ರೀತಿ ಅವರ ಅಂತ್ಯ ಪ್ರವಾದಿತ್ವವನ್ನು ಧಿಕ್ಕರಿಸುವುದು 'ಕುಫ್ರ್' ಥವಾ ಸತ್ಯಧಿಕ್ಕಾರವಾಗಿದೆ.

ದೇವಗ್ರಂಥ

ಪವಿತ್ರ ಕುರ್‌ಆನ್

عَنْ عُمَرَ (رض) قَالَ اِنَّ نَبِيَّكُمْ صَلَّى اللهُ عَلَيْهِ وَسَلَّمَ قَدْ قَالَ : اِنَّ اللّٰهَ يَرْفَعُ بِهٰذَا الْكِتَابِ اَقْوَامًا وَيَضَعُ بِهِ آخَرِيْنَ (مسلم-كتاب الفضائل القرآن)

ಪ್ರವಾದಿ(ಸ) ಹೀಗೆ ಹೇಳಿರುವರು:

''ಅಲ್ಲಾಹನು ಈ ಗ್ರಂಥದ (ಪವಿತ್ರ ಕುರ್‌ಆನಿನ) ಮೂಲಕ ಅದೆಷ್ಟೋ ಜನಾಂಗಗಳಿ ಔನ್ನತ್ಯವನ್ನು ದಯಪಾಲಿಸುತ್ತಾನೆ ಮತ್ತು ಅದೆಷ್ಟೋ ಜನಾಂಗಗಳನ್ನು ಅಧೋಗತಿಗಿಳಿಸುತ್ತಾನೆ.'

[ಹಝ್ರತ್ ಉಮರ್(ರ) -ಮುಸ್ಲಿಮ್

ಪವಿತ್ರ ಕುರ್‌ಆನ್ ವಿವಿಧ ಜನಾಂಗ ಮತ್ತು ರಾಷ್ಟ್ರಗಳ ವಿಧಿಯನ್ನು ನಿರ್ಣಯಿಸಲು ಬಂದಿರುವ ಗ್ರಂಥವಾಗಿದೆ. ಇದರ ಮೇಲೆ ವಿಶ್ವಾಸವಿರಿಸಿ, ಇದನ್ನು ತಮ್ಮ ಖಾಸಗಿ ಹಾಗೂ ಸಾರ್ವಜನಿಕ ಬದುಕಿನ ಮಾರ್ಗದರ್ಶಿ ಮತ್ತು ಸಂವಿಧಾನವಾಗಿ ಮಾಡಿಕೊಳ್ಳುವ ಜನಾಂಗವು ಔನ್ನತ್ಯವನ್ನು ಸಾಧಿಸುತ್ತದೆ. ಇದಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ. ಅರೇಬಿಯಾದ ಬುಡಕಟ್ಟುಗಳ ಜನರು ಈ ಗ್ರಂಥದ ಕಾರಣ ಶಕ್ತಿ ಮತ್ತು ಕೀರ್ತಿಯ ಉತ್ತುಂಗಕ್ಕೇರಿದರು. ವಿಚಾರ, ಕರ್ಮ ಸಂಸ್ಕೃತಿ, ನಾಗರಿಕತೆ, ಚಾರಿತ್ರ್ಯ ಎಲ್ಲ ಕ್ಷೇತ್ರಗಳಲ್ಲೂ ಅವರು ಉನ್ನತರಾದರು. ತದ್ವಿರುದ್ಧವಾಗಿ ಇದನ್ನು ತಿರಸ್ಕರಿಸಿದವರು ಅಧೋಗತಿಗಿಳಿದರು. ತಮ್ಮೆಲ್ಲಾ ಭೌತಿಕ ಶಕ್ತಿ ಸಾಮರ್ಥ್ಯಗಳ ಹೊರತಾಗಿಯೂ ಅಶಾಂತಿ, ಗೊಂದಲಗಳ ಪ್ರವಾಹದಲ್ಲಿ ಕೊಚ್ಚಿಹೋದರು. ಅವರಿಗೆಂದೂ ಜಗತ್ತಿನಲ್ಲಿ ನೈಜ ಗೌರವ ಪ್ರಾಪ್ತವಾಗಲಿಲ್ಲ. ಪವಿತ್ರ ಕುರ್‌ಆನಿನ ಬೆಳಕಿನಲ್ಲಿ ನಡೆಯಲು ಸಮ್ಮತಿಸದ ಜನಾಂಗಗಳ ಪಾಲಿಗೆ ಅಂಧಕಾರ ಮತ್ತು ಅಧಃಪತನವೇ ಗತಿಯಾಗಿ ಬಿಡುತ್ತದೆ. ಇಂತಹ ಜನಾಂಗಗಳು ವೈಚಾರಿಕವಾಗಿಯೂ ವ್ಯಾವಹಾರಿಕ ಕ್ಷೇತ್ರದಲ್ಲೂ ಭೀಕರ ಗೊಂದಲಕ್ಕೆ ತುತ್ತಾಗುತ್ತವೆ.

'ವಹ್ಯ್'ನ ಸ್ವರೂಪ

عَنْ عَائِشَةَ اُمِّ الْمُؤْمِنِيْنَ (رَضِيَ اللّٰهُ عَنْهَا) اَنَّ الْحَارِثَ بْنِ هِشَامٍ رَضِيَ اللّٰهُ عَنْهُ سَأَلَ فَقَالَ يَا رَسُوْلَ اللّٰهِ صَلَّى اللهُ عَلَيْهِ وَسَلَّمَ كَيْفَ يَأْتِيْكَ الْوَحْيُ فَقَالَ رَسُوْلُ اللّٰهِ صَلَّى اللهُ عَلَيْهِ وَسَلَّمَ اَحْيَانًا يَأْتِيْنِيْ مِثْلَ صَلْصَلَةِ

الْجَرَسِ وَهُوَ اَشَدُّ عَلَيَّ فَيَفْصِمُ عَنِّي وَقَدْ وَعِيْتُ مَا قَا
وَاَحْيَانًا يَتَمَثَّلُ لِي الْمَلَكُ رَجُلاً فَيُكَلِّمُنِي فَاَعِي مَايَقُولُ
قَالَتْ عَائِشَةُ رَضِيَ اللّٰهُ عَنْهَا وَلَقَدْ رَاَيْتُهُ يَنْزِلُ عَلَيْهِ الْوَحِ
فِي الْيَوْمِ الشَّدِيدِ الْبَرْدِ فَيَفْصِمُ عَنْهُ وَاَنَّ جَبِينَهُ لَيَتَفَصَّدُ عَرَ
(بخاری بدء الوحی)

ಹಾರಿಸ್ ಬಿನ್ ಹಿಶಾಮ್(ರ) ಎಂಬವರು ಪ್ರವಾದಿ ಮುಹಮ್ಮದ್‌ರೊಡನೆ(ಸ) ಅಲ್ಲಾಹನ ಸಂದೇಶವಾಹಕರೇ! ವಹ್ಯ್(ದಿವ್ಯ ಸಂದೇಶ) ಹೇಗೆ ಅವತೀರ್ಣವಾಗುತ್ತದೆ?' ಎಂದು ಪ್ರಶ್ನಿಸಿದರು. ಆಗ ಪ್ರವಾದಿ(ಸ) ಹೀಗೆಂದರು:

''ಕೆಲವೊಮ್ಮೆ ದಿವ್ಯವಾಣಿಯು ಗಂಟೆಯ ನಾದದಂತೆ ನನ್ನ ಬಳಿಗೆ ಬರುತ್ತದೆ. ಈ ರೂಪವು ನನ್ನ ಪಾಲಿಗೆ ಬಹಳ ಕಠಿಣವಾಗಿರುತ್ತದೆ. ನಾದವು ನಿಂತಾಗ, ದಿವ್ಯವಾಣಿಯು ನನ್ನ ಮನಸ್ಸಿನಲ್ಲಿ ಸುರಕ್ಷಿತಗೊಂಡಿರುತ್ತದೆ(ಕಂಠಪಾಠವಾಗಿರುತ್ತದೆ). ಕೆಲವೊಮ್ಮೆ ನನ್ನ ಬಳಿಗೆ ಒಬ್ಬ ಮಲಕ್(ದೇವಚರ) ಮನುಷ್ಯ ರೂಪದಲ್ಲಿ ಬಂದು ಪ್ರತ್ಯಕ್ಷವಾಗುತ್ತಾನೆ. ಅವನು ನನ್ನ ಜೊತೆ ಮಾತನಾಡುತ್ತಾನೆ. ಅವನು ಹೇಳಿದ್ದನ್ನೆಲ್ಲಾ ನಾನು ನೆನಪಿಟ್ಟುಕೊಳ್ಳುತ್ತೇನೆ.''

ಹಝ್ರತ್ ಆಯಿಶಾ(ರ) ಹೇಳುತ್ತಾರೆ: 'ನಾನು ಪ್ರವಾದಿವರ್ಯರನ್ನು(ಸ) ಅವರ ಮೇಲೆ ದಿವ್ಯವಾಣಿಯು ಅವತೀರ್ಣಗೊಳ್ಳುತ್ತಿರುವ ಸ್ಥಿತಿಯಲ್ಲಿ ನೋಡಿದ್ದೇನೆ. ಆಗ ತೀವ್ರ ಚಳಿಯ ದಿನಗಳಾಗಿದ್ದರೂ ದಿವ್ಯವಾಣಿಯ ಅವತೀರ್ಣ ಮುಗಿದಾಗ ಅವರ ಹಣೆಯು ಬೆವರ ಹನಿಗಳಿಂದಾವೃತವಾಗಿರುತ್ತಿತ್ತು.

[ಉಮ್ಮುಲ್ ಮೂಮಿನೀನ್ ಹಝ್ರತ್ ಆಯಿಶಾ(ರ) -ಬುಖಾರಿ]

'ವಹ್ಯ್' ಎಂಬುದು ಅರಬಿ ಪದ. ಅದಕ್ಕೆ ಸೂಚನೆ ನೀಡುವುದು ಅಥವಾ ಗುಪ್ತ ರೀತಿಯಲ್ಲಿ ಮಾತನಾಡುವುದು ಎಂಬ ಅರ್ಥಗಳಿವೆ. ಪವಿತ್ರ ಕುರ್‌ಆನಿನ ಪಾರಿಭಾಷಿಕದಲ್ಲಿ, ಅಲ್ಲಾಹನು ತನ್ನ ಸಂದೇಶವಾಹಕರಿಗೆ ತನ್ನ ಸಂದೇಶವನ್ನು ಕಳುಹಿಸಲು ಬಳಸುವಂತಹ ನಿಗೂಢ ವಿಧಾನಕ್ಕೆ 'ವಹ್ಯ್' ಎನ್ನಲಾಗುತ್ತದೆ. ಇತರ ಭಾಷೆಗಳಲ್ಲಿ ಈ ಪದದ ಅರ್ಥವನ್ನು ಕರಾರುವಾಕ್ಕಾಗಿ ಪ್ರತಿನಿಧಿಸಬಲ್ಲ ಪರ್ಯಾಯ ಪದಗಳು ಸಿಗುವುದು ಕಷ್ಟ. ಇಂಗ್ಲೀಷ್‌ನಲ್ಲಿ ರಿವಿಲೇಶನ್ (Revelation) ಎಂಬ ಪದವನ್ನು ವಹ್ಯ್‌ಗೆ ಪರ್ಯಾಯವಾಗಿ ಬಳಸಲಾಗುತ್ತದಾದರೂ ಇದು 'ವಹ್ಯ್'ನಲ್ಲಿರುವ ಪ್ರಸ್ತುತ ವಿಶೇಷತೆಗಳನ್ನು ಪ್ರತಿಬಿಂಬಿಸುವುದಿಲ್ಲ.

ಪ್ರವಾದಿ ಮುಹಮ್ಮದ್‌ರ(ಸ) ಮೇಲೆ ಅವತೀರ್ಣಗೊಳ್ಳುತ್ತಿದ್ದ 'ವಹ್ಯ್'ನ ಎರಡು ಸ್ವರೂಪಗಳನ್ನು ಮೇಲಿನ ಹದೀಸ್‌ನಲ್ಲಿ ಪ್ರಸ್ತಾಪಿಸಲಾಗಿದೆ. ಒಂದು, ಗಂಟೆಯ ನಾದದ

ರೂಪದಲ್ಲಿ, ಇನ್ನೊಂದು ಮನುಷ್ಯ ರೂಪದಲ್ಲಿ ಬರುವ ದೇವಚರನ ಮೂಲಕ. ಈ ಪೈಕಿ ಮೊದ ವಿಧಾನದ ಬಗ್ಗೆ ಹೇಳುವುದಾದರೆ ಮೇಲ್ನೋಟಕ್ಕೆ ಇದು ವಿಶೇಷವಾಗಿ ಕಾಣಿಸುತ್ತದಾದರ ಇದರಲ್ಲಿ ನಂಬಲಸಾಧ್ಯವಾದ ಅಂಶವೇನೂ ಇಲ್ಲ. ವಿಶೇಷತಃ ಆಧುನಿಕ ಯುಗದ ಸುದ್ದಿ ಮತ್ತು ಸಂದೇಶಗಳ ಪ್ರಸಾರಕ್ಕಾಗಿ, ಹಿಂದೆಂದೂ ಲೋಕವು ಅರಿತಿಲ್ಲದಂತಹ ಅನೇ ವಿಧಾನಗಳನ್ನು ಬಳಸಲಾಗುತ್ತದೆ. ಆದ್ದರಿಂದ ಸಂದೇಶ ತಲಪಿಸಲು, ತನಗೆ ಅಪರಿಚಿತವಾ ಮಾಧ್ಯಮಗಳೂ ಅಸ್ತಿತ್ವದಲ್ಲಿರಲು ಸಾಧ್ಯವೆಂಬುದನ್ನು ಒಪ್ಪಲು ಆಧುನಿಕ ಮಾನವನಿಗಂತ ಕಷ್ಟವಾಗಲಾರದು. ದಿವ್ಯ ಸಂದೇಶವನ್ನು ತಲಪಿಸಲು ದೇವನು ಒಂದು ಅಸಾಮಾನ್ಯವಾ ಅಗೋಚರ ಮಾಧ್ಯಮವನ್ನು ಬಳಸಿರುವುದಾಗಿ ಪ್ರವಾದಿಗಳು ಹೇಳುವಾಗ ಮತ್ತು ಹಾ ಒಮ್ಮತದಿಂದ ಹೇಳುವ ಪ್ರವಾದಿಗಳೆಲ್ಲರೂ ಪರಮ ಸತ್ಯವಂತರೂ ಪ್ರಾಮಾಣಿಕರ ಆಗಿದ್ದಾರೆಂಬುದು ವಿವಾದಾತೀತ ವಾಸ್ತವಿಕತೆಯಾಗಿರುವಾಗ ಅದನ್ನು ಅಂಗೀಕರಿಸುವುದರ ಯಾವ ಅಡ್ಡಿಯೂ ಇಲ್ಲ. ದೇವರಿಂದ ಮನುಷ್ಯನಿಗೆ ಸಂದೇಶ ಬರುವುದರ ಸ್ವರೂಪವನ ಕರಾರುವಾಕ್ಕಾಗಿ ಗ್ರಹಿಸಲು ನಮಗೆ ಸಾಧ್ಯವಿಲ್ಲದಿರುವುದರಿಂದ ಇಲ್ಲಿ ಅದನ್ನು ನಮ ಪರಿಚಿತವಿರುವ ಭಾಷೆಯಲ್ಲಿ ಗಂಟೆಯ ನಾದಕ್ಕೆ ಹೋಲಿಸಿರಬಹುದಾದ ಸಾಧ್ಯತೆಯೂ ಇದೆ

ವಹ್ಯ್‌ನ ಇನ್ನೊಂದು ವಿಧಾನ, ದೇವಚರನು ಮನುಷ್ಯ ರೂಪದಲ್ಲಿ ಪ್ರವಾದಿಯ ಮುಂ ಪ್ರತ್ಯಕ್ಷನಾಗಿ ಬಾಯ್ದೆರೆಯಾಗಿ ಅಲ್ಲಾಹನ ಸಂದೇಶವನ್ನು ಅವರ ಮುಂದಿಡುವುದಾಗಿದ ಇದು ಕೂಡಾ ಸಂದೇಶ ತಲಪಿಸುವ ಅಸಾಮಾನ್ಯ ವಿಧಾನಗಳಲ್ಲಿ ಒಂದಾದರೂ ಮೇಲಿನದ ಹೋಲಿಸಿದರೆ ಇದರ ಸ್ವರೂಪವನ್ನು ಹೆಚ್ಚು ಸರಳ ಹಾಗೂ ಸುಲಭವಾಗಿ ಗ್ರಹಿಸಬಹುದಾಗಿದೆ.

ತೀವ್ರ ಚಳಿಯ ಸಮಯದಲ್ಲೂ ವಹ್ಯ್ ಅವತೀರ್ಣಗೊಂಡಾಗ ಪ್ರವಾದಿವರ್ಯರ(ಸ ಹಣೆಯಲ್ಲಿ ಬೆವರು ಮೂಡುತ್ತಿತ್ತು ಎಂಬ ಆದನ್ನು ಕಣ್ಣಾರೆ ಕಂಡ ಅವರ ಸಂಗಾತಿಗ ಹೇಳಿಕೆಯು 'ವಹ್ಯ್'ನ ಸ್ಥಿತಿಯು ತೀರಾ ಅಸಾಮಾನ್ಯವಾದ ಒಂದು ಸ್ಥಿತಿ ಎಂಬುದಕ್ಕೊಂದ ಸ್ಪಷ್ಟ ಪುರಾವೆಯಾಗಿದೆ. ಒಂದು ವೇಳೆ ಪವಿತ್ರ ಕುರ್‌ಆನ್ ಪ್ರವಾದಿವರ್ಯರ(ಸ) ಸ್ವಂ ರಚನೆಯಾಗಿರುತ್ತಿದ್ದರೆ ಅದರ ಅವತೀರ್ಣದ ವೇಳೆ ಇಂತಹ ಅಸಾಮಾನ್ಯ ಸ್ಥಿತಿ ಖಂಡಿ ಉಂಟಾಗುತ್ತಿರಲಿಲ್ಲ.

ಅತ್ಯುತ್ತಮ ವಾಣಿ

عَنْ جَابِرِ بْنِ عَبْدِ اللَّهِ قَالَ كَانَ رَسُولُ اللَّهِ ﷺ يَقُولُ : فَانَّ خَيْرَ الْحَدِيثِ كِتَابُ اللَّهِ وَخَيْرَ الْهَدِي هَدِىُ مُحَمَّدٍ وَشَرُّ الْأُمُورِ مُحْدَثَاتُهَا وَكُلُّ بِدْعَةٍ ضَلَالَةٌ (مسلم-كتاب الجمعة)

ಪ್ರವಾದಿ ಮುಹಮ್ಮದ್(ಸ) ಖುತ್ಬಾದಲ್ಲಿ ಹೀಗೆ ಹೇಳುತ್ತಿದ್ದರು:

''ಅಲ್ಲಾಹನ ಗ್ರಂಥವೇ ಅತ್ಯುತ್ತಮ ವಚನವಾಗಿದೆ. ಮುಹಮ್ಮದ್‌ರ(ಸ) ವಿಧಾನವೇ ತ್ಯುತ್ತಮ ವಿಧಾನವಾಗಿದೆ. ಬಿದ್‌ಅತ್‌ಗಳು ಅತ್ಯಂತ ಕೆಟ್ಟ ವಿಷಯಗಳಾಗಿವೆ ಮತ್ತು ತಿಯೊಂದು ಬಿದ್‌ಅತ್ ಪಥಭ್ರಷ್ಟತೆಯಾಗಿದೆ.''

[ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ(ರ) -ಮುಸ್ಲಿಮ್]

ಈ ಪ್ರವಾದಿ ವಚನದಲ್ಲಿ ಅಲ್ಲಾಹನ ಗ್ರಂಥವೇ ಸರ್ವ ಶ್ರೇಷ್ಠ ವಚನ ಎಂದು ಹೇಳಲಾಗಿದೆ. ಲ್ಲಾಹನ ವಚನಕ್ಕಿಂತ ಶ್ರೇಷ್ಠ ವಚನ ಬೇರೆ ಇಲ್ಲ ಎಂಬುದು ವ್ಯಕ್ತ. ಆದರೆ ಅನೇಕರಿಗೆ ಅದನ್ನು ಓಸುವ ಅಥವಾ ಆಲಿಸುವ ಆಸಕ್ತಿಯೇ ಇಲ್ಲ. ಅದೆಷ್ಟೋ ಮಂದಿ ಲೋಕದ ಇತರೆಲ್ಲಾ ಸ್ತಕಗಳನ್ನಂತೂ ಓದುತ್ತಾರೆ. ಆದರೆ ಲೋಕದ ಸಾಕ್ಷಾತ್ ಸೃಷ್ಟಿಕರ್ತನಿಂದ ಬಂದ ಗ್ರಂಥವನ್ನು ದುವ ಗೊಡವೆಗೆ ಮಾತ್ರ ಹೋಗುವುದಿಲ್ಲ. ಮನುಷ್ಯನ ಮಟ್ಟಿಗೆ ಇದಕ್ಕಿಂತ ದೊಡ್ಡ ದೌರ್ಭಾಗ್ಯ ೀರೇನಿದೆ?

ಪ್ರವಾದಿ ಮುಹಮ್ಮದ್(ಸ) ಮಾನವಕುಲಕ್ಕೆ ಶಾಶ್ವತ ಆದರ್ಶವಾಗಲು ಬಂದವರು. ಅವರ ವಿಧಾನವೆಂದರೆ ಅದರಲ್ಲಿ ಅವರ ಆರಾಧನಾ ವಿಧಾನ, ಜೀವನ ವಿಧಾನ, ಚಾರಿತ್ರ್ಯ, ಅವರ ಸುನ್ನತ್‌ಗಳು ಎಲ್ಲವೂ ಸೇರಿವೆ. ಎಲ್ಲ ಕ್ಷೇತ್ರಗಳಲ್ಲೂ ಅವರ ವಿಧಾನವೇ ಅತ್ಯುತ್ತಮ ಮತ್ತು ಅನುಕರಣೀಯ.

ಬಿದ್‌ಅತ್ ಎಂದರೆ ಮೂಲತಃ ಧರ್ಮದಲ್ಲಿ ಇಲ್ಲದ, ಆದರೆ ಜನರು ತಾವಾಗಿ ಧರ್ಮದಲ್ಲಿ ಸೇರಿಸಿಕೊಂಡಿರುವ ಆಚರಣೆಗಳು. ಅಲ್ಲಾಹನ ಧರ್ಮದಲ್ಲಿ ಏನಾದರೂ ಸೇರ್ಪಡೆ ಮಾಡುವ ಅಧಿಕಾರ ಯಾರಿಗೂ ಇಲ್ಲ.

ಇಂದು ವಿವಿಧ ಮುಸ್ಲಿಮ್ ಪಂಗಡಗಳು ಧರ್ಮದೊಂದಿಗೆ ಸಂಬಂಧವೇ ಇಲ್ಲದ ಎಷ್ಟೋ ಆಚರಣೆಗಳನ್ನು ಧರ್ಮದಲ್ಲಿ ಸೇರಿಸಿ ಅದನ್ನು ಧರ್ಮದ ಅಂಗವೆಂದು ಹೇಳಿ ಕೊಳ್ಳುತ್ತಿದ್ದಾರೆ. ಇಂತಹ ಅನಾಚಾರಗಳ ಸೇರ್ಪಡೆಯು ಧರ್ಮವನ್ನು ವಿಕೃತಗೊಳಿಸುತ್ತದೆ. ಜನರಿಗೆ ಧರ್ಮವನ್ನು ಅರ್ಥ ಮಾಡಿಕೊಳ್ಳಲು ಪ್ರಯಾಸವಾಗುತ್ತದೆ. ಇಂತಹ ಗೊಂದಲದ ಸನ್ನಿವೇಶದಲ್ಲಿ ಧರ್ಮವನ್ನು ಅದರ ನಿಜರೂಪದಲ್ಲಿ ನೋಡಬೇಕಿದ್ದರೆ ಪವಿತ್ರ ಕುರ್‌ಆನ್ ಮತ್ತು ಪ್ರವಾದಿ ಮುಹಮ್ಮದ್‌ರ(ಸ) ಮಾತು ಕೃತಿಗಳ ಕಡೆಗೆ ಮರಳಬೇಕು. ಅದುವೇ ಸತ್ಯಾಸತ್ಯಗಳನ್ನು ಅಳೆಯುವ ಮಾಪಕವಾಗಿದೆ.

ಅತ್ಯುತ್ತಮ ಜ್ಞಾನ

عَنْ عُثْمَانَ قَالَ قَالَ رَسُولُ اللّٰهِ ﷺ : خَيْرُكُمْ مَنْ تعَلَّمَ الْقُرْآنَ وَعَلَّمَهُ (البخارى)

ಪ್ರವಾದಿ(ಸ) ಹೀಗೆ ಹೇಳಿರುವರು:

''ಪವಿತ್ರ ಕುರ್‌ಆನಿನ ಜ್ಞಾನವನ್ನು ಸ್ವತಃ ಪಡೆದು ಅದನ್ನು ಇತರರಿಗೆ ಬೋಧಿಸುವವನೇ ನಿಮ್ಮ ಪೈಕಿ ಅತ್ಯುತ್ತಮನು.'' [ಹಝ್ರತ್ ಉಸ್ಮಾನ್(ರ) -ಬುಖಾರಿ]

ಪವಿತ್ರ ಕುರ್‌ಆನಿನ ಪ್ರತಿಯೊಂದು ಅಕ್ಷರವೂ ಜಗದೊಡೆಯನಾದ ಅಲ್ಲಾಹ
ವತಿಯಿಂದ ಅವತೀರ್ಣವಾಗಿದೆ. ಅದು ಜ್ಞಾನ ಮತ್ತು ಯುಕ್ತಿಗಳ ಚಿಲುಮೆಯಾಗಿದೆ. ಅ
ವಿಶ್ವದ ರಹಸ್ಯಗಳನ್ನು ಅನಾವರಣಗೊಳಿಸುತ್ತದೆ. ಬದುಕಿನ ವಾಸ್ತವಿಕತೆಗಳನ್ನು ತಿಳಿಸುತ್ತ
ಅದನ್ನೋದಿದಾಗ ಮನುಷ್ಯನಿಗೆ ತನ್ನ ಒಡೆಯನ ಪರಿಚಯವಾಗುತ್ತದೆ. ಸೃಷ್ಟಿಕರ್ತನೊಂದಿ
ಸರಿಯಾದ ಸಂಬಂಧವನ್ನು ಸ್ಥಾಪಿಸಲು ಅವನಿಗೆ ಸಾಧ್ಯವಾಗುತ್ತದೆ. ಇದು ಮಾನವನ ಪಾಲಿ
ಪರಿಪೂರ್ಣ ಮಾರ್ಗದರ್ಶಿಯಾಗಿದೆ. ಇದನ್ನೋದುವವನು ನೈಜ ಜ್ಞಾನವನ್ನು ಪಡೆಯುತ್ತಾ
ಚಾರಿತ್ರ್ಯವಂತ ಸಜ್ಜನನಾಗಿ ಮಾರ್ಪಡುತ್ತಾನೆ. ಇನ್ನು ಪವಿತ್ರ ಕುರ್‌ಆನಿನ ಜ್ಞಾನವನ್ನು ಸ್ವ
ಪ್ರಾಪ್ತಿ ಮಾಡುವುದರ ಜೊತೆಗೆ ಇತರರಿಗೂ ಅದನ್ನು ಬೋಧಿಸುವ ವ್ಯಕ್ತಿ ಅತ್ಯುತ್ತಮನೆಂದು ಈ
ಹದೀಸ್ ತಿಳಿಸುತ್ತದೆ.

ಮರಣೋತ್ತರ ಜೀವನ

ಶಾಶ್ವತ ಮಿತ್ರ

عَنْ اَنَسٍ (رض) قَالَ قَالَ رَسُولُ اللّٰهِ ﷺ : يَتْبَعُ الْمَيِّتَ ثَلٰثَةٌ فَيَرْجِ
اثْنَانِ وَيَبْقَى وَاحِدٌ , يَتْبَعُهُ اَهْلُهُ وَمَالُهُ وَعَمَلُهُ فَيَرْجِعُ اَهْ
وَمَالُهُ وَيَبْقَى عَمَلُهُ (مسلم-كتاب الزهد)

ಪ್ರವಾದಿ(ಸ) ಹೀಗೆ ಹೇಳಿರುವರು:

''ಮರಣಗೊಂಡವನೊಂದಿಗೆ ಮೂರು ವಸ್ತುಗಳು ಹೋಗುತ್ತವೆ. ಆ ಪೈಕಿ ಎರಡು ಸ್ತುಗಳು ಮರಳಿ ಬರುತ್ತವೆ ಮತ್ತು ಒಂದು ವಸ್ತು ಅವನ ಜೊತೆಗೇ ಉಳಿದಿರುತ್ತದೆ. ಅವನ ೊತೆಗೆ ಅವನ ಮನೆಯವರು, ಅವನ ಸಂಪತ್ತು ಮತ್ತು ಅವನ ಕರ್ಮಗಳು ಹೋಗುತ್ತವೆ. ನೆಯವರು ಮತ್ತು ಸಂಪತ್ತು ಮರಳಿ ಬರುತ್ತವೆ. ಅವನ ಕರ್ಮಗಳು ಮಾತ್ರ ಅವನ ಜೊತೆಗೇ ಳಿದಿರುತ್ತವೆ.'' [ಹಝ್ರತ್ ಅನಸ್(ರ) -ಮುಸ್ಲಿಮ್]

ಮನುಷ್ಯನ ಮರಣಾನಂತರ ಅವನ ಮರಣೋತ್ತರ ಲೋಕಕ್ಕೆ ಅವನ ಜೊತೆ ್ರಯಾಣಿಸುವುದು ಅವನ ಕರ್ಮಗಳೇ ಹೊರತು ಅವನ ಸಂಪತ್ತಾಗಲಿ, ಮನೆಯವರಾಗಲಿ ಿಲ್ಲ. ಆದ್ದರಿಂದ ಮನುಷ್ಯನು ಇತರೆಲ್ಲ ವಸ್ತುಗಳಿಗಿಂತ ಹೆಚ್ಚಾಗಿ ತನ್ನ ಶಾಶ್ವತ ಜೀವನದಲ್ಲಿ ನ್ನ ಜೊತೆಗಿರುವ ಕರ್ಮಗಳ ಬಗ್ಗೆ ಚಿಂತಿಸಬೇಕು. ಸಾಧ್ಯವಿರುವಷ್ಟು ಉತ್ತಮ ಕರ್ಮಗಳನ್ನು ಮಾಡುವ ಮೂಲಕ ತನ್ನ ಪರಲೋಕದ ಸುದೀರ್ಘ ಜೀವನವು ಸುಖಮಯವಾಗುವಂತೆ ೋಡಿಕೊಳ್ಳಬೇಕು. ಆದರೆ ಲೋಕದಲ್ಲಿ ಅದೆಷ್ಟೋ ಮಂದಿ, ಈ ವಾಸ್ತವಿಕತೆಯನ್ನು ಮರೆತು ೇವಲ ತಾತ್ಕಾಲಿಕ ಜೀವನದ ಸುಖಕ್ಕಾಗಿ ಸಂಪತ್ತನ್ನು ಸಂಗ್ರಹಿಸುವುದರಲ್ಲಿಯೂ ತಮ್ಮ ಮನೆಯವರ ಐಶಾರಾಮಕ್ಕಾಗಿ ಇಲ್ಲಸಲ್ಲದ ಕೃತ್ಯಗಳನ್ನು ಮಾಡುತ್ತಲೂ ತಮ್ಮ ಅಮೂಲ್ಯ ಜೀವನಾವಧಿಯನ್ನು ವ್ಯರ್ಥಗೊಳಿಸಿ ಬಿಡುತ್ತಾರೆ.

ಮಧ್ಯಂತರ

عَنْ اَبِى هُرَيْرَةَ (رض) عَنِ النَّبِىِّ ﷺ قَالَ : اِنَّ الْمَيِّتَ يَصِيْرُ اِلَى
الْقَبْرِ فَيَجْلِسُ الرَّجُلُ الصَّالِحُ فِى قَبْرِهِ غَيْرَ فَزِعٍ وَلَا مَشْعُوفٍ

مَّ يقَالُ لَهُ فِيمَ كُنْتَ فَيقُوْلُ فِيْ الإِسْلاَمِ ، فَيُقَالُ لَهُ مَا هَذَا
رَّجُلُ فَيقُولُ مُحَمَّدٌ رَسُولُ اللّهِ ﷺ جاءَ نَا بِالْبَيِّنَاتِ مِنْ
نْدِ اللّهِ فَصَدَّقْنَاهُ فَيُقَالُ لَهُ هَلْ رَايْتَ اللّهَ ؟ فَيقُولُ مَا يَنبَغِى
حَدٍ اَنْ يَّرَى اللّهَ ، فَيُفْرَجُ لَهُ فُرْجَةٌ قِبَلَ النَّارِ فَينظُرُ اِلَيْهَا
حْطِمُ بَعْضُهَا بَعْضًا فَيُقَالُ اُنْظُرْ اِلَى مَاوَقَاكَ اللّهُ ثُمَّ
فْرَجُ لَهُ فُرْجَةٌ قِبَلَ الْجَنَّةِ فَيَنْظُرُ اِلَى زَهْرَتِهَا ومَا فِيهَا ، فَيُقَالُ
هُ هَذَا مَقْعَدُكَ وَيُقَالُ لَهُ عَلَى الْيَقِينِ كُنْتَ وَعَلَيْهِ مُتُّ وَعَلَيْهِ
تُبْعَثُ اِنْ شَاءَ اللّهُ. وَيُجْلَسُ الرَّجُلُ السُّوْءُ فِى قَبْرِه فَزِعًا مَشْعُوْفًا
فَيُقَالُ لَهُ فِيمَ كُنْتَ ؟ فَيقُولُ لاَ اَدْرِى فَيُقَالُ لَهُ مَا هَذَا
الرَّجُلُ ؟ فَيقُولُ سَمِعْتُ النَّاسَ يَقُولُونَ قَوْلاً فَقُلْتُ فَيُفْرَجُ
لَهُ قِبَلَ الجَنَّةِ فَيَنْظُرُ اِلَى زَهْرَتِهَا وَمَا فِيهَا ، فَيُقَالُ لَهُ انْظُرْ اِلَى
مَا صَرَفَ اللّهُ عَنْكَ ، ثُمَّ يُفْرَجُ لَهُ فَرْجَةٌ قِبَلَ النَّارِ فَينْظُرُ
اِلَيْهَا يَحْطِمُ بَعْضُهَا بَعْضًا ، فَيُقَالُ لَهُ هَذَا مَقْعَدُكَ ، عَلَى الشَّكِّ
كُنْتَ وَعَلَيْهِ مُتَّ وَعَلَيْهِ تُبْعَثُ اِنْ شَاءَ اللّهُ تَعَالَى
(ابن ماجة-باب ذكر القبر)

ಪ್ರವಾದಿ(ಸ) ಹೀಗೆ ಹೇಳಿರುವರು:

''ಮೃತನು ಗೋರಿಗೆ ತಲುಪಿದಾಗ, ಅವನು ಲೋಕದಲ್ಲಿ ಸಜ್ಜನನಾಗಿದ್ದರೆ, ಅವನು ತನ್ನ ಗೋರಿಯಲ್ಲಿ ಯಾವುದೇ ಭಯಭೀತಿಯಿಲ್ಲದೆ ಎದ್ದು ಕುಳಿತುಕೊಳ್ಳುವನು. ಆ ಬಳಿಕ ಅವನೊಡನೆ 'ನೀನು ಯಾವುದರಲ್ಲಿ(ಯಾವ ಧರ್ಮದಲ್ಲಿ) ಇದ್ದೆ' ಎಂದು ಪ್ರಶ್ನಿಸಲಾಗುತ್ತದೆ. 'ನಾನು ಇಸ್ಲಾಮಿನಲ್ಲಿದ್ದೆ' ಎಂದು ಅವನು ಹೇಳುತ್ತಾನೆ. 'ಈ ವ್ಯಕ್ತಿ ಯಾರು' ಎಂದು

ನೊಡನೆ ಕೇಳಲಾಗುತ್ತದೆ. 'ಅವರು ಅಲ್ಲಾಹನ ಸಂದೇಶವಾಹಕರಾದ ಮುಹಮ್ಮದ್(ಸ). ರು ಅಲ್ಲಾಹನ ಸುವ್ಯಕ್ತ ನಿದರ್ಶನಗಳೊಂದಿಗೆ ನಮ್ಮ ಬಳಿಗೆ ಬಂದಾಗ, ನಾವು ಅವರನ್ನು ರ್ಥಿಸಿದೆವು' ಎಂದು ಅವನು ಉತ್ತರಿಸುತ್ತಾನೆ. 'ನೀನು ಅಲ್ಲಾಹನನ್ನು ನೋಡಿರುವೆಯಾ?' ದು ಅವನೊಡನೆ ವಿಚಾರಿಸಲಾಗುತ್ತದೆ. 'ಯಾರೂ ಅಲ್ಲಾಹನನ್ನು ನೋಡುವಂತಿಲ್ಲ' ದು ಅವನು ಉತ್ತರಿಸುತ್ತಾನೆ. ಆ ಬಳಿಕ ಅವನಿಗಾಗಿ ನರಕದ ಕಡೆಗಿರುವ ಕಿಟಕಿಯನ್ನು ಯಲಾಗುತ್ತದೆ. ಅವನು ಅದರಲ್ಲಿನ ವಿನಾಶಕಾರಿ ಭೀಕರ ದೃಶ್ಯಗಳನ್ನು ನೋಡುತ್ತಾನೆ. ಲ್ಲಾಹನು ನಿನ್ನನ್ನು ಎಂತಹ ವಸ್ತುವಿನಿಂದ ರಕ್ಷಿಸಿದ್ದಾನೆ ಎಂಬುದನ್ನು ನೋಡು' ಎಂದು ನೊಡನೆ ಹೇಳಲಾಗುತ್ತದೆ. ಆ ಬಳಿಕ ಅವನಿಗಾಗಿ ಸ್ವರ್ಗದ ದಿಕ್ಕಿಗಿರುವ ಕಿಟಕಿಯನ್ನು ಯಲಾಗುತ್ತದೆ. ಅವನು ಅದರ ವೈಭವವನ್ನೂ ಅದರಲ್ಲಿರುವ ದೃಶ್ಯಗಳನ್ನೂ ನೋಡುತ್ತಾನೆ. ಅವನೊಡನೆ 'ಇದು ನಿನ್ನ ನೆಲೆ, ನೀನು ವಿಶ್ವಾಸದೊಂದಿಗೇ ಬದುಕಿದೆ. ವಿಶ್ವಾಸದೊಂದಿಗೇ ರಣಗೊಂಡೆ. ಇನ್‌ಶಾ ಅಲ್ಲಾಹ್(ಅಲ್ಲಾಹನಿಚ್ಛಿಸಿದರೆ) ವಿಶ್ವಾಸದೊಂದಿಗೇ ನಿನ್ನನ್ನು ಪುನಃ ವಂತಗೊಳಿಸಲಾಗುವುದು' ಎಂದು ಹೇಳಲಾಗುತ್ತದೆ.

ಅತ್ತ ಕೆಟ್ಟ ವ್ಯಕ್ತಿಯಾಗಿ ಬದುಕಿದ್ದವನು ತನ್ನ ಗೋರಿಯಲ್ಲಿ ಬಹಳ ಭಯ ಮತ್ತು ಬರಿಯೊಂದಿಗೆ ಎದ್ದು ಕುಳಿತು ಕೊಳ್ಳುತ್ತಾನೆ. 'ನೀನು ಯಾವುದರಲ್ಲಿದ್ದೆ' ಎಂದು ಅವನೊಡನೆ ಳಲಾದಾಗ ಅವನು 'ನನಗೆ ತಿಳಿದಿಲ್ಲ' ಎಂದು ಹೇಳುತ್ತಾನೆ. 'ಈ ವ್ಯಕ್ತಿ ಯಾರು?' ಎಂದು ದಾಗ 'ಇವರ ಕುರಿತು ಜನರಿಂದ ಕೇಳಿದ್ದನ್ನೇ ನಾನು ಹೇಳಿದ್ದೆ' (ಅವರ ಪ್ರವಾದಿತ್ವವನ್ನು ಕರಿಸಿದ್ದೆ) ಎಂದು ಉತ್ತರಿಸುತ್ತಾನೆ. ತರುವಾಯ ಅವನಿಗಾಗಿ ಸ್ವರ್ಗದ ಕಿಟಕಿಯನ್ನು ಯಲಾಗುತ್ತದೆ. ಅವನು ಅದರ ವೈಭವವನ್ನೂ ಅದರೊಳಗಿನ ದೃಶ್ಯಗಳನ್ನೂ ನೋಡುತ್ತಾನೆ. ೋಡು ಅಲ್ಲಾಹನು ನಿನ್ನನ್ನು ಇದರಿಂದ ವಂಚಿತಗೊಳಿಸಿರುವನು' ಎಂದು ಹೇಳಲಾಗುತ್ತದೆ. ಂತರ ಅವನಿಗಾಗಿ ನರಕದ ಕಿಟಕಿಯನ್ನು ತೆರೆಯಲಾಗುತ್ತದೆ. ನರಕದ ಒಂದು ಭಾಗವು ನ್ನೊಂದು ಭಾಗವನ್ನು ನುಂಗುತ್ತಿರುವಂತಹ ದೃಶ್ಯವನ್ನು ಅವನು ನೋಡುತ್ತಾನೆ. ಆಗ ನೊಡನೆ 'ಇದುವೇ ನಿನ್ನ ನೆಲೆ. ನೀನು ಸಂದೇಹದಲ್ಲೇ ಬದುಕಿದೆ. ಸಂದೇಹದೊಂದಿಗೇ ರಣ ಹೊಂದಿದೆ. ಸಂದೇಹದೊಂದಿಗೇ ನಿನ್ನನ್ನು ಎಬ್ಬಿಸಲಾಗುವುದು ಇನ್‌ಶಾ ಅಲ್ಲಾಹ್!' ದು ಹೇಳಲಾಗುವುದು. [ಹರ್ದೀಸ್ ಅಬೂ ಹುರೈರಾ(ರ) -ಇಬ್ನು ಮಾಜಃ]

ಮರಣಾನಂತರ ಕೆಲವರನ್ನು ದಫನ ಮಾಡಲಾಗುತ್ತದೆ. ಕೆಲವರನ್ನು ಸುಡಲಾಗುತ್ತದೆ. ವರು ನೀರು ಪಾಲಾಗುವುದೂ ಇದೆ. ಅದೇನಿದ್ದರೂ ಮರಣಾನಂತರ ನಾಶವಾಗುವುದು ೀರ ಮಾತ್ರ. ಆತ್ಮವು ನಾಶವಾಗುವುದಿಲ್ಲ. ಈ ಹದೀಸ್‌ನಲ್ಲಿ ಗೋರಿ ಎಂದು ಹೇಳಿರುವುದು, ರಣಾನಂತರ ಪ್ರತಿಯೊಬ್ಬ ಮನುಷ್ಯನ ಆತ್ಮವು ಹೋಗಿ ತಲಪುವಂತಹ 'ಬರ್ಝಖ್' ಜಗತ್ತಿನ ಗ್ಗೆ. ಅದು ಲೋಕ ಮತ್ತು ಪರಲೋಕಗಳ ನಡುವೆ ಇರುವ ಒಂದು ಮಧ್ಯಂತರ ಜಗತ್ತು. ತವರ ಆತ್ಮವು ಈ ಮಧ್ಯಂತರ ಜಗತ್ತಿನಲ್ಲೂ ಪರೀಕ್ಷೆಯ ಹಂತಗಳನ್ನು ದಾಟಬೇಕಾಗುತ್ತದೆ. ಲಕ್‌ಗಳು ಅವರೊಂದಿಗೆ ಧರ್ಮ ಮತ್ತು ಪ್ರವಾದಿಗಳ ಬಗ್ಗೆ ವಿಚಾರಿಸುತ್ತಾರೆ. ಲೋಕದಲ್ಲಿ

ಆ ವ್ಯಕ್ತಿ ಸತ್ಯಧರ್ಮದ ಮೇಲೆ ವಿಶ್ವಾಸವಿರಿಸಿ ಇಸ್ಲಾಮಿನ ಪ್ರಕಾರ ಜೀವಿಸಿದ್ದರೆ ಗೋರಿಯ ಅವನಿಗೆ ಯಾವುದೇ ಬಗೆಯ ಸಂಕಟವುಂಟಾಗದು. ಅವನು ಮಲಕ್‌ಗಳ ಪ್ರಶ್ನೆಗಳಿಗೆ ಸರಿಯ ಉತ್ತರಿಸುವನು. ಆ ಬಳಿಕ ಅವನಿಗೆ, ಪುನರುತ್ಥಾನ ದಿನದ ಬಳಿಕ ಅವನು ಶರೀರ ಸಹಿ ಪ್ರವೇಶಿಸಲಿರುವಂತಹ ಸ್ವರ್ಗದ ಸ್ಥಳವನ್ನು ತೋರಿಸಲಾಗುವುದು. ಈ ರೀತಿ ಆ ಮಧ್ಯಂ ಅವಧಿಯು ಅವನ ಪಾಲಿಗೆ ಬಹಳ ಶಾಂತಿ ಮತ್ತು ಸಮಾಧಾನದ ಅವಧಿಯಾಗಿರುವುದು.

ಆದರೆ ಆ ವ್ಯಕ್ತಿ ಲೋಕದಲ್ಲಿ ಧರ್ಮ ಧಿಕ್ಕಾರಿಯಾಗಿ ಅಥವಾ ಕಪಟ ವಿಶ್ವಾಸಿಯಾ ಬದುಕಿದ್ದರೆ ಅವನಿಗೆ ಗೋರಿಯಲ್ಲಿ ಮಲಕ್‌ಗಳು ಕೇಳುವ ಪ್ರಶ್ನೆಗೆ ಸೂಕ್ತ ಉತ್ತರ ನೀಡ ಸಾಧ್ಯವಾಗದು. ಅವನು ಪರೀಕ್ಷೆಯಲ್ಲಿ ಸೋಲುವನು. ಅವನಿಗೆ ಪುನರುತ್ಥಾನದ ಬಳಿಕ ಅವ ಸಶರೀರವಾಗಿ ಕಳುಹಿಸಲ್ಪಡಲಿರುವ ನರಕವನ್ನು ತೋರಿಸಲಾಗುವುದು. ಈ ರೀತಿ ಆ ಮಧ್ಯಂತ ಅವಧಿಯು ಅವನ ಪಾಲಿಗೆ ಬಹಳ ಯಾತನಾಮಯವಾಗಿರುವುದು.

ಜೀವನದಾದ್ಯಂತ ಪ್ರವಾದಿ ಮುಹಮ್ಮದ್‌ರನ್ನು(ಸ) ವಿಶ್ವಾಸಪೂರ್ವಕ ಸ್ಮರಿಸುತ್ತಾ ಅವ ನಡೆನುಡಿಗಳನ್ನು ಅನುಸರಿಸುತ್ತಿದ್ದ ಮನುಷ್ಯನಿಗೆ, ಪ್ರವಾದಿವರ್ಯರ(ಸ) ಕುರಿತು ಕೇಳಲಾ ಪ್ರಶ್ನೆಗೆ ಉತ್ತರಿಸಲು ಸ್ವಲ್ಪವೂ ಪ್ರಯಾಸವಾಗದು. ಆದರೆ ಅವರ ಪ್ರವಾದಿತ್ವವನ್ನು ನಿರಾಕರಿಸಿ ಹಾಗೂ ಪ್ರವಾದಿತ್ವವನ್ನು ಮಾತಿನಲ್ಲಿ ಅಂಗೀಕರಿಸಿದರೂ ಕೃತಿಯಲ್ಲಿ ಅವರ ಬೋಧನೆಗಳಿ ತೀರಾ ವಿರುದ್ಧವಾದುದನ್ನು ಮಾಡುತ್ತಿದ್ದ ಜನರಿಗೆ ಅಂದು ಯಾವ ಉತ್ತರವೂ ತೋಚದು.

ಪುನರುತ್ಥಾನ ದಿನವು ನಮ್ಮಿಂದ ತುಸು ದೂರವಿರಬಹುದು. ಆದರೆ ಮರಣ ಮತ ಅನಂತರದ ಮಧ್ಯಂತರವು ಖಂಡಿತ ದೂರವಿಲ್ಲ. ನಮ್ಮ ಕರ್ಮಗಳ ಪೂರ್ಣ ಪ್ರತಿಫಲವಂತು ಪುನರುತ್ಥಾನದ ನಂತರವಷ್ಟೇ ಸಿಗುವುದು. ಆದರೆ ಪ್ರತಿಫಲಗಳ ಸರಣಿ ಮರಣದೊಂದಿಗೆ ಆರಂಭವಾಗುತ್ತದೆ. ಮನುಷ್ಯನು ಈ ವಾಸ್ತವಿಕತೆಯನ್ನು ಅರಿತಿದ್ದರೆ!

ಮುನ್ನೋಟ

عَنْ اِبْنِ عُمَرَ (رض) قَالَ قَالَ النَّبِيُّ ﷺ اِذَا مَاتَ الرَّجُلُ عُرِضَ عَلَيْهِ مَقْعَدُهُ بِالْغَدَاةِ وَالْعَشِيِّ اِنْ كَانَ مِنْ اَهْلِ الْجَنَّةِ فَالْجَنَّةُ وَاِنْ كَانَ مِنْ اَهْلِ النَّارِ فَالنَّارُ . قَالَ ثُمَّ يُقَالُ هٰذَا مَقْعَدُكَ الَّذِى تُبْعَثُ اِلَيْهِ يَوْمَ الْقِيَامَةِ

(مسلم-كتاب التوبة , بخارى-كتاب الزهد)

ಪ್ರವಾದಿ(ಸ) ಹೀಗೆ ಹೇಳಿರುವರು:

''ಮನುಷ್ಯನು ಮೃತನಾದಾಗ ಅವನಿಗೆ ನಿತ್ಯವೂ ಸಂಜೆ ಮತ್ತು ಮುಂಜಾನೆ ಅವನ ಯನ್ನು ತೋರಿಸಲಾಗುತ್ತದೆ. ಅವನು ಸ್ವರ್ಗಕ್ಕೆ ಅರ್ಹನಾಗಿದ್ದರೆ ಅವನಿಗೆ ಸ್ವರ್ಗದ ಒಂದು ್ಯವನ್ನು ತೋರಿಸಲಾಗುವುದು ಮತ್ತು ಅವನು ನರಕಕ್ಕೆ ಯೋಗ್ಯನಾಗಿದ್ದರೆ ಅವನಿಗೆ ನರಕದ ದು ದೃಶ್ಯವನ್ನು ತೋರಿಸಲಾಗುವುದು. ಅನಂತರ ಅವನೊಡನೆ, ಪುನರುತ್ಥಾನ ದಿನ ಇದುವೆ ನೆಲೆಯಾಗಿರುವುದು ಎಂದು ಹೇಳಲಾಗುವುದು.''

[ಹಝ್ರತ್ ಇಬ್ನು ಉಮರ್(ರ) -ಬುಖಾರಿ, ಮುಸ್ಲಿಮ್]

ಮರಣವು ಮನುಷ್ಯನ ಅಂತ್ಯವಲ್ಲ, ಅದು ಆತ್ಮ ಮತ್ತು ಶರೀರಗಳು ಪರಸ್ಪರ ಬೇರ್ಪಡುವ ಟನೆ ಮಾತ್ರ. ಶರೀರ ನಾಶವಾಗುತ್ತದೆ. ಆದರೆ ಆತ್ಮ ಉಳಿಯುತ್ತದೆ. ಅದು ಈ ಲೋಕದಿಂದ, ಲೋಕ ಮತ್ತು ಪರಲೋಕದ ನಡುವಣ ಮಧ್ಯಂತರ ಅವಧಿಯಾಗಿರುವ ಬರ್ಝಖ್ ೀಕಕ್ಕೆ ವರ್ಗವಾಗುತ್ತದೆ. ಅದು ಪುನರುತ್ಥಾನ ದಿನದ ವರೆಗೂ ಅಲ್ಲೇ ಇರುತ್ತದೆ. ಲೋಕದಲ್ಲಿ ನ್ನು ಸ್ವರ್ಗಕ್ಕೊಯ್ಯಲು ಅರ್ಹವಾದ ಕರ್ಮಗಳನ್ನು ಮಾಡಿದವನು ಬರ್ಝಖ್ ಲೋಕದಲ್ಲಿ ್ಗದ ದೃಶ್ಯಗಳನ್ನು ಕಾಣುತ್ತಿರುವನು. ಜೀವನದಲ್ಲಿ ತಾನು ನರಕಕ್ಕೆ ಅರ್ಹನೆಂದು ಸಾಬೀತು ತಿಸಿದವನು ಅಲ್ಲಿ ನರಕದ ದೃಶ್ಯಗಳನ್ನು ಕಾಣುತ್ತಿರುವನು.

ನಿತ್ಯವೂ ಸಂಜೆ ಮುಂಜಾನೆಗಳಲ್ಲಿ ಒಬ್ಬ ವ್ಯಕ್ತಿಗೆ ಅವನ ನೆಲೆಯನ್ನು ತೋರಿಸುವುದೆಂದರೆ ವನು ಹೋಗಲಿರುವ ಸ್ಥಾನದ ಮುನ್ನೋಟ ನೀಡುವುದು ಮತ್ತು ಅದರ ಕಿಂಚಿತ್ ಅನುಭವ ಡುವುದಾಗಿದೆ. ಬರ್ಝಖ್ ಲೋಕದ ಪರಿಸ್ಥಿತಿಗಳನ್ನು ನಾವು ನಮ್ಮ ಲೋಕದ ಪರಿಸ್ಥಿತಿಗಳಿಗೆ ೋಲಿಸಿ ಊಹಿಸುವಂತಿಲ್ಲ.

ವಿಚಾರಣೆಯ ಮೈದಾನ

عَنْ سَهْلِ بْنِ سَعْدٍ (رض) قَالَ سَمِعْتُ النَّبِيَّ صلى الله عليه وسلم يَقُولُ يُحْشَ
النَّاسُ يَوْمَ الْقِيَامَةِ عَلَى اَرْضٍ بَيْضَاءَ عَفْرَاءَ كَقُرْصَةِ النَّقِ
لَيْسَ فِيهَا مَعْلَمٌ لاَحَدٍ (بخاری-کتاب الرقاق)

ಪ್ರವಾದಿ(ಸ) ಹೀಗೆ ಹೇಳಿರುವರು:

''ಪುನರುತ್ಥಾನ ದಿನ ಜನರನ್ನು ಮೈದಾರೊಟ್ಟಿಯಂತೆ ಕೆಂಪೇರಿದ ಶ್ವೇತ ನೆಲದಲ್ಲಿ ಂದುಗೂಡಿಸಲಾಗುವುದು. ಅದರಲ್ಲಿ ಯಾರದೇ ಮನೆ ಇತ್ಯಾದಿಗಳ ಯಾವ ಗುರುತೂ ರಲಾರದು.''

[ಹಝ್ರತ್ ಸಹ್ಲ್ ಬಿನ್ ಸಅದ್(ರ) -ಬುಖಾರಿ]

ಪವಿತ್ರ ಕುರ್‌ಆನ್ ಮತ್ತು ಹದೀಸ್‌ಗಳಿಂದ ತಿಳಿಯುವಂತೆ ಪುನರುತ್ಥಾನ ದಿನ ಎಲ್ಲ ಾನವರನ್ನು ಸೇರಿಸುವ ಸ್ಥಳವು ಇದೇ ಭೂಮಿಯಾಗಿರುವುದು. ಆದರೆ ಅದರ ಸ್ವರೂಪವು ಂದಿನಂತೆ ಇರಲಾರದು. ಅನೇಕ ಬದಲಾವಣೆಗಳಾಗುವುವು. ಈ ಹದೀಸ್ ತಿಳಿಸುವಂತೆ,

ಅಂದು ಆದರ ವರ್ಣವು ಶ್ವೇತವಾಗಿದ್ದು ಕೆಂಪೇರಿರುವುದು. ಎರಡನೆಯದಾಗಿ ರೊಟ್ಟಿಯ ಅದರ ಆಕಾರವು ವೃತ್ತಾಕಾರದಲ್ಲಿರುವುದು. ಮೂರನೆಯದಾಗಿ ಅದು ಸಮತಟ ಬಯಲಿನಂತಾಗುವುದು. ಈಗ ಇರುವ ಕಟ್ಟಡ ಇತ್ಯಾದಿಗಳ ಗುರುತು ಕೂಡಾ ಅಂ ಉಳಿಯದು.

ಭಯಾನಕ ದಿನ

نْ عَائِشَةَ (رض) قَالَتْ قَالَ رَسُولُ اللّٰهِ ﷺ : يُحْشَرُونَ
فَاةً عُرَاةً غُرْلاً فَقُلْتُ يَارَسُولَ اللّٰهِ الرِّجَالُ وَالنِّسَاءُ يَنْظُرُ
ضُهُمْ اِلَى بَعْضٍ فَقَالَ الْاَمْرُ اَشَدُّ مِنْ اَنْ يُّهِمَّهُمْ ذَاكَ
(بخاری کتاب الرقاق)

ಒಮ್ಮೆ ಪ್ರವಾದಿ(ಸ) ಹೇಳಿದರು:

''(ಪುನರುತ್ಥಾನ ದಿನ) ಜನರನ್ನು ಒಟ್ಟು ಸೇರಿಸುವಾಗ ಜನರ ಕಾಲುಗಳು ನಗ್ನವಾಗಿರುವು ಅವರ ಶರೀರಗಳು ಬೆತ್ತಲೆಯಾಗಿರುವುವು ಮತ್ತು ಅವರು ವೃತ್ತಚ್ಛೇದಿತರಾಗಿರಲಾರರು.''

ಆಗ ನಾನು 'ಹಾಗಿದ್ದರೆ ಸ್ತ್ರೀ-ಪುರುಷರು ಪರಸ್ಪರರನ್ನು ನೋಡುವರೇ?' ಎಂ ಪ್ರಶ್ನಿಸಿದೆ. ಆದಕ್ಕುತ್ತರವಾಗಿ ಪ್ರವಾದಿ(ಸ) ಹೇಳಿದರು:

''ಅಂದಿನ ದಿನ ಎಷ್ಟು ಭಯಾನಕವಾಗಿರುವುದೆಂದರೆ, ಯಾರಿಗೂ ಯಾರೆಡೆ ನೋಡುವ ಪ್ರಜ್ಞೆಯೇ ಇರಲಾರದು.'' [ಹಝ್ರತ್ ಆಯಿಶಾ(ರ) -ಬುಖಾ

ಪುನರುತ್ಥಾನ ದಿನ ಮನುಷ್ಯನನ್ನು ಪುನಃ ಸೃಷ್ಟಿಸುವ ಬಗ್ಗೆ ಪವಿತ್ರ ಕುರ್‌ಆನ್ 'ನಾ ಮೊದಲ ಬಾರಿ ಸೃಷ್ಟಿಸಿದಂತೆಯೇ ಅದರ ಪುನರಾವರ್ತನೆ ಮಾಡುವೆವು. ಇದು ನ ಮೇಲೆ ಕಡ್ಡಾಯವಾಗಿರುವ ವಾಗ್ದಾನ. ನಾವಿದನ್ನು ಮಾಡಿಯೇ ತೀರುವೆವು' ಎಂ ಹೇಳಿದೆ. (21:104) ಈ ಹದೀಸ್‌ನಲ್ಲಿ ಸ್ಪಷ್ಟ ಪಡಿಸಲಾಗಿರುವಂತೆ ಮನುಷ್ಯನು ತಾಯಿ ಉದರದಿಂದ ಚಪ್ಪಲಿ, ವಸ್ತ್ರ ವೃತ್ತಚ್ಛೇದನಗಳಿಲ್ಲದೆ ಯಾವ ರೂಪದಲ್ಲಿ ಹುಟ್ಟಿ ಬಂದಿರುವನ ಅದೇ ರೀತಿ ಪುನರುತ್ಥಾನ ದಿನ ಅವನನ್ನು ಪುನಃ ಸೃಷ್ಟಿಸಲಾಗುವುದು. ಅಂದಿನ ದಿನವು ಎ ಭೀಕರವಾಗಿರುವುದೆಂದರೆ, ಎಲ್ಲರಿಗೂ ಸ್ವತಃ ತಮ್ಮದೇ ಚಿಂತೆ ತಗುಲಿರುವುದು. ಇತ ನಗ್ನತೆಯ ಕಡೆಗೆ ಗಮನ ಹರಿಸುವಷ್ಟು ನಿಶ್ಚಿಂತತೆ ಯಾರಿಗೂ ಇರಲಾರದು. ಮನುಷ್ಯ ತನ್ನ ಮರಣಾನಂತರ ಒಮ್ಮೆ ಹುಟ್ಟುತ್ತಾನೆ ಮತ್ತು ಅವನ ಆ ಹುಟ್ಟು ಮನುಷ್ಯ ರೂಪದ ಆಗುತ್ತದೆ. ಮನುಷ್ಯನು ತನ್ನ ಮರಣಾನಂತರ ಪ್ರಾಣಿ, ಪಕ್ಷಿ , ವೃಕ್ಷ ಇತ್ಯಾದಿ ರೂಪಗಳ ಜನಿಸುತ್ತಾನೆಂಬ ಪುನರ್ಜನ್ಮವಾದವನ್ನು ಇಸ್ಲಾಮ್ ಅಂಗೀಕರಿಸುವುದಿಲ್ಲ.

ನೈಜ ಸುಖ

عَنْ اَنَسٍ (رض) عَنِ النَّبِيِّ ﷺ قَالَ : اللَّهُمَّ لاَ عَيْشَ اِلَّا عَيْ
الْآخِرَةِ (بخارى كتاب الرقاق

ಪ್ರವಾದಿ(ಸ) ಹೀಗೆ ಹೇಳಿರುವರು: ''ದೇವಾ! ಪರಲೋಕದ ಜೀವನವೇ ನಿಜವಾದ ವನ.'' [ಹಝ್ರತ್ ಅನಸ್(ರ) -ಬುಖಾರಿ]

عَنْ سَهْلٍ (رض) قَالَ سَمِعْتُ النَّبِيَّ ﷺ يَقُولُ : مَوْضِعُ سَوْطٍ فِ
الْجَنَّةِ خَيْرٌ مِنَ الدُّنْيَا وَمَا فِيهَا (بخارى-كتاب الرقاق

ಪ್ರವಾದಿ(ಸ) ಹೀಗೆ ಹೇಳಿರುವರು:

''ಸ್ವರ್ಗದಲ್ಲಿ ಒಂದು ಚಾಟಿಯಷ್ಟು ಸ್ಥಳ ಸಿಕ್ಕರೆ ಅದು ಈ ಲೋಕ ಮತ್ತು ಇದರಲ್ಲಿರುವ ಲ್ಲ ವಸ್ತುಗಳಿಗಿಂತ ಒಳ್ಳೆಯದು.'' [ಹಝ್ರತ್ ಸಹ್ಲ್(ರ) -ಬುಖಾರಿ]

ಶಾಶ್ವತ ಸುಖವನ್ನು ನೀಡುವ ಜೀವನವೇ ನೈಜ ಜೀವನ. ಇಹಲೋಕದ ಜೀವನದಲ್ಲಿ ಷ್ಟು ಸುಖಗಳಿದ್ದರೂ ಈ ಜೀವನವು ಅಪಾಯ, ಅಸ್ಥಿರತೆ, ಭಯ ಮತ್ತು ಅತೃಪ್ತಿಗಳಿಂದ ವರಿಸಲ್ಪಟ್ಟಿದೆ. ಇಲ್ಲಿ ಮನುಷ್ಯನಿಗೆ ಸಿಗುವ ಪ್ರತಿಯೊಂದು ಸುಖವು ಮುಂದೆ ಬರಲಿರುವ ಃಖಕ್ಕೆ ಪೀಠಿಕೆಯಾಗಿರುತ್ತದೆ. ಮರಣವಂತೂ ಜೀವನದ ಎಲ್ಲ ಸುಖಗಳ ಮೇಲೂ ತೆರೆ ಳೆದು ಬಿಡುತ್ತದೆ. ಇಂತಹ ತಾತ್ಕಾಲಿಕ ಮತ್ತು ಅಸ್ಥಿರ ಜೀವನವನ್ನು ನೈಜ ಜೀವನವೆನ್ನುವಂತಿಲ್ಲ. ದ್ವಿರುದ್ಧವಾಗಿ ಪರಲೋಕವನ್ನೇ ತಮ್ಮ ಗುರಿಯಾಗಿ ಮಾಡಿಕೊಂಡವರಿಗೆ ಆ ಜೀವನವೇ ;ಜ ಜೀವನವಾಗಿರುತ್ತದೆ. ಅಲ್ಲಿಯ ಸುಖ ಶಾಶ್ವತ. ಅಲ್ಲಿ ಭಯವಾಗಲಿ, ರೋಗವಾಗಲಿ, ಸ್ಥಿರತೆಯಾಗಲಿ, ಅತೃಪ್ತಿಯಾಗಲಿ ಕಿಂಚಿತ್ತೂ ಇಲ್ಲ. ಅಲ್ಲಿಯ ಸುಖಮಯ, ಸಮೃದ್ಧ ಜೀವನ ಂದೂ ಕೊನೆಗಾಣುವುದಿಲ್ಲ. ಇದೇ ದೃಷ್ಟಿಯಿಂದ ಇಲ್ಲಿ ಪರಲೋಕದ ಜೀವನವನ್ನು ನಿಜವಾದ ೀವನವೆಂದು ಬಣ್ಣಿಸಲಾಗಿದೆ. ಈ ವಾಸ್ತವಿಕತೆಯನ್ನು ಮನವರಿಕೆ ಮಾಡಿಕೊಂಡ ಜನರು, ಈ ೋಕ ಮತ್ತು ಇಲ್ಲಿಯ ಜೀವನದ ಬಗೆಗಿನ ತಮ್ಮ ದೃಷ್ಟಿಕೋನವನ್ನೇ ಬದಲಾಯಿಸಿಕೊಳ್ಳುತ್ತಾರೆ.

ವಾಸ್ತವಿಕ ಅನುಭವಗಳು

عَنْ اَنَسٍ (رض) قَالَ قَالَ رَسُولُ اللَّهِ ﷺ يُؤتَى بِاَنْعَمِ اَهْلِ الدُّنْيَ
مِنْ اَهْلِ النَّارِ يَوْمَ الْقِيَامَةِ فَيُصْبَغُ فِي النَّارِ صَبْغَةً ثُمَّ يُقَالُ

ابْنَ آدَمَ هَلْ رَأَيْتَ خَيْرًا قَطُّ ؟ هَلْ مَرَّ بِكَ نَعِيمٌ قَطُّ ؟
قُولُ لاَ وَاللَّهِ يَارَبِّ! وَيُؤْتَى بِاشَدِّ النَّاسِ بُؤْسًا فِي الدُّنْيَا
ْ اَهْلِ الْجَنَّةِ فَيُصْبَغُ صَبْغَةً فِي الْجَنَّةِ فَيُقَالُ لَهُ يَاابْنَ آدَمَ
لْ رَأَيْتَ بُؤْسًا قَطُّ ؟ هَلْ مَرَّ بِكَ شِدَّةٌ قَطُّ ؟ فَيَقُولُ لاَ
اللَّهِ يَارَبِّ ! مَا مَرَّبِي بُؤْسٌ قَطُّ وَلَا رَأَيْتُ شِدَّةً قَطُّ
(مسلم كتاب صبغة القيامة)

ಪ್ರವಾದಿ(ಸ) ಹೀಗೆ ಹೇಳಿರುವರು:

"ಪುನರುತ್ಥಾನ ದಿನ, ನರಕಕ್ಕೆ ಅರ್ಹರೆಂದು ಪರಿಗಣಿತರಾದವರ ಪೈಕಿ ಈ ಲೋಕದ ಅತಿ ಹೆಚ್ಚು ಸುಖ ಸಂಪನ್ನನಾಗಿದ್ದ ಒಬ್ಬ ವ್ಯಕ್ತಿಯನ್ನು ತರಲಾಗುವುದು. ಅವನನ್ನು ನರಕಾಗ್ನಿಯ ಒಮ್ಮೆ ಮುಳುಗಿಸಿ ತೆಗೆಯಲಾಗುವುದು. ಆ ಬಳಿಕ 'ಆದಮನ ಮಗನೇ! ನೀನೆಂದಾದರ ಸಂಪನ್ನತೆಯನ್ನು ನೋಡಿರುವೆಯಾ? ನಿನಗೆಂದಾದರೂ ಸುಖವು ಪ್ರಾಪ್ತವಾಗಿತ್ತೇ?' ಎಂಂ ಪ್ರಶ್ನಿಸಲಾಗುವುದು. ಅವನು ಹೇಳುವನು:

'ನನ್ನ ಪ್ರಭೂ! ದೇವನಾಣೆಗೂ ಇಲ್ಲ'. ಇದೇ ರೀತಿ ಸ್ವರ್ಗಕ್ಕೆ ಅರ್ಹರಾಗಿರುವವರ ಪೈ ಈ ಲೋಕದಲ್ಲಿ ಅತಿ ಹೆಚ್ಚಿನ ಕಷ್ಟ ಕಾರ್ಪಣ್ಯಗಳನ್ನು ಸಹಿಸಿದ ಒಬ್ಬ ವ್ಯಕ್ತಿಯನ್ನು ತರಲಾಗುವುದ ಅವನನ್ನು ಸ್ವರ್ಗದಲ್ಲೊಮ್ಮೆ ಮುಳುಗಿಸಿ ತೆಗೆದು 'ಆದಮನ ಮಗನೇ! ನೀನೆಂದಾದರ ಸಂಕಷ್ಟವನ್ನು ಅನುಭವಿಸಿರುವೆಯಾ? ಸಂಕಟಗಳು ಎಂದಾದರೂ ನಿನ್ನನ್ನು ಬಾಧಿಸಿವೆಯೇ? ಎಂದು ಪ್ರಶ್ನಿಸಲಾಗುವುದು. ಆಗ ಅವನು 'ನನ್ನ ಪ್ರಭೂ! ದೇವನಾಣೆಗೂ ಇಲ್ಲ, ಸಂಕಷ್ಟಗಳಾಗಲಿ ಸಂಕಟಗಳಾಗಲಿ ನನಗೆಂದೂ ಎದುರಾಗಿರಲೇ ಇಲ್ಲ' ಎಂದು ಉತ್ತರಿಸುವನು.

[ಹಝ್ರತ್ ಅನಸ್(ರ) -ಮುಸ್ಲಿಮ್

ಪರಲೋಕದ ಸುಖ ಮತ್ತು ದುಃಖಗಳಿಗೆ ಹೋಲಿಸಿದರೆ ಈ ನಮ್ಮ ಲೋಕದ ಸುಖ ದುಃಖಗಳೆರಡೂ ಎಷ್ಟು ಅರ್ಥಹೀನವೆಂಬುದನ್ನು ಈ ಹದೀಸ್ ಚೆನ್ನಾಗಿ ಮನವರಿಕೆ ಮಾಡಿಸ ತ್ತದೆ. ಲೋಕದಲ್ಲಿ ಅತಿ ಹೆಚ್ಚಿನ ಸುಖವನ್ನು ಅನುಭವಿಸಿದ ಒಬ್ಬ ವ್ಯಕ್ತಿ ನರಕದಲ್ಲಿ ಕೇವಲ ಒವೆ ಮುಳುಗಿ ಎದ್ದು ಅಲ್ಲಿಯ ದುಃಖ ಮತ್ತು ಸಂಕಟವನ್ನು ಅನುಭವಿಸಿದಾಗ ಈ ಲೋಕದಲ್ಲಿ ತಾನ ಅನುಭವಿಸಿದ ಎಲ್ಲ ಸುಖಗಳನ್ನು ಮರೆತು ಬಿಡುವನು. ಲೆಕ್ಕಕ್ಕೇ ಇಲ್ಲದ ಲೋಕದ ಸುಖಗಳಿಗಾ ತಾನು ಪರಲೋಕದ ಈ ಹಿಂಸೆಯನ್ನು ಕಡೆಗಣಿಸಿ ಮೋಸ ಹೋದೆನಲ್ಲಾ ಎಂದು ಅವನು ಅಂದು ರೋದಿಸುವನು. ಹಾಗೆಯೇ ಸ್ವರ್ಗದ ಸುಖವನ್ನು ಕೇವಲ ಕ್ಷಣ ಮಾತ್ರಕ್ಕೆ ಅನುಭವಿಸಿದವನು ಲೋಕದಲ್ಲಿ ತನಗೆದುರಾದ ಎಲ್ಲ ಸಂಕಟಗಳನ್ನು ಮರೆತು ಬಿಡುವನು. ಸ್ವರ್ಗದ ನೈಜ ಸುಖಕ್ಕಾ

ೀಕದ ಸಂಕಟಗಳನ್ನು ತಾನು ಸಹಿಸಿಕೊಂಡದ್ದು ಎಷ್ಟು ಲಾಭದಾಯಕವಾಯಿತು ಎಂದು ನು ಹರ್ಷ ಪಡುವನು.

عَنْ اَبِى هُرَيْرَةَ (رض) عَنِ النَّبِيِّ ﷺ قَالَ قَالَ اللّٰهُ عَزَّوَجَلَّ اَعْدَدْتُ لِعِبَادِى الصَّالِحِينَ مَا لَا عَيْنٌ رَأَتْ , وَلَا اُ سَمِعَتْ وَلَا خَطَرَ عَلَى قَلْبِ بَشَرٍ . مِصْدَاقُ ذَالِكَ فِ كِتَابِ اللّٰهِ فَلَا تَعْلَمُ نَفْسٌ مَا اُخْفِيَ لَهُمْ مِنْ قُرَّةِ اَعْيُ جَزَاءً بِمَا كَانُوْا يَعْمَلُوْنَ (السجدة)(مسلم-كتاب الجنة

ಪ್ರವಾದಿ(ಸ) ಹೀಗೆ ಹೇಳಿರುವರು:

''ಅಲ್ಲಾಹನು ಹೇಳುತ್ತಾನೆ: ನಾನು ನನ್ನ ಸಜ್ಜನ ದಾಸರಿಗಾಗಿ ಯಾವ ಕಣ್ಣೂ ಕಂಡಿಲ್ಲದ, ಾವ ಕಿವಿಯೂ ಕೇಳಿಲ್ಲದ ಮತ್ತು ಯಾವ ಮನುಷ್ಯನ ಮನಸ್ಸಿನಲ್ಲೂ ಮೂಡಿಲ್ಲದಂತಹ ಸ್ತುಗಳನ್ನು ಸಿದ್ಧಪಡಿಸಿಟ್ಟಿರುವೆನು. ಅಲ್ಲಾಹನ ಗ್ರಂಥದಲ್ಲಿ ಇದನ್ನು ಸಮರ್ಥಿಸುವ ವಾಕ್ಯವೊಂದು ೀಗಿದೆ: ''(ಸಜ್ಜನರಿಗಾಗಿ) ಅವರು ಮಾಡಿದ ಕರ್ಮಗಳ ಪ್ರತಿಫಲವಾಗಿ ಅವರ ಕಣ್ತಣಿಸಲು ನನ್ನೆಲ್ಲಾ ಅಡಗಿಸಿಡಲಾಗಿದೆ ಎಂಬುದು ಯಾವ ವ್ಯಕ್ತಿಗೂ ತಿಳಿಯದು.'' (ಅಸ್ಸಜ್‌ದಃ 17)

[ಹಝ್ರತ್ ಅಬೂ ಹುರೈರಾ(ರ) -ಮುಸ್ಲಿಮ್]

ತಾನು ಕಂಡಿರುವ ಅಥವಾ ಅನುಭವಿಸಿರುವ ವಸ್ತುಗಳನ್ನು ಮಾತ್ರ ಪೂರ್ಣವಾಗಿ ಊಹಿಸಿಕೊಳ್ಳಲು ಮನುಷ್ಯನಿಗೆ ಸಾಧ್ಯವಾಗುತ್ತದೆ. ಸ್ವರ್ಗದ ಸುಖಗಳನ್ನು ಅವನು ಕಂಡದ್ದಾಗಲಿ, ನುಭವಿಸಿದ್ದಾಗಲಿ ಇಲ್ಲ. ಅದನ್ನು ಸರಿಯಾಗಿ ಗ್ರಹಿಸಿಕೊಳ್ಳಲು ಅವನು ಸಮರ್ಥನಲ್ಲ. ದ್ದರಿಂದಲೇ ಇಲ್ಲಿ ಅಲ್ಲಾಹನು ಸಜ್ಜನರಿಗೆ ಸ್ವರ್ಗದಲ್ಲಿ ಅವರಿಗಾಗಿ, ಅವರ ಊಹೆಗೆ ಮೀರಿದಂತಹ ುಖವನ್ನೂ ಗೌರವವನ್ನೂ ದಯಪಾಲಿಸಲಾಗುವುದೆಂಬ ಸುವಾರ್ತೆ ನೀಡಿರುವನು.

ನಮಗೆ ಪರಿಚಿತವಾಗಿರುವ ಭೌತಿಕ ಸುಖ ಸವಲತ್ತುಗಳಿಗಿಂತ ಮಿಗಿಲಾದ ಸುಖ ವಲತ್ತುಗಳು ಅಸ್ತಿತ್ವದಲ್ಲಿರುವುದು ಅಸಾಧ್ಯವೇನಲ್ಲ. ನಮಗೆ ತಿಳಿದಿರುವಂತಹ ಸುಖ ಂಪತ್ತುಗಳನ್ನು ಸೃಷ್ಟಿಸಿದವನಿಗೆ ಇದಕ್ಕಿಂತ ಭಿನ್ನ ಹಾಗೂ ಇದಕ್ಕಿಂತ ಶ್ರೇಷ್ಠವಾದವುಗಳನ್ನು ಸೃಷ್ಟಿಸಲು ಾಧ್ಯವಿಲ್ಲವೇ? ಅವನು ಸರ್ವಶಕ್ತನಾದ್ದರಿಂದ ಅವನ ಮಟ್ಟಿಗೆ ಯಾವುದೂ ಅಸಾಧ್ಯವಲ್ಲ. ಈ ಪೂರ್ಣ ಜಗತ್ತಿಗಿಂತ ಭಿನ್ನವಾದ ಒಂದು ಪೂರ್ಣ ಜಗತ್ತು ಮತ್ತು ಅಸ್ಥಿರತೆಗಳಿಂದ ಮುಕ್ತವಾದ ಂದು ಶಾಶ್ವತವಾದ ಜಗತ್ತು ಇರಲೇಬೇಕೆಂದು ಪ್ರತಿಯೊಬ್ಬ ಮನುಷ್ಯನ ಆತ್ಮಸಾಕ್ಷಿಯೂ ಕೂಗಿ ೇಳುತ್ತದೆ.

ಧರ್ಮ ಸ್ವೀಕಾರ

ಒಂದೇ ದಿನದಲ್ಲಿ ಕ್ರಾಂತಿ

ْ عَبْدِ اللَّهِ بْنِ عَبَّاسٍ قَالَ : بَعَثَتْ بَنُوا سَعْدِ بنِ بَكْرٍ ضِمَامَ
ثَعلَبَةَ وَافِدًا اِلَى رَسُولِ اللّهِ ﷺ فَقَدِمَ عَلَيْهِ وَاَنَاخَ بَعِيرَهُ
ى بَابِ المَسْجِدِ , ثُمَّ عَقَلَهُ , ثُمَّ دَخَلَ الْمَسْجِدَ وَرَسُولُ
هِ ﷺ جَالِسٌ فِىْ اَصْحَابِهِ وَكَانَ ضِمَامٌ رَجُلاً جَلْدًا اَشْعَرَ
غَدِيرَتَيْنِ فَأَقْبَلَ حَتَّى وَقَفَ عَلَى رَسُولِهِ اللَّهِ : فِى اَصْحَابِ
فَقَالَ أَيُّكُمْ اِبْنِ عَبْدُ المُطَّلِبْ ؟ فَقَالَ رَسُولُ اللَّهِ ﷺ : اَنَا
نُ عَبْدُ الْمُطَّلِبْ ! قَالَ مُحَمَّدٌ ؟ قَالَ : نَعَمْ , فَقَالَ اِبْنَ عَبْدِ
مُطَلِبْ ! انِّى سَائِلُكَ مُغَلِّظٌ فِى المَسْئلَةِ , فَلاَ تَجِدَنَّ
ى نَفْسِكَ ! قَالَ : لاَ اَجِدُ فِى نَفْسِى : فَسَلْ عَمَّا
دَالَكَ , قَالَ : اَنْشُدَكَ اللَّهُ اِلهكَ وَاِلَه مَنْ كَانَ قَبْلَكَ
اِلَه مَنْ هُوَ كَائِنٌ بَعْدَكَ , اللَّهُ بَعَثَكَ اِلَيْنَا رَسُولاً ؟ فَقَالَ
لّهُمَّ نَعَمْ , قَالَ فَانْشُدُكَ اللَّهُ اِلهكَ وَاِلَه مَنْ كَانَ قَبْلَكَ
اِلَه مَنْ هُوَ كَائِنٌ بَعْدَكَ اَللَّهُ اَمَرَكَ اَنْ تَأْمُرَنَا اَنْ نَعْبُدُهُ
حْدَهُ لاَ نُشْرِكَ بِهِ شَيْئًا وَاَنْ نَخْلَعَ هَذِهِ الْأَنْدَادَ الَّتِى
كَانَتْ آبَاؤُنَا يَعْبُدُونَ مَعَهُ ؟ قَالَ اللَّهُمَّ نَعَمْ , قَالَ : فَانْشُدُكَ

اللّٰهُ اِلٰهَکَ وَاِلٰهَ مَنْ هُوَ کَائِنٌ بَعْدَکَ، اَللّٰهُ اَمْرَکَ اَنْ نُصَ
هٰذِهِ الصَّلَوَاتِ الْخَمْسِ ؟ قَالَ اللّٰهُمَّ نَعَمْ قَالَ : ثُمَّ جَ
يَذْكُرُ فَرائِضَ الْاَسْلامِ فَرِيضَةً فَرِيضَةً كَمَا يُنَاشِدُهُ فِ
الّتِى قَبْلَهَا ، حَتّٰى اِذَا فَرَغَ قَالَ : فَاِنِّى اَشْهَدُ اَنْ لاَ اِلٰهَ اِلاَّ اللّٰ
وَاَشْهَدُ اَنَّ مُحَمَّدًا رَّسُولُ اللّٰهِ وَسَاُوَدِّى هٰذِهِ الفَرائِضَ
وَجْتَنِبُ مَانَهَيْتَنِى عَنْهُ , ثُمَّ لاَ اَزِيدُ وَلَا اَنْقُصُ , قَالَ
انْصَرَفَ رَاجِعًا اِلَى بَعِيرِهِ , فَقَالَ رَسُولُ اللّٰهِ ﷺ حِي
وَلّٰى : اِنْ يَصْدُقْ ذُو الْعَقِيْصَتَيْنِ يَدْخُلُ الْجَنَّةَ , قَالَ
فَاَتَى اِلَى بَعِيرِهِ فَاَطْلَقَ عِقَالَهُ , ثُمَّ خَرَجَ حَتّٰى قَدِ
عَلَى قَوْمِهِ فَاجْتَمَعُوْا اِلَيْهِ فَكَانَ اَوَّلَ مَاتَكَلَّمَ بِهِ اَنْ قَا
بِئْسَتِ اللَّاتُ وَالْعُزّٰى ! قَالُوا : مَه يَاضَمَام اِ
الْبَرَصَ وَالْجُذَامَ , اتَّقِ الْجُنُونَ ! قَالَ : وَيْلُكُمْ اِنَّهُمَا وَا
لَا يَضُرَّانِ وَلَا يَنْفَعَانِ , اِنَّ اللّٰهَ عَزَّوَجَلَّ قَدْ بَعَثَ رَسُولا
وَاَنْزَلَ عَلَيْهِ كِتَابًا اِسْتَنْقَذَكُمْ بِهِ مِمَّا كُنْتُمْ فِيهِ , وَاِنِّى اَشْهَ
اَنْ لَّا اِلٰهَ اِلَّا اللّٰهُ وَحْدَهُ لَا شَرِيکَ لَهُ , وَاِنَّ مُحَمَّدًا عَبْ
وَرَسُولُهُ اِنِّى قَدْ جِئْتُكُمْ مِنْ عِنْدِهِ بِمَا اَمَرَكُمْ بِهِ وَنَهَاكُ
عَنْهُ , قَالَ : فَوَ اللّٰهِ مَا اَمْسَى مِنْ ذَالِکَ الْيَوْمِ وَفِ

اضِرِهِ رَجُلٌ وَلاَ امْرَأَةٌ مُسْلِمًا (احمد ج١ص ٢٦٤)

ಸಅದ್ ಬಿನ್ ಬಕ್ರ್ ಗೋತ್ರದವರು ಝಿಮಾಮ್ ಬಿನ್ ಸಅ್‌ಲಬ ಎಂಬ ವ್ಯಕ್ತಿಯ ತಮ್ಮ ಪ್ರತಿನಿಧಿಯಾಗಿ ಪ್ರವಾದಿಯವರ(ಸ) ಬಳಿಗೆ ಕಳುಹಿಸಿದರು. ಆ ವ್ಯಕ್ತಿ ಬಂದು ಒಂಟೆಯನ್ನು ಮಸೀದಿಯ ಬಾಗಿಲ ಬಳಿ ಕೂರಿಸಿ ಕಟ್ಟಿ ಹಾಕಿ ಮಸೀದಿಯನ್ನು ಪ್ರವೇಶಿಸಿದ ಆಗ ಪ್ರವಾದಿವರ್ಯರು(ಸ) ತಮ್ಮ ಸಂಗಡಿಗರ ಜೊತೆ ಅಲ್ಲಿ ಕುಳಿತಿದ್ದರು. ಝಿಮಾಮ್ ಬ ಶಕ್ತಿಶಾಲಿ ವ್ಯಕ್ತಿಯಾಗಿದ್ದನು. ಅವನ ಕೂದಲುಗಳು ಬಹಳ ಉದ್ದವಾಗಿದ್ದುವು. ಆದರಿಂದ ಎ ಜಡೆಗಳನ್ನು ಮಾಡಿಕೊಂಡಿದ್ದನು. ಆ ವ್ಯಕ್ತಿ ಪ್ರವಾದಿವರ್ಯರು(ಸ) ತಮ್ಮ ಸಂಗಡಿಗರೊಂ ಕುಳಿತಿರುವುದನ್ನು ಕಂಡನು.

'ನಿಮ್ಮಲ್ಲಿ ಅಬ್ದುಲ್ ಮುತ್ತಲಿಬ್‌ರ ಪುತ್ರ ಯಾರು?' ಎಂದು ಪ್ರಶ್ನಿಸಿದನು.

''ನಾನೇ ಅಬ್ದುಲ್ ಮುತ್ತಲಿಬ್‌ರ ಪುತ್ರ'' ಎಂದು ಪ್ರವಾದಿ(ಸ) ಉತ್ತರಿಸಿದರು.

''ಮುಹಮ್ಮದ್ ನೀವೇನಾ?'' ಎಂದು ವಿಚಾರಿಸಿದನು.

''ಹೌದು'' ಎಂದು ಪ್ರವಾದಿ(ಸ) ಹೇಳಿದರು.

''ಅಬ್ದುಲ್ ಮುತ್ತಲಿಬ್‌ರ ಪುತ್ರರೇ! ನನಗೆ ನಿಮ್ಮೊಡನೆ ಕೆಲವು ವಿಷಯಗಳನ್ನು ಕೇಳಲಿ ನನ್ನ ಧಾಟಿ ಬಹಳ ತೀವ್ರವಾಗಿರುವುದು. ಆ ಬಗ್ಗೆ ನೀವು ಬೇಸರಿಸಬಾರದು'' ಎಂದನು.

''ನನಗೇನೂ ಬೇಸರವಾಗದು. ಕೇಳಬೇಕಾದುದನ್ನು ಕೇಳಿ'' ಎಂದು ಪ್ರವಾದಿ ಭರವಸೆ ನೀಡಿದರು.

''ನಾನು ನಿಮಗೆ ನಿಮ್ಮ, ನಿಮಗಿಂತ ಮುಂಚೆ ಗತಿಸಿದ ಮತ್ತು ನಿಮ್ಮ ಬಳಿಕ ಜನಿಸಲಿ ಎಲ್ಲರ ದೇವನಾದ ಅಲ್ಲಾಹನ ಆಣೆ ಹಾಕಿ ಕೇಳುತ್ತಿದ್ದೇನೆ. ನಿಜವಾಗಿಯೂ ಅಲ್ಲಾಹನು ನಿಮ ನಮ್ಮ ಕಡೆಗೆ ತನ್ನ ಸಂದೇಶವಾಹಕರಾಗಿ ಕಳುಹಿಸಿರುವನೇ?'' ಎಂದು ಆ ವ್ಯಕ್ತಿ ಪ್ರಶ್ನಿಸಿದನು.

''ಹೌದು, ಅಲ್ಲಾಹನೇ ಅದಕ್ಕೆ ಸಾಕ್ಷಿ'' ಎಂದು ಪ್ರವಾದಿ(ಸ) ಉತ್ತರಿಸಿದರು.

''ನಾನು ನಿಮಗೆ ನಿಮ್ಮ, ನಿಮಗಿಂತ ಮುಂಚೆ ಗತಿಸಿದ ಮತ್ತು ನಿಮ್ಮ ಬಳಿಕ ಜನಿಸಲಿ ಎಲ್ಲರ ದೇವನಾದ ಅಲ್ಲಾಹನ ಆಣೆ ಹಾಕಿ ಕೇಳುತ್ತಿದ್ದೇನೆ. ನಾವು ಕೇವಲ ಆ ಒಬ್ಬ ದೇವ ಮಾತ್ರ ಆರಾಧಿಸಬೇಕು. ಅವನ ಜೊತೆ ಯಾರನ್ನೂ ಪಾಲುಗೊಳಿಸಬಾರದು ಮತ್ತು ನಮ್ಮ ತ ಮುತ್ತಾತಂದಿರು ಯಾರನ್ನೆಲ್ಲಾ ದೇವನಿಗೆ ಸರಿಸಾಟಿಯೆಂದು ಪರಿಗಣಿಸಿ ಪೂಜಿಸುತ್ತಿದ್ದ ಅವರನ್ನೆಲ್ಲಾ ಬಿಟ್ಟು ಬಿಡಬೇಕು ಎಂದು ನಮಗೆ ಆದೇಶಿಸಲು ನಿಜವಾಗಿಯೂ ಅಲ್ಲಾ ನಿಮಗೆ ನಿರ್ದೇಶನ ನೀಡಿರುವನೇ?''

''ಹೌದು, ಅದಕ್ಕೆ ಅಲ್ಲಾಹನೇ ಸಾಕ್ಷಿ'' ಎಂದು ಪ್ರವಾದಿ(ಸ) ಉತ್ತರಿಸಿದರು.

''ನಾನು ನಿಮಗೆ ನಿಮ್ಮ, ನಿಮಗಿಂತ ಮುಂಚೆ ಗತಿಸಿದ ಮತ್ತು ನಿಮ್ಮ ಬಳಿಕ ಜನಿಸಲಿ ಎಲ್ಲರ ದೇವನಾದ ಅಲ್ಲಾಹನ ಆಣೆ ಹಾಕಿ ಕೇಳುತ್ತಿದ್ದೇನೆ. ನಾವು ಐದು ಹೊತ್ತು ನಮಾ

ಾಹಿಸಬೇಕು ಎಂದು ನಿಜವಾಗಿಯೂ ಅಲ್ಲಾಹನು ನಿಮಗೆ ನಿರ್ದೇಶಿಸಿರುವನೇ?'' ಎಂದು ವ್ಯಕ್ತಿ ವಿಚಾರಿಸಿದನು.

''ಹೌದು, ಅದಕ್ಕೆ ಅಲ್ಲಾಹನೇ ಸಾಕ್ಷಿ'' ಎಂದು ಪ್ರವಾದಿವರ್ಯರು(ಸ) ಉತ್ತರಿಸಿದರು.

ಹದೀಸ್ ವರದಿಗಾರರು ಹೇಳುತ್ತಾರೆ; ಆ ಬಳಿಕ ಆ ವ್ಯಕ್ತಿ ಝಕಾತ್, ಉಪವಾಸ, ಹಜ್ಜ್ ಗೆ ಒಂದೊಂದು ಕಡ್ಡಾಯ ಕರ್ಮವನ್ನು ಪ್ರಸ್ತಾಪಿಸಿ, ಇದೇ ರೀತಿ ಪ್ರವಾದಿವರ್ಯರಿಗೆ(ಸ) ಕೆ ಹಾಕುತ್ತಾ ಒಂದೊಂದು ಕರ್ತವ್ಯದ ಬಗ್ಗೆಯೂ ವಿಚಾರಿಸುತ್ತಾ ಹೋದನು.

ಎಲ್ಲ ವಿಷಯಗಳನ್ನು ಕೇಳಿದ ಬಳಿಕ ಆ ವ್ಯಕ್ತಿ ''ಅಲ್ಲಾಹನ ಹೊರತು ಬೇರಾರೂ ಆರಾಧ್ಯರಿಲ್ಲ ದು ನಾನು ಸಾಕ್ಷ್ಯವಹಿಸುತ್ತೇನೆ. ಮುಹಮ್ಮದ್(ಸ) ಅಲ್ಲಾಹನ ಸಂದೇಶವಾಹಕರಾಗಿರುವರೆಂದು ು ಸಾಕ್ಷ್ಯವಹಿಸುತ್ತೇನೆ'' ಎಂದು ಘೋಷಿಸಿದನು. ತರುವಾಯ ''ತಾವು ತಿಳಿಸಿರುವ ್ವ್ಯಗಳನ್ನೆಲ್ಲಾ ನಾನು ಪಾಲಿಸುವೆನು. ತಾವು ವಿರೋಧಿಸಿರುವಂತಹ ಕಾರ್ಯಗಳಿಂದೆಲ್ಲಾ ು ದೂರವಿರುವೆನು. ಅದರಲ್ಲಿ ಯಾವುದೇ ಹೆಚ್ಚಳವನ್ನಾಗಲಿ, ಕಡಿತವನ್ನಾಗಲಿ ಮಾಡಲಾರೆ'' ದನು. ಅನಂತರ ತನ್ನ ಒಂಟೆಯೆಡೆಗೆ ಹೊರಟನು. ಆಗ ಪ್ರವಾದಿ(ಸ) ಹೇಳಿದರು:

''ಈ ಎರಡು ಜಡೆಗಳ ವ್ಯಕ್ತಿ ಸತ್ಯ ಹೇಳುತ್ತಿರುವನೆಂದಾದರೆ ಅವನು ಸ್ವರ್ಗವನ್ನು ವೇಶಿಸುವನು.''

ಹದೀಸ್ ವರದಿಗಾರರು ಹೇಳುತ್ತಾರೆ: ಆ ವ್ಯಕ್ತಿ ತನ್ನ ಒಂಟೆಯ ಬಳಿ ಹೋಗಿ ಅದನ್ನು ಟ್ಟಿದನು. ಅನಂತರ ತನ್ನ ಜನಾಂಗದವರ ಬಳಿ ಹೋದನು. ಅವನ ಜನಾಂಗದ ಜನರು ಅವನ ತ್ತ ನೆರೆದರು. ಅಲ್ಲಿ ಅವನು ಹೇಳಿದ ಮೊದಲ ಮಾತು ''ಲಾತ್ ಮತ್ತು ಉಝ್ಝಾ(ವಿಗ್ರಹ) ು ನಾಶವಾಗಲಿ'' ಎಂಬುದಾಗಿತ್ತು. ''ಝಿಮಾಮ್! ನಿಲ್ಲು ನಿನಗೆ ಕುಷ್ಠ ಅಥವಾ ತೊನ್ನು ೇಗ ತಗಲಬಹುದು ಅಥವಾ ನಿನಗೆ ಹುಚ್ಚು ಹಿಡಿಯಬಹುದು'' ಎಂದು ಜನರು ಹೇಳಿದರು.

'ಅಯ್ಯೋ ನಿಮ್ಮ ಅವಸ್ಥೆಯೇ! ದೇವನಾಣೆಗೂ ಈ ಲಾತ್ ಮತ್ತು ಉಝ್ಝಾಗಳು ಾವುದೇ ನಷ್ಟವನ್ನಾಗಲಿ, ಲಾಭವನ್ನಾಗಲಿ ಉಂಟು ಮಾಡಲು ಸಮರ್ಥರಲ್ಲ. ಸರ್ವಶಕ್ತನಾದ ಲ್ಲಾಹನು ಒಬ್ಬ ಸಂದೇಶವಾಹಕರನ್ನು ಕಳುಹಿಸಿರುವನು. ಅವರ ಮೇಲೆ ಗ್ರಂಥವನ್ನು ವತೀರ್ಣಗೊಳಿಸಿರುವನು ಮತ್ತು ಅದರ ಮೂಲಕ ಸದ್ಯ ನೀವು ಒಳಗಾಗಿರುವಂತಹ ಜ್ಞಾನದಿಂದ ನಿಮ್ಮನ್ನು ವಿಮೋಚಿಸುವ ಏರ್ಪಾಟು ಮಾಡಿರುವನು. ಪಾಲುದಾರರಾರೂ ಲ್ಲದ ಅಲ್ಲಾಹನ ಹೊರತು ಬೇರಾವುದೇ ದೇವನಿಲ್ಲ ಮತ್ತು ಮುಹಮ್ಮದ್(ಸ) ಅಲ್ಲಾಹನ ಸರೂ ಸಂದೇಶವಾಹಕರೂ ಆಗಿರುವರೆಂದು ನಾನು ಸಾಕ್ಷ್ಯ ವಹಿಸುತ್ತೇನೆ. ನಾನು ಅವರ ಯಿಂದ, ನೀವು ಮಾಡಬೇಕೆಂದು ಅವರು ತಿಳಿಸಿರುವ ವಿಷಯಗಳನ್ನು ಮತ್ತು ನೀವು ಾಡಬಾರದೆಂದು ಅವರು ಆದೇಶಿಸಿರುವಂತಹ ವಿಷಯಗಳನ್ನು ತಂದಿರುವೆನು'' ಎಂದು ರೊಡನೆ ಝಿಮಾಮ್ ಹೇಳಿದರು.

ಹದೀಸ್ ವರದಿಗಾರರು ಹೇಳುತ್ತಾರೆ: ಅಂದು ಸಂಜೆಯಾಗುವ ತನಕ ಆ ಜನಾಂಗದ ಸ್ತ್ರೀ ರುಷರ ಪೈಕಿ ಯಾರೂ ಮುಸ್ಲಿಮರಾಗದೆ ಉಳಿಯಲಿಲ್ಲ.

[ಹಝ್ರತ್ ಅಬ್ದುಲ್ಲಾ ಬಿನ್ ಅಬ್ಬಾಸ್(ರ)–ಅಹ್ಮದ್]

ಮಕ್ಕಾ ವಿಜಯದ ಅನಂತರ ಅರೇಬಿಯಾದ ವಿವಿಧ ಗೋತ್ರಗಳ ಜನ ಪ್ರವಾದಿವರ್ಯರನ್ನು(ಸ) ಮುಖತಃ ಭೇಟಿಯಾಗಿ ಅವರ ಸಂದೇಶವೇನೆಂಬುದ ಅರಿತುಕೊಳ್ಳಲಿಕ್ಕಾಗಿ ತಮ್ಮ ನಿಯೋಗಗಳನ್ನು ಕಳುಹಿಸಲಾರಂಭಿಸಿದರು. ಈ ರೀತಿ ಬರು ನಿಯೋಗಗಳ ಜನರು ಪ್ರವಾದಿವರ್ಯರ(ಸ) ಸಂದೇಶದಿಂದ ಸಂತೃಪ್ತರಾಗಿ ತಾವು ಇಸ್ಲಾ ಧರ್ಮವನ್ನು ಸ್ವೀಕರಿಸಿದ್ದಾಗಿ ಘೋಷಿಸುತ್ತಿದ್ದರು. ಈ ರೀತಿ ಒಂದರ ಬೆನ್ನಿಗೆ ಇನ್ನೊಂದ ಅನೇಕ ಜನಾಂಗ ಮತ್ತು ಗೋತ್ರಗಳ ಜನರು ಸಾಮೂಹಿಕವಾಗಿ ಇಸ್ಲಾಮ್ ಧರ್ಮ ಸ್ವೀಕರಿಸ ಅಮೋಘ ದೃಶ್ಯವನ್ನು ಪ್ರವಾದಿ(ಸ) ಮತ್ತವರ ಸಂಗಡಿಗರು ತಮ್ಮ ಜೀವನಾವಧಿಯಲ್ಲೇ ಕಣ ಕಂಡರು. ಇಲ್ಲಿ ವಿವರಿಸಲಾಗಿರುವ ಬನೂ ಸಅದ್ ಗೋತ್ರಕ್ಕೆ ಸಂಬಂಧಿಸಿದ ಘಟನೆಯೂ ಸರಣಿಯ ಒಂದು ಭಾಗವಾಗಿದೆ.

ಝಿಮಾಮ್ ಬಿನ್ ಸಅ್‌ಲಬ ಸಅದ್ ಗೋತ್ರದ ಪ್ರತಿನಿಧಿಯಾಗಿ ಪ್ರವಾದಿವರ್ಯರ ಬಳಿಗೆ ಬಂದಿದ್ದನು. ಆತ ಹಳ್ಳಿಗನಾಗಿದ್ದುದರಿಂದ ಶಿಷ್ಟಾಚಾರಗಳ ಬಗ್ಗೆ ಆತನಿಗೆ ಹೆ ತಿಳಿದಿರಲಿಲ್ಲ, ಆದರೂ ಸತ್ಯವನ್ನು ಶೋಧಿಸುವ ಪ್ರಾಮಾಣಿಕ ಕಳಕಳಿಯಿಂದ ಆತ ಬಂದಿದ್ದನು. ಆದುದರಿಂದ ಪ್ರವಾದಿವರ್ಯರು(ಸ) ಆತನ ಸಂಭಾಷಣೆಯ ಒರ ಶೈಲಿಯನ್ನು ಗಣನೆಗೆ ತೆಗೆದುಕೊಳ್ಳದೆ ಅವನ ಪ್ರಶ್ನೆಗಳಿಗೆಲ್ಲಾ ಸಹನೆಯಿಂದ ಉತ್ತರಿಸಿದ ಅವರ ಉತ್ತರಗಳಿಂದ ಸಂತೃಪ್ತನಾದ ಹಾಗೂ ಅವರ ವ್ಯಕ್ತಿತ್ವದಿಂದ ಪ್ರಭಾವಿತನಾದ ಆ ವ್ಯಕ್ತಿ ಅ ಸತ್ಯ ವಚನದ ಸಾಕ್ಷ್ಯವನ್ನು ಘೋಷಿಸಿದನು. ಆ ಬಳಿಕ ತನ್ನ ಜನಾಂಗದವರ ಬಳಿಗೆ ತೆರಳಿ ಬ ನಿರ್ಭೀತನಾಗಿ ಅವರನ್ನು ಇಸ್ಲಾಮಿನೆಡೆಗೆ ಆಮಂತ್ರಿಸಿದನು. ವಿಗ್ರಹಾರಾಧನೆಯನ್ನು ಸ್ಪಷ್ಟ ವಿರೋಧಿಸಿದನು. ವಿಗ್ರಹಗಳನ್ನು ಖಂಡಿಸಿದರೆ ನೀನು ಶಾಪಗ್ರಸ್ತನಾಗಬಹುದೆಂದು ಜನ ಹೆದರಿಸಿದಾಗ ಶಕ್ತಿಹೀನ ವಿಗ್ರಹಗಳಿಗೆ ಅಂಜುವುದರಲ್ಲಿ ಅರ್ಥವಿಲ್ಲವೆಂದು ಸಾರಿದನು. ಅನಂ ಇಸ್ಲಾಮಿನ ವಿಶೇಷತೆಗಳನ್ನು ವಿವರಿಸಿ, ಇಸ್ಲಾಮ್ ಸ್ವೀಕರಿಸಿರೆಂದು ಜನರಿಗೆ ಕರೆಕೊಟ್ಟನು. ಅ ಈ ಆಮಂತ್ರಣ ಎಷ್ಟು ಪರಿಣಾಮಕಾರಿಯಾಗಿತ್ತೆಂದರೆ ಅಂದು ಸಂಜೆಯಾಗುವುದರೊ ಅವನ ಜನಾಂಗದ ಎಲ್ಲರೂ ಇಸ್ಲಾಮ್ ಸ್ವೀಕರಿಸಿದ್ದರು.

ಇಸ್ಲಾಮಿನ ನಿರ್ಭೀತ ಪ್ರಚಾರವೇ ಇಸ್ಲಾಮೀ ಕ್ರಾಂತಿಗೆ ನಾಂದಿಯಾಗಿತ್ತೆಂಬುದಕ್ಕೆ ಘಟನೆ ಸಾಕ್ಷಿಯಾಗಿದೆ.

ನೇರ ಆಮಂತ್ರಣ

نْ اَنَسٍ (رض) قَالَ كَانَ غُلَامٌ يَهُدِيٌّ يَخْدُمُ النَّبِيَّ ﷺ فَمَرِضَ
تَاهُ النَّبِيُّ ﷺ يَعُودُهُ فَقَعَدَ عِنْدَ رَأْسِهِ فَقَالَ لَهُ اَسْلِمْ فَنَظَرَ
ى اَبِيهِ وَهُوَ عِنْدَهُ فَقَالَ لَهُ اَطِعْ اَبَا الْقَاسِمِ ﷺ فَأَسْلَمَ

فَخَرَجَ النَّبِىُّ ﷺ وَهُوَ يَقُولُ الْحَمْدُ لِلّٰهِ الَّذِى اَنْقَ
مِنَ النَّارِ (بخارى-كتاب الجنائز

ಒಬ್ಬ ಯಹೂದಿ ಬಾಲಕನು ಪ್ರವಾದಿವರ್ಯರ(ಸ) ಸೇವೆ ಮಾಡುತ್ತಿದ್ದನು. ಅವನು ನಾರೋಗ್ಯ ಪೀಡಿತನಾದಾಗ ಪ್ರವಾದಿವರ್ಯರು(ಸ) ಅವನ ಸಂದರ್ಶನಕ್ಕೆ ಹೋದರು. ತನ ತಲೆಯ ಬಳಿ ಕುಳಿತು 'ಇಸ್ಲಾಮ್ ಧರ್ಮ ಸ್ವೀಕರಿಸು' ಎಂದರು. ಅವನು ಅಲ್ಲೇ ದ್ದ ತನ್ನ ತಂದೆಯ ಕಡೆ ನೋಡತೊಡಗಿದನು. ಅವನ ತಂದೆ 'ಅಬುಲ್ ಕಾಸಿಮ್'ರ(ಸ) ಾತನ್ನು ಒಪ್ಪು' ಎಂದು ಆತನಿಗೆ ಹೇಳಿದನು. ಬಾಲಕನು ಇಸ್ಲಾಮ್ ಸ್ವೀಕರಿಸಿದನು. ಆ ಬಳಿಕ ವಾದಿವರ್ಯರು(ಸ) ''ಅವನನ್ನು ನರಕಾಗ್ನಿಯಿಂದ ರಕ್ಷಿಸಿದ ಅಲ್ಲಾಹನಿಗೆ ಕೃತಜ್ಞತೆಗಳು'' ಳುತ್ತಾ ಅಲ್ಲಿಂದ ಹೊರಟು ಹೋದರು. [ಹಝ್ರತ್ ಅನಸ್(ರ) -ಬುಖಾರಿ]

ಅನಾರೋಗ್ಯ ಪೀಡಿತನಾದ ಮನುಷ್ಯನು ದೇವನನ್ನು ಹೆಚ್ಚು ಹೆಚ್ಚು ಸ್ಮರಿಸುತ್ತಾನೆ. ೀಧನೆಗಳನ್ನು ಕೇಳಲು ಸಿದ್ಧನಾಗುತ್ತಾನೆ. ಆದ್ದರಿಂದ ಅದು ಸತ್ಯಸಂದೇಶವನ್ನು ಿಚಯಿಸಲು ಅನುಕೂಲಕರವಾದ ಸಂದರ್ಭವಾಗಿರುತ್ತದೆ. ಪ್ರವಾದಿ ಮುಹಮ್ಮದ್(ಸ) ಪಾರ ಮಾನವೀಯ ಅನುಕಂಪವುಳ್ಳವರಾಗಿದ್ದರು. ಅತ್ಯಂತ ವಿನಯಶೀಲರಾಗಿದ್ದರು. ದ್ದರಿಂದ ಒಬ್ಬ ಎಳೆಯ ಪ್ರಾಯದ ಸಾಮಾನ್ಯ ಯಹೂದಿ ಸೇವಕನ ಅನಾರೋಗ್ಯದ ವಿಷಯ ದೊಡನೆ ಸ್ವತಃ ಆತನ ಮನೆಗೆ ಹೋದರು. ಆತನನ್ನು ಸಂದರ್ಶಿಸಿದರು. ಸರಿಯಾದ ದರ್ಭದಲ್ಲಿ ಆತನನ್ನು ಇಸ್ಲಾಮಿಗೆ ಆಮಂತ್ರಿಸಿದರು. ಬಾಲಕನು ಇಸ್ಲಾಮ್ ಸ್ವೀಕರಿಸಿದನು.

ಜನರಿಗೆ ನೇರವಾಗಿ ಇಸ್ಲಾಮಿನೆಡೆಗೆ ಆಮಂತ್ರಣ ನೀಡುವುದು ಪ್ರವಾದಿಗಳ ಸಂದೇಶ ಚಾರದ ವಿಧಾನವಾಗಿತ್ತು. ಇಸ್ಲಾಮ್ ಸ್ವೀಕಾರ ಮಾತ್ರ ಮನುಷ್ಯನನ್ನು ನರಕಾಗ್ನಿಯಿಂದ ಕ್ಷಿಸುವ ಮಾರ್ಗವಾದ್ದರಿಂದ ಪ್ರವಾದಿಗಳು ಮಾನವಕುಲದ ಹಿತಚಿಂತನೆ ಮತ್ತು ಮಾನವೀಯ ನುಕಂಪದ ಆಧಾರದಲ್ಲೇ ಇಸ್ಲಾಮಿನೆಡೆಗೆ ಜನರನ್ನು ಕರೆಯುತ್ತಿದ್ದರು. ನಿಜವಾಗಿ ಸತ್ಯವು ತ್ತು ಬಳಸು ಇಲ್ಲದೆ ನೇರವಾಗಿ ಮುಂದಿಡಬೇಕಾದ ವಿಷಯವಾಗಿದೆ. ಆಮಂತ್ರಕನ ಹಿತವೂ ಮಂತ್ರಿತನ ಹಿತವೂ ಆದರಲ್ಲೇ ಅಡಗಿದೆ.

ಪ್ರಥಮ ನೋಟದಲ್ಲೇ ಧರ್ಮ ಸ್ವೀಕಾರ

عَنْ اَبِى رَافِعٍ قَالَ :

بَعَثَنِى قُرَيْشٌ اِلَى رَسُولِ اللّٰهِ ﷺ فَلَمَّا رَأَيْتُ رَسُولَ اللّٰ
ﷺ اُلْقِىَ فِىْ قَلْبِى الْاِسْلَامُ فَقُلْتُ يَارَسُولَ اللّٰهِ ﷺ اِنِّى

للّٰهِ لايَرْجِعُ اِلَيْهِمْ اَبَدًا فَقَالَ رَسُولُ اللّٰهِ ﷺ اِنِّى لَا اَخِيسُ
لْعَهْدِ وَلَا اَحْبِسُ البُرُدَ وَلٰكِنْ اِرْجِعْ فَاِنْ كَانَ فِيهِ نَفْسِكَ
ذِى فِى نَفْسِكَ الآنَ فَارْجِعْ قَالَ فَاَسْلَمْتُ ثُمَّ اَتَيْتُ النَّبِىَّ
ﷺ فَاَسْلَمْتُ (ابوداؤد-كتاب الجهاد)

ಕುರೈಶರು ನನ್ನನ್ನು ಅಲ್ಲಾಹನ ಸಂದೇಶವಾಹಕರ ಬಳಿಗೆ ಕಳುಹಿಸಿದರು. ಅವರನ್ನು ನಾ ನೋಡಿದ ಕ್ಷಣದಲ್ಲೇ ಇಸ್ಲಾಮ್ ನನ್ನ ಮನಸ್ಸನ್ನು ಪ್ರವೇಶಿಸಿತ್ತು. 'ಅಲ್ಲಾಹನ ಸಂದೇಶವಾಹಕ ಅಲ್ಲಾಹನಾಣೆ! ನಾನು ಅವರ ಬಳಿಗೆ ಮರಳಿ ಹೋಗಲಾರೆ' ಎಂದು ನಾನು ಹೇಳಿದೆನು. ಪ್ರವಾದಿವರ್ಯರು(ಸ) ಹೇಳಿದರು:

''ನಾನು ಸಂಧಾನ ಮುರಿಯುವುದಿಲ್ಲ, ರಾಯಭಾರಿಗಳನ್ನು ತಡೆದಿರಿಸುವುದೂ ಇ ಆದ್ದರಿಂದ ನೀವು ಮರಳಿ ಹೋಗಿರಿ. ನಿಮ್ಮ ಮನಸ್ಸಿನಲ್ಲಿ ಈಗ ಇರುವ ವಿಚಾರವೇ ಇ ಮತ್ತೆ ಬನ್ನಿರಿ.''

ಅಬೂ ರಾಫಿಅ್ ಹೇಳುತ್ತಾರೆ: 'ನಾನು ಮರಳಿ ಹೋಗಿ, ಆ ಬಳಿಕ ಪು ಪ್ರವಾದಿವರ್ಯರ(ಸ) ಸನ್ನಿಧಾನಕ್ಕೆ ಬಂದು ಇಸ್ಲಾಮ್ ಸ್ವೀಕರಿಸಿದೆ.'

[ಅಬೂ ರಾಫಿಅ್ ಅಬೂ ದಾವೂದ

ಪ್ರವಾದಿ ಮುಹಮ್ಮದ್‌ರ(ಸ) ವ್ಯಕ್ತಿತ್ವದಲ್ಲಿ ಅಸಾಮಾನ್ಯ ಆಕರ್ಷಣೆ ಇತ್ತು. ಅವರ ಕಂಡೊಡನೆ ಜನರು ಅವರಿಂದ ಪ್ರಭಾವಿತರಾಗುತ್ತಿದ್ದರು. ಅಬೂ ರಾಫಿಅ್, ಆಗ ಪ್ರವಾ ಮುಹಮ್ಮದ್‌ರ(ಸ) ಬದ್ಧ ವೈರಿಗಳಾಗಿದ್ದ ಕುರೈಶರ ರಾಯಭಾರಿಯಾಗಿ ಮಕ್ಕಾದಿಂದ ಮದೀ ನಗರಕ್ಕೆ ಬಂದಿದ್ದರು. ಪ್ರವಾದಿವರ್ಯರನ್ನು(ಸ) ನೋಡುತ್ತಲೇ ಅವರು ಬದಲಾದರ ಪ್ರವಾದಿತ್ವದ ಸತ್ಯತೆಗೆ ಪ್ರವಾದಿವರ್ಯರ(ಸ) ಮುಖಾರವಿಂದವೇ ಸಾಕ್ಷಿಯಾಗಿತ್ತೋ ಎಂಬಂ ಅವರನ್ನು ಕಂಡೊಡನೆ ಅಬೂ ರಾಫಿಅ್‌ರಿಗೆ ಇಸ್ಲಾಮಿನ ಸತ್ಯತೆ ಮನವರಿಕೆಯಾಯಿತು.

ಈ ಘಟನೆ ಕುರೈಶ್ ಮತ್ತು ಪ್ರವಾದಿವರ್ಯರ(ಸ) ಮಧ್ಯೆ ಹುದೈಬಿಯಾ ಎಂ ಸಂಧಾನ ನಡೆದ ಬಳಿಕ ಸಂಭವಿಸಿತ್ತು. ಸಂಧಾನದ ಶರತ್ತುಗಳನ್ನು ಗೌರವಿಸಿದ ಪ್ರವಾದಿ(ಕುರೈಶರ ರಾಯಭಾರಿಯನ್ನು ತಮ್ಮ ಬಳಿ ನಿಲ್ಲಿಸಿಕೊಳ್ಳಲು ಇಷ್ಟಪಡಲಿಲ್ಲ. ಆ ವ್ಯಕ್ತಿ ಸ್ವತಃ ತಾ ನಿಲ್ಲುವುದಾಗಿ ಹೇಳಿದರೂ ಅದರಿಂದ ಕರಾರು ಭಂಗವಾಗುವುದೆಂಬ ಕಾರಣಕ್ಕಾಗಿ ಪ್ರವಾದಿ(ಅದಕ್ಕೆ ಅನುಮತಿ ನೀಡಲಿಲ್ಲ. ಆದ್ದರಿಂದ ರಾಯಭಾರಿಯಾಗಿ ಬಂದಿದ್ದ ಅಬೂರಾಫಿ ಮಕ್ಕಾ ಪಟ್ಟಣಕ್ಕೆ ಮರಳಿ ಆ ಬಳಿಕ ವೈಯಕ್ತಿಕ ನೆಲೆಯಲ್ಲಿ ಮತ್ತೆ ಮದೀನಾಕ್ಕೆ ಬಂದರು ಪ್ರವಾದಿವರ್ಯರ(ಸ) ಬಳಿ ಹೋಗಿ ಇಸ್ಲಾಮ್ ಸ್ವೀಕರಿಸಿದರು.

ಪ್ರವಾದಿ ಮುಹಮ್ಮದ್(ಸ) ಕಾರ್ಯ ನೀತಿಯು ವಚನಭಂಗ, ವಂಚನೆ ಇತ್ಯಾದಿಗಳಿಂದ ಪೂರ್ಣ ಮುಕ್ತವಾಗಿದ್ದ ಸತ್ಯ ಮತ್ತು ನ್ಯಾಯದ ಆಧಾರದಲ್ಲಿ ಸ್ಥಾಪಿತವಾಗಿತ್ತು. ಅವರ ಈ ಶೇಷತೆಗಳೇ ಅಸಂಖ್ಯ ಮಂದಿಯ ಮನಗಳನ್ನು ಸೂರೆಗೊಂಡವು.

* * *